# ದೇವ ಸಾಕ್ಷಾತ್ಕಾರ

(ಒಂದು ಆಧ್ಯಾತ್ಮಿಕ ಅಧ್ಯಯನ)

ಮೌಲಾನಾ
ವಹೀದುದ್ದೀನ್ ಖಾನ್

Goodword Books

First published 2023
This book is copyright free

Urdu version: Allahu Akbar
Kannada version: Deva Saksatkara
Translated by Ibraheem Sayeed Omari

Goodword Books
A-21, Sector 4, Noida-201301, Delhi NCR, India
Tel. +91 120 4131448, Mob. +91 8588822672
email: info@goodwordbooks.com
www.goodwordbooks.com

CPS International
Centre for Peace and Spirituality International
1, Nizamuddin West Market, New Delhi-110 013, India
Mob. +91-9999944119
e-mail: info@cpsglobal.org
www.cpsglobal.org

CPS Karnataka
Kasimsab Ameenasab Hallur
M/S Hallur Petroleum's, Nalatwad Road
Mehaboob Nagar, At, Post, Tq: Muddebihal
Vijayapura, Karnataka-586212, India
Mob. +91-9880155608, +91-9945806156
email: shamuhallur2@gmail.com

Printed in India

# ಅನುಕ್ರಮಣಿಕೆ


| | | |
|---|---|---|
| 1. | ದೇವಾನ್ವೇಷಣೆಯ ಬದುಕು | 11 |
| 2. | ಅದ್ಭುತ ಚಮತ್ಕಾರ | 15 |
| 3. | ದೇವನು ಸಕಲವೂ ಆಗಿರುವನು. | 20 |
| 4. | ದೇವನುಪಸ್ಥಿತಿಯ ಅನುಭವ | 22 |
| 5. | ದೇವನ ಕುರಿತ ಪುರಾವೆ | 26 |
| 6. | ಯಾಂತ್ರಿಕ ಪ್ರಪಂಚ | 28 |
| 7. | ಜಗತ್ತೆಂಬುದು ಯಂತ್ರವಲ್ಲ | 31 |
| 8. | ಆರಾಧ್ಯನನ್ನು ಪಡೆಯುವ ಹೆಬ್ಬಯಕೆ | 33 |
| 9. | ಯಂತ್ರದ ವಿವರಣೆ | 36 |
| 10. | ದೇವನ ದಾಸ | 39 |
| 11. | ಪ್ರಕೃತಿಯ ದೃಢೀಕರಣ | 41 |
| 12. | ದೇವನ ಸಂಕೇತಗಳು | 44 |
| 13. | ಅಂತರಿಕ್ಷದಲ್ಲಿ ನಾಗರಿಕತೆ | 46 |
| 14. | ಪರಿಣಿತ ತಜ್ಞರ ವಿಚಿತ್ರ ಸ್ಥಿತಿ | 48 |
| 15. | ಪ್ರೀತಿಯ ಸಮರ್ಪಣೆ | 50 |
| 16. | ಬೆಲೆ ಪಾವತಿಸಲಾಗಿಲ್ಲ | 52 |
| 17. | ಸಮುದಾಯದ ನಾಯಕ | 56 |
| 18. | ನೈಸರ್ಗಿಕ ಅನ್ವೇಷಣೆ | 59 |
| 19. | ಹೇ ಮಾನವ | 61 |
| 20. | ದೇವಸಹಭಾಗಿತ್ವ ಮತ್ತು ಅಹಂಕಾರ | 64 |

| | | |
|---|---|---|
| 21. | ದೇವ ವಿಶ್ವಾಸ | 66 |
| 22. | ದೇವನ ಹಿರಿಮೆ | 69 |
| 23. | ಜಗತ್ತೆಂಬ ಕಾರ್ಖಾನೆ | 72 |
| 24. | ಧರ್ಮನಿಷ್ಠೆ ಎಂದರೇನು? | 74 |
| 25. | ಸಮಸ್ಯೆಗಳ ಮೂಲ | 77 |
| 26. | ದೇವನೆಡಗಿನ ನಿರ್ಲಕ್ಷ್ಯ | 79 |
| 27. | ಮುಗಿಯಲಿರುವ ಸಂಘರ್ಷ | 81 |
| 28. | ದೇವನ ಸಂಕೇತಗಳು | 84 |
| 29. | ನೈಸರ್ಗಿಕ ದೃಶ್ಯಗಳು | 86 |
| 30. | ಗುರುತಿನ ಚೀಟಿಯ ಹೊರತು | 88 |
| 31. | ಪರದೆ ಸರಿದಾಗ | 90 |
| 32. | ಪೊಳ್ಳು ಮಹಾನತೆ | 93 |
| 33. | ದೇವಪುರಾವೆ | 96 |
| 34. | ದೇವನ ವರದಾನ | 98 |
| 35. | ನೈಸರ್ಗಿಕ ಧರ್ಮ | 100 |
| 36. | ಜಗತ್ತಿನ ರಹಸ್ಯ | 102 |
| 37. | ಮಾನವನ ಅಸಹಾಯಕತೆ | 104 |
| 38. | ಮನುಷ್ಯನ ಹುಡುಕಾಟ | 106 |
| 39. | ಮಾನವನ ಗಳಿಕೆ | 108 |
| 40. | ದೇವನ ಕುರಿತ ದುರ್ವ್ಯಾಖ್ಯಾನ | 110 |

41. ವಾಸ್ತವದಿಂದ ವಂಚಿತ 112

42. ಇದು ಕೂಡ ಸಾಧ್ಯ 114

43. ಅಸಹಾಯಕತೆಗಿರುವ ಮದ್ದು 116

44. ಪರಸ್ಪರರ ಹಿತಾಸಕ್ತಿ 119

45. ಆತ್ಮಸಾಕ್ಷಿಯ ವಿರುದ್ಧ 122

46. ಹೆಬ್ಬಾವು ಕೂಡ... 125

47. ದೇವಾರಾಧನೆ 127

48. ಬದುಕಿನ ಸಮಸ್ಯೆ 129

49. ಕಂಪನದಗತ್ಯ. 131

50. ದೇವಸಾಕ್ಷಾತ್ಕಾರ 134

51. ದೇವಾನ್ವೇಷಣೆ 136

52. ಏಕದೇವತ್ವ ಮತ್ತು ಬಹುದೇವವಿಶ್ವಾಸ 138

53. ಅನ್ವೇಷಣೆ 141

54. ಇಲ್ಲಿ ಎಲ್ಲವೂ ಅದ್ಭುತವೇ ಸರಿ! 143

55. ದೇವನೊಂದಿಗಿನ ಸಂಬಂಧ 146

56. ಸತ್ಯದ ಅರಿವು 148

57. ಪಡೆಯಲರ್ಹರು 150

58. ಅನ್ವೇಷಣೆಯಲ್ಲಿರುವ ಸಂತೋಷ 153

59. ಸತ್ಯಶೋಧಕ 155

60. ಸಮೂಹ ಸಮ್ಮತಿ 157

61. ಸತ್ಯದ ಸಾಕ್ಷಾತ್ಕಾರ 159

62. ದೇವನ ಸಾಮೀಪ್ಯವನ್ನು ಪಡೆದವರು 162
63. ದೇವನಾವಿಷ್ಕಾರ 165
64. ವಿಶ್ವಾಸ ವರ್ಧನೆ 168
65. ಎಲ್ಲವೂ ಅದ್ಭುತ 170
66. ಸ್ವ-ತ್ಯಾಗ 172
67. ದೇವಸ್ಮರಣೆ 174
68. ಕಳೆದುಕೊಳ್ಳುವವನಷ್ಟೇ ಪಡೆದುಕೊಳ್ಳಲರ್ಹನು 176
69. ತೀರ್ಪಿನ ದಿನ 178
70. ಆ ದಿನ ಏನು ಸಂಭವಿಸಲಿರುವುದು? 180
71. ಸಂಪತ್ತಿನ ಭ್ರಮೆ 182
72. ವಿಫಲರು 184
73. ಮನುಷ್ಯನ ಪಾಲಿನ ದುರಂತ 186

ಪರಮದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಬ್ರಹ್ಮಾಂಡದಲ್ಲಿರುವ ಸೂರ್ಯ, ಚಂದ್ರ ನಕ್ಷತ್ರಗಳಾದಿಯಾಗಿ ಅದರಲ್ಲಿರುವ ಸಕಲ ವಸ್ತುಗಳು ದೇವನ ಇಚ್ಛೆಗೆ ಬದ್ಧವಾಗಿ ಕಾರ್ಯನಿರ್ವಹಿಸುತ್ತಿವೆ. ದೇವನು ಅವುಗಳಿಗೆ ನಿಗದಿಪಡಿಸಿರುವ ಪಥವನ್ನು ಅವು ಎಳ್ಳಷ್ಟೂ ಮೀರಲಾರವು. ಇದೇ ರೀತಿ ಪ್ರಕೃತಿಯಲ್ಲಿರುವ ಎಲ್ಲ ಮೂಲಭೂತ ಅಂಶಗಳೂ ಅವುಗಳ ಸೃಷ್ಟಿಕರ್ತನು ಅವುಗಳಿಗೆ ಹಾಕಿಕೊಟ್ಟಿರುವ ಪ್ರಾಕೃತಿಕ ನಿಯಮಗಳಿಗೆ ಬದ್ಧವಾಗಿ ಕಾರ್ಯನಿ–ರ್ವಹಿಸುತ್ತಿವೆ. ಇಡೀ ಬ್ರಹ್ಮಾಂಡವೇ ತನ್ನ ಏಕೈಕ ಒಡೆಯನಾದ ದೇವನಿಗೆ ಶರಣಾಗಿದೆ.

ಆದರೆ, ಮಾನವ ಮತ್ತು ಭೌತಿಕ ಜಗತ್ತಿನ ನಡುವೆ ಒಂದು ದೊಡ್ಡ ವ್ಯತ್ಯಾಸವಿದೆ. ಭೌತಿಕ ಜಗತ್ತಿನ ವಸ್ತುಗಳ ಮುಂದೆ ಯಾವುದೇ ರೀತಿಯ ಆಯ್ಕೆಗಳಿಲ್ಲ. ಅವುಗಳು ದೇವನು ನಿಗದಿಪಡಿಸಿರುವ ನಿಯಮನುಸಾರದಂತೆ ನಡೆಯಲು ನಿರ್ಬಂಧಗೊಂಡಿವೆ. ಆದರೆ, ಮಾನವನ ವಿಷಯ ಇದಕ್ಕಿಂತ ಭಿನ್ನವಾಗಿದೆ. ಅವನಿಗೆ ಸಂಪೂರ್ಣ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅವನು ಒಳಿತು ಮತ್ತು ಕೆಡುಕು ಇವೆರಡು ಮಾರ್ಗಗಳ ಪೈಕಿ ಯಾವುದನ್ನು ಬೇಕಾದರೂ ಆರಿಸಿಕೊಳ್ಳಬಹುದು.

ಈ ಉದ್ದೇಶಕ್ಕಾಗಿಯೇ ಅವನಿಗೆ ವಿವೇಚನೆಯ ಶಕ್ತಿಯನ್ನು, ಬದುಕಿನಲ್ಲಿ ಸರಿಯಾದ ನಿರ್ಧಾರಗಳನ್ನು ತಾಳಲಿಕ್ಕಾಗಿ ಆತ್ಮಸಾಕ್ಷಿಯನ್ನೂ ನೀಡಲಾಗಿದೆ. ಯಾವುದೇ ವಿಷಯವನ್ನು ಒಪ್ಪಿಕೊಳ್ಳುವ ಅಥವಾ ಅದನ್ನು ತಿರಸ್ಕರಿಸುವ ಸಂಪೂರ್ಣ ಆಯ್ಕಾ ಸ್ವಾತಂತ್ರ್ಯವನ್ನು ಆತನಿಗಿಲ್ಲಿ ನೀಡಲಾಗಿದೆ. ಸೃಷ್ಟಿಯಲ್ಲಿರುವ ಇತರ ವಸ್ತು ಅಥವಾ ಜೀವಿಗಳಂತೆ ಮನುಷ್ಯನು ಯಾವುದೇ ಬದಲಿಸಲಾರದ ನಿಯಮಗಳನ್ನು ಪಾಲಿಸಲು ನಿರ್ಬಂಧಿತನಾಗಿಲ್ಲ. ಅವನಿಗೆ ಪ್ರತಿಯೊಂದು

ವಿಷಯದಲ್ಲಿ ವಿವೇಚಿಸಿ ಆಯ್ಕೆ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಮನುಷ್ಯನಿಗೆ ನೀಡಲಾದ ಆಯ್ಕಾ ಸ್ವಾತಂತ್ರ್ಯದ ಮೂಲಕ ಆತನ ಪರೀಕ್ಷೆ ನಡೆಯುವುದು. ಈ ಮೇಲೆ ಹೇಳಿದಂತೆ ದೇವನು ಮಾನವನಿಗೆ ವಿವೇಚನಾ ಶಕ್ತಿ, ಆತ್ಮಸಾಕ್ಷಿ ಹಾಗೂ ಒಳಿತು ಕೆಡುಕುಗಳ ನಡುವೆ ಯಾವುದನ್ನು ಆಯ್ಕೆ ಮಾಡಬೇಕೆಂಬ ತೀರ್ಮಾನದ ಶಕ್ತಿಯನ್ನು ನೀಡುವ ಜೊತೆಗೆ ಅವನಿಗೆ ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವ ಸುವ್ಯವಸ್ಥೆಯನ್ನೂ ಮಾಡಿದನು.

ದೇವನು ಮಾನವನಿಗೆ ಯಾವ ರೀತಿಯ ಮಾರ್ಗದರ್ಶಕ ಸೂತ್ರಗಳನ್ನು ಹಾಕಿಕೊಟ್ಟನೆಂಬುದನ್ನು ಅರಿಯಲು ನಾವು ಸೃಷ್ಟಿಯ ಆದಿಯಷ್ಟು ಹಿಂದಿನ ಕಾಲದತ್ತ ದೃಷ್ಟಿ ಹಾಯಿಸಬೇಕಾದೀತು. ಮಾನವಕುಲ ಸರಿಯಾದ ಮಾರ್ಗದರ್ಶನವಿಲ್ಲದೆ ದಾರಿತಪ್ಪಬಾರದೆಂಬ ಕಾರಣಕ್ಕೆ ದೇವನು ಮಾನವರ ಆದಿಪಿತ ಆದಮರನ್ನು ಪ್ರಥಮ ಮಾನವರನ್ನಾಗಿ ಸೃಷ್ಟಿಸುವುದರ ಜೊತೆಗೆ ಅವರನ್ನು ಓರ್ವ ಪ್ರವಾದಿಯನ್ನಾಗಿಯೂ ಮಾಡಿದನು. ಮನುಷ್ಯನಿಂದ ದೇವನು ಏನೆಲ್ಲಾ ಬಯಸಿದನೋ ಅವೆಲ್ಲವನ್ನೂ ಅವರಿಗೆ ಕಲಿಸಿದನು. ಆ ಬಳಿಕ ದೇವನು, ಈ ಜಗತ್ತಿನ ಆವಶ್ಯಕತೆಗನುಸಾರವಾಗಿ ವಿವಿಧ ದೇಶ–ಭಾಷೆಗಳಿಗೆ ಅನೇಕಾನೇಕ ಪ್ರವಾದಿಗಳನ್ನು ಕಳಿಸಿದನು. ಆ ಎಲ್ಲ ಪ್ರವಾದಿಗಳ ಪೈಕಿ ಅತ್ಯಂತ ಕೊನೆಯ ಪ್ರವಾದಿಯೇ ಮುಹಮ್ಮದ್ (ಸ.ಅ.). ಸ್ವಭಾವತಃ ದಾರಿ ತಪ್ಪಬಹುದಾದ ಮಾನವನ ಸರಿಯಾದ ಮಾರ್ಗದರ್ಶನಕ್ಕಾಗಿ ದೇವನು ಈ ಸುವ್ಯವಸ್ಥೆಯನ್ನು ಮಾಡಿದನು.

ಮನುಷ್ಯನು ಖುದ್ದು ತನಗೆ ನೀಡಲಾದ ತನ್ನ ಸುತ್ತಮುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ, ಈ ಜಗತ್ತು ದೇವನ ಅದ್ಭುತ ಮಹಿಮೆಯ ಆಗರವಾಗಿರುವುದನ್ನು ಕಾಣಬಲ್ಲನು. ದೇವನ ಅದ್ಭುತ ಸೃಷ್ಟಿಗಳ ಅವಲೋಕನ

ಅವನಿಗೆ ದೇವನ ನೈಜ ಪರಿಚಯವನ್ನು ಮೂಡಿಸಬಲ್ಲದು. ಈ ಜಗತ್ತನ್ನವನು ಸರಿಯಾದ ಆಧ್ಯಾತ್ಮಿಕ ಮತ್ತು ಅವಲೋಕನಾತ್ಮಕ ದೃಷ್ಟಿಕೋನದಲ್ಲಿ ಕಂಡಿದ್ದೇ ಆದಲ್ಲಿ, ದೇವನ ಹೊರತಾಗಿ ಬೇರೇನೂ ಆತನಿಗಿಲ್ಲಿ ಕಾಣಿಸದು. ಜಗತ್ತಿನ ಪ್ರತಿಯೊಂದು ಆಗು–ಹೋಗುಗಳೂ ಆ ಏಕ ದೇವನಿಂದಲೇ ಎಂಬ ಸತ್ಯವನ್ನವನು ಮನಸಾರೆ ಒಪ್ಪಿಕೊಳ್ಳಲು ನಿರ್ಬಂಧಿತನಾಗುವನು. ದೇವನ ಸೃಷ್ಟಿಗಳ ಪೈಕಿ ತಾನೊಬ್ಬ ದುರ್ಬಲ ಸೃಷ್ಟಿ ಎಂಬ ವಾಸ್ತವವನ್ನಾತ ಅರಿತು, ತನ್ನ ಸಹಾಯ ಮತ್ತು ರಕ್ಷಣೆಗಾಗಿ ನೈಜ ಶಕ್ತಿ ಸಾಮರ್ಥ್ಯಗಳ ಒಡೆಯನಾದ ಆ ಏಕದೇವನ ಮೊರೆ ಹೋಗುವನು. ಜಗತ್ತಿನ ಸೃಷ್ಟಿಗಳ ಚೆಲುವಿನಲ್ಲಿ ಅವನು ಅವುಗಳ ಸೃಷ್ಟಿಕರ್ತನ ಚೆಲುವನ್ನು ವೀಕ್ಷಿಸತೊಡಗುವನು. ನೈಸರ್ಗಿಕ ಅದ್ಭುತ ವಿದ್ಯಮಾನಗಳು ಅವನಿಗೆ ದೇವನ ಅದ್ಭುತ ಮಹಿಮೆಯನ್ನು ಮನಗಾಣಿಸುವ ಮಾಧ್ಯಮವಾಗತೊಡಗುವವು. ದೇವನ ಮಹಿಮಾ ಸಾಗರದಲ್ಲಿ ಅವನು ಅದೆಷ್ಟು ಆಳವಾಗಿ ಮುಳುಗೇಳುತ್ತಾನೆಂದರೆ, ಆತನ ಬಳಿ ದೇವನನ್ನು ಮನಸಾರೆ ಸ್ತುತಿಸುವುದಕ್ಕಿಂತ ಹೆಚ್ಚಿನ ಪ್ರೀತಿಪಾತ್ರ ವಿಷಯ ಬೇರೊಂದಿರದು. ಮನುಷ್ಯನಿಗೆ ನೀಡಲಾದ ವಿವೇಚನಾ ಶಕ್ತಿಯ ಸದ್ಬಳಕೆಯಾದಲ್ಲಿ, ಖುದ್ದು ಮನುಷ್ಯನ ಆತ್ಮಸಾಕ್ಷಿಯು ಪದೇ ಪದೇ, 'ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್' (ದೇವನು ಮಹಾನನು, ದೇವನು ಮಹಾನನು) ಎಂಬ ಸಾಕ್ಷ್ಯ ನೀಡುತ್ತಲಿರುವುದು.

ಈ ಪುಸ್ತಕವು ಮೌಲಾನಾ ವಹೀದುದ್ದೀನ್ ಖಾನ್ ರ 'ಅಲ್ಲಾಹು ಅಕ್ಬರ್' ಎಂಬ ಕೃತಿಯ ಅನುವಾದವಾಗಿದೆ. ಮೌಲಾನರ ಈ ಕೃತಿಯು, ಜಗತ್ತಿನಲ್ಲಿ ದೇವನ ಅನುಗ್ರಹ ಮತ್ತು ಆತನ ಮಹಿಮೆಯನ್ನು ಅವಲೋಕಿಸುವ ಮೂಲಕ ನಮ್ಮ ಆತ್ಮಸಾಕ್ಷಿಯನ್ನು ಹೇಗೆ ಜಾಗೃತಗೊಳಿಸಿಕೊಳ್ಳಬಹುದು ಎಂಬುದರ ಕುರಿತು ವಿವರಿಸಿರುವರು. ನಿಜವಾದ ಅರ್ಥದಲ್ಲಿ ಈ ಕೃತಿಯು ಓದುಗರಿಗೆ ದೇವನ ಸಾಕ್ಷಾತ್ಕಾರ ಮಾಡಿಸಲಿ ಎಂಬುದು ನಮ್ಮ ಪ್ರಾರ್ಥನೆ.

# ದೇವಾನ್ವೇಷಣೆಯ ಬದುಕು.

ಅಲ್ಲಾಹನ (ನೈಜ ದೇವನ) ಕುರಿತು ಅರಿತವನು, ತನ್ನ ಬದುಕಿನ ಅತ್ಯಂತ ದೊಡ್ಡ ವಾಸ್ತವವನ್ನು ಕಂಡುಕೊಂಡನು. ಅಂತಹ ವ್ಯಕ್ತಿಯ ಪಾಲಿಗೆ ಅದು ಎಷ್ಟು ದೊಡ್ಡ ಪ್ರಳಯಾಂತಕ ಅನ್ವೇಷಣೆಯಾಗಿರುತ್ತದೆಯೆಂ-ದರೆ, ಅವನ ಬದುಕನ್ನದು ಸಂಪೂರ್ಣವಾಗಿ ಕುಲುಕಿಬಿಡುವುದು.

ಅಂತಹ ವ್ಯಕ್ತಿಯು ದಿನನಿತ್ಯವೂ ದೇವ ಪ್ರಕಾಶದಡಿಯಲ್ಲಿ ಮಿಂದೇಳುವಂತಹ ವಿವರಣೆಗೆ ನಿಲುಕದ ಅದ್ಭುತ ಆಧ್ಯಾತ್ಮಿಕ ಅನುಭವಕ್ಕೊಳಗಾಗುವನು. ಅವನ ಆಲೋಚನೆಗಳೆಲ್ಲವೂ ಹೊಸ ದಿಕ್ಕಿನಲ್ಲಿ ಸಾಗತೊಡಗುವವು. ಅವನ ವರ್ತನೆ ಸಂಪೂರ್ಣವಾಗಿ ಬದಲಾಗ ತೊಡಗುವುದು. ನಿಜವಾದ ಅರ್ಥದಲ್ಲಿ ಹೇಳುವುದಾದರೆ; ಅವನೊಬ್ಬ ಹೊಚ್ಚ ಹೊಸ ಮನುಷ್ಯನಾಗಿ ಪರಿವರ್ತಿತನಾಗುವನು. ಆತ ದೇವನನ್ನು ನೋಡುತ್ತಿದ್ದಾನೋ ಎಂಬಂತೆ ಅವನ ಕೆಲಸ-ಕಾರ್ಯಗಳೆಲ್ಲವೂ ಸುಸಂಬದ್ಧ-ವಾಗಿರುವವು. "ಪುನರುತ್ಥಾನದ ದಿನವು ಈಗಾಗಲೇ ಬಂದುಬಿಟ್ಟಿದೆಯೇನೋ, ದೇವನ ನ್ಯಾಯಾಲಯದ ಕಟಕಟೆಯಲ್ಲಿ ತನ್ನನ್ನು ನಿಲ್ಲಿಸಿ, ಕರ್ಮದ ತಕ್ಕಡಿಗಳಲ್ಲಿ ತನ್ನ ಕರ್ಮಗಳನ್ನು ತೂಗಲಾಗುತ್ತಿದೆಯೇನೋ" ಎಂಬಂತೆ, ಅವನು ತನ್ನ ಬದುಕಿನ ಒಂದೊಂದು ಹೆಜ್ಜೆಯನ್ನೂ ಬಹಳ ಜಾಗರೂಕತೆಯಿಂದ ಇಡತೊಡಗುವನು.

ಪರಲೋಕದಲ್ಲಿ ಪುನರುತ್ಥಾನದ ದಿನ ಏನೆಲ್ಲಾ ಜರುಗಲಿರುವುದೋ; ಅವೆಲ್ಲವನ್ನೂ ವಿಶ್ವಾಸಿಯೊಬ್ಬನು ಇಹದಲ್ಲೇ ತನ್ನ ಅನುಭವಕ್ಕೆ ತಂದುಕೊಳ್ಳಲು ಪ್ರಯತ್ನಿಸುವನು. ಈ ಆಲೋಚನಾ ಧಾಟಿಯೇ ವಿಶ್ವಾಸಿ ಮತ್ತು ಅವಿಶ್ವಾಸಿಗಳ

ನಡುವಣ ಇರುವ ಬಹು ದೊಡ್ಡ ವ್ಯತ್ಯಾಸವಾಗಿರುವುದು. ಅವಿಶ್ವಾಸಿಯು ಪರಲೋಕದಲ್ಲಿ ನೋಡಲಿರುವ ದೃಶ್ಯಗಳನ್ನೆಲ್ಲಾ ವಿಶ್ವಾಸಿಯೋರ್ವನು ಇಹದಲ್ಲೇ ನೋಡತೊಡಗುವನು. ಅವಿಶ್ವಾಸಿಯೋರ್ವ ನಾಳೆಯ ದಿನ ಪರಲೋಕದಲ್ಲಿ ವಾಸ್ತವವು ಗೋಚರವಾದ ಬಳಿಕ, ಅದನ್ನು ಕಣ್ಣಾರಕಂಡ ಬಳಿಕ ಯಾವ ಸತ್ಯವನ್ನು ಒಪ್ಪಿಕೊಳ್ಳುವನೋ, ಆ ಪರೋಕ್ಷ ಸತ್ಯವನ್ನು ವಿಶ್ವಾಸಿಯೋರ್ವನು ಇಹಲೋಕದಲ್ಲೇ ಕಣ್ಣಾರೆ ಕಾಣುವ ಮೊದಲೇ ಹೃದಯಾಂತರಾಳದಿಂದ ಸ್ವೀಕರಿಸಿಕೊಂಡುಬಿಟ್ಟಿರುವನು.

ದೇವಾಸ್ತಿತ್ವ

ದೇವಾಸ್ತಿತ್ವದ ಅತ್ಯಂತ ದೊಡ್ಡ ಸಬೂತು ಖುದ್ದು ಮನುಷ್ಯನ ಅಸ್ತಿತ್ವದಲ್ಲೇ ಅಡಗಿದೆ. ಒಂದು ವೇಳೆ, ದೇವನ ಅಸ್ತಿತ್ವವನ್ನು ಒಪ್ಪುವುದು ನಮ್ಮ ಪಾಲಿಗೆ ಕಷ್ಟಕರವಾಗುವುದಾದರೆ ಮನುಷ್ಯನ ಅಸ್ತಿತ್ವವನ್ನು ಒಪ್ಪುವುದು ಕೂಡ ಕಷ್ಟವೆಂದೇ ಹೇಳಬಹುದು. ನಾವು ಯಾರಾದರೂ ಒಬ್ಬ ವ್ಯಕ್ತಿಯ ಅಸ್ತಿತ್ವವನ್ನು ಒಪ್ಪುವವರಾದರೆ, ಆ ಏಕ ದೇವನ ಅಸ್ತಿತ್ವವನ್ನು ಒಪ್ಪುವ ವಿಚಾರದಲ್ಲಿ ಕೂಡ ನಮಗೆ ಯಾವುದೇ ಅಡೆತಡೆಗಳು ಎದುರಾಗಕೂಡದು.

“ದೇವನು ಮಾನವನೊಳಗೆ ತನ್ನ ಆತ್ಮದಿಂದ ಊದಿದನು” (ಅಲ್ ಹಿಜ್ರ್:29) ಎಂದು ಕುರ್ ಆನ್ ಹೇಳುತ್ತದೆ. ಮಾನವನು ದೇವನ ಗುಣವೈಶಿಷ್ಟ್ಯಗಳ ಜೀವಂತ ಮಾದರಿಯಾಗಿರುವನು ಎಂಬುದು ಇದರ ನಿಜವಾದ ತಾತ್ಪರ್ಯವಾಗಿದೆ. ಅಸ್ತಿತ್ವ, ಜೀವನ, ಜ್ಞಾನ, ಶಕ್ತಿ, ಇಚ್ಛೆ ಅಧಿಕಾರ ಹಾಗೂ ಪರಿಪೂರ್ಣತೆಯ ಇತರ ಎಲ್ಲ ಗುಣವೈಶಿಷ್ಟ್ಯಗಳ ಮೂಲವಂತೂ ದೇವನೇ ಆಗಿರುವನು. ಅವುಗಳ ಪೈಕಿ ಕೇವಲ ಒಂದು ಅಂಶವನ್ನು ಮಾತ್ರ (ಭಾಗವೂ ಅಲ್ಲ) ಮನುಷ್ಯನಿಗೆ ನೀಡಲಾಗಿದೆ ಅಷ್ಟೇ. ಮನುಷ್ಯನು ಯಾವುದೇ ರೀತಿಯಲ್ಲೂ ದೇವನ ಭಾಗವಾಗಲು ಸಾಧ್ಯವಿಲ್ಲ. ಆದರೆ, ಮನುಷ್ಯನು ತನ್ನ ಅಸ್ತಿತ್ವದ ಮೂಲಕ ದೇವನ ಅಸ್ತಿತ್ವವನ್ನು ಸಾರುವ ಅತಿದೊಡ್ಡ

ಪುರಾವೆಯಾಗಿರುವನು. ಆ ದೇವನ ಅಸ್ತಿತ್ವದ ಮೇಲೆ ಪರೋಕ್ಷವಾಗಿ ಮನುಷ್ಯನು ವಿಶ್ವಾಸವಿಡುವನೋ ಇಲ್ಲವೋ ಎಂಬುದೇ ಆತನಿಗೆ ಒಡ್ಡಲಾದ ಪರೀಕ್ಷೆಯಾಗಿದೆ. ಮನುಷ್ಯನೊಳಗೆ ದೇವನಿಟ್ಟಿರುವ ವೈಶಿಷ್ಟ್ಯಗಳ ಮೂಲಕವೇ ಅವನು ಆ ಏಕದೇವನನ್ನು ಅರಿತು, ಆ ದೇವಾಸ್ತಿತ್ವದ ಮೇಲೆ ಪರೋಕ್ಷ ವಿಶ್ವಾಸವಿಡಬೇಕು ಎಂಬುದು ಅವನಿಂದ ಉದ್ದೇಶಿಸಲಾಗಿದೆ.

ಮಾನವನಿಗೆ ತನ್ನದೇ ಆದ ಒಂದು ಶಾಶ್ವತ ಅಸ್ತಿತ್ವವಿದೆ. ಅವನು ವೀಕ್ಷಿಸುವ, ಆಲಿಸುವ ಮತ್ತು ಮಾತನಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಅವನು ವಿವೇಚನಾ ಶಕ್ತಿಯನ್ನು ಹೊಂದಿರುವನು. ಯೋಜನೆಯನ್ನು ರೂಪಿಸಿ ಅದನ್ನು ಕಾರ್ಯರೂಪಕ್ಕೆ ತರಬಲ್ಲನು. ತನ್ನ ಯೋಚನೆಗನುಗುಣವಾಗಿ ನಿರ್ಧಾರವನ್ನೂ ತೆಗೆದುಕೊಳ್ಳಬಲ್ಲನು. ಅವನು ಮೂಲವಸ್ತುವೊಂದಕ್ಕೆ ನಾಗರಿಕತೆಯ ಸ್ಪರ್ಶ ನೀಡಿ ಅದನ್ನು ಪರಿವರ್ತಿಸಬಲ್ಲ ಚಾಣಾಕ್ಷತೆಯನ್ನೂ ಹೊಂದಿರುವನು. ರಿಮೋಟ್ ಕಂಟ್ರೋಲ್ ನ ಸಹಾಯದಿಂದ ಕುಳಿತಲ್ಲೇ ರಾಕೆಟ್ ನಂತಹ ಯಂತ್ರಗಳನ್ನು ಅವನು ನಿಯಂತ್ರಿಸಬಲ್ಲನು. ಅವನು ಸ್ವಯಂ–ಪ್ರಜ್ಞೆಯನ್ನು ಹೊಂದಿರುವನು. ಮಾನವನಿಗೆ 'ಇದು ನಾನು' ಎಂಬ ತನ್ನ ಅಸ್ತಿತ್ವದ ಕುರಿತು ಸಂಪೂರ್ಣ ಅರಿವಿದೆ. ಮನುಷ್ಯನೆಂಬ ಈ ಸೃಷ್ಟಿಯೊಳಗಿರುವ ಈ ಗುಣವೈಶಿಷ್ಟ್ಯಗಳ ಪರಿಪೂರ್ಣ ಸ್ವರೂಪ ಅಥವಾ ಅವನ ಸೃಷ್ಟಿಯ ಹಿಂದಿರುವ ಮೂಲಶಕ್ತಿಯ ಹೆಸರೇ ಸೃಷ್ಟಿಕರ್ತ. ಅವನನ್ನೇ ನಾವು ದೇವನು ಅಥವಾ ಗಾಡ್ (God) ಎಂದು ಕರೆಯುವುದು.

ಮಾನವನ ಅಸ್ತಿತ್ವ ಅವಾಸ್ತವಿಕವಾದರೆ ದೇವನ ಅಸ್ತಿತ್ವ ವಾಸ್ತವ. ಇದೇ ದೇವ ಮತ್ತು ಮಾನವನ ನಡುವಿನ ಇರುವ ಅತಿದೊಡ್ಡ ವ್ಯತ್ಯಾಸ. ಮಾನವನು ಕೇವಲ ಸೃಷ್ಟಿಯಾದರೆ ದೇವನು ಅವನ ಸೃಷ್ಟಿಕರ್ತ. ಮಾನವನ ಶಕ್ತಿ ಸೀಮಿತ, ದೇವನ ಶಕ್ತಿ ಅಪರಿಮಿತ ಮತ್ತು ಅನಂತ, ಮನುಷ್ಯನಿಗೆ ಸ್ವತಃ ತನ್ನ ಮೇಲೂ

ನಿಯಂತ್ರಣವಿಲ್ಲ ಆದರೆ ಭೂಮಿ–ಆಕಾಶಗಳ ಸಕಲ ಅಧಿಕಾರಗಳು ದೇವ ನಿಯಂತ್ರಿತ. ಮಾನವನು ನಶ್ವರ ದೇವನು ಚಿರಂತನ. ಮಾನವನ ಬಳಿ ಇರುವುದೆಲ್ಲವೂ ದೇವನ ಕೊಡುಗೆಯಾದರೆ, ದೇವನ ಬಳಿ ಇರುವುದೆಲ್ಲವೂ ಕೇವಲ ಆತನಿಗೆ ಮಾತ್ರ ಸೇರಿದುದಾಗಿದೆ.

ಮನುಷ್ಯನ ಅಸ್ತಿತ್ವವನ್ನು ಒಪ್ಪುವುದು ಒಂದಲ್ಲ ಒಂದು ರೀತಿಯಲ್ಲಿ ದೇವನ ಸ್ವರೂಪದ ಒಂದಂಶವನ್ನು ಒಪ್ಪಿದ ಹಾಗಾಗುತ್ತದೆ. ಮನುಷ್ಯನಿಗೆ ಇಷ್ಟೆಲ್ಲಾ ಸಾಮರ್ಥ್ಯವನ್ನು ಕರುಣಿಸಿದ ಆ ದೇವನ ಅಸ್ತಿತ್ವವನ್ನು ನಿರಾಕರಿಸುವುದು ಎಷ್ಟಕ್ಕೂ ಸಮಂಜಸವಾದುದಲ್ಲ. ದೇವಾಸ್ತಿತ್ವವನ್ನು ನಿರಾಕರಿಸುವ ಪ್ರತಿಯೋರ್ವ ವ್ಯಕ್ತಿಗೂ ತನ್ನ ಅಸ್ತಿತ್ವದ ಮೇಲೆ ನಂಬಿಕೆ ಇದೆ. ಅಂತಹ ವ್ಯಕ್ತಿಯು ಬೇರೆಲ್ಲಾ ಮಾನವರ ಅಸ್ತಿತ್ವವನ್ನೂ ಒಪ್ಪುವನು. ಯಾವ ವ್ಯಕ್ತಿ ಮಾನವರ ಅಸ್ತಿತ್ವದ ಕುರಿತು ವಿಶ್ವಾಸ ಹೊಂದಿರುವನೋ, ಆತ ದೇವಾಸ್ತಿತ್ವವನ್ನು ನಿರಾಕರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಮಾನವರು ದೇವನ ಸೃಷ್ಟಿಗಳು. ಸೃಷ್ಟಿಗಳ ಅಸ್ತಿತ್ವವನ್ನು ಒಪ್ಪಿದ ಯಾರೇ ಇರಲಿ; ಅವರು ಮಾತಿನ ಮೂಲಕ ವ್ಯಕ್ತಪಡಿಸಲಿ ಅಥವಾ ಬಿಡಲಿ, ಆ ಸೃಷ್ಟಿಗಳ ಸೃಷ್ಟಿಕರ್ತನಾದ ದೇವನ ಅಸ್ತಿತ್ವವನ್ನೂ ಅವರು ಒಪ್ಪಿಕೊಂಡಂತಾಗುವುದು.

ನಿಜವಾಗಿ ದೇವನನ್ನು ನಿರಾಕರಿಸುವುದರ ಅರ್ಥ ಖುದ್ದು ತನ್ನನ್ನು ತಾನೇ ನಿರಾಕರಿಸಿಕೊಳ್ಳುವುದಾಗಿದೆ. ಇನ್ನು ಯಾರು ತಾನೇ, ತನ್ನನ್ನು ತಾನೇ ನಿರಾಕರಿಸಿಕೊಳ್ಳುವ ಮೂರ್ಖತನ ತೋರಿಯಾರು?.

# ಅದ್ಭುತ ಚಮತ್ಕಾರ

ಮನುಷ್ಯನ ದೇಹವು ನೀರು, ಇಂಗಾಲ, ಆಮ್ಲಜನಕ ಮತ್ತು ಇನ್ನಿತರ ರಾಸಾಯನಿಕ ಪದಾರ್ಥಗಳಿಂದ ಮಾಡಲ್ಪಟ್ಟದ್ದಾಗಿದೆ. ಹೊರ ದೃಷ್ಟಿಕೋನದಿಂದ ನೋಡಿದರೆ, ಮನುಷ್ಯನು ಇವಿಷ್ಟು ಪದಾರ್ಥಗಳ ಒಟ್ಟು ಸಂಗ್ರಹವಷ್ಟೇ ಆಗಿದ್ದಾನೆ. ರಾಬರ್ಟ್ ಪ್ಯಾಟಿಸನ್ (R.Patison) ಮನುಷ್ಯನ ದೇಹದಲ್ಲಿರುವ ಆ ಎಲ್ಲಾ ರಾಸಾಯನಿಕ ವಸ್ತುಗಳ ಮೌಲ್ಯವನ್ನು ಲೆಕ್ಕಹಾಕಿದಾಗ (ಆಗಿನ ಕಾಲದ) ಅದರ ಮಾರುಕಟ್ಟೆಯ ಬೆಲೆ ಕೇವಲ 6.50 (ಆರೂವರೆ) ಡಾಲರ್ ಮಾತ್ರವಾಗಿತ್ತು. ಅರ್ಥಾತ್ ಹೆಚ್ಚುಕಮ್ಮಿ ಭಾರತದ ರೂಪಾಯಿಯ ಈಗಿನ ಮೌಲ್ಯದಲ್ಲಿ 650 ರೂ. ಎನ್ನಬಹುದು.

ಆದರೆ ದೇವನು, ಇದೇ '650 ರೂಪಾಯಿ' ಯ ಮೌಲ್ಯದ ವಸ್ತುಗಳಿಂದ, ರೂಪಾಯಿಗಳ ಮೌಲ್ಯದಲ್ಲಿ ಬೆಲೆಕಟ್ಟಲು ಸಾಧ್ಯವೇ ಇಲ್ಲದಂತಹ ಅತ್ಯಮೂಲ್ಯ ಮನುಷ್ಯನನ್ನು ಸೃಷ್ಟಿಸಿರುವನು. 6,500 ಕೋಟಿ ರೂಪಾಯಿಯೂ ಒಬ್ಬ ಮನುಷ್ಯನ ಮೌಲ್ಯಕ್ಕೆ ಸರಿದೂಗಲಾರದು. ತನ್ನ ಯಾವುದಾದರೂ ಅಂಗ ತನ್ನಿಂದ ಬೇರ್ಪಟ್ಟಾಗಷ್ಟೇ ಮನುಷ್ಯನಿಗೆ ತಾನೆಷ್ಟು ಅಮೂಲ್ಯ ಸೃಷ್ಟಿ ಎಂಬುದರ ಅರಿವುಂಟಾಗುವುದು. ಮನುಷ್ಯನ ಕೈಯೊಂದು ತುಂಡಾಗಿ ಬೇರ್ಪಟ್ಟರೆ ಸಾವಿರಾರೂ ಕೋಟಿ ರೂ. ಖರ್ಚು ಮಾಡಿದರೂ ಅಂತಹದೇ ಇನ್ನೊಂದು ಕೈ ಅವನಿಗೆ ಮತ್ತೆ ಸಿಗುವುದು ಅಸಾಧ್ಯದ ಮಾತು. ಮನುಷ್ಯನ ಕಣ್ಣು ಕುರುಡಾಗಿಬಿಟ್ಟರೆ, ಪ್ರಪಂಚದ ಸಂಪತ್ತೆಲ್ಲವನ್ನು ತಂದು ಸುರಿದರೂ ಅವನಿಗೆ ಆ ಕಣ್ಣಿನಿಂದ ಮತ್ತೆ ಕಾಣುವುದು ಮಾತ್ರ ಸಾಧ್ಯವಿಲ್ಲದ ಮಾತು. ಮನುಷ್ಯ ಮೂಗನಾಗಿ ಬಿಟ್ಟರೆ ಅದೆಷ್ಟೇ ಕೋಟಿ ಖರ್ಚು ಮಾಡಿದರೂ, ಅವನಿಗೆ ತನ್ನ ಭಾವನೆಯನ್ನು ಸ್ಪಷ್ಟವಾದ ಮಾತಿನ ಮೂಲಕ ವ್ಯಕ್ತಪಡಿಸಬಹುದಾದ ಸಾಧನ ಮಾರುಕಟ್ಟೆಯಲ್ಲೆಲ್ಲೂ ದೊರಕದು.

ನಿಷ್ಪ್ರಯೋಜಕ ವಸ್ತುಗಳಿಂದ ಅತ್ಯಮೂಲ್ಯ ಸೃಷ್ಟಿಗಳನ್ನೆಬ್ಬಿಸಿ ನಿಲ್ಲಿಸುವ ದೇವನ ಆ ಸೃಷ್ಟಿಯ ಕಲೆ ಅದೆಷ್ಟು ಅದ್ಭುತವಲ್ಲವೇ? ಅವನು ನಿರ್ಜೀವ ವಸ್ತುಗಳಿಂದ ಜೀವಂತ ವಸ್ತುಗಳನ್ನೆಬ್ಬಿಸುತ್ತಾನೆ. ವಿವೇಚನಾರಹಿತ ವಸ್ತುಗಳಿಂದ ಅದ್ಭುತ ಆಲೋಚನಾ ಶಕ್ತಿಯಿರುವ ಸೃಷ್ಟಿಯೊಂದಕ್ಕೆ ಅಸ್ತಿತ್ವ ನೀಡುತ್ತಾನೆ. ಅವನು 'ಇಲ್ಲ' ದರಿಂದ 'ಇದೆ' ಯನ್ನು ಉಂಟುಮಾಡುತ್ತಾನೆ.

ಮಾಂತ್ರಿಕನೊಬ್ಬನ ಕೋಲಿನಿಂದ ಕಲ್ಲಿನಿಂದೇನಾದರೂ ಸದ್ದುಂಟಾದರೆ ಜನರೆಲ್ಲರೂ ಒಮ್ಮೆಲೇ ಆಶ್ಚರ್ಯಚಕಿತರಾಗಿಬಿಡುತ್ತಾರೆ. "ಆಹಾ, ಎಂತಹ ಅದ್ಭುತವಲ್ಲವೇ" ಎನ್ನತೊಡಗುತ್ತಾರೆ. ಆದರೆ, ದೇವನು ಅಸಂಖ್ಯಾತ ಮನುಷ್ಯರನ್ನು ತುಚ್ಛ ವಸ್ತುಗಳಿಂದ ಸೃಷ್ಟಿಸಿ, ಅವರಿಗೆ ಜೀವ ನೀಡಿ ಎಬ್ಬಿಸಿ ನಿಲ್ಲಿಸುತ್ತಿರುವನು. ಮನುಷ್ಯನೆಂಬ ದೇವನ ಈ ಅದ್ಭುತ ಸೃಷ್ಟಿಯು ಸ್ಪಷ್ಟವಾಗಿ ಅರ್ಥಪೂರ್ಣವಾಗಿ ಮಾತನಾಡಬಲ್ಲನು. ಆದರೆ ಜನರು, ದೇವನ ಈ ಅದ್ಭುತ ನಿದರ್ಶನವನ್ನು ನೋಡಿಯೂ ಆಶ್ವರ್ಯಚಕಿತರಾಗುವುದಿಲ್ಲ. ಜಾದೂಗಾರನ ಮೋಡಿಯಷ್ಟೇ ಕಣ್ಣಿಗೆ ಕಾಣುವ, ದೇವನ ಅದ್ಭುತ ಚಮತ್ಕಾರಗಳನ್ನು ನೋಡಲಾಗದ ಜನರು ಅದೆಷ್ಟು ದೊಡ್ಡ ಕುರುಡರಲ್ಲವೇ?. ಜಾದೂಗಾರನ ಸುಳ್ಳು ಮೋಡಿಗೆ ಕೇಕೆ ಹಾಕಿ, ಅವನ ಸಾಮರ್ಥ್ಯಕ್ಕೆ ತಲೆಬಾಗುವ, ದೇವನ ನೈಜ ಚಮತ್ಕಾರಗಳನ್ನು ನೋಡಿಯೂ, ದೇವನ ಕುರಿತು ಭಕ್ತಿ–ಪ್ರೀತಿಯ ಭಾವ ಪುಟಿದೇಳದ ಜನರೆಷ್ಟು ಮೂರ್ಖರಲ್ಲವೇ?.

ವಾಸ್ತವ ಸಂಗತಿಯೇನೆಂದರೆ ಮನುಷ್ಯನೇನಾದರೂ ದೇವನನ್ನು ಸರಿಯಾದ ರೀತಿಯಲ್ಲೇ ಅರಿತದ್ದೇ ಆದರೆ, ಅವನು ಆ ದೇವನ ಅದ್ಭುತ ನಿದರ್ಶನಗಳ ಮುಂದೆ ಮಂಡಿಯೂರಿಬಿಡುವನು. ಆ ನಂತರ ಜಗತ್ತಿನಲ್ಲಿ ಅವನಿಗೆ ದೇವನ ಹೊರತಾಗಿ ಬೇರೇನೂ ಕಣ್ಣಿಗೆ ಕಾಣದು.

ದೇವವಿಶ್ವಾಸ:

ನಾನು ನವದೆಹಲಿಯ ಗೇಟ್ ಆಫ್ ಇಂಡಿಯಾದ ಮುಂದೆ ನಿಂತಿದ್ದೆ. ಗೇಟ್ ಆಫ್ ಇಂಡಿಯಾದ ರಚನೆ ಮತ್ತು ಅದರಲ್ಲಿ ಬಳಸಲಾದ ಶಿಲೆಯ ಕೆತ್ತನೆ ಮತ್ತದರ ವಿನ್ಯಾಸ ನಯನ ಮನೋಹರವಾಗಿದೆ. "ಮನುಷ್ಯನು ಎಷ್ಟೊಂದು ವಿಶಿಷ್ಟ ಸಾಮರ್ಥ್ಯವನ್ನು ಹೊಂದಿರುವವನು" ಎಂಬುದರ ಕುರಿತು ಆ ಕಟ್ಟಡವು ಸಾಕ್ಷಿ ನುಡಿಯುತ್ತಿದೆ. ಮನುಷ್ಯನು 'ಗೇಟ್ ಆಫ್ ಇಂಡಿಯಾ'ದ ನಿರ್ಮಾಣದ ಮೊದಲು ಅದರ ಆಕಾರ, ಗಾತ್ರ, ವಿನ್ಯಾಸಗಳ ಕುರಿತಾದ ನಕ್ಷೆಯೊಂದನ್ನು ತಯಾರು ಮಾಡುತ್ತಾನೆ. ಆ ಬಳಿಕ ಅದರ ಯೋಜನೆ ಕೈಗೆತ್ತಿಕೊಂಡು, ಅದನ್ನು ಕಾರ್ಯರೂಪಕ್ಕೆ ತಂದು ಕೆಲವೇ ದಿನಗಳಲ್ಲಿ ಕಟ್ಟಡದ ರೂಪದಲ್ಲಿ ಅದನ್ನು ನಿಲ್ಲಿಸಿಬಿಡುತ್ತಾನೆ.

ಇದನ್ನು ನೋಡುವಾಗ ನನ್ನ ಮನದಲ್ಲೊಂದು ಯೋಚನೆ ಹಾದು ಹೋಯಿತು; ಈ ಬ್ರಹ್ಮಾಂಡದಲ್ಲಿರುವ ಗ್ರಹ-ನಕ್ಷತ್ರಾದಿಗಳಾದಿಯಾಗಿ, ಪಶು-ಪಕ್ಷಿ, ವೃಕ್ಷಗಳೆಲ್ಲವುಗಳ ಬಳಿ "ಗೇಟ್ ಆಫ್ ಇಂಡಿಯಾದಂತಹ ಒಂದು ಕಟ್ಟಡ ನಿರ್ಮಾಣ ಮಾಡಿರಿ" ಎಂದರೆ, ಅವುಗಳೆಲ್ಲವೂ ಒಟ್ಟಾರೆಯಾಗಿ ಸೇರಿಕೊಂಡರೂ ಇಂತಹ ಒಂದು ಕಟ್ಟಡವನ್ನು ಎಬ್ಬಿಸಿ ನಿಲ್ಲಿಸಲಾರವು.

ಮಾನವನಲ್ಲಿರುವ ಈ ಸಾಮರ್ಥ್ಯ ಬೇರೆಲ್ಲಾ ಲೌಕಿಕ ವಿಷಯಗಳಿಗೂ ಅನ್ವಯಿಸುತ್ತದೆ. ಬ್ರಹ್ಮಾಂಡದಲ್ಲಿರುವ ಬೇರೆಲ್ಲಾ ವಸ್ತು, ಜೀವಿಗಳಿಗೆ ಹೋಲಿಸಿದರೆ ಮನುಷ್ಯನಲ್ಲಿರುವ ಈ ಅದ್ಭುತ ಸಾಮರ್ಥ್ಯ ಕೇವಲ ಆತನೊಬ್ಬನಿಗೆ ಮಾತ್ರ ಸೀಮಿತ. ಈ ಬ್ರಹ್ಮಾಂಡಲ್ಲಿರುವ ಬೇರಾವ ಸೃಷ್ಟಿಯೂ ಮಾನವನಂತಹ ಅದ್ಭುತ ಸಾಮರ್ಥ್ಯವನ್ನು ಹೊಂದಿಲ್ಲ. ಮನುಷ್ಯನು ತನ್ನ ವಿವೇಚನಾ ಶಕ್ತಿ ಮತ್ತು ತನ್ನ ಅವಯವಗಳ ಮೂಲಕ ಏನೆಲ್ಲಾ ಅದ್ಭುತ ಕಾರ್ಯಗಳನ್ನು ಸಾಧಿಸಬಲ್ಲನೋ, ನಮ್ಮ ಕಣ್ಣಿಗೆ ಕಾಣುವ ಈ ಬ್ರಹ್ಮಾಂಡದಲ್ಲಿರುವ ಬೇರಾವ ಜೀವಿಗೂ ಅಂತಹ ಕಾರ್ಯಗಳನ್ನು ಸಾಧಿಸಲಾಗದು.

ಅದು ಗೇಟ್ ಆಫ್ ಇಂಡಿಯಾದ ನಿರ್ಮಾಣ ಕಾರ್ಯವಾಗಿರಬಹುದು ಅಥವಾ ಬೇರಾವುದಾದರೂ ಸಂಕೀರ್ಣ ಯಂತ್ರದ ನಿರ್ಮಾಣ ಮತ್ತದರ ನಿರ್ವಹಣೆಯೇ ಆಗಿರಬಹುದು; ಈ ಪೈಕಿ ಯಾವ ವಿಷಯದಲ್ಲೂ ಮನುಷ್ಯನಿಗೆ ಮತ್ತೊಂದು ಜೀವಿ ಸರಿಸಾಟಿಯಾಗಲಾರದು ಎಂದೇ ಹೇಳಬಹುದು.

ಮನುಷ್ಯನಿಗೆ ತನ್ನ ಸೃಷ್ಟಿಕರ್ತನ ಕುರಿತು ಪ್ರಜ್ಞಾಪೂರ್ವಕ ಅರಿವು ಇರಬೇಕು, ಅವನು ತನ್ನ ವಿವೇಚನಾ ಶಕ್ತಿಯಿಂದ ಆ ಸೃಷ್ಟಿಕರ್ತನನ್ನು ಗುರುತಿಸಬೇಕು ಎಂಬುದೇ ಅವನ ಸೃಷ್ಟಿಯ ಹಿಂದಿರುವ ಉದ್ದೇಶವಾಗಿದೆ. ಹಾಗಾಗಿಯೇ ದೇವನು ಮನುಷ್ಯನನ್ನು ಬಹಳ ವಿಶಿಷ್ಟತೆಯೊಂದಿಗೆ ಸೃಷ್ಟಿಸಿರುವನು. ಪ್ರಪಂಚದಲ್ಲಿರುವ ಇತರ ಜೀವಿಗಳಿಗೆ ಹೋಲಿಸಿದರೆ ಮನುಷ್ಯನಿಗೆ ತನ್ನದೇ ಆದ ಪ್ರತ್ಯೇಕತೆ, ವಿಶಿಷ್ಟತೆ, ಶ್ರೇಷ್ಠತೆ ಇರುವಂತೆ; ದೇವನ ಅಸ್ತಿತ್ವವು ಯಾವುದೇ ರೀತಿಯಲ್ಲೂ ಮನುಷ್ಯನಿಗೆ ಹೋಲಿಸಲಾಗದ ವಿಶಿಷ್ಟ ಹಾಗೂ ಮಹಾಶ್ರೇಷ್ಠ ಅಸ್ತಿತ್ವವಾಗಿದೆ.

ಮನುಷ್ಯನು ತನ್ನ ಮತ್ತು ಪ್ರಪಂಚದ ಇತರ ವಸ್ತುಗಳ ನಡುವೆ ಹೋಲಿಕೆ ಮಾಡಿಕೊಂಡಂತೆ, ದೇವನ ಮತ್ತು ತನ್ನ ನಡುವೆ ಹೋಲಿಕೆ ಮಾಡಿಕೊಂಡಾಗ ಅವನಿಗೆ ದೇವನ ಅದ್ಭುತ ಶಕ್ತಿಯ ಅರಿವಾಗುತ್ತದೆ. ಪ್ರಪಂಚದ ಇತರ ವಸ್ತುಗಳಿಗಿಂತ ಮನಷ್ಯನಲ್ಲಿರುವ ಭಿನ್ನತೆ, ವಿಶಿಷ್ಟತೆ ಮತ್ತು ಶ್ರೇಷ್ಠತೆಯ ಅಂತಿಮ ಹಾಗೂ ಆ ಎಲ್ಲಾ ವೈಶಿಷ್ಟ್ಯಗಳ ಉತ್ತುಂಗತೆಯ ಕೊನೆಯ ಸ್ವರೂಪವೇ ದೇವನಾಗಿದ್ದಾನೆ. ಮನುಷ್ಯನು ತನ್ನನ್ನು ತಾನು ಅರಿತಷ್ಟೇ ಸುಲಭ ಹಾಗೂ ಸರಳವಾಗಿ ದೇವನನ್ನೂ ಅರಿಯಬಹುದಾಗಿದೆ.

ವಾಸ್ತವದಲ್ಲಿ ದೇವನ ಅಸ್ತಿತ್ವವನ್ನು ಒಪ್ಪುವುದೆಂದರೆ, ಈಗಾಗಲೇ ಒಪ್ಪಿಕೊಂಡ ವಿಷಯವೊಂದನ್ನು ಪುನಃ ಮನಃಪೂರ್ವಕವಾಗಿ ಒಪ್ಪಿಕೊಂಡಂತೆ. ದೇವನನ್ನು ಕಂಡುಕೊಳ್ಳುವುದೆಂದರೆ, ಈಗಾಗಲೇ ಕಂಡುಕೊಂಡಿರುವ

ವಿಷಯವೊಂದನ್ನು ಪುನಃ ಕಂಡಂತೆ. ಮನುಷ್ಯನು ತನ್ನ ದೈನಂದಿನ ಬದುಕಿನಲ್ಲಿ ಏನೆಲ್ಲಾ ವಿದ್ಯಮಾನಗಳನ್ನು ಅನುಭವಕ್ಕೆ ತಂದುಕೊಳ್ಳುವನೋ, ಆ ವಿದ್ಯಮಾನಗಳ ವಿಸ್ತರಣಾ ಸ್ವರೂಪದ ಇನ್ನೊಂದು ಹೆಸರೇ ದೇವವಿಶ್ವಾಸವಾಗಿದೆ. ಮನುಷ್ಯನು ಈ ವಿಶ್ವದ 'Full Stop' (ಕೊನೆಯ ಬಿಂದು) ಅಂತೂ ಅಲ್ಲ. ವಿಶ್ವದ ಇತರ ವಸ್ತುಗಳಿಗಿಂತ ಮನುಷ್ಯನಿಗೆ ಶ್ರೇಷ್ಠತೆ ದೊರೆತಿರುವುದು ನಿಜವಾದರೆ; ಮನುಷ್ಯನ ಮೇಲೆ ದೇವನ ಶ್ರೇಷ್ಠತೆ ಏಕೆ ನಿಜವಾಗದು?.

# ದೇವನು ಸಕಲವೂ ಆಗಿರುವನು.

ಪ್ರಖ್ಯಾತ ಗಣಿತ ತಜ್ಞ ಸರ್. ಮೈಕೆಲ್ ಫ್ರಾನ್ಸಿಸ್ ಇತ್ತೀಚೆಗಷ್ಟೇ ಮುಂಬೈಗೆ ಬಂದಿದ್ದರು. ಅವರು "ದೇವನೊಬ್ಬ ಮಹಾನ್ ಗಣಿತ ತಜ್ಞ" ಎಂಬ ಹೇಳಿಕೆ ಕೊಟ್ಟರು. ದೇವನನ್ನು 'ಮಹಾನ್ ಗಣಿತ ತಜ್ಞ'ನಿಗೆ ಹೋಲಿಸಿದ ಅವರ ಈ ಕಲ್ಪನೆ ಹೊಸ ಕಲ್ಪನೆಯೇನಲ್ಲ. ಸರಿಸುಮಾರು 50 ವರ್ಷಗಳ ಹಿಂದೆ ಸರ್. ಜೇಮ್ಸ್ ಜಾನ್ಸ್ ರವರು ಕೂಡ, "ಈ ವಿಶ್ವದ ನಿರ್ಮಾಣದ ಹಿಂದೆ ಮಹಾನ್ ಗಣಿತ ತಜ್ಞನೊಬ್ಬನಿರುವನು" ಎಂದೇ ಹೇಳಿದ್ದರು.

ಇದಕ್ಕೂ ಶತಮಾನಗಳ ಮೊದಲು, "ಬ್ರಹ್ಮಾಂಡದಲ್ಲಿರುವ ಪ್ರತಿಯೊಂದು ವಸ್ತುವಿನ ಹಿಂದೆ ಸಂಖ್ಯೆಗಳ ಎಣಿಕೆಗಳು ಅಡಗಿವೆ" ಎಂದು ಪೈಥಾಗೋರಸ್ ಹೇಳಿದ್ದರು. ಪಿಕಾಸೋನ ದೃಷ್ಟಿಯಲ್ಲಿ ದೇವನೊಬ್ಬ "ಮಹಾನ್ ಚಿತ್ರಕಾರ" ನಾಗಿರುವನು. "ಜಿರಾಫೆ, ಆನೆ ಮತ್ತು ಬೆಕ್ಕಿನಂತಹ ಸುಂದರ ಚಿತ್ರಗಳ ಮೂಲ ರಚನಕಾರನಾಗಿರುವ ದೇವನೊಬ್ಬ ಮಹಾನ್ ಚಿತ್ರಕಾರನಾಗಿರುವನು." ಎಂದು ಅವರು ಹೇಳಿರುವರು. ವಿಜ್ಞಾನಿ ಐನ್ ಸ್ಟೈನ್, "ದೇವನು ಸೂಕ್ಷ್ಮಾತಿ ಸೂಕ್ಷ್ಮನೂ, ಯಾರಿಗೂ ಕೇಡು ಬಯಸದ ಮಹಾನ್ ಚತುರನೂ ಆಗಿರುವನು." ಎಂದು ಹೇಳಿರುವರು.

The distinguished mathematician, Sir Michael Francis Atiyah, who was recently in Bombay said that, “God was a mathematician.” The idea of God being a mathematician is not new. About 50 years ago mathematician Sir James Jeans suggested that the universe was the handiwork of a mathematician. And the centuries before him Pyathagoras said all things are numbers. To Picasso God was an artist. “God is really anther artist,” he said, “He invented the giraffe, the elephant and the cat.” Einstein has said that the Lord is sbtle and, though not malicious, very clever.

ಯಾವುದಾದರೂ ವ್ಯಕ್ತಿಯು, ಈ ಜಗತ್ತಿನ ಕುರಿತು ಆಳವಾಗಿ ಅವಲೋಕನ ಮಾಡಿದ್ದೇ ಆದಲ್ಲಿ; ತನಗಿಂತ ಮಿಗಿಲಾದ, ತನ್ನನ್ನು ಮೀರಿಸಿದ ಶ್ರೇಷ್ಠವಾದ ಅಸ್ತಿತ್ವವೊಂದಿದೆ ಎಂಬುದರ ಅರಿವು ಆತನಿಗಾಗುವುದು ಖಚಿತ. ಒಬ್ಬ ಪ್ರಸಿದ್ಧ ಗಣಿತತಜ್ಞನಿಗೆ ಈ ಜಗತ್ತಿನಲ್ಲಿ ಎಷ್ಟೊಂದು ಅದ್ಭುತ, ಉನ್ನತ ಗಣಿತ ತಜ್ಞನೊಬ್ಬನು ಕಾಣಿಸುತ್ತಾನೆಂದರೆ; ಆತನು ತಾನು ಕಲಿತ ಗಣಿತವನ್ನೇ ಕ್ಷಣಾರ್ಧದಲ್ಲಿ ಮರೆತು, "ದೇವನೊಬ್ಬ ಮಹಾನ್ ಗಣಿತ ತಜ್ಞನು" ಎಂದು ಘೋಷಿಸಿ ಬಿಡುತ್ತಾನೆ. ಪ್ರಸಿದ್ಧ ಚಿತ್ರಕಾರನೋರ್ವನು ತನ್ನ ದೃಷ್ಟಿಕೋನದಲ್ಲಿ ಈ ಜಗತ್ತನ್ನು ನೋಡತೊಡಗಿದಾಗ, ಆತನಿಗೆ ಎಷ್ಟೊಂದು ಅದ್ಭುತ ಚಿತ್ರಕಾರನು ಕಾಣುತ್ತಾನೆಂದರೆ, ಆ ಮಹಾನ್ ಚಿತ್ರಕಾರನ ಚಿತ್ರಕಲೆಯ ಮುಂದೆ ತನ್ನ ಚಿತ್ರಕಲೆಯು ಆತನಿಗೆ ತುಂಬಾ ಪೇಲವವಾಗಿ ಕಾಣಿಸತೊಡಗುತ್ತದೆ. ಆಗ ಅವನು ತನ್ನ ಮಂಡಿಯೂರುತ್ತಾ, "ದೇವನೊಬ್ಬ ಅದ್ಭುತ ಚಿತ್ರಕಾರ" ಎಂದು ಘೋಷಿಸುತ್ತಾನೆ. ಅತೀವ ಬುದ್ಧಿಮತ್ತೆಯುಳ್ಳ ಯುಕ್ತಿವಂತ ವ್ಯಕ್ತಿಯೊಬ್ಬ ಬ್ರಹ್ಮಾಂಡದ ರಚನೆಯ ಹಿಂದಿರುವ ಮಹಾನ್ ಯುಕ್ತಿಯನ್ನು ನೋಡಿದಾಗ ದಿಗ್ಭ್ರಮೆಗೊಳಗಾಗಿ, "ಇಲ್ಲಿ ಎಲ್ಲಾ ಯುಕ್ತಿವಂತರನ್ನು ಮೀರಿಸುವ ಮಹಾನ್ ಯುಕ್ತಿವಂತನೋರ್ವನಿದ್ದಾನೆ" ಎಂದು ಹೇಳತೊಡಗುತ್ತಾನೆ.

ವಾಸ್ತವೇನೆಂದರೆ, ದೇವನು ಮಹಾನ್ ಗಣಿತ ತಜ್ಞನೂ, ಮಹಾನ್ ಚಿತ್ರಕಾರನೂ, ಮಹಾನ್ ಯುಕ್ತಿವಂತನೂ ಆಗಿರುವುದರ ಜೊತೆಗೆ ಸಕಲ ಗುಣವೈಶಿಷ್ಟ್ಯಗಳನ್ನೂ ಹೊಂದಿರುವ ಮಹಾದ್ಭುತ ಅಸ್ತಿತ್ವವಾಗಿದ್ದಾನೆ. ಯಾರಿಗೆ ಈ ಜಗತ್ತಿನಲ್ಲಿ ದೇವನ ನಿದರ್ಶನಗಳು ಕಣ್ಣಿಗೆ ಕಾಣುವುದಿಲ್ಲವೋ ಅವನು ಅತಿದೊಡ್ಡ ಕುರುಡನಾಗಿದ್ದಾನೆ. ಇನ್ನು, ದೇವನ ನಿದರ್ಶನಗಳನ್ನು ಕಂಡರೂ ಕಾಣದಂತೆ ಯಾರು ವರ್ತಿಸುತ್ತಾರೋ, ಅಂತಹವರ ಉದಾಹರಣೆಯು ತಲೆಮಾಸಿರುವ ವ್ಯಕ್ತಿಗಳಂತಿದೆ.

# ದೇವನುಪಸ್ಥಿತಿಯ ಅನುಭವ

'ಅಪೊಲೊ15' ಬಾಹ್ಯಾಕಾಶದ ನೌಕೆಯಲ್ಲಿ ಚಂದ್ರನ ಬಳಿ ತೆರಳಿದ ಅಮೆರಿಕ ಮೂವರು ಗಗನಯಾತ್ರಿಗಳಲ್ಲಿ ಕರ್ನಲ್ ಜೇಮ್ಸ್ ಇರ್ವಿನ್ (James Irwin) ಕೂಡ ಒಬ್ಬರು. ಅವರು ಸಂದರ್ಶನವೊಂದರಲ್ಲಿ ಚಂದ್ರನಲ್ಲಿ ತನಗಾದ ತನ್ನ ಅದ್ಭುತ ಅನುಭವವನ್ನು ಹಂಚಿಕೊಳ್ಳುತ್ತಾ ಹೇಳುತ್ತಾರೆ, "ಚಂದ್ರನ ಮೇಲ್ಮೈಯನ್ನು ಸ್ಪರ್ಶಿಸಿದ ಆ ಕ್ಷಣ ನನ್ನ ಪಾಲಿಗಂತೂ ಬಹಳ ರೋಮಾಂಚನಕಾರಿಯಾಗಿತ್ತು. ನಾನಲ್ಲಿ ದೇವನ ಉಪಸ್ಥಿತಿಯನ್ನು (God's Presence) ಅನುಭವಿಸಿದೆ.ಆ ಕ್ಷಣದಲ್ಲಿ ನನ್ನೊಳಗಿನ ಆತ್ಮಸಾಕ್ಷಿಯು ಜಾಗೃತವಾಯಿತು ಮತ್ತು ದೇವನು ಇಲ್ಲೇಲ್ಲೋ ಹತ್ತಿರದಲ್ಲೇ ಇದ್ದಾನೆ ಎಂಬಂತೆ ನನಗಾಗ ಭಾಸವಾಗತೊಡಗಿತು. ದೇವನ ಹಿರಿಮೆ, ಆತನ ಅಪಾರ ಮಹಿಮೆ ನನಗಲ್ಲಿ ಖುದ್ದು ಗೋಚರಿಸತೊಡಗಿತು. ಚಂದ್ರನೆಡಗಿನ ಪಯಣ ನನ್ನ ಪಾಲಿಗೆ ಕೇವಲ ವೈಜ್ಞಾನಿಕ ಪಯಣವಷ್ಟೇ ಅಲ್ಲ. ಬದಲಿಗದು ನನ್ನ ಬದುಕಿನ ಆಧ್ಯಾತ್ಮಿಕ ಪಯಣವೂ ಹೌದು."

(ಟ್ರೆಬ್ಯೂನ್ 27, ಅಕ್ಟೋಬರ್ 1972)

ಕರ್ನಲ್ ಜೇಮ್ಸ್ ಇರ್ವಿನ್ ಅವರ ಈ ವಿಶಿಷ್ಟ ಅನುಭವವು ಅಸಹಜವಾದುದೇನಲ್ಲ. ವಾಸ್ತವದಲ್ಲಿ ದೇವನು ಏನೆಲ್ಲಾ ಸೃಷ್ಟಿಸಿರುವನೋ ಅವುಗಳನ್ನು ಅವಲೋಕಿಸುವಾಗ ಮನುಷ್ಯನು ಈ ರೀತಿ ಬೆರಗುಗೊಳ್ಳುವುದು ಸಹಜ. ಬ್ರಹ್ಮಾಂಡದ ಅದ್ಭುತ ರಚನೆಯನ್ನು ಅವಲೋಕಿಸುವಾಗ ಮನುಷ್ಯನು ತನಗರಿವಿಲ್ಲದಂತೆ ದೇವನ ಸೃಷ್ಟಿಯ ಚಾತುರ್ಯಕ್ಕೆ ಮಾರುಹೋಗಿ ಬಿಡುವನು. ಸೃಷ್ಟಿಯ ಪ್ರತಿಯೊಂದು ಕಾರ್ಯದಲ್ಲೂ ಸೃಷ್ಟಿಕರ್ತನ ಚಹರೆಯು ಪ್ರತಿಬಿಂಬಿಸುತ್ತಿರುವುದು. ಆದರೆ, ನಮ್ಮ ಸುತ್ತ–ಮುತ್ತಲಿನ ಚಿರಪರಿಚಿತ ಪ್ರಪಂಚವನ್ನು ನಾವು ಬಾಲ್ಯದಿಂದಲೂ ನೋಡುತ್ತಾ ಬೆಳೆದಿರುವುದರಿಂದ ಮೇಲ್ನೋಟಕ್ಕೆ ನಮಗೆ

ಅದರಲ್ಲೇನೂ ಹೆಚ್ಚಿನ ವಿಶೇಷ ಕಾಣುವುದಿಲ್ಲವಷ್ಟೇ!. ಗಾಳಿ, ನೀರು, ವೃಕ್ಷ, ಹಕ್ಕಿಗಳು ಸೇರಿದಂತೆ ಜಗತ್ತಿನಲ್ಲಿರುವ ಎಲ್ಲವೂ ದೇವನ ಅದ್ಭುತ ಸೃಷ್ಟಿಗಳಾಗಿವೆ. ಆಳವಾದ ದೃಷ್ಟಿಕೋನದಿಂದ ಇವುಗಳನ್ನೆಲ್ಲಾ ಅವಲೋಕಿಸಿದ್ದೇ ಆದಲ್ಲಿ, ಅವುಗಳಲ್ಲಿ ನಮಗೆ ದೇವನ ಪ್ರತಿಬಿಂಬವನ್ನು ವೀಕ್ಷಿಸಲು ಸಾಧ್ಯ.

ಆದರೆ, ಇವನ್ನೆಲ್ಲಾ ನಾವು ಪ್ರತಿನಿತ್ಯ ನೋಡುವ ದೃಶ್ಯಗಳಾದ್ದರಿಂದ ನಮ್ಮ ದೃಷ್ಟಿಯಲ್ಲಿ ಇವೆಲ್ಲವೂ ತೀರಾ ಮಾಮೂಲು ಎಂದೆನಿಸಿ, ದೇವನ ಸೃಷ್ಟಿಕಾರ್ಯಗಳಲ್ಲಿ ಹುದುಗಿರುವ ಸೃಜನಶೀಲತೆಯನ್ನು ಗುರುತಿಸುವುದರಲ್ಲಿ ನಾವು ಸೋತಿರುವೆವು ಅಷ್ಟೇ. ಆದರೆ, ವ್ಯಕ್ತಿಯೋರ್ವ ಹಠಾತ್ತನೆ ಚಂದ್ರಗ್ರಹದ ಮೇಲೆ ಇಳಿದಾಗ, ಅಲ್ಲಿನ ದೇವಸೃಷ್ಟಿಯ ಅದ್ಭುತ ದೃಶ್ಯಗಳನ್ನು ಪ್ರಪ್ರಥಮ ಬಾರಿ ನೋಡಿದಾಗ, ತನ್ನ ಸೃಷ್ಟಿಕರ್ತನ ಉಪಸ್ಥಿತಿಯ ಅನುಭೂತಿಯನ್ನು ಪಡೆಯದೇ ಇರಲು ಆತನಿಗೆ ಸಾಧ್ಯವಾಗಲಿಲ್ಲ. ಅವನು ಅಲ್ಲಿನ ಸೃಷ್ಟಿಯ ಅದ್ಭುತತೆಯಲ್ಲಿ ತನ್ಮಯನಾಗುವ ಮೂಲಕ ತನ್ನ ಸೃಷ್ಟಿಕರ್ತನನ್ನು ಗುರುತಿಸಿಕೊಂಡನು.

ನಾವು ವಾಸಿಸುತ್ತಿರುವ ನಮ್ಮ ಸುತ್ತಮುತ್ತಲಿನ ಪ್ರಪಂಚವೂ ನಮಗೆ, ಕರ್ನಲ್ ಜೇಮ್ಸ್ ಇರ್ವಿನ್ ಗೆ ಚಂದ್ರಗ್ರಹದಲ್ಲಾದಂತಹ ದೇವನ ಉಪಸ್ಥಿತಿಯ ಅದ್ಭುತ ಅನುಭವವನ್ನು ನೀಡಬಲ್ಲದು. ಆದರೆ ಜನರು ಚಂದ್ರಗ್ರಹದ ಹೊಸ ಪಯಣಿಗನಂತೆ ತಾವಿರುವ ಜಗತ್ತನ್ನು ಬೆರಗುಗಣ್ಣಿನಿಂದ ನೋಡುವುದಿಲ್ಲ. ಹಾಗಾಗಿಯೇ ಅವರಿಗೆ ಅಂತಹ ಅನುಭೂತಿಯೂ ದೊರೆಯುವುದಿಲ್ಲ. ಜನರು ಯಾವಾಗ ತಾವು ವಾಸಿಸುತ್ತಿರುವ ಜಗತ್ತನ್ನು ಬೆರಗುಗಣ್ಣಿನಿಂದ ನೋಡತೊಡುಗುವರೋ, ಆಗ ಮಾತ್ರ ಚಂದ್ರಗ್ರಹದ ಪಯಣಿಗನಿಗಾದಂತಹ ಅದ್ಭುತ, ರೋಮಾಂಚನಕಾರಿ ಅನುಭೂತಿಯನ್ನು ಅವರೂ ಪಡೆಯಲು ಸಾಧ್ಯ.

ಒಂದು ವೇಳೆ ನಾವು ದೇವನ ವಿಸ್ಮಯಕಾರಿ ಸೃಷ್ಟಿಯಕಾರ್ಯಗಳ ಕುರಿತು ಅವಲೋಕನಾತ್ಮಕ ದೃಷ್ಟಿಕೋನದಿಂದ ನೋಡಲು ಪ್ರಾರಂಭಿಸಿದ್ದೇ ಆದರೆ, ಪ್ರತಿಕ್ಷಣ ದೇವನುಪಸ್ಥಿತಿಯನ್ನು ಅನುಭವಿಸಲು ನಮಗೂ ಸಾಧ್ಯ. ದೇವನು ಅನುಕ್ಷಣವೂ ನಮ್ಮ ಪಕ್ಕದಲ್ಲೇ ಇರುವನೇನೋ ಎಂಬ ಅದ್ಭುತ ಅನುಭೂತಿಯೊಂದಿಗೆ ಆಗ ನಮಗೆ ಜೀವಿಸಲು ಸಾಧ್ಯ.

ನಾವೇನಾದರೂ ಒಂದು ಉನ್ನತ ಮಟ್ಟದ ಕಾರ್ಯಕ್ಷಮತೆಯುಳ್ಳ ಯಂತ್ರವನ್ನು ನೋಡಿದಾಗ, ತಕ್ಷಣವೇ ಅದರ ನಿರ್ಮಾಣದ ಹಿಂದೆ ಒಬ್ಬ ಪರಿಣಿತ ಇಂಜಿನಿಯರ್ ಇರುವುದನ್ನು ಮನಗಾಣುತ್ತೇವೆ. ಇದೇ ರೀತಿ ಈ ಜಗತ್ತು ಮತ್ತು ಅದರ ಹಿಂದಿರುವ ವಸ್ತುಗಳನ್ನು ಅವಲೋಕನಾತ್ಮಕ ದೃಷ್ಟಿಕೋನದಿಂದ ನಾವು ನೋಡಿದ್ದೇ ಆದರೆ ಅಲ್ಲಿ ದೇವನುಪಸ್ಥಿತಿಯನ್ನು ಖಂಡಿತ ನಮಗೆ ಮನಗಾಣಲು ಸಾಧ್ಯ. ಸೃಷ್ಟಿಕರ್ತ ಮತ್ತು ಸೃಷ್ಟಿಗಳ ನಡುವೆ ಬೇರ್ಪಡಿಸಲಾಗದ ಬಂಧವಿರುವುದು ನಮಗೆ ಆಗ ಸರಿಯಾಗಿ ಮನವರಿಕೆಯಾಗುವುದು.

ಜಗತ್ತಿನ ಸೃಷ್ಟಿಗಳಲ್ಲಿ ದೇವನನ್ನು ಕಾಣತೊಡಗುವುದು ಮತ್ತು ಅನುಕ್ಷಣವೂ ತನ್ನೊಂದಿಗೆ ದೇವನುಪಸ್ಥಿತಿಯ ಅನುಭೂತಿಯನ್ನು ಪಡೆಯುವುದು ಮನುಷ್ಯನ ಪಾಲಿನ ಮಹತ್ತರ ಆಧ್ಯಾತ್ಮಿಕ ಸಾಧನೆಯಾಗಿದೆ. ಒಂದು ವೇಳೆ ಮನುಷ್ಯನ ಅಂತರಾತ್ಮವು ಜೀವಂತವಾಗಿದ್ದ ಪಕ್ಷದಲ್ಲಿ, ಸೂರ್ಯನ ಹೊಂಗಿರಣಗಳಲ್ಲೂ ಆತನು ದೇವಪ್ರಕಾಶದ ಬಿಂದುಗಳು ಪ್ರಕಾಶಿಸುತ್ತಿರುವುದನ್ನು ಕಾಣಬಲ್ಲನು. ಹಚ್ಚ ಹಸಿರು ವೃಕ್ಷಗಳ ವಿಹಂಗಮ ದೃಶ್ಯಗಳಲ್ಲಿ ದೇವನ ರೂಪವು ಬೆಳಗುತ್ತಿರುವುದನ್ನು ಅವನು ಆಸ್ವಾದಿಸಬಲ್ಲನು. ಹಿತವಾದ ತಂಗಾಳಿ ಬೀಸುವಾಗ ಅದರಲ್ಲಿ ದೇವಸ್ಪರ್ಶದ ದಿವ್ಯ ಅನುಭೂತಿಯನ್ನಾತನು ಪಡೆಯಬಲ್ಲನು. ತನ್ನ ಮುಂಗೈ ಮತ್ತು ಹಣೆಯನ್ನು ನೆಲದಲ್ಲಿಟ್ಟು ಸಾಷ್ಟಾಂಗವೆರುಗುವಾಗ ತನ್ನ ಅಸ್ತಿತ್ವವನ್ನು ದೇವನ ಪಾದಗಳಲ್ಲಿ

ಅರ್ಪಿಸಿಕೊಂಡ ಧನ್ಯತೆಯ ಅನುಭೂತಿಯನ್ನು ಅವನು ಅನುಭವಿಸಬಲ್ಲನು. ದೇವನುಪಸ್ಥಿತಿಯು ಪ್ರತಿಯೊಂದು ಕಡೆಯೂ ವ್ಯಾಪಿಸಿರುವುದು. ಅದರ ಅನುಭೂತಿಯನ್ನು ಪಡೆಯಲು ನಮ್ಮ ಅಂತರಾತ್ಮದ ದೃಷ್ಟಿಯು ಜಾಗೃತವಾಗಿರಬೇಕಷ್ಟೇ!.

# ದೇವನ ಕುರಿತ ಪುರಾವೆ

ಮನುಷ್ಯನೊಬ್ಬನ ಅಸ್ತಿತ್ವ ಇರುವುದು ನಿಜವೆಂದಾದರೆ, ಅವನನ್ನುಂಟು ಮಾಡಿದ ಆ ದೇವನ ಅಸ್ತಿತ್ವವೂ ಇರಲೇಬೇಕಲ್ಲವೇ?. ಗಾಳಿ, ನೀರು, ಗಿಡ–ಮರ, ಚಂದ್ರ–ನಕ್ಷತ್ರಗಳು ಇವೆಲ್ಲವೂ ಇರುವುದು ನಿಜವಾದರೆ, ಅವುಗಳನ್ನುಂಟುಮಾಡಿದ ಅಸ್ತಿತ್ವದ ಕುರಿತು ಮಾತ್ರ ಅನುಮಾನವುಂಟಾಗುವುದು ಏಕೆ?. ಸೃಷ್ಟಿಸಲ್ಪಟ್ಟ ವಸ್ತುಗಳ ಅಸ್ತಿತ್ವವೇ ವಾಸ್ತವದಲ್ಲಿ ಅವುಗಳ ಹಿಂದಿರುವ ಸೃಷ್ಟಿಯ ಪ್ರಕ್ರಿಯೆಗೆ ಪ್ರಬಲ ಸಾಕ್ಷಿಯಾಗಿದೆ. ಖುದ್ದು ಮನುಷ್ಯನ ಅಸ್ತಿತ್ವವೂ, ಇಲ್ಲೊಬ್ಬ ಆಲಿಸಬಲ್ಲ, ವೀಕ್ಷಿಸಬಲ್ಲ, ಯೋಜನೆಯನ್ನು ರೂಪಿಸಿ ಅದನ್ನು ಕಾರ್ಯರೂಪಕ್ಕೆ ತರಬಲ್ಲ ಸೃಷ್ಟಿಕರ್ತನಿರುವನು ಎಂಬುದಕ್ಕಿರುವ ಅತಿದೊಡ್ಡ ಪುರಾವೆಯಾಗಿದೆ.

ದೇವನು ನಮ್ಮ ಹೊರಗಣ್ಣಿಗೆ ಕಾಣಿಸುವುದಿಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗೆ ನೋಡುವುದಾದರೆ, ಪ್ರಪಂಚದಲ್ಲಿ ತನ್ನ ಅಸ್ತಿತ್ವದ ಹೊರತಾಗಿಯೂ ಯಾವುದೇ ಸೂಕ್ಷ್ಮ ವಸ್ತು (ಉದಾ:ಬ್ಯಾಕ್ಟೀರಿಯಾ) ಬಾಹ್ಯ ಕಣ್ಣಿಗೆ ಕಾಣಿಸುವುದಿಲ್ಲ ಎನ್ನುವುದು ಕೂಡ ಅಷ್ಟೇ ಸತ್ಯ. ಹಾಗಾದರೆ ದೇವನನ್ನು ನೋಡದ ವಿನಃ ದೇವಾಸ್ತಿತ್ವವನ್ನು ಒಪ್ಪಲು ನಾವು ತಯಾರಿಲ್ಲ ಎನ್ನುವ ವಾದ ಎಷ್ಟರ ಮಟ್ಟಿಗೆ ಸರಿ?.

ಆಗಸದಲ್ಲಿ ಮಿನುಗುವ ನಕ್ಷತ್ರಗಳನ್ನು ನೋಡಿ ಸಾಮಾನ್ಯ ಮನುಷ್ಯನು ತಾನು ನಕ್ಷತ್ರಗಳನ್ನು ನೇರವಾಗಿ ನೋಡುತ್ತಿರುವೆನೆಂದೇ ಭಾವಿಸುತ್ತಾನೆ. ಆದರೆ ವೈಜ್ಞಾನಿಕ ದೃಷ್ಟಿಯಿಂದ ಹೇಳುವುದಾದರೆ ಅವನ ಈ ಕಲ್ಪನೆ ಸರಿಯಲ್ಲ. ಪೃಥ್ವಿಯ ಮೇಲಿಂದ ನಾವು ನೋಡುತ್ತಿರುವುದು ನಕ್ಷತ್ರಗಳ ಅಸಲು ರೂಪವನ್ನಲ್ಲ. ಬದಲಿಗೆ ನಮಗಿಲ್ಲಿಂದ ನೋಡಲು ಸಾಧ್ಯವಾಗುತ್ತಿರುವುದು ನಕ್ಷತ್ರಗಳುಂಟು ಮಾಡುತ್ತಿರುವ ಪರಿಣಾಮವನ್ನು ಮಾತ್ರ. ನಕ್ಷತ್ರಗಳಿಂದ ಹೊರಟ ಬೆಳಕಿನ ಆ ಪರಿಣಾಮ ನಮ್ಮಲ್ಲಿಗೆ ಬಂದು ತಲುಪಲು ಸಹಸ್ರಾರು ಜ್ಯೋತಿರ್ವರ್ಷಗಳೇ (ಶತ ಕೋಟಿ ವರ್ಷಗಳು) ಬೇಕು.

ಪ್ರತಿಯೊಂದು ವಸ್ತುವಿನ ಉದಾಹರಣೆಯೂ ಇದೇ ತೆರನಾದದ್ದಾಗಿದೆ. ಮನುಷ್ಯನು ಈ ಪ್ರಪಂಚದ ಯಾವುದೇ ಒಂದು ವಸ್ತುವನ್ನು ನೋಡುವಾಗ, ಅದರ ಬಾಹ್ಯ ರೂಪವನ್ನಷ್ಟೇ ಅಥವಾ ಆ ವಸ್ತುವುಂಟು ಮಾಡುವ ಪರಿಣಾಮವನ್ನಷ್ಟೇ ನೋಡಬಲ್ಲನೇ ವಿನಃ ತನ್ನಲ್ಲಿರುವ ಸೀಮಿತ ಸಾಮರ್ಥ್ಯದ ಕಾರಣ ಆ ವಸ್ತುವಿನ ನೈಜ ವಾಸ್ತವಿಕತೆಯನ್ನು ನೇರವಾಗಿ ಅರಿಯಲು ಅಥವಾ ನೋಡಲು ಆತನಿಗೆ ಸಾಧ್ಯವಾಗುವುದಿಲ್ಲ.

ಒಂದು ವೇಳೆ ಬೇರೆಲ್ಲಾ ವಸ್ತುಗಳ ಅಸ್ತಿತ್ವವನ್ನು ಒಪ್ಪಲು ಪರೋಕ್ಷ ಪುರಾವೆ ಸಾಕೆಂದಾದರೆ, ದೇವಾಸ್ತಿತ್ವವನ್ನು ಒಪ್ಪಲು ಮಾತ್ರ ಪ್ರತ್ಯಕ್ಷ ಪುರಾವೆಯೇ ಏಕೆ ಬೇಕು?. ವಾಸ್ತವದಲ್ಲಿ ಪ್ರಪಂಚದ ಬೇರೆಲ್ಲಾ ವಸ್ತುಗಳ ಅಸ್ತಿತ್ವದಷ್ಟೇ ದೇವನ ಅಸ್ತಿತ್ವವೂ ಈಗಾಗಲೇ ಸಾಬೀತುಗೊಂಡ ವಿಷಯವಾಗಿದೆ. ಬೇರೆಲ್ಲಾ ವಸ್ತುಗಳನ್ನು, ಅವುಗಳುಂಟು ಮಾಡುವ ಪರಿಣಾಮದ ಕಾರಣದಿಂದಾಗಿ ನಾವು ಒಪ್ಪಲು ಬದ್ಧರಾಗಿರುವ ಮಾದರಿಯಲ್ಲೇ ದೇವಾಸ್ತಿತ್ವವನ್ನು ಕೂಡ ಒಪ್ಪಲು ಬದ್ಧರಾಗಿರಬೇಕು.

ದೇವನು ನಮ್ಮ ಬಾಹ್ಯಗಣ್ಣಿಗೆ ಗೋಚರಿಸದಿದ್ದರೂ, ತನ್ನ ನಿದರ್ಶನಗಳ ಮೂಲಕ ಗೋಚರಿಸುತ್ತಿರುವುದರಲ್ಲಿ ಯಾವುದೇ ಸಂಶಯವಿಲ್ಲ. ದೇವಾಸ್ತಿತ್ವದ ಅರಿವುಂಟಾಗಲು ಇಷ್ಟು ಸಾಕಲ್ಲವೇ?.

# ಯಾಂತ್ರಿಕ ಪ್ರಪಂಚ

1965 ರಲ್ಲಿ ಎರಡು ದೇಶಗಳ ನಡುವೆ ಯುದ್ಧವಾಯಿತು. ಆ ಪೈಕಿ ಒಂದು ದೇಶದ ಬಳಿ ತೀರಾ ಕೆಳದರ್ಜೆಯ ಶಸ್ತ್ರಾಸ್ತ್ರಗಳಿದ್ದರೆ, ಇನ್ನೊಂದು ದೇಶವು ಉನ್ನತ ಶಸ್ತ್ರಾಸ್ತ್ರಗಳ ಭಂಡಾರವನ್ನೇ ಹೊಂದಿತ್ತು. ಒಂದರ ಬಳಿ ಸಾಧಾರಣ ಮಟ್ಟದ ಮಿಲಿಟರಿ ಟ್ಯಾಂಕ್ ಗಳಿದ್ದರೆ, ಮತ್ತೊಂದರ ಬಳಿ ಬ್ರಿಟನ್ ನಿರ್ಮಿತ ವಿಶಿಷ್ಟ ಟ್ಯಾಂಕರ್ ಗಳಿದ್ದವು. ಒಂದು ದೇಶದ ಬಳಿ ತೀರಾ ಸಾಧಾರಣ ಮಟ್ಟದ ಯುದ್ಧ ವಿಮಾನಗಳಿದ್ದರೆ ಇನ್ನೊಂದರ ಬಳಿ ಫ್ರಾನ್ಸ್ ನಿರ್ಮಿತ ಅತ್ಯಾಧುನಿಕವೂ, ಅಸಾಧಾರಣವೂ ಆದ ಮಹಾಶಕ್ತಿಶಾಲಿ ಯುದ್ಧ ವಿಮಾನಗಳಿದ್ದವು. ಇಷ್ಟೆಲ್ಲದರ ಹೊರತಾಗಿಯೂ ಅಸಾಧಾರಣ ಮಟ್ಟದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ದೇಶವು, ತೀರಾ ಸಾಮಾನ್ಯ ಮಟ್ಟದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ದೇಶದೆದುರು ಸೋತು ತಲೆಬಾಗಿತು.

ಸಾಧಾರಣ ಮಟ್ಟದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ದೇಶದ ಬಳಿ ಇದ್ದ ಆಯುಧಗಳೆಲ್ಲವೂ ತವರಿನಲ್ಲೇ ನಿರ್ಮಾಣಗೊಂಡಿದ್ದು, ಆ ದೇಶದ ಸೈನಿಕರು ಅದನ್ನು ಬಳಸುವ ಸಂಪೂರ್ಣ ನಿಪುಣತೆ ಹೊಂದಿದ್ದೇ ಅವರ ವಿಜಯದ ಹಿಂದಿರುವ ಮುಖ್ಯ ಕಾರಣವಾಗಿತ್ತು. ಅಸಾಧರಣ ಮಟ್ಟದ ಶಸ್ತ್ರಾಸ್ತ್ರಗಳನ್ನು ಹೊಂದಿದ ದೇಶದ ಸೈನಿಕರು ತಮ್ಮ ಬಳಿ ಇರುವ ಶಸ್ತ್ರಾಸ್ತ್ರಗಳನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದೇಕೆಂದರೆ, ಅವುಗಳೆಲ್ಲವೂ ಹೊರದೇಶದಲ್ಲಿ ತಯಾರಾದ ಅತ್ಯಾಧುನಿಕ ಆಯುಧಗಳಾಗಿದ್ದವು. ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವ ಸಂಪೂರ್ಣ ನಿಪುಣತೆಯಾಗಲೀ, ಕೌಶಲ್ಯವಾಗಲೀ ಅವರು ಹೊಂದಿರಲಿಲ್ಲ. ಹಾಗಾಗಿಯೇ, ತೀರಾ ಸಾಧಾರಣ ಮಟ್ಟದ ಎದುರಾಳಿಯೆದರು ಅವರು ಸೋತು ತಲೆಬಾಗಬೇಕಾಯಿತು. ಈ ಕುರಿತು ಪ್ರಸಿದ್ಧ ವಿಮರ್ಶಾಕಾರರೊಬ್ಬರು ಹೀಗೆ ಹೇಳಿರುವರು:

"Even the most sophistivcated technology of warfare is handled ultimately by men engaged in the profession of soldiering. Its use in combat depends therefore greatly on their skill, training, morale and ingenuity. The doctrine of the supremacy of the man behind the gun thus remains valid even in this age of pushbutton wars."

"ಯುದ್ಧದ ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಕೂಡ ನಿಭಾಯಿಸುವುದು ಸೇನೆಯಲ್ಲಿರುವ ಜನರೇ ಆಗಿದ್ದಾರೆ. ಇಂತಹ ಆಧುನಿಕ ತಂತ್ರಜ್ಞಾನವುಳ್ಳ ಯಂತ್ರಗಳನ್ನು ನಿರ್ವಹಿಸಲು ಬೇಕಾದ ಅಪಾರ ಮಟ್ಟದ ಜಾಣ್ಮೆ, ಕೌಶಲ್ಯತೆ ತರಬೇತಿ ಮತ್ತು ವೃತ್ತಿಪರತೆಯ ಆವಶ್ಯಕತೆಯನ್ನು ಅಲ್ಲಗೆಳೆಯಲು ಅಸಾಧ್ಯ. ಕೇವಲ 'ಪುಶ್ ಬಟನ್' ಗಳ ಮೂಲಕ ಯಂತ್ರಗಳನ್ನು ನಿರ್ವಹಿಸಬಹುದಾದ ಈ ಆಧುನಿಕ ಯುಗದಲ್ಲೂ, ಹಳೇ ಸಿದ್ಧಾಂತದಲ್ಲಿರುವಂತೆ ಬಂದೂಕು ಹಿಡಿದ ವೃತ್ತಿಪರ ವ್ಯಕ್ತಿಯ ಪ್ರಾಮುಖ್ಯತೆಯನ್ನು ಅಲ್ಲಗೆಳೆಯಲಾಗದು." (ಟೈಮ್ಸ್ ಆಫ್ ಇಂಡಿಯಾ, 2 ಫೆಬ್ರವರಿ 1984)

ಪ್ರಸ್ತುತ ಮೇಲಿನ ರೀತಿಯ ಉದಾಹರಣೆಯು, ನಾವಿರುವುದು ಯಾಂತ್ರಿಕ ಯುಗದಲ್ಲಿ, ನಮ್ಮ ಈ ಆಧುನಿಕ ಜಗತ್ತು ನಿಯಂತ್ರಿಸಲ್ಪಡುತ್ತಿರುವುದು ಯಂತ್ರಗಳಿಂದ ಎನ್ನುವ ಕಲ್ಪನೆ ನಮ್ಮಿಂದ ದೂರವಾಗುವಂತೆ ಮಾಡುತ್ತದೆ. ಅದೆಷ್ಟೇ ಅತ್ಯಾಧುನಿಕ ಯಂತ್ರಗಳನ್ನು ನಾವು ಹೊಂದಿದ್ದರೂ ಅದನ್ನು ನಿರ್ವಹಿಸಲೂ ಒಬ್ಬ ಪರಿಣಿತ ವ್ಯಕ್ತಿಯಂತೂ ಬೇಕೇ ಬೇಕು. ಹಾಗಾದರೆ, ಈ ಬ್ರಹ್ಮಾಂಡವೆನ್ನುವ ಬೃಹತ್ ಯಂತ್ರದ ಹಿಂದೆ ಯಾವುದೇ ಚಾಲಕನಿಲ್ಲ ಎಂಬ ವಾದವು ಅದೆಷ್ಟು ಸರಿ?. ಚಾಲಕನಿಲ್ಲದೆ ಈ ಜಗತ್ತು ನಡೆಯುತ್ತಿದೆ ಎಂಬ ವಾದದ ಹಿಂದೆ ಯಾವುದೇ ಹುರುಳಿಲ್ಲ ಎಂಬುದಂತೂ ಸ್ಪಷ್ಟ. ಈ ಜಗತ್ತು ಒಬ್ಬ ಮಹಾನ್ ವಿಜ್ಞಾನಿಯ ದೃಷ್ಟಿಯಲ್ಲಿ 'ಗ್ರೇಟ್ ಮಷಿನ್' (ಬೃಹತ್

ಯಂತ್ರ) ಆದರೂ ಕೂಡ ಅದರ ಹಿಂದೆ ಒಂದು 'ಗ್ರೇಟ್ ಮೈಂಡ್' (ಅದ್ಭುತ ಯೋಜನಾಕಾರ) ಇರುವುದನ್ನು ನಮಗೆ ನಿರಾಕರಿಸಲು ಸಾಧ್ಯವಿಲ್ಲ.

ವಸ್ತುಸ್ಥಿತಿ ಹೀಗಿರುವಾಗ ಒಂದೋ ಧಾರ್ಮಿಕ ಪಾರಿಭಾಷಿಕದಲ್ಲಿ 'ಮಾಲಕ' ಅಥವಾ 'ಸೃಷ್ಟಿಕರ್ತ'ನ ಹೆಸರಿನಲ್ಲಿ, ಇಲ್ಲವೋ ವೈಜ್ಞಾನಿಕ ಪಾರಿಭಾಷಿಕದಲ್ಲಿ ಯಂತ್ರದ ಕಾರ್ಯನಿರ್ವಾಹಕನ ರೂಪದಲ್ಲಿ ಮನುಷ್ಯನಿಗೆ ದೇವನ ಅಸ್ತಿತ್ವವನ್ನು ಒಪ್ಪಿಕೊಳ್ಳದೇ ಬೇರೆ ನಿರ್ವಾಹವಿಲ್ಲ.

# ಜಗತ್ತೆಂಬುದು ಯಂತ್ರವಲ್ಲ

ಆಧುನಿಕ ಜಗತ್ತಿನಲ್ಲಿ 'ರೋಬೋಟ್' (Robot) ಎಂದು ಕರೆಯಲಾಗುವ ಯಾಂತ್ರಿಕ ಮನುಷ್ಯನನ್ನು ತಯಾರಿಸಲಾಗಿದೆ. ನೋಡಲು ಥೇಟ್ ಮನುಷ್ಯನಂತೆಯೇ ಇರುವ 'ರೋಬೋಟ್' ಮಾತನಾಡಬಲ್ಲದು, ಚಲಿಸಬಲ್ಲದು, ಕೆಲಸವನ್ನೂ ಮಾಡಬಲ್ಲದು. ಇದೆಲ್ಲದರ ಹೊರತಾಗಿಯೂ ಅದು ಮಾನವನಿರ್ಮಿತ ಇತರ ಕಾರ್ಯನಿರ್ವಹಿಸುವ ಯಂತ್ರಗಳಂತೆಯೇ ಸ್ವ-ಬುದ್ಧಿ ಶಕ್ತಿಯಿಲ್ಲದ ಕೇವಲ ಒಂದು ಯಂತ್ರ ಮಾತ್ರ.

ಲಂಡನ್ ಒಂದು ಕಚೇರಿಯಲ್ಲಿ ಆಫಿಸ್ ಬಾಯ್ (Office Boy) ನ ರೂಪದಲ್ಲಿ ಕಾರ್ಯನಿರ್ವಹಿಸಲು ಒಂದು ರೋಬೋಟ್ ಅನ್ನು ಇಡುವುದೆಂದು ನಿಶ್ಚಯಿಸಲಾಯಿತು. ರೋಬೋಟ್ ಸಂಪೂರ್ಣ ರೀತಿಯಲ್ಲಿ ತಯಾರಾಗಿ ಬಂದಾಗ, ಕಚೇರಿಯ ಪ್ರಮುಖ ಕಾರ್ಯದರ್ಶಿ ಮಿಸ್. ಜೆನ್ನಿ ಸೆಫ್ (Jennie Seff) ಮೊದಲೊಮ್ಮೆ ಆ ರಾಬರ್ಟ್ನ ಪ್ರಾಯೋಗಿಕ ಚಲನೆಯನ್ನು (Trail Run) ಪರಿಶೀಲಿಸಲು ಬಯಸಿದರು. ಮಿಸ್. ಜೆನ್ನಿ ಸೆಫ್, ರಾಬರ್ಟ್ನ ಬ್ಯಾಟರಿಯನ್ನು ಪರಿಶೀಲಿಸುತ್ತಿದ್ದ ಸಂದರ್ಭದಲ್ಲಿ ಅಚಾನಕ್ ಆಗಿ ರೋಬೋಟ್ ಚಲಿಸಲು ಪ್ರಾರಂಭಿಸಿ, ಆ ಮಹಿಳಾ ಕಾರ್ಯದರ್ಶಿಯನ್ನು ಹಿಂಬಾಲಿಸತೊಡಗಿತು. ಅಲ್ಲಿನ ಪರಿಸ್ಥಿತಿ ಆಗ ಹೇಗಿತ್ತೆಂದರೆ; ಮಹಿಳಾ ಕಾರ್ಯದರ್ಶಿ ಮುಂದೆ ಓಡುತ್ತಿದ್ದರೆ, ಅವರನ್ನು ಹಿಂಬಾಲಿಸಿಕೊಂಡು ರೋಬೋಟ್ ಓಡುತ್ತಿತ್ತು. ಈ ತನ್ಮಧ್ಯೆ, ಹತೋಟಿಗೆ ಬರಲು ಒಪ್ಪದೆ ಅಡ್ಡಾದಿಡ್ಡಿಯಾಗಿ ಚಲಿಸುತ್ತಿದ್ದ ರೋಬೋಟ್ ಗೆ ತಗುಲಿ, ಹೊಚ್ಚಹೊಸ ಟೈಪ್ ರೈಟರ್ ಯಂತ್ರವೊಂದು ಕೆಳಗೆ ಬಿದ್ದು ಒಡೆದು ಹೋಯಿತು. ಕೊನೆಗೂ ಕಷ್ಟಪಟ್ಟು ಹೇಗೋ ರೋಬೋಟ್ ಯಂತ್ರವನ್ನು ಹತೋಟಿಗೆ ತರಲಾಯಿತು. (ಹಿಂದೂಸ್ತಾನ್ ಟೈಮ್ಸ್ 30 ಜೂನ್, 1981)

ದೇವನ ಅಸ್ತಿತ್ವವನ್ನು ಒಪ್ಪದವರು, 'ಈ ಪ್ರಪಂಚವೊಂದು ಮಹಾಯಂತ್ರದ ಹೊರತಾಗಿ ಬೇರೇನೂ ಅಲ್ಲ. "ರೋಬೋಟ್" ಯಾಂತ್ರಿಕವಾಗಿ ಚಲಿಸುವಂತೆಯೇ ಈ ಪ್ರಪಂಚವೆಂಬ ಯಂತ್ರ ಕೂಡ ಚಲಿಸುತ್ತಿದೆ' ಎಂಬ ವಾದವನ್ನು ಇತ್ತೀಚಿನ ದಿನಗಳಲ್ಲಿ ಮುಂದಿಡುತ್ತಿದ್ದಾರೆ. ಸಹಸ್ರಾರು ಕೋಟಿ ವರ್ಷಗಳಿಂದ ಈ ಪ್ರಪಂಚವು ಬಹಳ ವ್ಯವಸ್ಥಿತವಾಗಿ ಚಲಿಸುತ್ತಿರುವ ಒಂದೇ ಉದಾಹರಣೆಯು ಈ ಊಹಾಪೋಹವನ್ನು ಅಲ್ಲಗೆಳೆಯಲು ಸಾಕು. ಒಂದು ವೇಳೆ ಈ ಜಗತ್ತು ರೋಬೋಟ್ ನಂತಹ ಒಂದು ಮೆಕಾನಿಕಲ್ ಯಂತ್ರವೇ ಆಗಿರುತ್ತಿದ್ದರೆ, ಲಂಡನ್ ಕಚೇರಿಯಲ್ಲಾದಂತಹ ಅವಘಡ, ಘರ್ಷಣೆಗಳು ಪದೇ ಪದೇ ಸಂಭವಿಸುತ್ತಿದ್ದವು.

"ಸೂರ್ಯನು ತನಗೆ ನಿಗದಿಪಡಿಸಲಾದ ಕಕ್ಷೆಯಲ್ಲೇ ಸುತ್ತುತ್ತಿದ್ದಾನೆ. ಇದು ಎಲ್ಲವನ್ನೂ ಬಲ್ಲ ಸರ್ವಶಕ್ತನು (ದೇವನು) ಸ್ಥಾಪಿಸಿರುವ ವ್ಯವಸ್ಥೆಯಾಗಿದೆ. ಇನ್ನು, ಚಂದ್ರನಿಗೆ ನಾವು ಹಂತಗಳನ್ನು ನಿಗದಿಗೊಳಿಸಿಟ್ಟಿರುವೆವು. ಎಷ್ಟೆಂದರೆ ಅದರಾಕೃತಿ (ಬಾಲಚಂದ್ರ) ಖರ್ಜೂರದ ಹಳೆಯ ಒಣಗೆಲ್ಲಿನಂತಾಗಿ ಬಿಡುವುದು. ಚಂದ್ರನನ್ನು ಹಿಡಿಯಲು ಸೂರ್ಯನಿಗಾಗದು. ಹಗಲನ್ನು ಹಿಂದಿಕ್ಕಿ ಬರಲು ಇರುಳಿಗೂ ಸಾಧ್ಯವಾಗದು. ಎಲ್ಲವೂ ಅವುಗಳಿಗೆ ಸೀಮಿತಗೊಳಿಸಲಾದ ಕಕ್ಷೆಯಲ್ಲೇ ತೇಲುತ್ತಿವೆ." ಎಂದು ಕುರ್ ಆನ್ ಹೇಳುತ್ತದೆ.

ಕುರ್ ಆನ್ ಈ ಹೇಳಿಕೆಯನ್ನು ಈಗಾಗಲೇ ಆಧುನಿಕ ವಿಜ್ಞಾನವೂ ದೃಢೀಕರಿಸಿದೆ. ಈ ಇಡೀ ವಿಶ್ವವನ್ನು ನಿಯಂತ್ರಿಸುತ್ತಿರುವ ಅತಿಮಾನವ ಶಕ್ತಿಯೊಂದಿದೆ ಎಂಬುದನ್ನು ಸಾಬೀತುಪಡಿಸಲು ಈ ಘಟನೆಯೇ ಸಾಕು. ಇಲ್ಲವಾದಲ್ಲಿ, ಈ ಇಡೀ ವಿಶ್ವವು ಇಷ್ಟೊಂದು ಕ್ರಮಬದ್ಧವಾಗಿ, ಸುವ್ಯವಸ್ಥಿತವಾಗಿ, ಸುಸಂಬದ್ಧವಾಗಿ ಚಲಿಸಲು ಎಂದಿಗೂ ಸಾಧ್ಯವಾಗುತ್ತಿರಲಿಲ್ಲ.

# ಆರಾಧ್ಯನನ್ನು ಪಡೆಯುವ ಹೆಬ್ಬಯಕೆ

"ನಾನು ಭೂಮಿಯ ಮೇಲೆ ವಾಪಾಸ್ಸು ಬಂದಿಳಿದಾಗ ನನ್ನೊಳಗೆ ಭೂಮಿಯನ್ನು ಚುಂಬಿಸಬೇಕೆಂಬ ಅದಮ್ಯ ಹಂಬಲವುಂಟಾಯಿತು".

ರಷ್ಯಾದ ಗಗನಯಾತ್ರಿ ಆ್ಯಂಡ್ರಿಯನ್ ನಿಕೊಲಾಯೆವ್ 1966ರ ಆಗಷ್ಟ್ ನಲ್ಲಿ ತನ್ನ ಗಗನಯಾತ್ರೆಯಿಂದ ವಾಪಾಸ್ಸಾದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಹೇಳಿದ ಮೊದಲ ಮಾತಿದು. ಭೂಮಿಯ ಹೊರತಾಗಿ ಬೇರಾವ ಗ್ರಹದಲ್ಲೂ ಮನುಷ್ಯನಿಗೆ ಜೀವಿಸಲವಶ್ಯಕವಾದ ಇಷ್ಟೊಂದು ಅಗಣಿತ ವಸ್ತುಗಳ ಸಂಗ್ರಹವಿಲ್ಲ. ರಷ್ಯಾದ ಗಗನಯಾತ್ರಿಯು ಭೂಮಿಯಿಂದ ಬಹುದೂರದ ಬಾಹ್ಯಾಕಾಶಕ್ಕೆ ಪಯಣಿಸಿದಾಗ, ಭೂಮಿಯ ಹೊರತಾದ ಈ ಬಹುವಿಶಾಲ ಬಾಹ್ಯಾಕಾಶದಲ್ಲಿ ರಹಸ್ಯಮಯ ಮತ್ತು ಹುಬ್ಬೇರಿಸಬಲ್ಲ ಆಶ್ಚರ್ಯಚಕಿತ ವಿಷಯಗಳ ಹೊರತಾಗಿ ಮನುಷ್ಯನ ಪಾಲಿಗೆ ಜೀವಿಸಲವಶ್ಯಕವಾದ ಯಾವುದೇ ತೆರನಾದ ಸಾಧನ–ಸೌಕರ್ಯಗಳಿಲ್ಲ ಎಂಬುದನ್ನು ಮನಗಂಡರು. ಈ ಅನುಭವದ ಬಳಿಕ ಭೂಮಿಯ ಮೇಲೆ ವಾಪಾಸ್ಸಾದಾಗ, ತೀವ್ರ ನೀರಡಿಕೆಯಾದ ವ್ಯಕ್ತಿಯೊಬ್ಬನಿಗೆ ನೀರಿನ ನೈಜಮೌಲ್ಯದ ಅರಿವಾಗುವಂತೆ, ಈ ಬಾಹ್ಯಾಕಾಶದ ಯಾತ್ರಿಗೂ ಭೂಮಿಯ ನೈಜ ಮೌಲ್ಯದ ಅರಿವಾಯಿತು. ಭೂಮಿಯ ಮೇಲಿನ ಜೀವನ ಸಾಧನ, ಇಲ್ಲಿನ ವಾಸಿಗಳಿಗಾಗಿ ಇಲ್ಲಿರುವ ಸೌಕರ್ಯಗಳ ನೈಜ ಮೌಲ್ಯದ ಅರಿವಾದಾಗ ಈ ಬಾಹ್ಯಾಕಾಶ ಯಾತ್ರಿಯು, ಭೂಮಿಯ ಮೇಲೆ ತನ್ನ ಪ್ರೀತಿ ಪೂರ್ವಕ ಕೃತಜ್ಞಾ ಭಾವವನ್ನು ತೋರ್ಪಡಿಸುತ್ತಾ, ಭಾವಪರವಶರಾಗಿ ಅದನ್ನು ಅಪ್ಪಿಕೊಳ್ಳುವ, ಅದನ್ನು ಚುಂಬಿಸುವ ತನ್ನ ಎದೆಯಾಳದ ಬಯಕೆಯನ್ನು ಎಲ್ಲರೆದುರು ವ್ಯಕ್ತಪಡಿಸಿದರು.

ಸೃಷ್ಟಿಗಳ ಮೇಲೆ ಅತೀವ ಭಕ್ತಿ ಮತ್ತು ಅವುಗಳ ಮೇಲಿನ ಸಮರ್ಪಣಾ ಮನೋಭಾವದ ಈ ಅಭಿವ್ಯಕ್ತಿಯನ್ನೇ ಷರೀಅತ್ ನಲ್ಲಿ (ಧರ್ಮಶಾಸ್ತ್ರದಲ್ಲಿ)

ಆರಾಧ್ಯರನ್ನಾಗಿ ಮಾಡಿಕೊಳ್ಳುವುದು ಎನ್ನಲಾಗಿದೆ. ಮನುಷ್ಯನಿಗೆ ತನ್ನ ಸೃಷ್ಟಿಕರ್ತನನ್ನು ಪ್ರತ್ಯಕ್ಷ ಅಥವಾ ಬಾಹ್ಯ ರೂಪದಲ್ಲಿ ನೋಡಲು ಸಾಧ್ಯವಾಗದಿರುವುದರಿಂದ ಸೃಷ್ಟಿಯನ್ನೇ ತನ್ನ ಆರಾಧನೆಯ ವಸ್ತುವನ್ನಾಗಿ ಮಾಡಿಕೊಳ್ಳುತ್ತಾನೆ. ಇಲ್ಲಿನ ಸೃಷ್ಟಿಯ ಬಾಹ್ಯವನ್ನು ಅವಲೋಕಿಸಿ, ಅದರ ಆಳವನ್ನು ತಲುಪಿ, "ಬಾಹ್ಯನೋಟಕ್ಕೆ ಕಾಣಿಸುವ ಈ ಎಲ್ಲ ವಸ್ತುಗಳು ಸೃಷ್ಟಿಕರ್ತನ ಅದ್ಭುತ ಕೊಡುಗೆಯಾಗಿವೆ" ಎಂಬ ವಾಸ್ತವವನ್ನು ತಿಳಿದುಕೊಳ್ಳುವವರು 'ಸತ್ಯವಿಶ್ವಾಸಿಗಳು' ಎಂದು ಕರೆಸಿಕೊಳ್ಳುವರು. ಅಂತಹವರು, ಭೂಮಿಯ ಮೇಲಿರುವ ವಸ್ತುಗಳೆಲ್ಲವೂ ಅತ್ಯುನ್ನತ ಅಸ್ತಿತ್ವದ ರಚನೆಯಾಗಿದೆ ಎಂಬುದನ್ನು ಅರಿತಿರುತ್ತಾರೆ. ಅವರು, ಸೃಷ್ಟಿಗಳ ಮುಖಾಂತರ ತಮ್ಮ ಸೃಷ್ಟಿಕರ್ತನನ್ನು ಕಂಡುಕೊಂಡು, ಆ ಮಹಾನ್ ಅಸ್ತಿತ್ವವನ್ನೇ ತಮ್ಮ ಸರ್ವಸ್ವವನ್ನಾಗಿ ಮಾಡಿಕೊಳ್ಳುತ್ತಾರೆ. ಅವರ ತಮ್ಮ ಅಂತರಾಳದ ಭಕ್ತಿ–ಭಾವದ ಅಭಿವ್ಯಕ್ತಿಯನ್ನು ಕೇವಲ ತಮ್ಮ ಒಡೆಯನಿಗಾಗಿ ಮಾತ್ರ ಮೀಸಲಾಗಿರಿಸುತ್ತಾರೆ. ಅವರ ಸಮರ್ಪಣಾ ಮನೋಭಾವವು ಕೇವಲ ದೇವನಿಗಷ್ಟೇ ಸೀಮಿತವಾಗಿರುತ್ತದೆ.

ನಿಜವಾಗಿ, ಭೂಮಿಯನ್ನು ತಲುಪಿದ ನಂತರ ರಷ್ಯಾದ ಆ ಗಗನಯಾತ್ರಿಗೆ ಅಂತರಾಳದಲ್ಲಿ ಭೂಮಿಯ ಕುರಿತು ಯಾವ ರೀತಿಯ ಕೃತಜ್ಞಾ ಭಾವವಿತ್ತೋ, ಅದಕ್ಕಿಂತಲೂ ಮಿಗಿಲಾದ ಕೃತಜ್ಞಾ ಭಾವವು ದೇವನನ್ನು ಗುರುತಿಸುವ ಮೂಲಕ ಇಲ್ಲಿನ ವ್ಯಕ್ತಿಯ ಅಂತರಾಳದಲ್ಲಿ ಮೂಡಬೇಕು.

ನೈಜ ಸತ್ಯವಿಶ್ವಾಸಿಯೋರ್ವನು ಸೂರ್ಯನ ಹೊಂಗಿರಣಗಳಲ್ಲೂ ದೇವ ಪ್ರಕಾಶದ ಬಿಂದುವನ್ನನುಭವಿಸಬಲ್ಲನು. ಅವನು, ಬಾಹ್ಯಾಕಾಶದ ವಿಶಾಲತೆಯಲ್ಲೂ ದೇವನ ಅಪರಿಮಿತ ಸಾಮರ್ಥ್ಯವನ್ನು ವೀಕ್ಷಿಸಬಲ್ಲನು. ಹೂವುಗಳ ಸುವಾಸನೆಯಲ್ಲಿ ದೇವನ ಸುಗಂಧವನ್ನಾತ ಆಸ್ವಾದಿಸಬಲ್ಲನು. ನೀರಿನ ಹರಿವಿನಲ್ಲವನು ದೇವನ ಕ್ಷಮಾಸಾಗರವನ್ನು ನೋಡಬಲ್ಲನು. ಒಬ್ಬ 'ವಿಶ್ವಾಸಿ' ಮತ್ತು 'ಅವಿಶ್ವಾಸಿ'ಯ ನಡುವಿನ

ವ್ಯತ್ಯಾಸವೇನೆಂದರೆ, ಅವಿಶ್ವಾಸಿಯ ದೃಷ್ಟಿಯು ಕೇವಲ ಸೃಷ್ಟಿಗಳ ಬಾಹ್ಯ ರೂಪವನ್ನ ನೋಡುವುದಕ್ಕಷ್ಟೇ ಸೀಮಿತವಾಗಿರುವುದು. ಆದರೆ, ಒಬ್ಬ ವಿಶ್ವಾಸಿಯ ನೋಟವು; ಸೃಷ್ಟಿಯ ಮೇಲೆ ಹಾದು ಹೋಗುವ ಮೂಲಕ ಸೃಷ್ಟಿಕರ್ತನನ್ನು ಸೇರುವ ಅವಲೋಕನಾತ್ಮಕ ನೋಟವಾಗಿರುವುದು. ಅವಿಶ್ವಾಸಿಯೊಬ್ಬನು ಸೃಷ್ಟಿಗಳಲ್ಲಿನ ಸೌಂದರ್ಯವನ್ನು ಖುದ್ದು ಸೃಷ್ಟಿಗಳ ಚಮತ್ಕಾರವೆಂದು ಭಾವಿಸಿ ಸೃಷ್ಟಿಗಳಲ್ಲೇ ಲೀನವಾಗಿಬಿಡುವನು. ಆದರೆ, ವಿಶ್ವಾಸಿಯೋರ್ವನು ಸೃಷ್ಟಿಗಳಲ್ಲಿರುವ ಸೌಂದರ್ಯವನ್ನು ಸೃಷ್ಟಿಕರ್ತನ ಕುಂಚದಲ್ಲಿ ಮೂಡಿದ ಕಲೆಯೆಂಬಂತೆ ನೋಡುತ್ತಾ, ಸೃಷ್ಟಿಕರ್ತನ ಅಪಾರ ಸಾಮರ್ಥ್ಯದ ಮುಂದೆ ಮಂಡಿಯೂರಿ ಬಿಡುವನು. ಅವಿಶ್ವಾಸಿಯೋರ್ವನು ಇಲ್ಲಿನ ವಸ್ತುಗಳ ಮುಂದೆ ತಲೆ ಬಾಗಿದರೆ, ವಿಶ್ವಾಸಿಯೋರ್ವನು ಆ ವಸ್ತುಗಳನ್ನು ರಚಿಸಿ, ಅವುಗಳ ಅಸ್ತಿತ್ವಕ್ಕೆ ಕಾರಣನಾದ ಆ ಸೃಷ್ಟಿಕರ್ತ ದೇವನ ಮುಂದೆ ಸಾಷ್ಟಾಂಗವೆರಗುವನು.

# ಯಂತ್ರದ ವಿವರಣೆ

1983ರ ಜುಲೈನಲ್ಲಿ ಅಮೆರಿಕಾ ನೌಕಾಪಡೆಯು ಸ್ಯಾನ್ ಫ್ರಾನ್ಸಿಸ್ಕೋದ ಕರಾವಳಿಯ ತೀರದಲ್ಲಿ ತರಬೇತಿಯ ಕಸರತ್ತು ನಡೆಸಿತ್ತು. ಈ ಕಸರತ್ತಿನ ಪ್ರತಿಯೊಂದು ನಡೆಯನ್ನೂ ಕಂಪ್ಯೂಟರ್ನ ಮೂಲಕ ನಿಯಂತ್ರಿಸಲಾಗುತ್ತಿತ್ತು. ಈ ನಡುವೆ, ನೌಕಾ ಫಿರಂಗಿಗಳು ಗುಂಡು ಹಾರಿಸಬೇಕಾಗಿದ್ದ ಹೊತ್ತಿನಲ್ಲೇ ಇದ್ದಕ್ಕಿಂದ್ದಂತೆ ಕಂಪ್ಯೂಟರ್ ನಲ್ಲಿ ದೋಷ ಕಾಣಿಸಿಕೊಳ್ಳತೊಡಗಿತು.

ಈ ದೋಷದ ದುಷ್ಪರಿಣಾಮವಾಗಿ, ಯಾವ ದಿಕ್ಕಿನೆಡೆಗೆ ಗುಂಡಿನ ದಾಳಿ ನಡೆಯಬೇಕಿತ್ತೋ ಅದಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ ಗುಂಡುಗಳು ಹಾರತೊಡಗಿದವು. ಅಭ್ಯಾಸ ಪೂರ್ವದಲ್ಲಿ ನಿರ್ಧರಿತವಾದ ಪ್ರಕಾರ; ನೌಕಾ ಫಿರಂಗಿಯ ಗುಂಡಿನ ದಾಳಿಯ ಗುರಿಯು ನೇರವಾಗಿ ಸಮುದ್ರದೆಡೆಗೆ ಹೋಗಿ ಬೀಳಬೇಕಿತ್ತು. ಆದರೆ, ಕಂಪ್ಯೂಟರ್ ನಲ್ಲಿ ಅಚಾನಕ್ ಉಂಟಾದ ದೋಷದ ಕಾರಣ ಫಿರಂಗಿ ಗುಂಡುಗಳು ಒಮ್ಮೆಲೇ ಹಿಮ್ಮುಖಕ್ಕೆ ಚಿಮ್ಮತೊಡಗಿ, ಮೆಕ್ಸಿಕೋದ ಸರಕುಹೊತ್ತ ಹಡಗಿನೆಡೆಗೆ ಹೋಗಿ ಬೀಳತೊಡಗಿದವು.

ಕಂಪ್ಯೂಟರ್ ನಲ್ಲಿ ಸಂಭವಿಸುವ ಈ ರೀತಿಯ ದೋಷಗಳ ಕುರಿತು ನಾವು ಆಗಾಗ್ಗೆ ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಓದುತ್ತಿರುತ್ತೇವೆ. ಕಂಪ್ಯೂಟರ್ ನಲ್ಲಿ ಪದೇ ಪದೇ ಈ ರೀತಿಯ ದೋಷಗಳು ಸಂಭವಿಸಲು ಕಾರಣವಾದರೂ ಏನು?. ಕಂಪ್ಯೂಟರ್ ಎಂಬುದು ಸ್ವಯಂ ಬೌದ್ಧಿಕ ಶಕ್ತಿ ಇಲ್ಲದ ಕೇವಲ ಒಂದು ಭೌತಿಕ ಯಂತ್ರ ಮಾತ್ರ ಎನ್ನುವುದೇ ಈ ಪ್ರಶ್ನೆಗೆ ಇರುವ ಒಂದೇ ಒಂದು ಸರಳ ಹಾಗೂ ಸುಲಭವಾದ ಉತ್ತರವಾಗಿದೆ.

ಕೆಲವು ಆಧುನಿಕ ಮನಃಸ್ಥಿತಿಯ ಜನರು ಮತ್ತು ನಾಸ್ತಿಕವಾದಿಗಳು ವಾದಿಸುವಂತೆ ಈ ಇಡೀ ವಿಶ್ವವು ಕೇವಲ ಒಂದು ಭೌತಿಕ ಯಂತ್ರವೇ ಆಗಿರುತ್ತಿದ್ದರೆ;

ಕಂಪ್ಯೂಟರ್ ನಂತೆಯೇ ಇಲ್ಲಿಯೂ ಕೂಡ ಆಗಾಗ್ಗೇ ದೋಷಗಳು ಕಾಣಿಸಿಕೊಳ್ಳಬೇಕಿತ್ತೇ ಹೊರತು ಇಲ್ಲಿನ ವ್ಯವಸ್ಥೆಯು ಇಷ್ಟೊಂದು ಅಚ್ಚುಕಟ್ಟಾಗಿ ಚಲಿಸಲು ಸಾಧ್ಯವಿರಲಿಲ್ಲ ಎಂಬುದನ್ನು ನಾವು ಈ ಉದಾಹರಣೆಯ ಮೂಲಕ ಸುಲಭವಾಗಿ ಮನಗಾಣಬಹುದಾಗಿದೆ.

ಒಂದು ವೇಳೆ ಈ ಜಗತ್ತು ಕಂಪ್ಯೂಟರ್ ನಂತಹ ಭೌತಿಕ ಯಂತ್ರವೇ ಆಗಿರುತ್ತಿದ್ದರೆ, ವಿಶ್ವವನ್ನು ಭೌತಿಕ ಯಂತ್ರಕ್ಕೆ ಹೋಲಿಸುವ ಮನುಷ್ಯನೂ ಸೇರಿದಂತ ಇಡೀ ವಿಶ್ವವು ಅವಘಡಕ್ಕೀಡಾಗಿ ಈಗಾಗಲೇ ಅಳಿವು ಹೊಂದುತ್ತಿತ್ತು. ಒಂದು ವೇಳೆ ನಾಸ್ತಿಕವಾದಿಗಳ ಪ್ರಕಾರ ಈ ಭೂಮಿಯು ಭೌತಿಕ ಯಂತ್ರದ ಒಂದು ಭಾಗವೇ ಆಗಿರುತ್ತಿದ್ದರೆ, ಭೂಕಂಪ ಸಂಭವಿಸಿದ ಬಳಿಕ ಭೂಕಂಪವಾದ ಪ್ರದೇಶ ನಾಶವಾದಂತೆ, ಇಡೀ ಭೂಮಿ ಮತ್ತು ಇಲ್ಲಿನ ವಾಸಿಗಳೆಲ್ಲರೂ ಈಗಾಗಲೇ ನಾಶ ಹೊಂದಿಬಿಡಬೇಕಿತ್ತು.

"ಈ ವಿಶ್ವಕ್ಕೆ ಯಾವುದೇ ಒಡೆಯನಿಲ್ಲ. ಇದಂತೂ ಕೇವಲ ಒಂದು ಭೌತಿಕ ಯಂತ್ರ ಮಾತ್ರ." ಎಂಬ ಈ ವಾಕ್ಯದಲ್ಲಿ ವ್ಯಾಕರಣ ದೋಷವಿಲ್ಲದಿರಬಹುದು. ಆದರೆ, ವಾಸ್ತವಿಕತೆಯ ದುರ್ಬೀನಿನಲ್ಲಿ ನೋಡುವುದಾದರೆ ಈ ವಾಕ್ಯದಲ್ಲಿ ಸಂಪೂರ್ಣ ದೋಷವಿದೆ. ಈ ವಾಕ್ಯದಲ್ಲಿರುವ ಆಂತರಿಕ ವೈರುಧ್ಯವೇ ಇದಕ್ಕಿರುವ ಬಹುಮುಖ್ಯ ಕಾರಣ.

ಒಂದು ವೇಳೆ ನಿರ್ಮಾತೃನಿಲ್ಲದ ಯಾವುದಾದರೂ ಯಂತ್ರ ಈ ಜಗತ್ತಿನಲ್ಲಿದ್ದಿದ್ದರೆ ಅಥವಾ ಯಾವುದೇ ಚಾಲಕನಿಲ್ಲದೆ (Without any Operator) ಆ ಯಂತ್ರ ತನ್ನಿಂತಾನೆ ಚಲಿಸುತ್ತಿದ್ದರೆ ಮಾತ್ರ ಈ ಮೇಲಿನ ವಾಕ್ಯವು ದೋಷಮುಕ್ತ ಎನಿಸುತ್ತಿತ್ತು. ನಮಗೆ ಗೊತ್ತಿರುವ ಯಂತ್ರಗಳೆಲ್ಲವೂ ಮಾನವ ನಿರ್ಮಿತವಾಗಿವೆ ಮತ್ತವುಗಳ ನಿರ್ವಹಣೆಯ ಹಿಂದೆಯೂ ಮಾನವ ಹಸ್ತವೇ

ಇರುವುದು. ಆದಾಗ್ಯೂ, ಈ ಯಂತ್ರಗಳು ಸಂಪೂರ್ಣ ದೋಷಮುಕ್ತವಾದವು ಎಂದು ಹೇಳುವ ಹಾಗಿಲ್ಲ.ವಾಸ್ತವ ಹೀಗಿರುವಾಗ, ಯಂತ್ರದಂತೆ ಪದೇ ಪದೇ ಕೆಡದ, ದೋಷಮುಕ್ತವಾದ ಈ ಇಡೀ ವಿಶ್ವವು ತನ್ನಿಂತಾನೆ ಅಸ್ತಿತ್ವಕ್ಕೆ ಬಂದು, ತನ್ನಿಂತಾನೆ ಇಷ್ಟೊಂದು ಸುವ್ಯವಸ್ಥಿತವಾಗಿ ಚಲಿಸಲು ಸಾಧ್ಯವಿದೆಯೇ?.

# ದೇವನ ದಾಸ

ವಿದ್ಯುತ್ ಚಾಲಿತ ಬಲ್ಬ್ ವಿದ್ಯುತ್ ಉತ್ಪಾದನೆಯ ಕೇಂದ್ರದೊಂದಿಗೆ ತನ್ನ ಸಂಬಂಧವನ್ನು ಹೊಂದಿರುವುದು ಸಾಮಾನ್ಯ ವಿಷಯವೇನಲ್ಲ. ತನ್ನಿಂತಾನೆ ಬೆಳಕು ನೀಡಲಾಗದ ಸಾಮಾನ್ಯ ವಸ್ತುವೊಂದು, ಬೇರೆ ವಸ್ತುಗಳಿಗೆ ಬೆಳಕು ನೀಡಬಲ್ಲ ಅಸಾಮಾನ್ಯ ಶಕ್ತಿಯ ಜೊತೆಗೆ ಹೊಂದಿರುವ ಅವಿನಾಭಾವ ಸಂಬಂಧ ಇದಾಗಿದೆ. "ನಿರ್ಜೀವ" ಬಲ್ಬ್ ಒಂದು "ಸಜೀವ" ವಾಗಿ ಮಾರ್ಪಾಡಾಗುವ, ಕತ್ತಲೆತುಂಬಿದ ಆ ಬಲ್ಬ್ ನೊಳಗೆ ತತ್ ಕ್ಷಣ ಬೆಳಕಿನ ಕಾರಂಜಿಯ ಚಿಮ್ಮುವ ಅದ್ಭುತ ಫಲಿತಾಂಶವು ಈ ಸಂಬಂಧದಿಂದ ಸಾಧ್ಯವಾಗುತ್ತದೆ. ದೇವ ಮತ್ತು ಮಾನವನ ನಡುವೆ ಕೂಡ ಇದೇ ರೀತಿಯ ಅವಿನಾಭಾವ ಸಂಬಂಧವಿದೆ.

ದೇವನು ನಮ್ಮ ಜಗತ್ತಿನ ಅತ್ಯಂತ ದೊಡ್ಡ ವಾಸ್ತವವಾಗಿರುವನು. ಆದುದರಿಂದ ದೇವನ ಜೊತೆ ಸಂಪರ್ಕ ಸಾಧಿಸುವುದು, ಅವನ ಜೊತೆಗೆ ಸಂಬಂಧ ಹೊಂದುವುದು ಸಣ್ಣ ವಿಷಯವೇನಲ್ಲ. ಮನೋವಿಜ್ಞಾನದ ದೃಷ್ಟಿಯಲ್ಲೂ ಇದು ದೊಡ್ಡ ವಿದ್ಯಮಾನವಾಗಿದೆ. ದೇವನ ಜೊತೆಗಿನ ಸಂಪರ್ಕವು ಬಿರುಗಾಳಿಯಂತೆ ಮನುಷ್ಯನ ಅಸ್ತಿತ್ವವವನ್ನು ಸಂಪೂರ್ಣವಾಗಿ ಅಲುಗಾಡಿಸಿಬಿಡುವುದು. ದೇವನ ಜೊತೆಗಿನ ಸಂಪರ್ಕವು ಆತನನ್ನು ಪ್ರವಾಹದಲ್ಲಿ ಮಿಂದೆದ್ದು ಶುದ್ಧವಾದ ಮನುಷ್ಯನನ್ನಾಗಿ ಮಾಡುವುದು. ದೇವನ ಜೊತೆಗಿನ ಸಂಪರ್ಕದ ಬಳಿಕ ವ್ಯಕ್ತಿಯೋರ್ವ ಅದೇ ಹಳೇ ವ್ಯಕ್ತಿಯಾಗಿ ಉಳಿಯಲಾರ. ಬದಲಿಗೆ, ದೇವನ ಮೇಲಿನ ವಿಶ್ವಾಸವು ಅವನ ಹೊಸ ವ್ಯಕ್ತಿತ್ವದ ಬುನಾದಿಯಾಗಿಬಿಡುವುದು. ಅದು ಅವನನ್ನೋರ್ವ ಹೊಚ್ಚ ಹೊಸ ಮನುಷ್ಯನನ್ನಾಗಿ ಪರಿವರ್ತಿಸಿಬಿಡುವುದು.

ದೇವನನ್ನು ಪಡೆಯುವುದನ್ನು, ಅವನ ಜೊತೆ ಸಂಪರ್ಕ ಸಾಧಿಸುವುದನ್ನು ಇಸ್ಲಾಮಿಕ್ ಷರೀಯಾದ ಪಾರಿಭಾಷಿಕದಲ್ಲಿ "ಈಮಾನ್" (ಸತ್ಯವಿಶ್ವಾಸ) ಎಂದು

ಹೇಳಲಾಗುವುದು. ಯಾವುದೇ ವ್ಯಕ್ತಿಯ ಪಾಲಿಗೆ ಈಮಾನ್ ಪಡೆಯುವುದು ಅವನ ಮಟ್ಟಿಗಿನ ಒಂದು ಶ್ರೇಷ್ಠ ಅನುಭವವಾಗಿದೆ. "ದೇವವಿಶ್ವಾಸ" ಸ್ವೀಕರಿಸುವುದೆಂದರೆ ಅದು ವ್ಯಕ್ತಿಯೋರ್ವನು ತನ್ನ ಪಾಲಿನ ಜೀವಸೆಲೆಯನ್ನು ಸ್ವೀಕರಿಸಿದಂತೆ. "ದೇವವಿಶ್ವಾಸ" ಎನ್ನುವುದು ಎಷ್ಟೊಂದು ದೊಡ್ಡ ಪ್ರಕಾಶವೆಂದರೆ ಅದನ್ನು ಸ್ವೀಕರಿಸಿದ ವ್ಯಕ್ತಿಯ ವ್ಯಕ್ತಿತ್ವವನ್ನೇ ಅದು ಬೆಳಗತೊಡಗುವುದು. ಅದು ಎಂತಹ ಅದ್ಭುತ ರಂಗೆಂದರೆ ಅದನ್ನು ಪಡೆದ ವ್ಯಕ್ತಿಯ ವ್ಯಕ್ತಿತ್ವವು ಆ ಸತ್ಯವಿಶ್ವಾಸದ ರಂಗಿನಿಂದ ಕೋರೈಸತೊಡಗುವುದು.

"ಸತ್ಯವಿಶ್ವಾಸ" (ಈಮಾನ್) ಎಂಬುದು ದೇವನ ಸಾನಿಧ್ಯವನ್ನು ಅನುಭವಿಸುವ ರೋಮಾಂಚನಕಾರಿ ಅನುಭವವಾಗಿದೆ. "ಸತ್ಯವಿಶ್ವಾಸ" ಎಂಬುದು ದೇವನ ಮಹಿಮೆಯಲ್ಲಿ ತನ್ನನ್ನು ತಾನು ಕಳೆದುಕೊಂಡು, ಅವನ ಭಾವದಲ್ಲೇ ಮಗ್ನನಾಗಿಬಿಡುವ ಪದಗಳಿಗೆ ನಿಲುಕದ ಅತ್ಯದ್ಭುತ ಅನುಭವದ ಹೆಸರಾಗಿದೆ. ಸತ್ಯವಿಶ್ವಾಸ ಎಂಬುದು ಮನುಷ್ಯನ ಕೃತಜ್ಞಾಭಾವವು, ಅವನ ಮನದಾಳದ ಸ್ತುತಿಯು ದೇವನಲ್ಲಿ ವಿಲೀನಗೊಳ್ಳುವುದಾಗಿದೆ. ಒಟ್ಟಾರೆ ಹೇಳುವುದಾದರೆ ಈ ಇಹಲೋಕದಲ್ಲಿದ್ದುಕೊಂಡೇ ದೇವನನ್ನು ತಲುಪುವ ಹೆಸರೇ "ಸತ್ಯವಿಶ್ವಾಸ" ಅಥವಾ "ಈಮಾನ್" ಆಗಿದೆ.

ದೇವನನ್ನು ಅರಿಯುವ ಮೂಲಕ ವ್ಯಕ್ತಿಯೋರ್ವನೊಳಗಡೆ ಉದ್ಭವಿಸುವ ಭೂಕಂಪದಂತಹ ಮಾರ್ಪಾಡಿನ ಹೆಸರಾಗಿದೆ "ಈಮಾನ್" ಅರ್ಥಾತ್ ಸತ್ಯವಿಶ್ವಾಸ. ದೇವನಕೊಡುಗೆಗಳನ್ನು ಪಡೆದುಕೊಂಡ ವ್ಯಕ್ತಿಯ ಎದೆಯಲ್ಲಿ ಹರಿಯುವ ಪ್ರವಾಹದ ಹೆಸರಾಗಿದೆ ಈಮಾನ್. ನೈಜ ಅರ್ಥದಲ್ಲಿ ದೇವನನ್ನು ಪಡೆಯುವುದರ ಹೆಸರು ಈಮಾನ್. ಇನ್ನು ಯಾರು ದೇವನನ್ನು ಪಡೆದನೋ; ಅವನು ತನ್ನ ಜೀವನದಲ್ಲಿ ಸರ್ವಸ್ವವನ್ನೂ ಪಡೆದುಕೊಂಡಂತೆ. ಇನ್ನು, ಸಕಲ ಲೋಕಗಳ ಏಕೈಕ ಒಡೆಯನಾದ ದೇವನನ್ನೇ ಪಡೆದ ವ್ಯಕ್ತಿಗೆ, ಆ ಬಳಿಕ ಸಿಗಲಾರದ ವಸ್ತುವೇನಾದರೂ ಜಗತ್ತಿನಲ್ಲಿ ಅಸ್ತಿತ್ವದಲ್ಲಿದೆಯೇ?

# ಪ್ರಕೃತಿಯ ದೃಢೀಕರಣ

"ಕಲ್ಲು ಮತ್ತು ಕಟ್ಟಿಗೆಯ ನಿಗದಿತ ಪ್ರಮಾಣದ ಮಿಶ್ರಣವು ಗ್ಯಾಸೋಲಿನ್ (ಪೆಟ್ರೋಲಿಯಂ) ಉತ್ಪತ್ತಿಗೆ ಕಾರಣವಾಗುವುದು" –ಇಂತಹ ಹೇಳಿಕೆಗಳು ಬಾಹ್ಯನೋಟಕ್ಕೆ ಬಹಳ ಹಾಸ್ಯಾಸ್ಪದ ಎನಿಸುತ್ತದೆ. ಇಂತಹ ಅಸಾಮಾನ್ಯ ಚಮತ್ಕಾರಗಳನ್ನು ಮಾಡಲು ಮಾನವನಿಂದಂತೂ ಸಾಧ್ಯವಿಲ್ಲ. ಆದರೆ, ಈ ಜಗತ್ತಿನಲ್ಲಿ ಪ್ರತಿನಿತ್ಯವೂ ಇದಕ್ಕಿಂತಲೂ ಅಸಾಮಾನ್ಯವಾದ ಚಮತ್ಕಾರಗಳು ಘಟಿಸುತ್ತಲೇ ಇರುತ್ತವೆ. ಮಾನವನ ಪಾಲಿಗೆ ವಿವರಿಸಲಾಗದಷ್ಟು ಇಂತಹ ಅಸಂಖ್ಯಾತ ಅದ್ಭುತ ಘಟನೆಗಳು ನಿಸರ್ಗದ ಮಡಿಲಿನಲ್ಲಿ ಪ್ರತಿನಿತ್ಯ ನಡೆಯುತ್ತಲೇ ಇರುತ್ತವೆ.

ಆಕ್ಸಿಜನ್ (ಆಮ್ಲಜನಕ) ಮತ್ತು ಹೈಡ್ರೋಜನ್ ಎರಡು ಪ್ರತ್ಯೇಕ ಅನಿಲಗಳು. ಪ್ರಕೃತಿಯು ಇವೆರಡನ್ನೂ ಒಂದು ನಿರ್ದಿಷ್ಠ ಪ್ರಮಾಣದಲ್ಲಿ ಬೆರೆಸಿದಾಗ ಅವೆರಡರ ಸಂಯೋಜನೆಯು ಒಂದು ತೆರನಾದ ಬಿಳಿದ್ರವದ ರೂಪವನ್ನು ಪಡೆಯುವುದು. ಕಾರ್ಬನ್ ಮತ್ತು ಹೈಡ್ರೋಜನ್ ಇವೆರಡರ ನಿಗದಿತ ಪ್ರಮಾಣದಲ್ಲಿ ಮಿಳಿತವಾದಾಗ ಕಚ್ಚಾತೈಲ ಅಥವಾ ಪೆಟ್ರೋಲಿಯಂನಂತಹ ಬಹುಮೌಲ್ಯ ವಸ್ತುವಿನ ಉತ್ಪಾದನೆಯಾಗುತ್ತದೆ. ಕಾರ್ಬನ್ ನೊಂದಿಗೆ ಒಂದಿಷ್ಟು ಲವಣ ಹಾಗೂ ಖನಿಜಗಳು ಸೇರಿದಾಗ ಒಂದು ಹೊಸಜೀವ ಅಸ್ತಿತ್ವಕ್ಕೆ ಬರುತ್ತದೆ.

ಅಯಸ್ಕಾಂತೀಯ ಬಲ ಮತ್ತು ಚಲನೆ ಇವೆರಡರ ಸಮ್ಮಿಳಿತವಾದಾಗ "ವಿದ್ಯುತ್ "ನಂತಹ ಅದ್ಭುತ ಶಕ್ತಿಯ ಉತ್ಪತ್ತಿಯಾಗುತ್ತದೆ. ಇದೇ ರೀತಿ ಅಯಸ್ಕಾಂತೀಯ ಬಲ ಮತ್ತು ವಿದ್ಯುತ್ ಅನ್ನು ಒಟ್ಟುಗೂಡಿಸಿದಾಗ ಅತೀವ ವೇಗವು ಅಸ್ತಿತ್ವಕ್ಕೆ ಬರುವುದು. ಕೇವಲ ಒಂದು ಬೀಜವನ್ನು ಮಣ್ಣಿನಲ್ಲಿ ಹೂತಾಗ ಅದರಿಂದ ಕಟ್ಟಿಗೆ, ಎಲೆ, ಹೂವು ಮತ್ತು ಹಣ್ಣುಗಳ ಉತ್ಪತ್ತಿಯಾಗುವುದು. ಇತ್ಯಾದಿ. ಇತ್ಯಾದಿ..

ಈ ರೀತಿಯ ಅದ್ಭುತ ಚಮತ್ಕಾರಗಳು ಪ್ರಪಂಚದಲ್ಲಿ ಅನುಕ್ಷಣವೂ ಕಾಣಿಸುತ್ತಿರುತ್ತವೆ. ಮನುಷ್ಯನು ಇದನ್ನು ನೋಡಿ ಆಶ್ಚರ್ಯಚಕಿತನಾಗಿ ಬಿಡುತ್ತಾನೆ. ಮನುಷ್ಯನಿಗಂತೂ ಇದನ್ನೆಲ್ಲಾ ಸ್ವಯಂ ರಚಿಸುವ ಸಾಮರ್ಥ್ಯವಿಲ್ಲ. ಈ ವಸ್ತುಗಳಲ್ಲೂ ಇಷ್ಟೊಂದು ಅಸಾಮಾನ್ಯ ಶಕ್ತಿ ಇಲ್ಲ. ಹಾಗಾದರೆ ಇದೆಲ್ಲ ಸಾಧ್ಯವಾದುದು ಹೇಗೆ ಎಂಬುದರ ಕುರಿತು ಅವನು ಆಗ ಅವಲೋಕಿಸತೊಡಗುತ್ತಾನೆ. ಅದಕ್ಕುತ್ತರವೆಂಬಂತೆ ಅವನೇ ಖುದ್ದು ಹೀಗೆ ಹೇಳತೊಡಗುತ್ತಾನೆ: "ಇವೆಲ್ಲವೂ ದೇವನದೇ ಅಂಶವಾಗಿವೆ. ಸ್ವತಃ ದೇವನೇ ತನ್ನನ್ನು ತಾನು ಈ ರೀತಿಯಾಗಿ ಅನೇಕ ರೂಪ ಮತ್ತು ಅವತಾರಗಳಲ್ಲಿ ನಮ್ಮೆದುರು ಪ್ರಕಟಪಡಿಸಿಕೊಳ್ಳುತ್ತಿದ್ದಾನೆ."

ಕುರ್ ಆನ್, ಈ ರೀತಿಯ ಚಿಂತನೆಯ ಈ ದಿಕ್ಕಿನಲ್ಲಿ ಸಾಗಿ ಕೊನೆಯದಾಗಿ ಸೃಷ್ಟಿಯು ಸೃಷ್ಟಿಕರ್ತನ ಅಂಶವೆಂದು ಕಂಡುಕೊಳ್ಳುವ ಉತ್ತರ ದಾರಿತಪ್ಪಿಸುವ ಉತ್ತರವೆಂದು ಹೇಳುತ್ತದೆ. ಕುರ್ ಆನ್ ಹೇಳುವ ಪ್ರಕಾರ, "ಇವೆಲ್ಲವೂ ದೇವನ ಪ್ರತಿರೂಪಗಳೋ ಅಥವಾ ದೇವನ ಅಂಶವೋ ಖಂಡಿತಾ ಅಲ್ಲ. ಬದಲಿಗೆ, ಅವೆಲ್ಲವೂ ದೇವಾಜ್ಞೆಗನುಗುಣವಾಗಿ ಘಟಿಸುವ ಪ್ರಕ್ರಿಯೆಗಳಾಗಿವೆ ಅಷ್ಟೇ!." ದೇವನು ತನ್ನ ಅಪಾರ ಮಹಿಮೆಯಿಂದ ಇವುಗಳನ್ನೆಲ್ಲಾ ರಚಿಸಿದ್ದಾನೆಯೇ ಹೊರತು ಅವ್ಯಾವುದೂ ಖಂಡಿತ ದೇವನ ಪ್ರತಿರೂಪಗಳಲ್ಲ.

ನಕ್ಷತ್ರಗಳು ಅನಾದಿಕಾಲದಿಂದಲೂ ಕವಿಗಳ ಸುಂದರ ಕಲ್ಪನೆಗಳ ಕೇಂದ್ರಬಿಂದುವಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಚಂದ್ರನು ಮಾನವನ ಬಳಿ ದೇವತೆಯ ಪರಿಕಲ್ಪನೆಯಾಗಿರುವನು. ಆದರೆ ವಸ್ತುಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ನಕ್ಷತ್ರಗಳು ಭಯಾನಕ ಬೆಂಕಿಯ ಜ್ವಾಲೆಗಳಾಗಿವೆ. ಚಂದ್ರ ಮತ್ತಿತ್ತರ ಗ್ರಹಗಳು ಒಂದು ತೊಟ್ಟು ನೀರೂ ದೊರೆಯದ, ವೃಕ್ಷದ ಒಂದೆಲೆಯೂ ಕಾಣಸಿಗದ ಶುಷ್ಕ ಬಂಡೆಗಳ ಭಂಡಾರವಷ್ಟೇ ಆಗಿವೆ ಎಂಬುದೇ ವಾಸ್ತವ. ಈ ಇಡೀ ವಿಶ್ವವು ಅದೆಷ್ಟೇ

ವಿಶಾಲವಾಗಿದ್ದರೂ ಭೂಮಿಯ ಹೊರತಾಗಿ ಬೇರಾವ ಗ್ರಹವೂ ಮನುಷ್ಯನ ಪಾಲಿಗೆ ಜೀವಿಸಲು ಯೋಗ್ಯವಾಗಿಲ್ಲ. ಕೇವಲ ಭೂಮಿಯೆಂಬ ಗ್ರಹದಲ್ಲಿ ಮಾತ್ರ ಮನುಷ್ಯನು ಬದುಕಲು, ಅವನು ತನ್ನ ನಾಗರಿಕತೆಯನ್ನು ಉಳಿಸಿ, ಬೆಳೆಸಲು ಸಾಧ್ಯ. ಇಡೀ ಬ್ರಹ್ಮಾಂಡದಲ್ಲಿ ಕೇವಲ ಭೂಮಿಯನ್ನು ಮಾತ್ರ ಮಾನವನು ಬದುಕಲು ಯೋಗ್ಯವಾದ ವಿಶಿಷ್ಟ ಗ್ರಹವನ್ನಾಗಿ ಮಾಡಿರುವುದು ದೇವಾಸ್ತಿತ್ವಕ್ಕೆ ಇರುವ ಸ್ಪಷ್ಟ ಪುರಾವೆಯಾಗಿದೆ. ಭೂಮಿಯೆಂಬ ಗ್ರಹದ ಈ ವೈಶಿಷ್ಟ್ಯವೇ ಆ ದೇವನ ವಿಶಿಷ್ಟ ಅಸ್ತಿತ್ವದ ಕುರಿತು ಇರುವ ಸುಸ್ಪಷ್ಟ ಸಾಕ್ಷಿಯಾಗಿದೆ.

# ದೇವನ ಸಂಕೇತಗಳು

ಅಂದು 1982ರ ಸೆಪ್ಟೆಂಬರ್ ಏಳನೇ ತಾರೀಕು. ನಾನು ಆಫ್ರಿಕಾದ ಪರ್ವತಗಳ ಪ್ರದೇಶದಲ್ಲಿರುವ ಮರವೊಂದರ ಮುಂದೆ ನಿಂತಿದ್ದೆ. ಇದಕ್ಕಿಂತ ಮೊದಲು ನಾನು ಅಂತಹ ಮರವನ್ನು ನೋಡಿಯೇ ಇರಲಿಲ್ಲ.

ಆ ಮರವು ತನ್ನ ಸಂಪೂರ್ಣ ಅಸ್ತಿತ್ವದೊಂದಿಗೆ ದೇವನ ಸಂಕೇತದಂತೆ ನನಗೆ ತೋರುತ್ತಿತು. ಅದರ ಸೂಕ್ಷ್ಮ ಹೂವು, ಸುಕ್ಕುಗಟ್ಟಿದ ಹಣ್ಣು ಮತ್ತು ರೇಖಾಗಣಿತದ ಚಿಹ್ನೆಯಂತೆ ತೋರುತ್ತಿದ್ದ ಅದರ ಎಲೆಗಳು; ಇದೆಲ್ಲವೂ ತನ್ನಿಂತಾನೆ ಸೃಷ್ಟಿಯಾಗಿದ್ದಲ್ಲ. ಬದಲಿಗೆ ಇದನ್ನು ಸೃಷ್ಟಿಸಿದ ಸೃಷ್ಟಿಕರ್ತನೋರ್ವನಿರುವನು ಎಂಬುದಾಗಿ ಸಾರಿ ಸಾರಿ ಹೇಳುತ್ತಿದ್ದವು. ಈ ಪ್ರಪಂಚದ ಪ್ರತಿಯೊಂದು ಮರವೂ ದೇವನ ಕರ-ಕುಶಲತೆಗೆ ಹಿಡಿದ ಕೈಗನ್ನಡಿಯಾಗಿದೆ. ಆದರೆ ನಾನು ನಿಂತಿದ್ದ ಆ ಜಾಗದೆದುರಿದ್ದ ಮರವನ್ನು ಮೊದಲ ಸಾರಿ ನೋಡಿದುದರಿಂದ, ಅದು ನನ್ನನ್ನು ವಿಶೇಷವಾಗಿ ತನ್ನೆಡೆಗೆ ಸೆಳೆಯಿತಷ್ಟೆ!.

ಆಫ್ರಿಕಾದ ಈ ಸುಂದರ ಮತ್ತು ವಿಸ್ಮಯವಾದ ಮರವನ್ನು ನೋಡಿದಾಕ್ಷಣ ಇದಕ್ಕಿದ್ದಂತೆ ನನ್ನ ಅಂತರಂಗವು ಕೂಗಿ ಹೇಳಿತು: "ದೇವನು ಈ ಜಗತ್ತಿನಲ್ಲಿ ಏನೆಲ್ಲಾ ನಿರ್ಮಿಸಿರುವನೋ, ಅವುಗಳ ಪೈಕಿ ಪ್ರತಿಯೊಂದು ವಸ್ತುಗಳ ಮೇಲೆಯೂ ದೇವನೇ ಹೀಗೆ ಬರೆದಿರುವಂತೆ ಭಾಸವಾಗುತ್ತಿದೆ; (Made by GOD) ಇದು ದೇವ ನಿರ್ಮಿತ ವಸ್ತು.

ದೇವನು ಈ ವಾಕ್ಯವನ್ನು ತಾನು ನಿರ್ಮಿಸಿದ ಪ್ರತಿಯೊಂದು ವಸ್ತುಗಳ ಮೇಲೆ ಬರೆದ ತರುವಾಯ, ಸೃಷ್ಟಿಯನ್ನು ನೋಡಿ ಸೃಷ್ಟಿಕರ್ತನನ್ನು ಗುರುತಿಸಲೆಂದು, ಬಾಹ್ಯಗಣ್ಣಿಗೆ ಕಾಣಿಸದಿದ್ದರೂ ದೇವನುಪಸ್ಥಿತಿಯನ್ನು ಪ್ರತಿಯೊಬ್ಬರೂ ತಮ್ಮ

ಅನುಭವಕ್ಕೆ ತಂದುಕೊಳ್ಳಲೆಂದು ತನ್ನನ್ನು ತಾನು ಜನರ ದೃಷ್ಟಿಗಳಿಂದ ಮರೆಮಾಚಿಕೊಂಡನು.

ಯಂತ್ರಗಳ ಕುರಿತು ತಿಳಿದಿರುವ ವ್ಯಕ್ತಿಯೋರ್ವ ಯಂತ್ರವೊಂದನ್ನು ನೋಡಿದಾಗ; ಅದು ರಷ್ಯಾದಲ್ಲಿ ತಯಾರಾದುದೋ ಅಥವಾ ಅಮೆರಿಕಾದಲ್ಲೋ ಅಥವಾ ಜಪಾನಿನಲ್ಲೋ ಅಥವಾ ಬ್ರಿಟನ್ ನಲ್ಲೋ ಎಂಬುದನ್ನು ತತ್ ಕ್ಷಣ ಹೇಳಬಲ್ಲನು. ಇಂತಹದೇ ಉದಾಹರಣೆಯನ್ನು ನಾವು ಈ ಜಗತ್ತಿನ ಕುರಿತೂ ಕೊಡಬಹುದು.

ನಾವು ವಾಸಿಸುತ್ತಿರುವ ಈ ಜಗತ್ತಿನಲ್ಲಿ ಕೂಡ ಅಸಂಖ್ಯಾತ ದೇವನಿರ್ಮಿತ ಯಂತ್ರಗಳಿವೆ. ಅವುಗಳ ಪೈಕಿ ಪ್ರತಿಯೊಂದು ಯಂತ್ರವೂ ನಿರಂತರ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ದೇವನಿರ್ಮಿತ ಯಂತ್ರಗಳ ಮೇಲೆ ಸ್ಟ್ಯಾಂಪ್ ನ ಸಂಕೇತವಿಲ್ಲದೇ ಹೋದರೂ, ತಮ್ಮ ವಿಶಿಷ್ಟ ವಿನ್ಯಾಸ ಮತ್ತು ಬೆರಗುಗೊಳಿಸುವ ವರ್ಣನಾತೀತ ರಚನೆಯೊಂದಿಗೆ "ದೇವನೊಬ್ಬನೇ ನಮ್ಮ ನಿರ್ಮಾತೃ" ಎಂದು ಸಾರಿ ಸಾರಿ ಹೇಳುತ್ತಿವೆ. ಯಾಕೆಂದರೆ, ಸೃಷ್ಟಿಗಳು ಖುದ್ದು ಸೃಷ್ಟಿಕರ್ತನ ಸಂಕೇತಗಳ ಪೈಕಿಗಳಲ್ಲಾಗಿವೆ.

ವಿಶ್ವದ ಯಾವುದೇ ದೇವನಿರ್ಮಿತ ವಸ್ತುವಿನ ಮೇಲೆ, "ಇದನ್ನು ಯಾರು ನಿರ್ಮಿಸಿದ್ದು?" ಎಂಬುದನ್ನು ಪದಗಳ ಮೂಲಕ ಬರೆಯಲಾಗಿಲ್ಲ ಎಂಬುದಂತೂ ದಿಟ. ಆದರೆ ಅವುಗಳಲ್ಲಿರುವ ಲಕ್ಷಣಗಳನ್ನು ಅವಲೋಕಿಸಿದಾಗ, ಅವುಗಳ ನಿರ್ಮಾತೃ ಯಾರು ಎಂಬುದು ಸ್ಪಷ್ಟವಾಗಿ ನಮಗೆ ಗೋಚರಿಸಬಲ್ಲದು. ಒಂದು ವೇಳೆ ಅವಲೋಕನಾತ್ಮಕ ನೋಟದೊಂದಿಗೆ ಈ ಜಗತ್ತನ್ನು ಅವಲೋಕಿಸಿದ್ದೇ ಆದರೆ, ಆ ವ್ಯಕ್ತಿಯ ಅಂತರಂಗವು: "ನಿಸ್ಸಂಶಯವಾಗಿಯೂ ಇದು ದೇವ ನಿರ್ಮಿತವಾದುದು. ಆ ದೇವನ ಹೊರತಾಗಿ ಬೇರಾರೂ ಇದನ್ನು ನಿರ್ಮಿಸಲಸಾಧ್ಯ"ಎಂದು ಸಾರಿ ಸಾರಿ ಹೇಳತೊಡಗುವುದು.

# ಅಂತರಿಕ್ಷದಲ್ಲಿ ನಾಗರಿಕತೆ

ಪಾಶ್ಚಿಮಾತ್ಯ ಪ್ರಪಂಚವು ಕಳೆದ 20 ವರ್ಷಗಳಿಂದ ಬಾಹ್ಯಾಕಾಶದ ಜಗತ್ತಿನಲ್ಲಿ ಯಾವುದಾದರೂ ಜೀವಿಯ ಧ್ವನಿ ಕೇಳುತ್ತಿದೆಯೇ ಎಂಬ ಒಂದು ವಿಶಿಷ್ಟ ಸಂಶೋಧನೆಯಲ್ಲಿ ತೊಡಗಿದೆ.

Listening for the Life in Space ಬಾಹ್ಯಾಕಾಶದಲ್ಲಿ ಜೀವಿಗಳ ಹುಡುಕಾಟದ ಪ್ರೇರಣೆಯ ಹಿಂದಿರುವುದು ವಿಕಸನವಾದ ಎಂಬ ಊಹೆಯಾಗಿದೆ. ಬಹುತೇಕ ಆಧುನಿಕ ವಿಜ್ಞಾನಿಗಳು ಜಗತ್ತಿನ ಸೃಷ್ಟಿಯ ಹಿಂದಿರುವುದು ವಿಕಸನವಾದವೆಂದು ನಂಬುತ್ತಾರೆ. ನಾವು ವಾಸಿಸುತ್ತಿರುವ ಭೂಮಿಯಲ್ಲಿ ಅನೇಕ ರೀತಿಯ ಜೀವಿಗಳು ವಾಸಿಸುವಂತೆ, ಈ ವಿಶಾಲ ಅಂತರಿಕ್ಷದಲ್ಲೂ ಅನೇಕ ಜೀವ ಪ್ರಬೇಧಗಳಿವೆ ಎಂಬುದು ಈ ಆಧುನಿಕ ವಿಜ್ಞಾನಿಗಳ ವಾದವಾಗಿದೆ. ಅಂತರಿಕ್ಷದತ್ತ ಪಯಣಿಸುವುದರ ಹಿಂದಿರುವ ಉದ್ದೇಶಗಳ ಪೈಕಿ ಅಲ್ಲಿನ ಜೀವಿಗಳೊಂದಿಗಿನ ಭೇಟಿಯೂ ಆ ಪಯಣದ ಒಂದು ಮುಖ್ಯ ಉದ್ದೇಶವಾಗಿರುತ್ತದೆ. ಈ ಕಲ್ಪನೆಯನ್ನು ವಿಜ್ಞಾನಿಗಳು ಎಷ್ಟು ಬಲವಾಗಿ ನಂಬಿದ್ದಾರೆಂದರೆ ಈಗಾಗಲೇ, 'ಅಂತರಿಕ್ಷದಲ್ಲಿ ನಾಗರಿಕತೆ' (Extraterrestrial civilization) ಎಂಬ ಹೆಸರನ್ನೂ ಅದಕ್ಕೆ ಕೊಟ್ಟಿಟ್ಟಿದ್ದಾರೆ.

ಇದರ ಹೊರತಾಗಿಯೂ ಅಮೆರಿಕ ಮತ್ತಿತರ ಮುಂದುವರಿದ ದೇಶಗಳಲ್ಲಿ ರೇಡಿಯೋ ಇಯರ್ಸ್ (Radio Ears) ಹೆಸರಿನ ವಿಶಿಷ್ಟ ಪ್ರಕಾರದ ಆ್ಯಂಟೆನಾಗಳನ್ನು (Antenna) ಅಳವಡಿಸಿಟ್ಟಿದ್ದಾರೆ. ಈ ಆ್ಯಂಟೆನಾಗಳ ಮೂಲಕ ಅಂತರಿಕ್ಷದತ್ತ ನಿರಂತರ ಸಂಕೇತಗಳನ್ನು ಕಳಿಸಲಾಗುತ್ತದೆ. ಅದಕ್ಕೆ ಮರುತ್ತರವಾಗಿ ಯಾವುದಾದರೂ ನಿರೀಕ್ಷಿತ ಸಂದೇಶ ಅಥವಾ ಸಂಕೇತಗಳೇನಾದರೂ ಬಂದರೆ ಅದನ್ನು ಸ್ವೀಕರಿಸಲು ಕೂಡ ಆ್ಯಂಟಿನಾ ಸದಾ ಸಿದ್ಧವಿರುತ್ತದೆ.

ಅಂತರಿಕ್ಷದ ಜೀವಿಗಳಿಂದ ಸಂಕೇತಗಳನ್ನು ಬಯಸುವ ಈ ಪ್ರಯತ್ನಗಳ ಕುರಿತು ವಿಮರ್ಶಕಾರರೊಬ್ಬರು, "ನೀವು ನಿಜವಾಗಿಯೂ ಅಲ್ಲಿರುವುದೇ ಆದರೆ ದಯವಿಟ್ಟು ನಿಮ್ಮ ಸ್ನೇಹಿತರಿಗೊಂದು ಕರೆ ಮಾಡಬೇಕಾಗಿ ವಿನಂತಿ" ಎಂದು ತನ್ನ ಸಂಕ್ಷಿಪ್ತ ಪದಗಳಲ್ಲಿ ವಿಡಂಬನಾತ್ಮಕವಾಗಿ ವಿಮರ್ಶಿಸಿದ್ದಾರೆ.

"If you are really there, please call your friends". (Times of India, 21 March, 1983).

ಭೂಮಿಯ ಮೇಲಿನ ಜೀವನ ಮತ್ತು ನಮ್ಮಲ್ಲಿರುವ ವಿವೇಚನೆಯ ಅಸ್ತಿತ್ವವು ಬಹಳ ವಿಶಿಷ್ಟ ಮತ್ತು ಅಪರೂಪವಾದುದು. ನಮ್ಮೊಳಗಿರುವ ವಿವೇಚನೆಯು ಸ್ವಯಂ ತನ್ನ ಸೃಷ್ಟಿಕರ್ತನಲ್ಲ. ಹಾಗಾಗಿಯೇ, ಇಲ್ಲಿನ ಜೀವನ ಮತ್ತು ವಿವೇಚನೆಗಿಂತ ಹಿರಿದಾದ, ದೊಡ್ಡಮಟ್ಟದ ಜೀವನ ಮತ್ತು ವಿವೇಚನಾ ಭಂಡಾರದ ಮೂಲವಿರುವುದು ಅತ್ಯಗತ್ಯ ಎಂಬುದು ಖುದ್ದು ವಿವೇಚನೆ ಎಂಬ ಅಸ್ತಿತ್ವದ ಬೇಡಿಕೆಯಾಗಿದೆ. ವಾಸ್ತವದಲ್ಲಿ, ಖುದ್ದು ಜೀವಂತ ಮನುಷ್ಯನ ಉಪಸ್ಥಿತಿಯೇ ದೇವಾಸ್ತಿತ್ವಕ್ಕಿರುವ ಪ್ರಬಲ ಸಾಕ್ಷಿಯಾಗಿದೆ. ಆಧುನಿಕ ಜಗತ್ತಿನ ಮಾನವನಿಗೆ ಈ ವಾಸ್ತವವನ್ನು ಅಲ್ಲಗೆಳೆಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಅವನು ಈ ಸತ್ಯವನ್ನು ಸೂಚ್ಯವಾಗಿ ಒಪ್ಪಿಕೊಳ್ಳುವನು. ಇದನ್ನೇ ಅವನು "ಅಂತರಿಕ್ಷದ ಜೀವನ" ಎಂದು ಹೆಸರಿಸುವ ಮೂಲಕ ಆ ಅಸ್ತಿತ್ವವು ನಮ್ಮಂತೇ ಇರುವ ಸಾಮಾನ್ಯ ಅಸ್ತಿತ್ವವಾಗಿದೆಯೇ ವಿನಹ ನಮಗಿಂದ ಶ್ರೇಷ್ಠವಾದ ಅಸ್ತಿತ್ವವಲ್ಲ ಎಂದು ಹೇಳಲು ಪ್ರಯಾಸ ಪಡುವನು. ಆ ಅಸ್ತಿತ್ವವೊಂದು ನಮ್ಮಲ್ಲಿರುವಂತಹ ನಾಗರಿಕತೆ ಆಗಿದೆಯೇ ವಿನಹ ಅಲ್ಲಿ ಯಾರೂ ದೇವನೆಂಬ ಅಸ್ತಿತ್ವವಿಲ್ಲ. ಅಲ್ಲಿರುವ ಅಸ್ತಿತ್ವವು ನಮ್ಮ ಮೂಲಕ್ಕೆ ಕಾರಣನಾದ ಸೃಷ್ಟಿಕರ್ತನಲ್ಲ. ಆ ಅಸ್ತಿತ್ವವು ನಮಗಿಂತ ಶ್ರೇಷ್ಠತೆ ಹೊಂದಿದ, ನಮ್ಮ ಮೇಲಿನ ಮಾಲಕತ್ವ ಹೊಂದಿದ ಅಸ್ತಿತ್ವವಲ್ಲ ಎನ್ನುವ ಮೂಲಕ ವಾಸ್ತವದ ಮೇಲೆ ಪರದೆ ಹೊದಿಸಿ, ಸತ್ಯವನ್ನು ಮುಚ್ಚಿಡುವ ವ್ಯರ್ಥ ಪ್ರಯತ್ನ ಮಾಡುತ್ತಿರುವನು.

# ಪರಿಣಿತ ತಜ್ಞರ ವಿಚಿತ್ರ ಸ್ಥಿತಿ

ಫ್ರೊಫೆಸರ್ ರಾಜಾಕೃಷ್ಣ (1925–1985) ಪ್ರಪಂಚದ 50 ಮಹಾನ್ ಬುದ್ಧಿಶಾಲಿಗಳ ಪೈಕಿ ಒಬ್ಬರು ಎಂದು ಪರಿಗಣಿಸಲ್ಪಡುತ್ತಾರೆ.

ಅರ್ಥಶಾಸ್ತ್ರದಲ್ಲಿ ಅತ್ಯಂತ ಪರಿಣಿತರಾಗಿದ್ದ ಕಾರಣ ಅವರು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಹೊಂದಿದ್ದರು. ಅವರು ದೇಶದ ಅನೇಕ ಪ್ರಮುಖ ಆರ್ಥಿಕ ಹುದ್ದೆಗಳನ್ನೂ ಅಲಂಕರಿಸಿದ್ದರು. ಅವರು ತಮ್ಮ ಆಯಸ್ಸಿನ ಮುಸ್ಸಂಜೆಯ ಹೊತ್ತಿನಲ್ಲಿ Food & Agriculture Organization (ಕೃಷಿ ಮತ್ತು ಆಹಾರ ಸಂಸ್ಥೆ) ಯ ಕಾರ್ಯನಿಮಿತ್ತ ಮೂರು ತಿಂಗಳು ಇಟಲಿಯ ರೋಮ್ ಗೆ ತೆರಳಿದ್ದರು. ಅವರು ತಮ್ಮ ಕಾರ್ಯದ ಅಂತಿಮ ಹಂತದಲ್ಲಿರುವಾಗಲೇ ಅಚನಾಕ್ ಹೃದಯ ಸ್ತಂಭನದ ಕಾರಣ ಮರಣ ಹೊಂದಿದರು. ಅವರು ಮರಣವನ್ನಪ್ಪಿದಾಗ ಅವರ ವಯಸ್ಸು ಕೇವಲ ಐವತ್ತೊಂಬತ್ತು (59) ಆಗಿತ್ತು. (Times of India 22 ಮೇ, 1985). ಅವರ ಕುರಿತು ಟೈಮ್ಸ್ ಆಫ್ ಇಂಡಿಯಾದ ಬರಹ ಹೀಗಿತ್ತು.

"ಫ್ರೊಫೆಸರ್ ರಾಜಾಕೃಷ್ಣನ್ ಬಹಳ ಪ್ರಸಿದ್ಧ ಕೃಷಿಯಾಧಾರಿತ ಅರ್ಥ ಶಾಸ್ತ್ರಜ್ಞರಾಗಿದ್ದರು. ಆರ್ಥಿಕತೆಯಲ್ಲಿ ಬಹಳ ಹಿಂದುಳಿದ ದೇಶಗಳಲ್ಲಿ ಉದ್ಯೋಗದ ಸಮಸ್ಯೆಯನ್ನು ಪರಿಹರಿಸುವ ಬಗೆ ಹೇಗೆ ಎಂಬುದರ ಕುರಿತು ತುಂಬಾ ಆಳವಾಗಿ ಅಧ್ಯಯನ ಮಾಡಿದ್ದ ಆರ್ಥಿಕ ತಜ್ಞರಾಗಿದ್ದರು."

He was an acknowledged expert in agricultural economics and had specialised in the study of employment conditions of poverty in the third world.

ಜಗತ್ತಿನ ನಾಳೆಗಳ ಸಮಸ್ಯೆಗಳನ್ನು ಬಗೆಹರಿಸಲು ಹೊರಟ ತಜ್ಞರಿಗೆ ತಮ್ಮ ನಾಳೆಯ ಕುರಿತೇ ಅರಿವಿಲ್ಲದಿರುವುದು ಎಷ್ಟೊಂದು ಸೋಜಿಗವಲ್ಲವೇ?. ತನ್ನ

ಭವಿಷ್ಯದ ಕುರಿತು ಏನು ತಿಳಿಯದ ವ್ಯಕ್ತಿಯೋರ್ವ ಮತ್ತೊಬ್ಬರ ಭವಿಷ್ಯವನ್ನು ಉಜ್ವಲಗೊಳಿಸಲಿಕ್ಕಾಗಿ ಅಧ್ಯಯನದಲ್ಲಿ ನಿರತನಾಗುವುದು ಎಷ್ಟೊಂದು ವಿಚಿತ್ರವಲ್ಲವೇ?.

ಸ್ವತಃ ಬೌದ್ಧಿಕ ದಿವಾಳಿತನ ಹೊಂದಿರುವ ವ್ಯಕ್ತಿಗಳು ಅನ್ಯರ ಆರ್ಥಿಕ ದಿವಾಳಿತನದ ಕುರಿತು ಉದ್ದುದ್ದ ಭಾಷಣ ಬಿಗಿಯುತ್ತಾರೆ. ಜಗತ್ತಿನ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅಂತಹವರು ಹೊಂದಿದ ನಿಪುಣತೆಗಾಗಿ ಅವರನ್ನು ತುಂಬಾ ಪ್ರಶಂಸಿಸಲಾಗುತ್ತದೆ. ಆದರೆ, ವಾಸ್ತವದಲ್ಲಿ ಅವರು ತಮ್ಮ ಸ್ವಂತ ಸಮಸ್ಯೆಗಳನ್ನೇ ಬಗೆಹರಿಸಿಕೊಳ್ಳಲು ವಿಫಲರಾಗಿದ್ದರು ಎಂಬುದು ನಂತರದ ಘಟನೆಗಳಿಂದ ಸಾಬೀತಾಗುತ್ತದೆ. ಇತರರ ಸಮಸ್ಯೆ ಬಗೆಹರಿಸುವಲ್ಲಿ ಜನರ ನೈಪುಣ್ಯತೆ, ಆದರೆ ಅದೇ ತಮ್ಮ ಸ್ವಂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗದ ಅವರ ಅಸಹಾಯಕತೆ ಇವೆಲ್ಲವೂ ಎಷ್ಟೊಂದು ವಿಚಿತ್ರವಲ್ಲವೇ?.

# ಪ್ರೀತಿಯ ಸಮರ್ಪಣೆ

"ಇನ್ನು, ದೇವನ ಜೊತೆಗೆ ಇತರರನ್ನು ಸಮಭಾಗಿಗಳಾಗಿ ಪರಿಗಣಿಸುವ ಕೆಲವು ಜನರಿದ್ದಾರೆ. ಈ ಜನರು, ದೇವನನ್ನು ಪ್ರೀತಿಸಬೇಕಾದ ರೀತಿಯಲ್ಲಿ, ತಾವು ದೇವನ ಸ್ಥಾನದಲ್ಲಿ ಕೂರಿಸಿದ ಸಮಭಾಗಿಗಳನ್ನು ಪ್ರೀತಿಸುತ್ತಾರೆ. ಇನ್ನು ಸತ್ಯವಿಶ್ವಾಸಿಗಳಾದವರು ದೇವನನ್ನೇ ಅತಿ ಹೆಚ್ಚು ಪ್ರೀತಿಸುವವರಾಗಿರುವರು. ಒಂದು ವೇಳೆ ಈ ಅಕ್ರಮಿಗಳು, ತಮ್ಮ ಪಾಲಿಗೆ ಕಾದಿರುವ ಭವಿಷ್ಯದ ಶಿಕ್ಷೆಯನ್ನು ಇಂದೇ ಕಾಣಲೇನಾದರೂ ಸಾಧ್ಯವಿರುತ್ತಿದ್ದರೆ, ಸಕಲ ಶಕ್ತಿ-ಸಾಮರ್ಥ್ಯಗಳು ದೇವನೊಬ್ಬನಿಗೇ ಮೀಸಲು ಮತ್ತು ದೇವನು ಕಠಿಣವಾಗಿ ಶಿಕ್ಷಿಸುವವನು (ಎಂಬುದನ್ನು ಚೆನ್ನಾಗಿ ಮನಗಾಣುತ್ತಿದ್ದರು). ಇದು ಕುರ್ ಆನ್ ನ 2ನೇ ಅಧ್ಯಾಯವಾದ ಅಲ್ ಬಕರಃ ದಲ್ಲಿರುವ 165ನೇ ಸೂಕ್ತದ ತರ್ಜುಮೆಯಾಗಿದೆ.

ಸ್ವಭಾವತಃ ಮತ್ತು ಸನ್ನಿವೇಶಗಳಿಗನುಗುಣವಾಗಿ ಮನುಷ್ಯನು ಸದಾ ಬಾಹ್ಯ ಬೆಂಬಲವನ್ನು ಬಯಸುವ ಜೀವಿಯಾಗಿದ್ದಾನೆ. ಅವನ ಸಹಾಯಕ್ಕೆ ನಿಲ್ಲುವ ಅಸ್ತಿತ್ವವು, ಅವನಲ್ಲಿರುವ ಕೊರತೆಯನ್ನು ನೀಗಿಸುವುದರ ಜೊತೆಗೆ ಅವನ ಭರವಸೆ ಮತ್ತು ನಂಬಿಕೆಯ ಆಧಾರ ಸ್ತಂಭವಾಗಿರಬೇಕು ಎಂಬುದು ಅವನ ಸಹಜವಾದ ಬಯಕೆಯಾಗಿದೆ. ಯಾರನ್ನಾದರೂ ಈ ಆಧಾರದಲ್ಲಿ ತನ್ನ ಜೀವನದಲ್ಲಿ ಶಾಮೀಲಾಗಿಸುವುದರ ಅರ್ಥ, ಅವರನ್ನು "ಆರಾಧ್ಯ" ರನ್ನಾಗಿ ಮಾಡಿಕೊಳ್ಳು-ವುದಾಗಿದೆ. ವ್ಯಕ್ತಿಯೋರ್ವ ಯಾವುದಾದರೂ ಅಸ್ತಿತ್ವವನ್ನು ತನ್ನ ಪಾಲಿನ ಆರಾಧ್ಯನನ್ನಾಗಿ ಮಾಡಿಕೊಂಡ ಬಳಿಕ, ಅವನ ಭರವಸೆ, ಪ್ರೀತಿ ಮತ್ತು ನಂಬಿಕೆಗಳಂತಹ ವಿಶೇಷ ಭಾವನೆಗಳೆಲ್ಲವೂ ಆ ಅಸ್ತಿತ್ವಕ್ಕಷ್ಟೇ ಸೀಮಿತವಾಗುತ್ತದೆ. ಮನುಷ್ಯನು ತನ್ನ ಸ್ವಭಾವ ಸಹಜವಾಗಿಯೇ ಯಾರನ್ನಾದರೂ ಅತ್ಯಧಿಕವಾಗಿ ಪ್ರೀತಿಸಲು ನಿರ್ಬಂಧಿತನಾಗಿದ್ದಾನೆ. ಇನ್ನು ಅವನು ಯಾರನ್ನು ಅತ್ಯಧಿಕವಾಗಿ

ಪ್ರೀತಿಸುತ್ತಾನೋ, ಯಾರಿಗೆ ಹೆಚ್ಚು ನಿಷ್ಠನಾಗಿರುತ್ತಾನೋ, ಯಾರಿಗೆ ಹೆಚ್ಚು ಕೃತಜ್ಞತೆ ತೋರುತ್ತಾನೋ ಅವರೇ ಅವನ ಪಾಲಿನ ಆರಾಧ್ಯರಾಗಿರುವರು.

ಪ್ರಸ್ತುತ ಜಗತ್ತಿನಲ್ಲಿ ದೇವನು ಬಾಹ್ಯ ನೋಟಕ್ಕೆ ಗೋಚರವಾಗದ ಕಾರಣ, ಬಾಹ್ಯ ವಸ್ತುಗಳ ಆರಾಧಕರಾದ ವ್ಯಕ್ತಿಗಳು ಸಾಮಾನ್ಯವಾಗಿ ಬಾಹ್ಯ ನೋಟಕ್ಕೆ ದಕ್ಕುವ ಅಸ್ತಿತ್ವಗಳ ಪೈಕಿ ಯಾವುದಾದರೂ ಅಸ್ತಿತ್ವಕ್ಕೆ ದೇವನಿಗಷ್ಟೇ ಸೀಮಿತವಾಗಬೇಕಾಗಿದ್ದ ಸ್ಥಾನದಲ್ಲಿ ಕೂರಿಸಿಬಿಡುತ್ತಾರೆ. ಸಾಮಾನ್ಯವಾಗಿ ದೇವತ್ವದ ಪಟ್ಟಕ್ಕೇರಿಸಿದ ಇಂತಹ ಅಸ್ತಿತ್ವಗಳು ಯಾವುದಾದರೂ ಜನಾಂಗದ ದೊಡ್ಡ ವ್ಯಕ್ತಿಗಳೆನಿಸಿದ ಸರದಾರರೋ ಅಥವಾ ನಾಯಕರೋ ಅಥವಾ ಸಂತರೋ ಆಗಿರುತ್ತಾರೆ. ಕ್ರಮೇಣ ಇವರು ಜನರ ಆಕರ್ಷಣೆಯ ಕೇಂದ್ರಬಿಂದುವಾಗತೊಡಗುತ್ತಾರೆ. ಆ ಬಳಿಕ ಜನರು ದೇವನಿಗಷ್ಟೇ ತೋರಿಸಬೇಕಾಗಿದ್ದ ನಿಷ್ಠೆಯನ್ನು ಇವರಿಗೆ ತೋರಿಸತೊಡಗುತ್ತಾರೆ. ಈ ರೀತಿ, ದೇವನಿಗೆ ಮಾತ್ರ ಮೀಸಲಾಗಿರುವ ಮನುಷ್ಯನ ಅಂತರಂಗದಲ್ಲಿರುವ ಈ ವಿಶೇಷ ಸ್ಥಾನದಲ್ಲಿ ದೇವೇತರರನ್ನು ತಂದು ಕೂರಿಸಲಾಗುತ್ತಿದೆ.

ಒಂದು ವೇಳೆ ಮನುಷ್ಯನ ಬಳಿ ಬೇರೆಯವರಿಗೆ ನೀಡಬಹುದಾದ ಅಮೂಲ್ಯ ವಸ್ತುವೇನಾದರೂ ಇದ್ದಲ್ಲಿ, ಅದು ಪ್ರೀತಿ ಮಾತ್ರವಾಗಿದೆ. ವಾಸ್ತವ ಹೀಗಿರುವಾಗ, ವ್ಯಕ್ತಿಯೋರ್ವನು ದೇವನ ಅಸ್ತಿತ್ವವನ್ನು ಅರಿತ ಬಳಿಕ ದೇವನ ಸನ್ನಿಧಿಯಲ್ಲಿ ಪ್ರೀತಿ ರಹಿತವಾದ ಯಾವುದಾದರೂ ಕಳಪೆ ದರ್ಜೆಯ ವಸ್ತುವನ್ನು ಹರಕೆಯನ್ನಾಗಿ ನೀಡುವುದು ಎಷ್ಟು ಮಾತ್ರಕ್ಕೂ ಸಮಂಜಸವಾದ ಕ್ರಮವಲ್ಲ. ಪ್ರೀತಿ, ನಿಷ್ಠೆ, ಕೃತಜ್ಞಾ ರಹಿತವಾದ ಯಾವ ವಸ್ತುವೂ ದೇವಸನ್ನಿಧಿಯಲ್ಲಿ ಸ್ವೀಕೃತವಾಗದು. ಒಂದು ವೇಳೆ ಯಾವುದಾದರೂ ವ್ಯಕ್ತಿ ಪ್ರೀತಿ, ನಿಷ್ಠೆ, ಕೃತಜ್ಞಾ ರಹಿತವಾದ ವಸ್ತುವನ್ನು ದೇವನ ಸನ್ನಿಧಿಯಲ್ಲಿ ನೀಡಿದ್ದೇ ಆದಲ್ಲಿ, ಅವನು ದೇವನ ನೈಜ ಘನತೆ ಮತ್ತು ಮಹಿಮೆಯ ಕುರಿತು ಎಳ್ಳಷ್ಟೂ ತಿಳಿದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

# ಬೆಲೆ ಪಾವತಿಸಲಾಗಿಲ್ಲ

ಬೈಬಲ್ ನಲ್ಲಿ "ನಾನು ತಾಳ ನುಡಿಸಿದೆ. ನೀನು ಕುಣಿಯಲಿಲ್ಲ" ಎಂದಿದೆ. ಜಗತ್ತೆಂಬುದು ಪ್ರದರ್ಶನ ನೀಡಬೇಕಾದ ವಿಶಾಲ ಸಭಾಂಗಣವಾಗಿದೆ. ಇದು ಶಕ್ತಿ, ಬುದ್ಧಿವಂತಿಕೆ ಮತ್ತು ಅರ್ಥಪೂರ್ಣ ಉದ್ದೇಶಗಳನ್ನೊಳಗೊಂಡ ತುಂಬು ವಿಸ್ತಾರವಾದ ಕಾರ್ಖಾನೆಯಾಗಿದೆ. ಈ ಜಗತ್ತು ಎಷ್ಟು ಸೌಂದರ್ಯ-ವುಳ್ಳದ್ದೆಂದರೆ ಅದರ ಸೌಂದರ್ಯವನ್ನು ಕೇವಲ ಪದಗಳಲ್ಲಿ ವರ್ಣಿಸುವುದು ಸಾಧ್ಯವಿಲ್ಲದ ಮಾತು.

ಜಗತ್ತು ತನ್ನೆಲ್ಲಾ ರಂಗುರಂಗಿನ ಶೋಭೆಯೊಂದಿಗೆ ದೇವನ ಶಾಶ್ವತ ರಂಗಸ್ಥಳವೂ ಆಗಿದೆ. ದೇವನ ಈ ರಂಗಸ್ಥಳವನ್ನು ಅವನ ಸೃಷ್ಟಿಗಳ ಪೈಕಿ ಕೇವಲ ಮನುಷ್ಯನು ಮಾತ್ರ ಅರಿಯಬಲ್ಲನು. ಈ ವಿಶ್ವದ ಸೌಂದರ್ಯ ಮತ್ತು ಪರಿಪೂರ್ಣತೆಗೆ ಮಾರುಹೋಗಿ ಕುಣಿದು ಕುಪ್ಪಳಿಸುತ್ತಾ ತನಗಾದ ವಿಸ್ಮಯವನ್ನು ವ್ಯಕ್ತಪಡಿಸಬಲ್ಲನು. ಆದರೆ, ಆ ದೇವನು ತನ್ನ ಸ್ವಹಸ್ತದಿಂದ ಸೃಷ್ಟಿಸಿದ ಏಕಮಾತ್ರ ಸೃಷ್ಟಿಯಾಗಿರುವ ಮನುಷ್ಯನು ದೇವನಿರ್ಮಿತ ಈ ಜಗತ್ತಿನ ಸೌಂದರ್ಯಕಲೆಗೆ ಮಾರುಹೋಗಿ, ಕುಣಿದು ತನ್ನ ಹರ್ಷವನ್ನು ವ್ಯಕ್ತಪಡಿಸುವ ಬದಲು, ಅವನ ಅಸ್ತಿತ್ವಕ್ಕೆ ಕಾರಣವಾದ ದೇವಾಸ್ತಿತ್ವವನ್ನೇ ನಿರಾಕರಿಸುತ್ತಾ, ಅವನನ್ನು ಸೃಷ್ಟಿಸಿದ ಆ ದೇವನಿಂದಲೇ ವಿಮುಖನಾಗಿಬಿಟ್ಟಿರುವನು. ಮನುಷ್ಯನು ತಾನು ಮುಖ್ಯವಾಗಿ ಮಾಡಬೇಕಾದ ಕಾರ್ಯವನ್ನು ಹೊರತುಪಡಿಸಿ ಬೇರೆಲ್ಲಾ ಕಾರ್ಯಗಳನ್ನು ಬಹಳ ಮುತುವರ್ಜಿಯಿಂದ ನಿರ್ವಹಿಸುತ್ತಿರುತ್ತಾನೆ.

ದೇವನ ಬೇರೆಲ್ಲಾ ಸೃಷ್ಟಿಗಳ ಪೈಕಿ, "ದೇವನು ನಮ್ಮಿಂದ ಬಯಸುವುದೇನು?" ಎಂಬುದರ ಕುರಿತು ಪ್ರಜ್ಞಾಪೂರ್ವಕ ಭಾವನೆಗಳನ್ನು ವ್ಯಕ್ತಪಡಿಸಬೇಕಾದವನು ಕೇವಲ ಮನುಷ್ಯನು ಮಾತ್ರನಾಗಿರುವನು. "ದೇವನ ತಾಳಕ್ಕೆ ತಕ್ಕಂತೆ ಕುಣಿಯಬೇಕಾಗಿರುವುದು" (ಮಾನವನ ಸೃಷ್ಟಿಯ ಹಿಂದಿರುವ ಸದುದ್ದೇಶವನ್ನು ಪೂರೈಸಬೇಕಾಗಿರುವುದು)

ಮಾನವನ ಪಾಲಿನ ಜವಾಬ್ದಾರಿಯಾಗಿದೆ. ಜಗತ್ತಿನಲ್ಲಿ ದೇವನ ಅದ್ಭುತ ಚಮತ್ಕಾರಗಳನ್ನು ನೋಡುವಾಗ ಅವನೊಳಗೆ ಭಾವಪರವಶತೆಯ ಸ್ಥಿತಿ ಉಂಟಾಗುವಂತಾಗಿ, ತನಗರಿವಿಲ್ಲದಂತೆ ಅವನು ಜೋರಾಗಿ, "فَتَبَارَكَ اللَّهُ أَحْسَنُ الْخَالِقِينَ" (ಮಹಾನ್ ಸಮೃದ್ಧಿದಾಯಕನಾದ ದೇವನು ಅತ್ಯದ್ಭುತ ಶಿಲ್ಪಿಯಾಗಿರುವನು.") ಎಂದು ಉದ್ಗರಿಸುವಂತಿರಬೇಕು. ಸೃಷ್ಟಿಯ ಕುರಿತು ಮನುಷ್ಯನ ಅವಲೋಕನ, ಅದನ್ನು ಸೃಷ್ಟಿಸಿದ ದೇವನ ಮಹಾನತೆಯ ಕುರಿತ ಉದ್ಘೋಷ; ಇವುಗಳೇ ಮನುಷ್ಯನನ್ನು ಅತ್ಯುನ್ನತ ಸ್ಥಾನಕ್ಕೇರಿಸಬಲ್ಲ ಸಾಧನಗಳಾಗಿವೆ. ಒಂದು ವೇಳೆ ಅವನು ಹೀಗೆ ಮಾಡದೇ ಹೋದರೆ ತನ್ನ ಅಸ್ತಿತ್ವವನ್ನು ಖುದ್ದು ತಾನೇ ನಿರ್ಮೂಲ ಮಾಡಿಕೊಂಡಂತೆ ಹಾಗೂ ತನ್ನ ಬದುಕಿನ ಉದ್ದೇಶವನ್ನು ಅರ್ಥಹೀನವಾಗಿಸಿಕೊಂಡಂತಾಗುವುದು.

ದೇವನೊಂದು ಬೃಹತ್ ಸಾರ್ವತ್ರಿಕ ರಂಗಮಂದಿರವನ್ನು ನಿರ್ಮಿಸಿ ಅದರಲ್ಲವನು ತನ್ನ ಸಂಪೂರ್ಣ ಶೋಭೆಯೊಂದಿಗೆ ಪ್ರಕಟಗೊಳಿಸಿಕೊಂಡನು. ಇದನ್ನೆಲ್ಲಾ ಮಾಡಿದ್ದು ಇದೇ ಬುದ್ಧಿಜೀವಿಯಾದ ಮಾನವನಿಗಾಗಿಯೇ ಆಗಿತ್ತು. ಇದೆಲ್ಲವನ್ನು ಯಾರಿಗಾಗಿ ಮಾಡಲಾಗಿದೆಯೋ ಆ ಬುದ್ಧಿಜೀವಿ ಎನಿಸಿಕೊಂಡವನೇ ಖುದ್ದು ಅವುಗಳತ್ತ ದೃಷ್ಟಿ ಹರಿಸದೆ, ಕಣ್ಣುಮುಚ್ಚಿಕೊಂಡು ನಡೆಯುತ್ತಿದ್ದರೆ, ಅದನ್ನು ಮಾಡಿದ ಮಹಾನ್ ಅಸ್ತಿತ್ವವನ್ನು ಪ್ರಶಂಸಿಸದೆ ಹೋದರೆ ಅದು ಎಷ್ಟೊಂದು ದೊಡ್ಡ ಮಟ್ಟದ ಅಪರಾಧವಲ್ಲವೇ?. ಇಂತಹ ಅಪರಾಧಕ್ಕಾಗಿ ಬುದ್ಧಿಶಕ್ತಿ ನೀಡಲ್ಪಟ್ಟ ಆ ವ್ಯಕ್ತಿಗೆ ಎಷ್ಟು ದೊಡ್ಡ ಶಿಕ್ಷೆಯನ್ನು ನೀಡಿದರೂ ಅದು ಕಡಿಮೆಯೇ ಸರಿ.

ದೇವ ನಿರ್ಮಿತ ಈ ಜಗತ್ತು ಅತ್ಯಂತ ಸುಂದರವಾಗಿದೆ. ಇಲ್ಲಿ, ಎಲ್ಲಿ ನೋಡಿದರೂ ಸ್ವರ್ಗೀಯ ವಾತವರಣವೇ ತುಂಬಿಕೊಂಡಿದೆ. ಇದು ಆ ದೇವನ ಸೌಂದರ್ಯ ಮತ್ತು ಅವನ ಪರಿಪೂರ್ಣತೆಗೆ ಹಿಡಿದ ಕೈಗನ್ನಡಿಯಂತಿದೆ. ಆದರೆ ಮಾನವನಿಗೆ ಈ ಜಗತ್ತಿನ ಸೌಂದರ್ಯವನ್ನು ಆಸ್ವಾದಿಸಲಾಗುತ್ತಿಲ್ಲವಷ್ಟೇ!. ನರಕದ ಕರಿನೆರಳು ಅವನ ಮೇಲೆ ಆವರಿಸುವುದರಿಂದ ಅವನಿಗ್ಯಾವುದೂ ಗೋಚರಿಸುತ್ತಿಲ್ಲ.

ಜಗತ್ತನ್ನು ಅದರ ಸ್ವರ್ಗೀಯ ರೂಪದದಲ್ಲಿ ನೋಡುವುದಕ್ಕೆ ಮನಷ್ಯನು ತನ್ನ ಭ್ರಮೆಯಿಂದ ಮೊದಲು ಹೊರಬರಬೇಕಾದೀತು. ಹಾಗಾದಾಗ ಮಾತ್ರ ಮಾನವನ ನಿರ್ಮಿತ ಭ್ರಮಾಜಗತ್ತಿನಿಂದ ಹೊರಬಂದು ದೇವನಿರ್ಮಿತ ಜಗತ್ತಿನೆಡೆಗೆ ತನ್ನ ನೋಟವನ್ನು ಹರಿಸಲು ಅವನಿಗೆ ಸಾಧ್ಯವಾದೀತು. ಮಾನವನು ತನ್ನ ಭ್ರಮಾಜಗತ್ತಿನಿಂದ ಹೊರಬರಲೇ ತಯಾರಿಲ್ಲವೆಂದಾದರೆ, ದೇವನ ಜಗತ್ತನ್ನು ವೀಕ್ಷಿಸುವುದೂ ಅವನಿಂದಾಗದ ಮಾತು.

ಜಗತ್ತಿನ ಕುರಿತು ಅವಲೋಕಿಸುವವನೇ ನಿಜವಾದ ಅರ್ಥದಲ್ಲಿ ಬುದ್ಧಿಜೀವಿ ಎನಿಸುವನು. ಅವನು ತನ್ನ ಅವಲೋಕನಾತ್ಮಕ ನೋಟದಿಂದ ಈ ಜಗತ್ತನ್ನು ನೋಡಿದ್ದೇ ಆದಲ್ಲಿ, ಅವನಿಗ ಜಗದೊಡೆಯನಾದ ದೇವನ ಪ್ರಜ್ವಲಿಸುತ್ತಿರುವ ಶೋಭೆಯು ಕಾಣಿಸತೊಡಗುವುದು. ಯಾವುದಾದರೂ ವ್ಯಕ್ತಿಯು ಈ ರೀತಿಯ ವಿಶಿಷ್ಟ ಆಧ್ಯಾತ್ಮಿಕ ಅನುಭವಕ್ಕೊಳಗಾದಾಗ, ಅವನಿಗದನ್ನು ಬರಿಯ ಪದಗಳಲ್ಲಿ ವಿವರಿಸಲಾಗದು. ಅವನ ನಾಲಗೆಯು ಸದಾ ದೇವನ ಸ್ತುತಿ–ಪ್ರಶಂಸೆಗಳಲ್ಲೇ ತಲ್ಲೀನವಾಗತೊಡಗುವುದು. ಎಲ್ಲಿಯ ತನಕವೆಂದರೆ ಅವನು ದೇವಪ್ರಕಾಶದಡಿಯಲ್ಲಿ ಮಿಂದೇಳತೊಡಗುತ್ತಾನೆ. ಆ ಅದ್ಭುತ ಅನುಭವವನ್ನು ವಿವರಿಸಲು ಅವನಿಗೆ ಪದಗಳು ನಿಲುಕಲಾರವು. ಅವನ ಅಂತರಂಗದ ಆಳವಾದ ಭಾವನೆಗಳಾಗ ಅಶ್ರುಧಾರೆಯ ಮೂಲಕ ಸ್ಫುರಿಸತೊಡಗುವವು. ದೇವನ ದೇವತ್ವವನ್ನು ಅವನು ಸರಿಯಾಗಿ ಅರಿತದ್ದೇ ಆದಲ್ಲಿ, ಅವನು ತನ್ನ ಸಂಪೂರ್ಣ ಅಸ್ತಿತ್ವವನ್ನೇ ಮರೆತುಬಿಡುವನು.

ಮಾನವನು ಈ ಲೌಕಿಕ ಪ್ರಪಂಚದ ಸುತ್ತು ಮತ್ತು ಖುದ್ದು ತನ್ನೊಳಗೆ ಎಷ್ಟು ಆಳವಾಗಿ ಮುಳುಗಿರುವನೆಂದರೆ, ಅವನಿಗೆ ದೇವನ ದೇವತ್ವದ ಕುರಿತು ಯಾವುದೇ ಅರಿವಿಲ್ಲ. ಅವನು ತನ್ನ ರಚನೆಗಳೊಳಗೆ ಎಷ್ಟು ಮಗ್ನನಾಗಿದ್ದಾನೆಂದರೆ ಅವನಿಗೆ ದೇವನ ರಚನೆಯು ಕಣ್ಣಿಗೆ ಕಾಣಿಸುತ್ತಿಲ್ಲ. ಅವನು ತನ್ನ ಸ್ವಂತ ಅಭಿವ್ಯಕ್ತಿಗಳಲ್ಲಿ ಎಷ್ಟು

ಕಳೆದುಹೋಗಿದ್ದಾನೆಂದರೆ, ಸೃಷ್ಟಿಗಳಲ್ಲಿ ಪ್ರಕಾಶಿಸುತ್ತಿರುವ ದೇವನ ಶೋಭೆಯು ಅವನಿಗೆ ತೋರುತ್ತಿಲ್ಲ. ಯಾವ ವ್ಯಕ್ತಿಯು ಇಹಲೋಕದಲ್ಲಿ ಅವನ ಸೃಷ್ಟಿಗಳ ಮುಖಾಂತರ ದೇವನನ್ನು ನೋಡಲು, ಅವನನ್ನು ಅರಿಯಲು ಪ್ರಯತ್ನಿಸುವುದಿಲ್ಲವೋ, ಅಂತಹವನಿಗೆ ಪರಲೋಕದಲ್ಲಿ ದೇವನ ದರ್ಶನ ಲಭಿಸಲು ಹೇಗೆ ತಾನೇ ಸಾಧ್ಯ?. ಇದಕ್ಕಿಂತ ದೊಡ್ಡ ನಷ್ಟ ಬೇರಾನಾದರೂ ಇರಲು ಸಾಧ್ಯವೇ?.

# ಸಮುದಾಯದ ನಾಯಕ

ಅಲಿಗಢ ಮುಸ್ಲಿಂ ಯುನಿವರ್ಸಿಟಿಯ ಮುಖ್ಯಸ್ಥರ ಕಚೇರಿಗೆ ಬಿ.ಎಸ್ಸಿ. ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಯೊಬ್ಬ ಪ್ರವೇಶಿಸುತ್ತಲೇ ಹೀಗೆ ಹೇಳತೊಡಗಿದ: "ಇದು ಮುಸ್ಲಿಂ ಯುನಿವರ್ಸಿಟಿಯಾಗಿದೆ. ಇಲ್ಲಿ ತಾವು ಧಾರ್ಮಿಕ ವಿಷಯಗಳ ಮುಖ್ಯಸ್ಥರಿದ್ದೀರಿ. ಹೀಗಾಗಿ ನಾನು ಪ್ರಮುಖ ವಿಷಯವೊಂದನ್ನು ನಿಮ್ಮ ಅರಿವಿಗೆ ತರಲು ಬಯಸುತ್ತಿದ್ದೇನೆ. ಇಲ್ಲಿನ ಆಝಾದ್ ಗ್ರಂಥಾಲಯದಲ್ಲಿ ಆಂಗ್ಲ ಭಾಷೆಯ ಪುಸ್ತಕವೊಂದಿದೆ. ಅದರಲ್ಲಿ ಪ್ರವಾದಿವರ್ಯರ ಚಿತ್ರವಿದೆ. ನೀವು ಈ ತಕ್ಷಣ ಆ ಪುಸ್ತಕವನ್ನು ಅಲ್ಲಿಂದ ತೆರವುಗೊಳಸಬೇಕಾದೀತು. ಇಲ್ಲವಾದಲ್ಲಿ"

ಅದಕ್ಕೆ ಪ್ರತ್ಯುತ್ತರವಾಗಿ ಧಾರ್ಮಿಕ ವಿಷಯಗಳ ಮುಖ್ಯಸ್ಥರು, "ಆಝಾದ್ ಲೈಬ್ರರಿ ಒಂದು ಬೃಹತ್ ಪುಸ್ತಕಗಳ ಸಂಗ್ರಹವುಳ್ಳ ಗ್ರಂಥಾಲಯವಾಗಿದೆ ಎಂಬುದು ನಿಮಗೆ ಗೊತ್ತೇ ಇದೆ. ಇಲ್ಲಿ ಜಗತ್ತಿನ ವಿವಿಧ ಸಂಸ್ಥೆಗಳಿಂದ ಪುಸ್ತಕಗಳು ಬರುತ್ತಿರುತ್ತವೆ. ಹೀಗೆ ಬರುವ ಪುಸ್ತಕಗಳ ಪೈಕಿ ಕೆಲವುದರಲ್ಲಿ ಅಲ್ಲಾಹನನ್ನು ತಮಾಷೆಗೈದ ಪುಸ್ತಕಗಳೂ ಇರಬಹುದು. ಅಂತಹ ಎಲ್ಲ ಪುಸ್ತಕಗಳನ್ನು ನೋಡಿ ನೀವು ಇದೇ ರೀತಿ ಕೋಪೋದ್ರಿಕ್ತರಾಗಿರುವರೇನು?. ಎಂದು ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸುತ್ತಾ ಆ ಯುವಕನು ಹೇಳಿದ ಮಾತು ಹೀಗಿತ್ತು. "ಸರ್, ಅಲ್ಲಾಹನಂತೂ ಪ್ರತಿಯೋರ್ವರಿಗೂ ಸೇರಿದವನು. ಪ್ರವಾದಿವರ್ಯರು (ಸ.ಅ.) ಕೇವಲ ನಮಗೆ ಮಾತ್ರ ಸೇರಿದವರಲ್ಲವೇನು?" (ಇಹ್ತಿಸಾಬ್ ಅಲಿಗಢ್ 15 ಮೇ, 1984)

ಆ ಮುಸ್ಲಿಮ್ ವಿದ್ಯಾರ್ಥಿಯ ದೃಷ್ಟಿಯಲ್ಲಿ, ದೇವನು ಸಕಲರಿಗೂ ಸೇರಿದವನು. ಪ್ರವಾದಿವರ್ಯರು ಮಾತ್ರ ಕೇವಲ ಮುಸ್ಲಿಮರ ಪಾಲಿನ ಆಸ್ತಿ ಎಂದು ತೋರಿದ್ದೇಕೆ?. ಈ ಮುಸ್ಲಿಮ್ ವಿದ್ಯಾರ್ಥಿ ಮತ್ತು ಇಂತಹ ಅನೇಕರು

ಪ್ರವಾದಿವರ್ಯರನ್ನು ಕೇವಲ ಮುಸ್ಲಿಂ ಸಮುದಾಯದಕ್ಕೇ ಮಾತ್ರ ಸೀಮಿತವಾದ ಹೀರೋ (Hero) ಎಂದು ಭಾವಿಸಿರುವುದೇ ಇದರ ಹಿಂದಿರುವ ಪ್ರಮುಖ ಕಾರಣವಾಗಿದೆ. ಪ್ರತಿಯೊಂದು ಕೋಮಿಗೂ ತಮ್ಮದೇ ಆದ "ಹೀರೋ" (Hero)–ಗಳಿರುತ್ತಾರೆ. ಬೇರೆ ಕೋಮುಗಳೆದುರು ಇಂತಹ ಹೀರೋಗಳನ್ನು ವೈಭವಕರೀಸುವ ಮೂಲಕ, "ಈ ಹೀರೋಗಳು ನಮ್ಮ ಪಾಲಿನ ಹೆಮ್ಮೆ" ಎಂದು ಅವರು ಪ್ರತಿಬಿಂಬಿಸಿಕೊಳ್ಳುತ್ತಾರೆ. ಹಾಗಾಗಿಯೇ, "ಅಲ್ಲಾಹನೊಂದಿಗೆ ಸಹಭಾಗಿತ್ವ ಮಾಡಿದರೆ ನಮಗೇನೂ ಚಿಂತಿಲ್ಲ. ಆದರೆ, ಕೋಮಿನ ಹೀರೋಗಳಿಗೆ ಮಾತ್ರ ಅಪಮಾನವಾಗಬಾರದು" ಎಂಬುದು ಕೆಲವರ ಬಲವಾದ ನಿಲುವಾಗಿದೆ. ಈ ಕೋಮು ನಿಲುವಿನಿಂದಾಗಿಯೇ ಆ ಮುಸ್ಲಿಮ್ ವಿದ್ಯಾರ್ಥಿಗೆ, ದೇವನ ಕುರಿತ ವ್ಯಂಗ್ಯವು ಕೋಪೋದ್ರಿಕ್ತಗೊಳಿಸಲಿಲ್ಲ. ಆದರೆ, ಪ್ರವಾದಿವರ್ಯರ ಕುರಿತ ವ್ಯಂಗ್ಯದಿಂದ ಆತ ನಖಶಿಖಾಂತ ಕೋಪಗೊಂಡನು.

ಮೇಲಿನ ಪ್ರಸ್ತಾಪಿತ ಘಟನೆಯು ಈಗಿನ ಮುಸ್ಲಿಮರ ನಿಲುವನ್ನು ಪ್ರತಿನಿಧಿಸುವಂತಿದೆ. ಪ್ರಸಕ್ತ ಕಾಲದ ಮುಸ್ಲಿಮರು, "ಜಷ್ನೆ ಖುದಾವಂದಿ" (ಜಗತ್ತಿನೊಡೆಯನಾದ ದೇವನ ಕುರಿತ ಸಂಭ್ರಮ, ಸಡಗರದ ಆಚರಣೆ) ಯನ್ನು ಆಚರಿಸುವುದಿಲ್ಲ. ಆದರೆ, "ಜಷ್ನೆ ಮುಹಮ್ಮದಿ" (ಪ್ರವಾದಿವರ್ಯರ ಕುರಿತ ಸಂಭ್ರಮಾಚರಣೆ) ಯನ್ನು ಬಹಳ ಹರ್ಷ ಮತ್ತು ಅದ್ದೂರಿಯೊಂದಿಗೆ ಆಚರಿಸುತ್ತಾರೆ. ಈ ಮೇಲೆ ಹೇಳಿದ, ತಮ್ಮ ಕೋಮಿನ ಮನಸ್ಥಿತಿಯ ಕಾರಣದಿಂದಲೇ ಇಂತಹವರು ದೇವನ ಕುರಿತೇನೂ ಹೆಚ್ಚಿನ ಆಸಕ್ತಿ ಹೊಂದಿರುವುದಿಲ್ಲ. ಏಕೆಂದರೆ, ಇವರಿಗೆ ದೇವನಲ್ಲಿ ಕೇವಲ ತಮ್ಮ ಸಮುದಾಯವು ಮಾತ್ರ ಹೆಮ್ಮೆ ಪಡುವಂತಹ ಸಾಮುದಾಯಿಕ ಶೋಭಿತ ವಸ್ತುಗಳೇನೂ ದೊರೆಯುವುದಿಲ್ಲ. ಆದರೆ, "ಮುಹಮ್ಮದ್" (ಪ್ರವಾದಿವರ್ಯರು) ಇತಿಹಾಸದ ಪುಟಗಳಲ್ಲಿ ಇವರ ಪಾಲಿನ "ಹೀರೋ" ಮತ್ತು

ಇವರ ಪಾಲಿನ "ಹೆಮ್ಮೆ" ಎಂದು ನಮೂದಿಯಾಗಿರುವುದರಿಂದ, ಇತರ ಸಮುದಾಯಗಳ ನಡುವೆ ಅವರ ಹೆಸರಿನಲ್ಲಿ ಅದ್ದೂರಿಯಾಗಿ ಸಂಭ್ರಮಾಚರಣೆ ಮಾಡುವುದರ ಮೂಲಕ ಗರ್ವ ಪಡುತ್ತಾ, ಹರ್ಷವನ್ನಾಚರಿಸುತ್ತಾ ತಮ್ಮೊಳಗಿನ ಭಾವನೆಗಳನ್ನು ತಣಿಸಲಿಚ್ಛಿಸುತ್ತಾರೆ.

ಇಂದು ಸಮಾಜದ ಎಲ್ಲೆಡೆಯೂ ನಾಸ್ತಿಕತೆಯು ಹರಿದಾಡುತ್ತಿದೆ. ಆದರೆ, ಇದಕ್ಕುತ್ತರವಾಗಿ ದೇವನ ಏಕದೇವತ್ವದ ಸಂದೇಶವನ್ನು ಜನರ ನಡುವೆ ಸಾರುವ ಕುರಿತು ಮುಸ್ಲಿಮರಲ್ಲಿ ಯಾವುದೇ ರೀತಿಯ ಹುಮ್ಮಸ್ಸಾಗಲಿ, ಉತ್ಸಾಹವಾಗಲೀ ಕಾಣುತ್ತಿಲ್ಲ. ಆದರೆ ಪ್ರವಾದಿವರ್ಯರ ಕುರಿತು ಯಾರೋ ಬಿಡಿಸಿದ ವ್ಯಂಗ್ಯ ಚಿತ್ರವು ಅವರನ್ನು ತಕ್ಷಣ ಕೋಪೋದ್ರಿಕ್ತರನ್ನಾಗಿ ಮಾಡುತ್ತದೆ. ಇದು ದೇವಾರಾಧನೆಯಂತೂ ಅಲ್ಲ, ಬದಲಿಗಿದು, ನಿಸ್ಸಂಶಯವಾಗಿಯೂ "ವ್ಯಕ್ತಿಪೂಜೆ" ಯಾಗಿದೆ.

# ನೈಸರ್ಗಿಕ ಅನ್ವೇಷಣೆ

ಅಧಿಕಾರ ಮತ್ತು ಸಂಪತ್ತು ಹೊಂದಿರುವ ವ್ಯಕ್ತಿಯ ಸುತ್ತಮುತ್ತೆಲ್ಲವೂ ಐಷಾರಾಮಿ ವಸ್ತುಗಳೇ ತುಂಬಿಕೊಂಡಿರುತ್ತವೆ. ಈ ಕಾರಣದಿಂದ ಹೊರಗಿನ ವ್ಯಕ್ತಿಗಳಿಗೆ ಅವನು ಭಿನ್ನ ವ್ಯಕ್ತಿಯಾಗಿ ಕಾಣುತ್ತಾನಾದರೂ, ಅವನ ಪರಿಸ್ಥಿತಿಯು ಇದಕ್ಕೆ ತದ್ವಿರುದ್ಧವಾಗಿರುತ್ತದೆ. ಆ ವ್ಯಕ್ತಿಯು ತನ್ನ ಏಕಾಂತದಲ್ಲಿದ್ದಾಗ; ಇತರ ವ್ಯಕ್ತಿಗಳಂತೆ ತಾನೂ ಒಬ್ಬ ಬಲಹೀನ ಮನುಷ್ಯ ಎಂಬುದನ್ನು ಮನಗಾಣುತ್ತಾನೆ.

ಅಮೆರಿಕ ಪ್ರಖ್ಯಾತ ಕಾರು ತಯಾರಕ ಕಂಪೆನಿಯಾದ ಫೋರ್ಡ್ ನ ಮಾಲಕರಾದ 34 ವರ್ಷದ (1984ರಲ್ಲಿ) ಮಿಸ್ಟರ್. ಆಲ್ಫ್ರೆಡ್ ಫೋರ್ಡ್ ಆಗರ್ಭ ಶ್ರೀಮಂತರು. ಆದರೆ ಅವರ ಅಂತರಂಗ ಇವೆಲ್ಲದರ ಹೊರತಾದ ವಿಶಿಷ್ಟ ವಸ್ತುವೊಂದನ್ನು ಅರಸುತಲಿತ್ತು. ಇದೇ ಸಂದರ್ಭದಲ್ಲಿ ಅವರಿಗೆ ಅಮೆರಿಕ ಮತ್ತು ಅದರ ಸುತ್ತಮುತ್ತಲಿನ ಪಾಶ್ಚಿಮಾತ್ಯ ದೇಶಗಳ ತನ್ನ ಕೇಂದ್ರಗಳನ್ನು ಹೊಂದಿದ್ದ "ಹರೇ ಕೃಷ್ಣ" ಮೂವ್ ಮೆಂಟ್ನ ಪರಿಚಯವಾಯಿತು. ತನಗೆ ಬೇಕಾದ ಆತ್ಮನೆಮ್ಮದಿಯು ಸಲಕರಣೆಯು ಇಲ್ಲಿ ದೊರೆಕಬಹುದೆಂದೆನಿಸಿ ಅವರು ಆ ಮೂವ್ ಮೆಂಟ್ ನಲ್ಲಿ ಭಾಗಿಯಾದರು. ಮಿಸ್ಟರ್ ಫೋರ್ಡ್ 1984 ರಲ್ಲಿ ಹರೇ ಕೃಷ್ಣ ಮೂವ್ ಮೆಂಟ್ ನ ಓರ್ವ ಹಿಂದೂ ಕಾರ್ಯಕರ್ತೆಯಾದ ಶರ್ಮಿಳಾ ಭಟ್ಟಾಚಾರ್ಯ (ಆಗ 39 ವರ್ಷ) ಅವರೊಂದಿಗೆ ವಿವಾಹವಾದರು.  ಈ ವಿವಾಹ ಸಮಾರಂಭವು ನಡೆದದ್ದು ಕೂಡ ಹರೇಕೃಷ್ಣ ಮೂವ್ ಮೆಂಟ್ನ ಆಸ್ಟ್ರೇಲಿಯಾದ ಕೇಂದ್ರವೊಂದರಲ್ಲಿ. ಇದರ ಬಳಿಕ ಮಿ. ಫೋರ್ಡ್, ಸಾಧುಗಳಂತೆ ಹೊಲಿಗೆರಹಿತ ತೀರಾ ಸಾಧಾರಣ ಬಟ್ಟೆಗಳನ್ನು ತೊಟ್ಟ ಛಾಯಾಚಿತ್ರವೊಂದು ಟೈಮ್ಸ್ ಆಫ್ ಇಂಡಿಯಾ (1985ರ 1ನೇ ಜನವರಿ) ದಲ್ಲಿ ಪ್ರಕಟವಾಗುತ್ತದೆ. ಈ ಕುರಿತು ವರದಿಗಾರರು ನೀಡಿದ ವರದಿಯು ತುಣುಕೊಂದು ಹೀಗಿದೆ:

Mr. Alfred Ford said he was only a Ford by name. "I'm not a car. I'm a spritiual soul, just like anyone else," he said.

"ಹೆಸರಿಗಷ್ಟೇ ನಾನು ಫೋರ್ಡ್ ಆಗಿದ್ದೇನೆ. ನಾನು ಯಾಂತ್ರಿಕ ಮೋಟಾರು ಕಾರಲ್ಲ. ನಾನೂ ಕೂಡ ಇತರರಂತಿರುವ ಒಬ್ಬ ಮನುಷ್ಯನೇ ಆಗಿರುವೆನು. ನನ್ನೊಳಗೂ ಇತರರಲ್ಲಿರುವಂತೆ ಆತ್ಮವೊಂದಿದೆ." ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು.

(ಹಿಂದೂಸ್ತಾನ್ ಟೈಮ್ಸ್ 28 ಡಿಸೆಂಬರ್, 1984) ಇದರಿಂದ ವ್ಯಕ್ತವಾಗುವುದೇನೆಂದರೆ, ಒಬ್ಬ ವ್ಯಕ್ತಿಯ ಬಳಿ ಅದೆಷ್ಟೇ ದೊಡ್ಡ ಪ್ರಮಾಣದಲ್ಲಿ ಅಧಿಕಾರ ಮತ್ತು ಭೌತಿಕ ಸಂಪತ್ತು ಒಟ್ಟುಗೂಡಿದರೂ, ಅದು ಅವನ ಆಂತರಿಕ ಅಸ್ತಿತ್ವದ ಭಾಗವಾಗಲು ಎಂದಿಗೂ ಸಾಧ್ಯವಿಲ್ಲ. ಐಷಾರಾಮಿ ಸಾಮಾನು, ಸಲಕರಣೆಗಳ ಸಂಗ್ರಹಗಳ ಮಧ್ಯೆ ಅಂತಹ ವ್ಯಕ್ತಿಯು ತೀವ್ರ ಏಕಾಂಗಿತನ ಮತ್ತು ಅಸಹಾಯಕ ಸ್ಥಿತಿಯನ್ನು ಅನುಭವಿಸುತ್ತಿರುತ್ತಾನೆ. ಆದಾಗ್ಯೂ, ಅವನು ತನ್ನ ಅಂತರಾಳದ ಈ ಏಕಾಂತ ಮತ್ತು ಅಸಹಾಯಕ ಭಾವವನ್ನು ನೀಗಿಸಬಲ್ಲ ಹಾಗೂ ತನ್ನ ಆಂತರಿಕ ಅಸ್ತಿತ್ವದ ಭಾಗವಾಗಬಲ್ಲ ವಿಶಿಷ್ಟ ವಸ್ತುವಿನ ಹುಡುಕಾಟವನ್ನು ಮುಂದುವರಿಸುತ್ತಿರುತ್ತಾನೆ. ವಾಸ್ತವದಲ್ಲಿ ಪರಿಪೂರ್ಣನೂ ಅತ್ಯುನ್ನತನೂ, ಮಾನವರ ಸೃಷ್ಟಿಕರ್ತನೂ ಮತ್ತು ಮನುಕುಲದ ನೈಜ ಮಾಲಕನೂ ಆದ ಆ ಏಕಮಾತ್ರ ದೇವನು ಈ ಹುಡುಕಾಟಕ್ಕೆ ಸಂಪೂರ್ಣ ವಿರಾಮವನ್ನು ಕಂಡುಕೊಳ್ಳಬಲ್ಲ ಸರಿಯಾದ ಉತ್ತರವಾಗಿದ್ದಾನೆ. ಆದರೆ ಈ ನೈಜದೇವನನ್ನು ಪಡೆಯಲು ಜನರು ವಿಫಲರಾದಾಗ, ದೇವೇತರರನ್ನು ಆ ಸ್ಥಾನದಲ್ಲಿ ಕಲ್ಪಿಸಿಕೊಂಡು ಅವರೊಂದಿಗೇ ತಲ್ಲೀನರಾಗಿ–ಬಿಡುವರು. ಹೀಗೆ ವಾಸ್ತವವನ್ನು ಪಡೆಯಲು ವಿಫಲರಾದ ಜನರು, ಕೃತಕವನ್ನೇ ವಾಸ್ತವದ ಸ್ಥಾನದಲ್ಲಿಟ್ಟು ತೃಪ್ತಿಹೊಂದಲು ಪ್ರಯತ್ನಿಸುವರು.

# ಹೇ ಮಾನವ

ನೀವು ಜನರನ್ನು ನೋಡಿದರೆ, ಒಂದೋ ರಾಷ್ಟ್ರದ ಸಮಸ್ಯೆಗಳ ಕುರಿತು ಹರಟೆ ಹೊಡೆಯುತ್ತಾ, ಇಲ್ಲವೋ ಧರ್ಮದ ಬಾಹ್ಯ ಅಂಶಗಳ ಕುರಿತು ಚರ್ಚಿಸುತ್ತಾ ಕೂರುವುದನ್ನು ಕಾಣಬಲ್ಲಿರಿ. ಆದರೆ, ಧರ್ಮದ ಅರ್ಥಪೂರ್ಣ ಅಂಶಗಳ ಕುರಿತು ಮಾತನಾಡುವ ಯಾರೊಬ್ಬರೂ ಕಣ್ಣಿಗೆ ಕಾಣಿಸುವುದಿಲ್ಲ. ಬಾಹ್ಯ ನೋಟಕ್ಕಷ್ಟೇ ಕಾಣಸಿಗುವ ವಿಷಯಗಳ ಕುರಿತಷ್ಟೇ ಆಸಕ್ತಿ ಹೊಂದುವ ಮನುಷ್ಯನ ಬಲಹೀನತೆಯೇ ಇದಕ್ಕೆ ಪ್ರಮುಖ ಕಾರಣವಿರಬಹುದು. ಯಾವ ವಸ್ತುವು ಬಾಹ್ಯನೋಟಕ್ಕೆ ಗೋಚರಿಸುವುದಿಲ್ಲವೋ ಅದರೆಡೆಗೆ ತನ್ನ ಆಸಕ್ತಿಯನ್ನು ಕೇಂದ್ರಿಕರಿಸುವುದು ಅವನ ಪಾಲಿಗೆ ಬಹಳ ಕಠಿಣ ಕಾರ್ಯವಾಗಿದೆ. ಈ ವಿಷಯದಲ್ಲಿ ಮಾನವನ ಸ್ಥಿತಿ ಹಿಂದೇ ಹೇಗಿತ್ತೋ, ಇಂದೂ ಹಾಗೇ ಇದೆ.

ಮನುಷ್ಯನು ತನ್ನ ಬಾಹ್ಯನೋಟಕ್ಕೆ ಗೋಚರಿವಾಗಬಲ್ಲ ವಸ್ತುಗಳನ್ನಷ್ಟೇ ತನ್ನ ಆರಾಧ್ಯಗಳನ್ನಾಗಿ ಮಾಡಿಕೊಳ್ಳುವನು. ಯಾವುದು ತನ್ನ ಬಾಹ್ಯನೋಟಕ್ಕೆ ಗೋಚರವಾಗುವುದಿಲ್ಲವೋ, ಅದನ್ನು ತನ್ನ ಪಾಲಿನ ಆರಾಧ್ಯನಾಗಿಸುವುದುದಾರೂ ಹೇಗೆ ಎಂಬುದೇ ಆತನಿಗೆ ಅರ್ಥವಾಗುವುದಿಲ್ಲ. ಅವನ ಕಣ್ಣಿಗೆ ತೋರುವ ಕಾರ್ಯಗಳಲ್ಲಿ ಅವನು ತನ್ನನ್ನು ತಾನು ಬಹಳ ಸುಲಭವಾಗಿ ತೊಡಗಿಸಿಕೊಳ್ಳಬಲ್ಲನು. ಯಾವುದು ಹೊರನೋಟಕ್ಕೆ ಕಾಣಿಸುವುದಿಲ್ಲವೋ ಅದರಲ್ಲಿ ತೊಡಗಿಸಿಕೊಳ್ಳುವ ಬಗೆ ಹೇಗೆ ಎಂಬುದು ಅವನಿಗೆ ತಿಳಿದಿಲ್ಲ. ಯಾವ ವಸ್ತುವು ಅವನೆದುರಿದೆಯೋ ಅದನ್ನವನು ಚೆನ್ನಾಗಿ ಗ್ರಹಿಸಬಲ್ಲನು, ಅದರ ಪ್ರಾಮುಖ್ಯತೆಯನ್ನು ಚೆನ್ನಾಗಿ ಅರಿಯಬಲ್ಲನು. ಆದರೆ ಯಾವ ವಸ್ತುವು ಅವನ ಗ್ರಹಿಕೆಗೆ ಬರುವುದಿಲ್ಲವೋ, ಅದರ ಕುರಿತು ತನಗೇನೂ ತಿಳಿದೇ ಇಲ್ಲವೆಂಬಂತೆ ಅದನ್ನವನು ನಿರ್ಲಕ್ಷಿಸಿಬಿಡುವನು.

ಇದು **"ಬಾಹ್ಯಾರಾಧನೆ"** ಎಂದು ಕರೆಯಲ್ಪಡುವುದು. ಈ ಬಾಹ್ಯಾರಾಧನೆಯೇ ಮನುಷ್ಯನ ಅತ್ಯಂತ ದೊಡ್ಡ ಬಲಹೀನತೆಯಾಗಿರುವುದು. ಈ ಬಲಹೀನತೆಯ ಅಂತಿಮ ಅಭಿವ್ಯಕ್ತಿಯನ್ನೇ **"ಶಿರ್ಕ್"** (ದೇವನೊಂದಿಗಿನ ಸಹಭಾಗಿತ್ವ) ಎಂದು ಕರೆಯಲಾಗುತ್ತದೆ. ಈ ಬಲಹೀನತೆಯ ಪರಿಣಾಮದಿಂದಾಗಿಯೇ ಧರ್ಮದ ಮೇಲೆ ವಿಶ್ವಾಸವುಳ್ಳವನಾಗಿಯೂ ಮನುಷ್ಯನು ಅದರಲ್ಲಿ ಉನ್ನತಿಯನ್ನು ಹೊಂದಲು ವಿಫಲನಾಗುವನು.

ಕಣ್ಣಿಗೆ ಕಾಣದ ದೇವನನ್ನು ಒಪ್ಪುವ ಜೊತೆಗೆ ಕೆಲವು ಕಣ್ಣಿಗೆ ಕಾಣುವ ವಸ್ತುಗಳಿಗೆ ದೇವನ ಸ್ಥಾನವನ್ನು ನೀಡುವ ಜನರೇ ವಾಸ್ತವದಲ್ಲಿ ಬಹುದೇವತಾವಾದಿಗಳು (ಮುಷ್ರಿಕರು) ಆಗಿರುವರು. ಕಣ್ಣಿಗೆ ಕಾಣದೇ ಯಾವುದೇ ರೀತಿಯ ದೇವರನ್ನಾಗಲೀ, ದೇವಾಸ್ತಿತ್ವವನ್ನಾಗಲೀ ನಾವು ಒಪ್ಪಲಾರೆವು ಎನ್ನುತ್ತಾ, ಸಂಪೂರ್ಣವಾಗಿ ದೇವರೇ ಇಲ್ಲವೆಂದು ವಾದಿಸುವವರು ನಾಸ್ತಿಕರು. ಇಂತಹವರು ತೀರಾ ಗಂಭೀರಾವಸ್ಥೆಯ ದಾರಿಗೇಡಿತನವನ್ನು ಹೊಂದಿದ ವಿಭಾಗದ ಜನರಾಗಿರುವರು.

ಆದರೆ ಇಲ್ಲಿ ತನ್ನ ಪರಿಣಾಮದ ಆಧಾರದಿಂದ ಕಡಿಮೆ ಪ್ರಾಮುಖ್ಯತೆ ಹೊಂದಿರುವ ಇನ್ನೊಂದು ವಿಷಯವಿದೆ. ಅದೇನೆಂದರೆ, ವಿಶ್ವಾಸವಿರುವುದರ ಹೊರತಾಗಿಯೂ ಅದು ಪರಿಣಾಮಕಾರಿಯಾಗದೇ ಹೋಗುವುದು. ವ್ಯಕ್ತಿಯೋರ್ವನು ದೇವನ ಮೇಲೆ ವಿಶ್ವಾಸ ತಂದ ಹೊರತಾಗಿಯೂ ಆತನಿಗೆ ದೇವನನ್ನು ನೋಡಲು ಸಾಧ್ಯವಾಗದ, ದೇವನನ್ನು ಒಪ್ಪಿದ ಹೊರತಾಗಿಯೂ ದೇವಾಸ್ತಿತ್ವದ ಅನುಭವವನ್ನು ಕಂಡುಕೊಳ್ಳಲು ವಿಫಲವಾಗುವ, ದೇವನ ಮೇಲೆ ನಂಬಿಕೆ ಇದ್ದು, ಗ್ರಹಿಕೆಗಿಂತ ಮೇಲಸ್ತರಕ್ಕೆ ತಲುಪಿ ದೇವನನ್ನು ತನ್ನ ಜೀವನದ ಕೇಂದ್ರಬಿಂದುವನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗದ ಸಂದರ್ಭದಲ್ಲಿ ಇದು ಸಂಭವಿಸುತ್ತದೆ.

ಗ್ರಹಿಕೆಗೆ ಸಿಗದ ಅಭೌತಿಕ ದೇವನನ್ನು ಪಡೆಯಲು ವಿಫಲನಾಗುವುದೆಂದರೆ, ಅಭೌತಿಕ ವಾಸ್ತವವನ್ನು ಪಡೆಯುವುದರಲ್ಲಿ ವಿಫಲವಾಗುವುದೆಂದರ್ಥ. ದೇವನನ್ನು ಪಡೆಯಲು ವಿಫಲವಾದ ವ್ಯಕ್ತಿಯೋರ್ವನು, ತಮ್ಮ ಸುತ್ತ ಮುತ್ತ ಬಾಹ್ಯವಸ್ತುಗಳನ್ನು ಒಟ್ಟುಗೂಡಿಸಿಕೊಂಡಿರುವ ವ್ಯಕ್ತಿಗಳನ್ನಷ್ಟೇ ಗುರುತಿಸಬಲ್ಲನು. ಯಾರು ತನ್ನೊಳಗೆ ಸದುದ್ದೇಶ ಮತ್ತು ಯುಕ್ತಿಪೂರ್ಣ ಅಂಶಗಳ ಖಜಾನೆಗಳನ್ನು ಹೊಂದಿರುವರೋ ಅಂತಹವರನ್ನು ಗುರುತಿಸುವಲ್ಲಿ ಆ ವ್ಯಕ್ತಿಯು ಸಂಪೂರ್ಣ ವಿಫಲನಾಗುವನು. ಇನ್ನು ಯಾರು ದೇವನನ್ನು ಪಡೆಯಲು ವಿಫಲನಾದನೋ; ಅವನು ತನ್ನ ಬದುಕಿನ ಸುದುದ್ದೇಶವನ್ನು ಗುರುತಿಸುವಲ್ಲಿಯೂ ವಿಫಲನಾದಂತೆಯೇ ಸರಿ.

# ದೇವಸಹಭಾಗಿತ್ವ ಮತ್ತು ಅಹಂಕಾರ

ತನ್ನ ಜೊತೆ (ಯಾರನ್ನಾದರೂ) ಪಾಲುದಾರರನ್ನಾಗಿಸುವುದನ್ನು ದೇವನು ಖಂಡಿತ ಕ್ಷಮಿಸನು. ಅದರ ಹೊರತು ಬೇರಾವುದನ್ನೂ ಅವನು ತಾನಿಚ್ಛಿಸುವವರ ಪಾಲಿಗೆ ಕ್ಷಮಿಸಿಬಿಡುವನು. ದೇವನ ಜೊತೆ ಪಾಲುದಾರರನ್ನು ಸೇರಿಸುವವನು ಮಹಾ ಸುಳ್ಳೊಂದನ್ನು (ದೇವನ ಮೇಲೆ) ಹೊರಿಸಿ ಹೇಳಿದನು. (ಅನ್ನಿಸಾ:48)

ಹಝ್ರತ್ ಇಬ್ನೆ ಅಬ್ಬಾಸ್ (ರ.ಅ.)ರಿಂದ ವರದಿಯಾಗಿದೆ– ಪ್ರವಾದಿವರ್ಯರು (ಸ.ಅ.) ಹೇಳಿದರು: ಯಾರ ಹೃದಯದಲ್ಲಿ ಸಾಸಿವೆಕಾಳಿನಷ್ಟು ಅಹಂಕಾರವಿದೆಯೋ (ಕಿಬ್ರ್) ಅಂತಹ ವ್ಯಕ್ತಿಯು ಸ್ವರ್ಗವನ್ನು ಪ್ರವೇಶಿಸಲಾರನು. ಪ್ರವಾದಿವರ್ಯರ ಬಳಿ "ಅಹಂಕಾರ" ಎಂದರೇನು ಎಂದು ಕೇಳಲಾಯಿತು. ಪ್ರವಾದಿವರ್ಯರು (ಸ.ಅ.): ಸತ್ಯವನ್ನು ಕಡೆಗಣಿಸುವುದು ಹಾಗೂ ಜನರನ್ನು ತಿರಸ್ಕಾರ ಭಾವದಿಂದ ನೋಡುವುದು ಎಂದು ಉತ್ತರಿಸಿದರು.

(ಮುಸ್ಲಿಮ್) ಈ ಜಗತ್ತಿನಲ್ಲಿ ದೇವನಿಗೆ ಸಲ್ಲಬೇಕಾದ ಶ್ರೇಷ್ಠತೆಯನ್ನು ಇತರರಿಗೆ ನೀಡುವುದು ಅತ್ಯಂತ ಖಂಡನೀಯ ವಿಷಯ. ಇದು ದೇವನ ದೃಷ್ಟಿಯಲ್ಲೂ ಇದು ಮಹಾಪರಾಧ. ಯಾರಾದರೂ ತನ್ನನ್ನು ತಾನು ಶ್ರೇಷ್ಠ ವ್ಯಕ್ತಿ ಎಂದು ಪರಿಗಣಿಸಿದರೆ ಅದು ಅಹಂಕಾರ ಎನಿಸುವುದು. ಬೇರಾರನ್ನಾದರೂ ಆತನು ಶ್ರೇಷ್ಠ ಅಸ್ತಿತ್ವ ಎಂದು ಪರಿಗಣಿಸಿದರೆ ಅದು ಶಿರ್ಕ್ (ದೇವಸಹಭಾಗಿತ್ವ) ಆಗಿ ಪರಿಣಮಿಸುವುದು.

ಒಬ್ಬ ವ್ಯಕ್ತಿಯಲ್ಲಿ ಮೂಡಿದ ದೇವನ ಕುರಿತ ಸರಿಯಾದ ಅರಿವು, ಖುದ್ದು ಆ ವ್ಯಕ್ತಿಯ ಸ್ವ–ಹಿರಿಮೆ ಸೇರಿದಂತೆ ಬೇರೆ ಎಲ್ಲಾ ಶ್ರೇಷ್ಠತೆಗಳಿಗೆ ಇನ್ನಾವುದೇ ಜಾಗವಿಲ್ಲದಂತೆ ಕೆಡವಿಬಿಡುವುದು. ದೇವನ ಹೊರತಾಗಿ ಇತರರ ಶ್ರೇಷ್ಠತೆಯನ್ನು

ಒಪ್ಪುವ ಹೆಸರೇ ಶಿರ್ಕ್ (ದೇವಸಹಭಾಗಿತ್ವ) ಆದರೆ, ತನ್ನನ್ನು ತಾನು ಶ್ರೇಷ್ಠನೆಂದು ಭಾವಿಸಿಕೊಳ್ಳುವ ಹೆಸರು ಅಹಂಕಾರವಾಗಿದೆ.

ಪ್ರಸ್ತುತ ಜಗತ್ತು ಒಂದು ಪರೀಕ್ಷಾ ತಾಣವಾಗಿದೆ. ಆದುದರಿಂದಲೇ ಇಲ್ಲಿ ಎಲ್ಲಾ ವಿಧಧ ಜನರಿಗೂ ಜೀವಿಸುವ ಅವಕಾಶ ಲಭ್ಯವಾಗಿದೆ. ಆದರೆ, ಇದಕ್ಕೆ ತದ್ವಿರುದ್ಧವಾಗಿ ಪರಲೋಕವೆಂಬುದು ಒಂದು ಆದರ್ಶಮಯ ಜಗತ್ತಾಗಿರುವುದು. ಈ ಭೌತಿಕ ಜಗತ್ತಿನಲ್ಲಿ ವಾಸ್ತವವನ್ನು ಒಪ್ಪಿ, ಅದಕ್ಕನುಗುಣವಾಗಿ ಬದುಕಿ ತೋರಿಸಿದ ಪುರಾವೆ ಹೊಂದಿದ ಜನರು ಮಾತ್ರವೇ ಆ ಆದರ್ಶಮಯ ಲೋಕದಲ್ಲಿ ಗೌರವಯುತವಾದ ಸ್ಥಾನ–ಮಾನವನ್ನು ಪಡೆದುಕೊಳ್ಳಲು ಸಮರ್ಥರೆನಿಸುವರು. ಇನ್ನು ಅಹಂಕಾರ, ದೇವಸಹಭಾಗಿತ್ವದೊಂದಿಗೆ ಬದುಕುವ ಬದುಕು, ಅವಾಸ್ತವಿಕ ಮತ್ತು ಭ್ರಮಾಲೋಕದಲ್ಲಿದ್ದುಕೊಂಡು ಬದುಕುವ ಬದುಕುವುದಾಗಿದೆ. ಆದುದರಿಂದಲೇ, ತಮ್ಮ ಸುತ್ತಲೂ ದೇವಸಹಭಾಗಿತ್ವ ಮತ್ತು ಅಹಂಕಾರದಂತಹ ಭ್ರಮಾಜಗತ್ತನ್ನು ಕಟ್ಟಿಕೊಂಡು, ಅದರಲ್ಲೇ ಬದುಕಿದವರು, ಶಾಶ್ವತ ಮತ್ತು ಆದರ್ಶಮಯವಾದ ಪರಲೋಕದಲ್ಲಿ ವಾಸಿಸಲು ಯಾವುದೇ ರೀತಿಯಲ್ಲೂ ಯೋಗ್ಯರಲ್ಲ ಎಂಬುದು ಸಾಬೀತಾಗುವುದು.

ದೇವನ ಹಿರಿಮೆಯೊಂದಿಗೆ ಜೀವಿಸಿ ತೋರಿಸಿದ ಸಜ್ಜನರು ಉನ್ನತ ಸ್ವರ್ಗಲೋಕದ ವಾರೀಸುದಾರರಾಗುವರು. ದೇವೇತರರನ್ನು ದೇವನ ಸ್ಥಾನದಲ್ಲಿರಿಸಿ ಅವರ ಹಿರಿಮೆಯನ್ನು ದೇವನಿಗಿಂತ ದೊಡ್ಡದೆಂದು ಭ್ರಮಿಸಿ ಜೀವಿಸಿದ ದುರಂಹಕಾರಿಗಳ ವಾಸಸ್ಥಾನವಂತೂ ಅತ್ಯಂತ ಕೆಟ್ಟ ವಾಸಸ್ಥಾನವಾದ ನರಕವಾಗಿರುವುದು.

# ದೇವ ವಿಶ್ವಾಸ

ಸಿಂಹವನ್ನು ವೀಕ್ಷಿಸಲಿಚ್ಛಿಸುವರು ಒಂದೋ ಅದನ್ನು ವಸ್ತುಸಂಗ್ರ–ಹಾಲಯದಲ್ಲಿ ನೋಡಬೇಕು. ಇಲ್ಲವೋ ಕಾಡಿನ ಮಧ್ಯೆ ಅದನ್ನು ನೋಡಲು ಹೋಗಬೇಕು. ವಸ್ತುಸಂಗ್ರಹಾಲಯದಲ್ಲಿರುವುದು ನೈಜ ಸಿಂಹವಲ್ಲ. ಸಿಂಹದ ಚರ್ಮದೊಳಗೊಂದಿಷ್ಟು ವಸ್ತುಗಳನ್ನು ತುಂಬಿ ನಿಲ್ಲಿಸಲಾಗುವ, ಮೇಲ್ನೋಟಕ್ಕೆ ಸಿಂಹದಂತೆ ಕಾಣುವ ಸಿಂಹದ ಪುತ್ಥಳಿಯಾಗಿರುವುದದು. ಇಂತಹ ಸಿಂಹಗಳ ಪುತ್ಥಳಿಗಳನ್ನು ಜನರು ಕೇವಲ ಮನರಂಜನೆಗಾಗಿ ಮಾತ್ರ ವೀಕ್ಷಿಸುತ್ತಾರೆ. ವಸ್ತುಸಂಗ್ರಹಾಲಯದಲ್ಲಿರುವ ಇಂತಹ ಸಿಂಹಗಳ ಪುತ್ಥಳಿಗಳಿಗಂಜಿ ಓಡುವ ಆವಶ್ಯಕತೆ ಅಲ್ಲಿಗೆ ಬರುವ ಯಾರಿಗೂ ಎದುರಾಗುವುದಿಲ್ಲ.

ಆದರೆ ಇದಕ್ಕೆ ತದ್ವಿರುದ್ಧವಾಗಿ ಕಾಡಿನಲ್ಲಿರುವುದು ಜೀವಂತ ಸಿಂಹವಾಗಿರುವುದು. ಅದು ಮೃಗಗಳಲ್ಲೇ ಅತ್ಯಂತ ಬಲಾಢ್ಯವೂ, ಅದ್ಭುತ ಶಕ್ತಿಯ ಸಂಕೇತವೂ ಆಗಿದೆ. ಅದು ನಡೆಯುವಾಗ ಇಡೀ ಕಾಡಿಗೆ ಕಾಡೇ ನಡುಗತೊಡಗುವುದು. ಅದು ಘರ್ಜಿಸುವಾಗ ಉಳಿದ ಪ್ರಾಣಿಗಳು ತೀವ್ರ ಭಯಭೀತಗೊಳ್ಳುವವು. ಕಾಡಿನ ಮಧ್ಯೆ ಸಿಕ್ಕಿಹಾಕಿಕೊಂಡ ಯಾವುದಾದರೂ ವ್ಯಕ್ತಿ, ಆ ಸಂದರ್ಭದಲ್ಲಿ ಜೀವಂತ ಸಿಂಹವನ್ನೇನಾದರೂ ನೋಡಿದ್ದೇ ಆದಲ್ಲಿ, ಆತನು ಭಯಭೀತಿಯಿಂದ ಅಡಿಯಿಂದ ಮುಡಿಯತನಕ ನಡುಗತೊಡಗುವನು. ಅರೆಕ್ಷಣದ ಮಟ್ಟಿಗೆ ಆತನು ಅರೆ ಪ್ರಜ್ಞಾಹೀನಾವಸ್ಥೆಗೆ ತಲುಪಿಬಿಡುವನು. ಒಟ್ಟಾರೆ ಹೇಳುವುದಾದರೆ ಅದನ್ನು ನೋಡುವ ಮೊದಲು ಅವನು ಯಾವ ಸ್ಥಿತಿಯಲ್ಲಿದ್ದನೋ ಆ ಮೊದಲಿನ ಸ್ಥಿತಿಯಲ್ಲಂತೂ ಖಂಡಿತ ಇರಲಾರನು.

ಈ ಮೇಲಿನ ಉದಾಹರಣೆಯ ಮೂಲಕ ದೇವನ ಕುರಿತಾದ ವಿಷಯವನ್ನು ಅರ್ಥಮಾಡಿಕೊಳ್ಳುವುದು ನಮ್ಮ ಪಾಲಿಗೆ ಹೆಚ್ಚು ಸುಲಭವಾದೀತು. ದೇವನ ಮೇಲಿನ

ವಿಶ್ವಾಸಕ್ಕೂ ಎರಡು ವಿಧಗಳಿವೆ. ಮೊದಲನೆಯ ವಿಧ 'ಅನುಕರಣಾತ್ಮಕ ವಿಶ್ವಾಸ.' ಎರಡನೆಯದು 'ಜೀವಂತ ವಿಶ್ವಾಸ.' ಅನುಕರಣಾತ್ಮಕ ವಿಶ್ವಾಸವು ಒಂದು ನಿರ್ಜೀವ ವಿಶ್ವಾಸವಾಗಿದೆ. ಇಂತಹ ವಿಶ್ವಾಸಕ್ಕೆ ವ್ಯಕ್ತಿಯ ಅಂತರಂಗವನ್ನು ಅಲುಗಾಡಿಸುವ ಶಕ್ತಿಯಿರದು. ವ್ಯಕ್ತಿಗಳ ನರನಾಡಿಗಳಲ್ಲಿ ವಿದ್ಯುತ್ ನಂತೆ ಸಂಚರಿಸುವ ವೇಗವನ್ನೂ ಅದು ಹೊಂದಿರದು. ಮನುಷ್ಯನೊಳಗೆ ಯಾವುದೇ ರೀತಿಯ ಸಂಚಲನವನ್ನು ಸೃಷ್ಟಿಸಲೂ ಅದು ಶಕ್ತವಾಗಿರದು. ಅನುಕರಣಾತ್ಮಕ ವಿಶ್ವಾಸವು ಕೇವಲ ದೇವನನ್ನು ನಂಬುವುದಕ್ಕಷ್ಟೇ ಸೀಮಿತವಾಗಿದೆಯೇ ಹೊರತು ಅದರಲ್ಲಿ ದೇವಭಯವೆಂಬ ಯಾವುದೇ ಅಂಶವಿರದು.

ಆದರೆ, ದೇವನ ಮೇಲಿನ ಜೀವಂತ ವಿಶ್ವಾಸದ ವಿಷಯವು ಇದಕ್ಕಿಂತ ತೀರಾ ಭಿನ್ನವಾಗಿರುವುದು. ದೇವನನ್ನು ಅವನ ಅನಂತ ಶಕ್ತಿಯೊಂದಿಗೆ ನೋಡುವ ಹೆಸರೇ ಜೀವಂತ ವಿಶ್ವಾಸವಾಗಿರುವುದು. ಯಾವುದಾದರೂ ವ್ಯಕ್ತಿಯು ದೇವನನ್ನು ಈ ರೀತಿಯಾಗಿ ಪಡೆದ ಬಳಿಕ, ಅವನ ಬದುಕು ದೇವನನ್ನು ಪಡೆಯುವ ಮೊದಲು ಇದ್ದಂತಿರಲು ಸಾಧ್ಯವಿಲ್ಲ. ದೇವನನ್ನು ಪಡೆದ ವ್ಯಕ್ತಿಯ ಅಂತರಂಗದೊಳಗೆ ಬದಲಾವಣೆಯ ಬಿರುಗಾಳಿಯೇಳುವುದು. ದೇವಭಯದ ಕಾರಣ ಅವನಂತರಂಗದೊಳಗೆ ಭೀತಿಯುಂಟಾಗುವುದು. ಅವನ ಮನಸ್ಸಿನೊಳಗಿದ್ದ ಸಮಸ್ಯೆಗಳೆಲ್ಲವೂ ಕ್ಷಣಮಾತ್ರದಲ್ಲಿ ಅಳಿಸಿಹೋಗುವವು. ದೇವನ ಹೊರತಾದ ಬೇರಾವ ವಿಷಯವೂ ಅವನ ಪಾಲಿಗೆ ಹಿತವೆನಿಸದು.

ದೇವಭಯ ಹಾಗೂ ಜೀವಂತ ದೇವವಿಶ್ವಾಸ ಇವೆರಡೂ ಒಂದನ್ನೊಂದು ಬೇರ್ಪಡಿಸಲಾಗದ ಅವಿಭಾಜ್ಯ ಅಂಶಗಳಾಗಿವೆ. ನಿಮ್ಮಲ್ಲಿ ನೈಜ ದೇವವಿಶ್ವಾಸವಿದೆಯೆಂದಾದರೆ ಅದರಲ್ಲಿ ದೇವಭಯವೂ ಮಿಳಿತವಾಗಿರುವುದು ಅತ್ಯಂತ ಸಹಜವಾಗಿದೆ. ಯಾವ ವ್ಯಕ್ತಿಯೊಳಗೆ ದೇವಭಯವಿಲ್ಲವೋ

ಅವನೊಳಗಿರುವುದು ನೈಜ ದೇವವಿಶ್ವಾಸವಲ್ಲ ಬದಲಿಗೆ ಅನುಕರಣಾತ್ಮಕ ವಿಶ್ವಾಸವಾಗಿದೆ ಮತ್ತು ಅನುಕರಣಾತ್ಮಕ ವಿಶ್ವಾಸಕ್ಕೆ ದೇವನ ಬಳಿ ಯಾವುದೇ ಪ್ರತಿಫಲವೋ ಮೌಲ್ಯವೋ ದೊರೆಯಲಾರದು ಎಂಬುದು ನಮಗೆ ಸ್ಪಷ್ಟವಾಗಿ ತಿಳಿದಿರಬೇಕು.

# ದೇವನ ಹಿರಿಮೆ

ಪ್ರತಿಯೊಬ್ಬರಿಗೂ ಅವರವರದೇ ಆದ ಹಿರಿಮೆಯ ಕಥೆಗಳಿವೆ. ಆದರೆ, ದೇವನ ಹೊಂದಿರುವ ಹಿರಿಮೆಯು, ದೇವನ ಮಹಾನತೆಯು ಕೇವಲ ದೇವನಿಗಷ್ಟೇ ಸೀಮಿತವಾದ ದೇವವೈಶಿಷ್ಟ್ಯವಾಗಿರುವುದು. ವ್ಯಕ್ತಿಯೋರ್ವನು ತನ್ನ ಪ್ರೀತಿಸುವ ವ್ಯಕ್ತಿಗಾಗಿ ಉದ್ದುದ್ದದ ಪತ್ರವನ್ನು ಬರೆಯುತ್ತಾನೆ. ಅದರಲ್ಲಿ "ನೀವು ನಿಮ್ಮ ಪ್ರಕಾಶಮಯವಾದ ವ್ಯಕ್ತಿತ್ವದಿಂದಾಗಿ ಎಲ್ಲೆಡೆಯಲ್ಲೂ ಬೆಳಗುತ್ತಿರುವಿರಿ" ಎಂಬೆಲ್ಲಾ ಪ್ರಶಂಸೆಯ ವಾಕ್ಯಗಳಿರುತ್ತವೆ. ಈ ಉದ್ದುದ್ದ ಪತ್ರವನ್ನು ಓದಿದಾಗ, ಇದನ್ನು ಬರೆದವರು ಮತ್ತು ಓದುವವರ ಪೈಕಿ ಯಾರೊಬ್ಬರೂ ದೇವನ ಅನಂತ ಹಿರಿಮೆ ಮತ್ತು ಮಹಿಮೆಯ ಕುರಿತು ಸ್ವಲ್ಪವಾದರೂ ಗೌರವಾದಾರವನ್ನು ಹೊಂದಿರಬಹುದು, ದೇವನ ಅಗಣಿತ ಚಮತ್ಕಾರಗಳನ್ನು ನೋಡಿ ಅವರು ಆಶ್ಚರ್ಯಚಕಿತರಾಗಿರಬಹುದು ಎಂದೆನಿಸುವುದಿಲ್ಲ. ಆದರೆ ಪತ್ರದ ಕೊನೆಯಲ್ಲಿ "ವ ಆಖಿರ್ ದಅವಾನಾ ಅನಿಲ್ ಹಮ್ದು ಲಿಲ್ಲಾಹಿ" (ಸಕಲ ಪ್ರಶಂಸೆಗಳೂ ಜಗದೊಡೆಯನಾದ ದೇವನಿಗೇ ಮೀಸಲು) ಎಂಬ ವಾಕ್ಯವನ್ನು ಸಂಪ್ರದಾಯವೋ ಎಂಬಂತೆ ಬಳಸಲಾಗುತ್ತದೆ. ಆದರೆ ಆ ವಾಕ್ಯವನ್ನು ಬಳಸಿದ, ಓದಿದ ವ್ಯಕ್ತಿಗಳಲ್ಲಿ ದೇವನ ಅನಂತ ಮಹಿಮೆಯ ಕುರಿತು ಅವರ ಹೃದಯದಲ್ಲಿ ಒಂದಿನಿತೂ ಪ್ರಶಂಸಾ ಭಾವವು ಇದೆಯೆಂದು ಅನಿಸುವುದಿಲ್ಲವಾದ್ದರಿಂದ, ಪತ್ರದಲ್ಲಿರುವ ವಿಷಯ ಮತ್ತವರು ಪತ್ರದಲ್ಲಿ ಬಳಸುವ ಈ ಕೊನೆಯ ವಾಕ್ಯವೂ ಪರಸ್ಪರ ತಾಳೆಯಾಗುವುದಿಲ್ಲ. ಏಕೆಂದರೆ, ದೀರ್ಘ ಪತ್ರದುದ್ದಕ್ಕೂ ವ್ಯಕ್ತಿಯೋರ್ವನ ಪ್ರಶಂಸೆಯೇ ತುಂಬಿದ್ದು ಕೊನೆಗೆ ಸಾಂಪ್ರದಾಯತ್ಮಾಕವೆಂಬಂತೆಯೋ ಅಥವಾ ತಬರ್ರುಕ್ ಗಾಗಿಯೋ (ಸಮೃದ್ಧಿಗಾಗಿ) ಬಳಸುವ ಈ ಕೊನೆಯ ವಾಕ್ಯವು ವಾಸ್ತವದಲ್ಲಿ ಬರೆಯುವ ವ್ಯಕ್ತಿಯ ಹೃದಯಾಂತಾರಳದಿಂದ ಹೊರಡುವ ಪ್ರಶಂಸೆಯಾಗಿರಲಂತೂ ಖಂಡಿತ ಸಾಧ್ಯವಿಲ್ಲ.

ಅನ್ಯಧರ್ಮದ ವ್ಯಕ್ತಿಯೋರ್ವನು ತನ್ನ ಪ್ರೀತಿಪಾತ್ರರಾದ ವ್ಯಕ್ತಿಯ ಕುರಿತು ಪತ್ರವೊಂದನ್ನು ಬರೆದಾಗ ಅವನೂ ತನ್ನ ಧರ್ಮದ ಸಂಪ್ರದಾಯದ ಪ್ರಕಾರ ನುಡಿಗಟ್ಟೊಂದನ್ನು ಬಳಸುವ ಹಾಗೆ ಮುಸ್ಲಿಮನೂ ತನ್ನ ಧರ್ಮದನುಸಾರದ ಪತ್ರದ ಕೊನೆಯಲ್ಲಿ ನುಡಿಗಟ್ಟೊಂದನ್ನು ಬಳಸುತ್ತಿರುವನಷ್ಟೇ!. ಓರ್ವನು ಬಳಸಿದ ನುಡಿಗಟ್ಟು "ಇಸ್ಲಾಮಿಕ್" ಆದರೆ ಇನ್ನೋರ್ವ ಬಳಸಿದ ನುಡಿಗಟ್ಟು "ನಾನ್ ಇಸ್ಲಾಮಿಕ್" (ಇಸ್ಲಾಮೇತರ ನುಡಿಗಟ್ಟು) ಆಗಿದೆಯಾದ್ದರಿಂದ ಇವರೀರ್ವರೂ ಹೊರನೋಟಕ್ಕೆ ಭಿನ್ನರಾಗಿ ತೋರುತ್ತಾರೆ. ಆದರೆ ವಾಸ್ತವದಲ್ಲಿ ಈ ಕುರಿತು ಇವರೀರ್ವರ ಮನಃಸ್ಥಿತಿ ಒಂದೇ ತೆರನದ್ದಾಗಿದೆ. ಓರ್ವ ತನ್ನ ಪತ್ರದಲ್ಲಿ ಸಾಂಪ್ರದಾಯಿಕವಾಗಿ "ಅರಬ್ಬಿ" ನುಡಿಗಟ್ಟನ್ನು ಬಳಸಿದರೆ, ಇನ್ನೋರ್ವ "ಅರಬಿಯೇತರ" ನುಡಿಗಟ್ಟನ್ನು ಬಳಸಿರುವುದಷ್ಟೇ ಇವರೀರ್ವರ ನಡುವೆ ಇರುವ ಒಂದು ಚಿಕ್ಕ ವ್ಯತ್ಯಾಸವಾಗಿದೆ!.

ತಮ್ಮ ಭೌತಿಕ ಕಾರ್ಯಚಟುವಟಿಕೆಗಳಲ್ಲೇ ತಲ್ಲೀನರಾಗುತ್ತಾ ಅದನ್ನೇ ದೊಡ್ಡ ಸಾಧನೆ ಎಂದು ಪರಿಗಣಿಸುವ ಜನರು ಶೀಘ್ರದಲ್ಲೇ ತಮ್ಮ ಕಾರ್ಯಚಟುವಟಿಕೆಗಳು ದೇವನ ದೃಷ್ಟಿಯಲ್ಲಿ ಮರಳಿನ ರಾಶಿಯಲ್ಲಿ ಹರಿದಾಡುವ ಇರುವೆಯ ಚಟುವಟಿಕೆಗಿಂತಲೂ ನಿಕೃಷ್ಟವಾದದ್ದು ಎಂಬುದನ್ನು ಮನಗಾಣಲಿರುವರು. ಈ ಭೂಮಿಯೆಂಬುದು ಯಾವುದೇ ವ್ಯಕ್ತಿಯ ಹಿರಿಮೆಯನ್ನು ಸಾರಲಿಕ್ಕಿರುವ ಜಾಗವಲ್ಲ. ಬದಲಿಗಿದು ದೇವನ ಮಹಿಮೆಯನ್ನು ಪ್ರತಿಬಿಂಬಿಸಲಿಕ್ಕಿರುವ ಸ್ಥಳವಾಗಿದೆ. ಈ ಭೂಮಿಯಲ್ಲಿ ದೇವನ ಹೊರತಾಗಿ ಇತರರನ್ನು ಪ್ರಶಂಸಿಸಲ್ಪಡುವಾಗ, ಅದು ಕೇವಲ ವ್ಯಕ್ತಿಯೋರ್ವ ಹೇಳುವ ಮಹಾ ಸುಳ್ಳಿನ ವಿನಃ ಬೇರೇನೂ ಆಗಿರಲು ಸಾಧ್ಯವಿಲ್ಲ.

ದೇವೇತರರನ್ನು ಪ್ರಶಂಸಿಸುವಾಗ ಭೂಮಿ ಮತ್ತು ಆಕಾಶಗಳಲ್ಲಿರುವ ಸಕಲ ವಸ್ತುಗಳು ಪ್ರಶಂಸಿಸುವ ಮತ್ತು ಪ್ರಶಂಸೆಯನ್ನು ಆಸಕ್ತಿಯಿಂದ ಆಲಿಸುತ್ತಿರುವ ಪ್ರತಿಯೋರ್ವರನ್ನೂ ಶಪಿಸುತ್ತವೆ. ಆದರೆ ದೇವನ ಹಿರಿಮೆಯ, ಅವನ ಮಹಿಮೆಯ

ಕುರಿತು ಪ್ರಶಂಸೆಯ ಮಾತುಗಳನ್ನಾಡಿದಾಗ ಭೂಮಿ ಆಕಾಶಗಳ ಧ್ವನಿಗಳೂ ಪ್ರಶಂಸಿಸುವರ ಧ್ವನಿಯೊಂದಿಗೆ ಧ್ವನಿಯಾಗಿ ಒಗ್ಗೂಡುತ್ತವೆ. ದೇವೇತರರ ಪ್ರಶಂಸೆಗಳು ಸುಳ್ಳಿನ ನಾಲಗೆಗಳ ಮೂಲಕ ಹೊರಟು ಸುಳ್ಳನ್ನು ಕೇಳಲು ಕಾತರಿಸುವ ಕಿವಿಗಳಿಗೆ ತಲುಪುತ್ತವೆ. ಆದರೆ ದೇವನ ಪ್ರಶಂಸೆಯನ್ನು ವರ್ಣಿಸುವ ಸೌಭಾಗ್ಯ ಯಾರಿಗಾದರೂ ದೊರೆತರೆ ಅದು ಕೇವಲ ಮನುಷ್ಯನ ನಾಲಗೆಯಿಂದ ಹೊರಟ ಮಾತಾಗಿರದೆ, ದೇವಚರರ ಒಡನಾಟದ ಮೂಲಕ ಮನುಷ್ಯನಿಗೆ ತಲುಪುವ ದಿವ್ಯ ವಾಸ್ತವಿಕ ಅನುಭೂತಿಯಾಗಿರುತ್ತದೆ. ಒಬ್ಬ ವ್ಯಕ್ತಿಯನ್ನು ಮಹಾನ್ ಎಂದು ತಿಳಿದು ಆತನೆಡೆಗೆ ಆಕರ್ಷಿತರಾದವರು, ಆತನನ್ನು ಹೊಗಳುವುದಕ್ಕಾಗಿ ಶಬ್ದಗಳ ಭಂಡಾರವನ್ನೇ ತಂದಿಳಿಸುವರು. ಆದರೆ ದೇವನ ಹಿರಿಮೆಯ ಮೋಡಿಗೊಳಗಾದ ವ್ಯಕ್ತಿಯು ದೇವನ ಮಹಿಮೆಗೆ ಮಂತ್ರಮುಗ್ಧನಾಗಿ ಮೌನದ ಮೊರೆಹೋಗಿಬಿಡುವನು. ವ್ಯಕ್ತಿಯೋರ್ವನ ಮಹಾನತೆಯ ಚರ್ಚೆಯು ತುಂಬಿದ ಸಭೆಗಳಲ್ಲಿ, ಮುದ್ರಿತ ಕಾಗದದ ಪುಟಗಳಲ್ಲಿ ವರ್ಣಿಸಿ ಹೇಳಲಾದರೆ. ದೇವನ ಮಹಾನತೆಯ ಚರ್ಚೆಯು, ದೇವ ಪ್ರಶಂಸೆಯು ದೇವನ ದಾಸನ ಹೃದಯದಲ್ಲಿ ಪುಟಿದೇಳತೊಡಗುವುದು. ವ್ಯಕ್ತಿಯ ಏಕಾಂತದಲ್ಲಿರುವಾಗ ವರ್ಣಿಸಲಾಗದ ಈ ಅದ್ಭುತ ಅನುಭೂತಿಯನ್ನು ಅನುಭವಿಸುವ, ದೇವನ ವರ್ಣನಾತೀತ ಪ್ರಶಂಸೆಯನ್ನು ಕೇಳುವ ನೋಡುವ ಅದೃಷ್ಟ ಅವನ ಪಾಲಿಗೆ ಒದಗಿಬರುವುದು.

# ಜಗತ್ತೆಂಬ ಕಾರ್ಖಾನೆ

ನೀವು ಯಾವುದಾದರೂ ವ್ಯಕ್ತಿಯ ಕಾರ್ಖಾನೆಯೊಳಗೆ ಪ್ರವೇಶಿಸಿದರೆ ಅಲ್ಲಿರುವ ಪ್ರತಿಯೊಂದು ವಿಷಯಗಳ ಕುರಿತು ವಿವರಿಸಲಾಗುವುದನ್ನು, ಅಲ್ಲಿರುವ ಪ್ರತಿಯೊಂದು ವಿಭಾಗದಲ್ಲೂ ನಾಮಫಲಕಗಳನ್ನು ಲಗತ್ತಿಸಲಾಗುವುದರೊಂದಿಗೆ ವ್ಯಕ್ತಿಯೋರ್ವ ನಿಂತು ನಿಮ್ಮೆಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದನ್ನು ನೀವು ನೋಡಬಲ್ಲಿರಿ. ಇದರ ಹೊರತಾಗಿ ಕಾರ್ಖಾನೆಯ ವತಿಯಿಂದ ಆವಶ್ಯಕ ಮಾಹಿತಿಯಿರುವ ಹಾಳೆಯೊಂದನ್ನು ಕೂಡ ನಿಮಗೆ ನೀಡಲಾಗುವುದು.

ಜಗತ್ತೆಂಬುದು ಬೇರೆಲ್ಲಾ ಕಾರ್ಖಾನೆಗಳಿಗಿಂತ ಬಹುದೊಡ್ಡ ಕಾರ್ಖಾನೆ-ಯಾಗಿರುವುದು. ಆದರೆ ನಿಮಗಿಲ್ಲಿ ಯಾವುದೇ ನಾಮಫಲಕಗಳಾಗಲೀ, ಯಾವುದೇ ಮಾರ್ಗದರ್ಶಕನಾಗಲೀ (Guide) ಕಣ್ಣಿಗೆ ಕಾಣಬರುವುದಿಲ್ಲ. ಇಲ್ಲಿ ಕಾರ್ಯಬದ್ಧ ಯೋಜನೆ, ಅಭಿವೃದ್ಧಿ, ಉತ್ಪಾದನೆ, ಪ್ಯಾಕಿಂಗ್ ಮತ್ತು ಪೂರೈಕೆಯಾದಿಯಾಗಿ ಪ್ರತಿಯೊಂದು ಸವಲತ್ತುಗಳೂ ಲಭ್ಯ ಇವೆ. ಸರಬರಾಜು ಮತ್ತು ಬೇಡಿಕೆಯ ನಡುವಿನ ಅನುಪಾತವನ್ನು ಸಮತೋಲನದೊಂದಿಗೆ ನಿಭಾಯಿಸಲಾಗುವುದರ ಜೊತೆಗೆ ಕೈಗಾರಿಕಾ ತ್ಯಾಜ್ಯಗಳ ಮರುಬಳಕೆಯೂ ಇಲ್ಲಿ ಆಗುತ್ತಿದೆ. ಶಿಸ್ತು ಮತ್ತು ಸಮತೋಲನಗಳೊಂದಿಗೆ ಕಚ್ಚಾ ವಸ್ತುಗಳ ನಿರಂತರ ಪೂರೈಕೆಯ ವ್ಯವಸ್ಥೆಯೂ ಇಲ್ಲಿದೆ. ಇಷ್ಟೆಲ್ಲಾ ಸುವ್ಯವಸ್ಥೆಗಳ ಆಗರವಾಗಿರುವ ಈ ಜಗತ್ತಿನಲ್ಲಿ ಇದರ ಕುರಿತು ವಿವರಿಸುವ, ಇದನ್ನೆಲ್ಲಾ ಸಾರಿಹೇಳುವ ಉದ್ಘೋಷಕರು ಯಾರೂ ಇಲ್ಲ.

ಪರ್ವತ ಶಿಖರಗಳ ಎತ್ತರವು ಜಗತ್ತಿನ ವೇದಿಕೆಯಂತೆ ತೋರುವುದು. ಆದರಲ್ಲಿ ಯಾವುದೇ ಉದ್ಘೋಷಕನಿಲ್ಲ. ಗುಬ್ಬಚ್ಚಿಗಳ ಚಿಲಿ-ಪಿಲಿ ನಾದಗಳಲ್ಲಿ ಅವುಗಳೇನೋ ಹೇಳಲಿಕ್ಕಚ್ಛಿಸುತ್ತಿವೆಯೆನಿಸಿದರೂ ಅವುಗಳ ಭಾಷೆಯು ನಮಗರ್ಥವಾಗುವುದಿಲ್ಲ. ಗುಡುಗಿನಾರ್ಭಟ, ಮಿಂಚಿನ ಹೊಳೆತಗಳೆಲ್ಲವೂ ಈ

ಜಗತ್ತಿನ ಉದ್ಘೋಷ ಸಾಧನಗಳಾಗಿವೆ ಎಂದೆನಿಸಿದರೂ ಆ ಧ್ವನಿ–ಹೊಳಪುಗಳಲ್ಲಿ ಅಡಗಿರುವ ಇಷಾರೆಯನ್ನು ಅರ್ಥೈಸುವ ಸಾಮರ್ಥ್ಯವನ್ನು ನಾವು ಹೊಂದಿಲ್ಲ.

"ಈಮಾನ್" (ದೇವವಿಶ್ವಾಸ) ಮನುಷ್ಯನೊಳಗಿನ ಈ ಕೊರತೆಯನ್ನು ನೀಗಿಸಬಲ್ಲದು. ಅದು ಅವನನ್ನು ಈ ಜಗತ್ತಿನ ರಹಸ್ಯಗಳನ್ನು ಅರಿಯಲು ಶಕ್ತನನ್ನಾಗಿ ಮಾಡುವುದು. ದೇವವಿಶ್ವಾಸಿಯು ಒಂದು ತೆರನಾದ ವಿಜ್ಞಾನಿ ಎಂದರೆ ತಪ್ಪಾಗಲಾರದು. ವಿಜ್ಞಾನಿಗಳು ಚದುರಿದ ಕಣಗಳ ಮೂಲಕ ಸೌರವ್ಯೂಹದ ಚಲನ ವಲನಗಳನ್ನು, ವಸ್ತುಗಳೊಳಗೆ ಹುದುಗಿರುವ ಶಕ್ತಿಯನ್ನು, ಚಲನಾರಹಿತ ಲೋಹದಲ್ಲಿ ಚಲಿಸುವ ಯಂತ್ರಗಳನ್ನು ಕಂಡುಹಿಡಿಯುತ್ತಾರೆ. ಇದೇ ರೀತಿ ದೇವವಿಶ್ವಾಸಿಯೋರ್ವ ಗೋಚರವಾಗುವ ವಸ್ತುಗಳ ಮುಖಾಂತರ ಅಗೋಚರ ವಾಸ್ತವವನ್ನು, ಪ್ರತ್ಯಕ್ಷದ ಮೂಲಕ ಪರೋಕ್ಷವನ್ನು ಅರಿಯುವನು. ಅವನು, ಸೃಷ್ಟಿಗಳ ಮುಖಾಂತರ ಸೃಷ್ಟಿಕರ್ತನನ್ನು, ಇಲ್ಲಿನ ಸುವ್ಯವಸ್ಥೆಯ ಮೂಲಕ ಅದರ ಹಿಂದಿರುವ ನೈಜ ವ್ಯವಸ್ಥಾಪಕನನ್ನು ಅರಿಯುವನು.

ವ್ಯಕ್ತಿಯೋರ್ವನೊಳಗಿನ ದೇವವಿಶ್ವಾಸವು ತನ್ನ ಅತ್ಯುನ್ನತ ಹಂತಕ್ಕೆ ತಲುಪಿದಾಗ ಅದು ದೇವನೆಡೆಗಿನ ಕರೆಯಾಗಿ ಮಾರ್ಪಡುವುದು. ದೇವನೆಡೆಗೆ ಕರೆ ನೀಡುವುದೆಂದರೆ ವಾಸ್ತವದಲ್ಲಿ ಜಗತ್ತಿನ ಪದಗಳಿಗೆ ನಿಲುಕದ ಹಾಡುಗಳಿಗೆ ರೂಪವನ್ನು ನೀಡುವುದಾಗಿದೆ. ದೇವನೆಡೆಗೆ ಕರೆನೀಡುವಾತನು ದೇವನ ಮೌನ ಸಂದೇಶಗಳಿಗೆ ಧ್ವನಿ ನೀಡುವ ಉದ್ಘೋಷಕನಂತೆ ಕಾರ್ಯವಹಿಸುತ್ತಾನೆ. ಆತನು ದೇವನ ದಿವ್ಯ ಸಂದೇಶಗಳನ್ನು ಕೇಳಿದ ಬಳಿಕ ಅದನ್ನು ಜನರಿಗೆ ತಲುಪಿಸುವ ಮಹತ್ತರ ಜವಾಬ್ದಾರಿ ಹೊರುತ್ತಾನೆ. ಜಗತ್ತಿನಲ್ಲಿ ದೇವನೆಡೆಗಿನ ನೀಡುವ ಕರೆಯು, ನಿಜವಾದ ಅರ್ಥದಲ್ಲಿ ದೇವನ ಪ್ರಾತಿನಿಧ್ಯವಾಗಿದೆ.

# ಧರ್ಮನಿಷ್ಠೆ ಎಂದರೇನು?

ಹಿಟ್ಲರ್ ನ ಆಳ್ವಿಕೆ ಸಮಯದಲ್ಲಿ ಜರ್ಮನಿಯಲ್ಲಿ ಯಹೂದಿಗಳನ್ನು ಸೆರೆಹಿಡಿ-ಯಲಾಗುತ್ತಿದ್ದ ಸಂದರ್ಭ. ಆಗಲ್ಲಿ ಅನೇಕ ಹಾಸ್ಯಚಟಾಕಿಗಳು ಜನಪ್ರಿಯಗೊಂಡಿದ್ದವು. ಅವುಗಳ ಪೈಕಿ ಇದೂ ಒಂದು; ನಗರದ ರಸ್ತೆಯೊಂದರ ಬದಿಯಲ್ಲಿ ಯಹೂದಿಯೋರ್ವ ಓಡುತ್ತಿದ್ದನು. ಇದನ್ನು ನೋಡಿದ ಇನ್ನೋರ್ವ ಯಹೂದಿ ಓಡುತ್ತಿದ್ದವನ ಬಳಿ ಕೇಳಿದ: "ನೀನು ಇಷ್ಟೊಂದು ಗಡಿಬಿಡಿಯಲ್ಲಿ ಓಡುತ್ತಿರುವುದೇಕೆ?". ಅದಕ್ಕೆ ಓಡುತ್ತಿದ್ದ ಆ ಯಹೂದಿ, "ನೀನೂ ಓಡು ಮಾರಾಯಾ" ಎಂದ. ಅದಕ್ಕೆ ಪ್ರಶ್ನೆ ಕೇಳಿದವನು ಪುನಃ ಕೇಳಿದ, "ನಾವು ಓಡಬೇಕಾದುದಾರೂ ಏಕೆಂದು ಹೇಳಬಲ್ಲೆಯಾ?". ಓಡುತ್ತಿದ್ದವನು ಉತ್ತರಿಸಿದನು: ಪ್ರಾಣಿಸಂಗ್ರಹಾಲಯದಿಂದ ತೋಳವೊಂದು ತಪ್ಪಿಸಿಕೊಂಡಿದೆ. ಆ ತಪ್ಪಿಸಿಕೊಂಡ ತೋಳವನ್ನು ಕಂಡಲ್ಲಿ ಗುಂಡು ಹೊಡೆಯುವಂತೆ ಆದೇಶಿಸಲಾಗಿದೆ. ಎದುರಿಗಿನ ಯಹೂದಿಯು ಆಶ್ಚರ್ಯಚಕಿತನಾಗಿ ಕೇಳಿದ: "ಇದಕ್ಕೂ ನಮಗೂ ಏನು ಸಂಬಂಧ?, ಇದರಿಂದ ನಾವ್ಯಾಕೆ ಓಡಬೇಕು? ನಾವೇನು ತೋಳಗಳಲ್ಲವಲ್ಲ!?. ಮೊದಲನೇ ಯಹೂದಿ ಹೇಳಿದ: ಹೌದು, ನೀನು ಹೇಳುತ್ತಿರುವುದು ಸರಿ. ನಾವು ತೋಳಗಲ್ಲ. ಆದರೆ, ನಾವು ತೋಳಗಳಲ್ಲ ಎಂಬುದನ್ನು ಸಾಬೀತು ಪಡಿಸುವುದಾದರೂ ಹೇಗೆ?.

ಈ ಮೇಲ್ಕಂಡ ಉದಾಹರಣೆಯ ಮೂಲಕ ಭಯದ ಸನ್ನಿವೇಶದಲ್ಲಿ ಮನುಷ್ಯನ ಮನಸ್ಥಿತಿ ಹೇಗಿರುತ್ತೆಂಬುದನ್ನು ಊಹಿಸಲು ಸಾಧ್ಯ. ಆ ಸ್ಥಿತಿಯಲ್ಲಿ ಅವನು ಪ್ರತಿಯೊಂದೂ ಸಮಸ್ಯೆಯನ್ನು ತನ್ನ ಪಾಲಿನ ಸಮಸ್ಯೆಯೆಂದೇ ಭಾವಿಸುವನು. ಏಕೆಂದರೆ ಅಂತಹ ಸನ್ನಿವೇಶದಲ್ಲಿ ನಾನೆಲ್ಲಿ ಸಿಕ್ಕಿಬೀಳುತ್ತೀನೋ ಎಂಬ ಭಯಾತಂಕದಲ್ಲೇ ಜೀವಿಸುತ್ತಿರುತ್ತಾನೆ. ಯಾರದಾದರೂ ಕುರಿತು ಭಯ ಪಡುವುದೆಂದರೆ, ಎದುರುಗಡೆಯ ವ್ಯಕ್ತಿಯು ಭಯಪಡುತ್ತಿರುವ ವ್ಯಕ್ತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದಾನೆ ಎಂದರ್ಥ. ಇಂತಹ

ಸಂದರ್ಭದಲ್ಲಿ ಸಾಮಾನ್ಯವಾಗಿ ತೀರ್ಪು ಅಥವಾ ನಿರ್ಣಯದ ಮೇಲಿನ ಸಂಪೂರ್ಣ ಹಿಡಿತ ಎದುರಗಡೆಯ ವ್ಯಕ್ತಿಯ ಬಳಿ ಇದೆ ಎಂಬುದನ್ನು ಭಯಪಡುತ್ತಿರುವಾತ ಚೆನ್ನಾಗಿ ತಿಳಿದಿರುತ್ತಾನೆ. ತೀರ್ಪು ಅಥವಾ ನಿರ್ಣಯದ ಸಂಪೂರ್ಣ ಹಿಡಿತ ಎದುರುಗಡೆಯವರ ಸುಪರ್ದಿಯಲ್ಲಿರುವ ಪರಿಸ್ಥಿತಿಯಲ್ಲಿ ವ್ಯಕ್ತಿಯು ಭಯಪಡುವುದು ಸರ್ವೇ ಸಾಧಾರಣ ಸಂಗತಿಯಾಗಿದೆ. ಆದುದರಿಂದಲೇ ತನ್ನಾಡಳಿತದಡಿಯಲ್ಲಿರುವ ಎಲ್ಲೋ ದೂರದ ಯೂಫ್ರಟಿಸ್ ನದಿಯ ತೀರದಲ್ಲಿ ನಾಯಿಯೊಂದು ಆಹಾರ ದೊರಕದೇ ಸತ್ತರೆ, ನನ್ನನ್ನು ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಬಹುದೇನೋ, ಇಂತಹ ಪರಿಸ್ಥಿತಿಯಲ್ಲಿ ತನ್ನನ್ನು ತಾನು ನಿರಪರಾಧಿ ಎಂದು ಹೇಗೆ ಸಾಬೀತುಪಡಿಸಿಕೊಳ್ಳಲಿ ಎಂಬ ಭಯವು ಅವನನ್ನು ಕಾಡ ತೊಡಗುವುದು.

ದೇವನು ಎಲ್ಲ ಶಕ್ತಿಶಾಲಿಗಳಿಗಿಂತ ಹೆಚ್ಚು ಶಕ್ತಿಶಾಲಿಯಾದ ಅಸ್ತಿತ್ವವಾಗಿರುವನು. ಪ್ರತಿಯೊಂದು ತೀರ್ಪಿನ ಹಿಡಿತವು ದೇವನದೇ ಕೈಯಲ್ಲಿರುವುದು. ವಸ್ತುಸ್ಥಿತಿ ಹೀಗಿರುವಾಗ, ದೇವನ ಕುರಿತು ಸರಿಯಾದ ತಿಳುವಳಿಕೆ ಹೊಂದಿರುವ, ದೇವನನ್ನು ಸರಿಯಾದ ಅರ್ಥದಲ್ಲಿ ಪಡೆದಿರುವ ವ್ಯಕ್ತಿಯೋರ್ವನು ದೇವನ ಕುರಿತು ಸದಾ ಭಯಪಡುತ್ತಿರುತ್ತಾನೆ. ಅವನು ಪ್ರತಿಯೊಂದು ವಿಷಯದಲ್ಲೂ ಬಹಳ ಎಚ್ಚರಿಕೆಯಿಂದ ವ್ಯವಹರಿಸತೊಡುಗುವನು. ದೇವನ ನ್ಯಾಯಾಲಯದಲ್ಲಿ ನಾಳೆ ನಾನು ಅಪರಾಧಿಗಳ ಕಟಕಟೆಯಲ್ಲಿ ನಿಲ್ಲುವ ಪರಿಸ್ಥಿತಿ ಬರಬಾರದು ಎಂಬ ಜಾಗೃತೆ ಆಗಿರುವುದದು. ಅವನೊಳಗೆ ಉಂಟಾಗುವ ಈ ಸ್ವಯಂರಕ್ಷಣಾ ಮನೋಭಾವವು, ಅವನನ್ನು ಜನರ ಜೊತೆ ವ್ಯವಹರಿಸುವಾಗ ತೀರಾ ಜಾಗರೂಕತೆಯೊಂದಿಗೆ ವ್ಯವಹರಿಸುವಂತೆ ನಿರ್ಬಂಧಿಸುವುದು. ಹಾಗಾಗಿಯೇ ಜನರೊಂದಿಗವನು ಬಹಳ ಉದಾರತನದಿಂದ ವರ್ತಿಸುವನು. ಜನರಿಗೆ ಅವರ ಹಕ್ಕಿಗಿಂತ ಹೆಚ್ಚಿನದನ್ನು ನೀಡುವನು. ಅವನ ಕೈ ಕೆಳಗೆ ಕಾರ್ಯನಿರ್ವಹಿಸುವ ಜನರೇನಾದರೂ ತಪ್ಪೆಸಗಿದರೆ, ಈ ತಪ್ಪು ಸಂಭವಿಸಲು ತಾನು ಕಾರಣನಾಗಿರಬಹುದು ಎಂದು ಅವನು ಭಾವಿಸ ತೊಡಗುವನು. ಏಕೆಂದರೆ ನಾಳೆಯ

ದಿನ ಪರಲೋಕದ ದೇವನ ನ್ಯಾಯಾಲಯದಲ್ಲಿ, "ಅವರ ಬೆನ್ನ ಹಿಂದೆ ನೀನಿದ್ದೆ ಎಂಬ ಮೊಂಡು ಧೈರ್ಯವೇ ಅವರು ಅಪರಾಧವೆಸಗಲು ಕಾರಣವಾಯಿತು" ಎಂದು ಹೇಳಿದರೆ ನಾನೇನು ಉತ್ತರಿಸಲಿ ಎಂದು ಆತನು ಚಿಂತಿಸತೊಡಗುತ್ತಾನೆ. ಒಂದು ವೇಳೆ ಅವನ ಗಮನಕ್ಕೆ ಬಾರದೆ ಯಾರ ಮೇಲಾದರೂ ಅಕ್ರಮ ಸಂಭವಿಸಿದಾಗಲೂ ಅವನು, "ನಿನ್ನನ್ನು ನಾನು ಜನನಾಯಕನನ್ನಾಗಿ ಮಾಡಿದ್ದೆ. ಆದಾಗ್ಯೂ ನಿನ್ನ ಗಮನಕ್ಕೆ ಬರದೆ ಈ ಅಕ್ರಮ ಸಂಭವಿಸುದುದು ಹೇಗೆ" ಎಂದು ದೇವನು ನನ್ನನ್ನು ನಾಳೆ ಕೇಳಿದರೆ ನಾನು ಏನೆಂದು ಉತ್ತರಿಸಲಿ ಎಂದು ಯೋಚಿಸುತ್ತಾ, ಅವನು ಭಯದಿಂದ ಕಂಪಿಸತೊಡಗುತ್ತಾನೆ. ಅವನ ಅಧಿಕಾರದ ವ್ಯಾಪ್ತಿಯೊಳಗೆ ಯಾರಾದರೂ ಸತಾಯಿಸಲ್ಪಟ್ಟಾಗಲೂ, ಯಾವುದೋ ವ್ಯಕ್ತಿ ಇನ್ನಾರಿಗೋ ಕಿರುಕುಳ ಕೊಟ್ಟಗಾಲೂ, ದೇವನು ನನ್ನ ಬಳಿ ಇದರ ಕುರಿತು "ನಿನ್ನ ಅಧಿಕಾರ ವ್ಯಾಪ್ತಿಯೊಳಗೆ ನಿನ್ನ ಅಸಮರ್ಥ ಕಾರ್ಯವೈಖರಿಯಿಂದಲೇ ಇದೆಲ್ಲವೂ ನಡೆಯಲು ಸಾಧ್ಯವಾದದ್ದು" ಎಂದು ಹೇಳಿದರೆ ನಾನು ಹೇಗೆ ಇದರಿಂದ ಮುಕ್ತಿ ಪಡೆಯಲಿ ಎಂದು ಆತ ಹಗಲಿರುಳು ಚಿಂತಿಸತೊಡಗುತ್ತಾನೆ. ಯಾವುದಾದರೂ ವ್ಯಕ್ತಿ ಈತನ ಬಳಿ ಸಹಾಯಕ್ಕಾಗಿ ಕರೆದಾಗ, ಬೇರಾವುದೋ ಕಾರ್ಯದ ನಿಮಿತ್ತ ಇವನು ಆ ವ್ಯಕ್ತಿಯ ಸಹಾಯ ಮಾಡದೇ ಮುಂದುವರಿದಾಗಲೂ, ನಾಳೆಯ ದಿನ ದೇವನು ಈ ಕುರಿತು ನನ್ನನ್ನು, "ನೀನು ಯಾವ ಕಾರ್ಯ ನಿಮಿತ್ತ ಎದುರಿಗಿನ ವ್ಯಕ್ತಿಯ ಸಹಾಯ ಮಾಡದಾದೆಯೋ, ಆ ಸಂದರ್ಭದಲ್ಲಿ ನಿನ್ನ ಕಾರ್ಯಕ್ಕಿಂತ ಆ ವ್ಯಕ್ತಿಯ ಸಹಾಯವು ಹೆಚ್ಚು ಅಗತ್ಯದದ್ದಾಗಿತ್ತು." ಎಂದು ನುಡಿದರೆ ನಾನು ಏನೆಂದು ಪ್ರತ್ಯುತ್ತರ ಕೊಡಲಿ ಎಂದು ಅವನು ಚಿಂತೆಗೀಡಾಗುವನು.

# ಸಮಸ್ಯೆಗಳ ಮೂಲ

ಈ ಜಗತ್ತಿನಲ್ಲಿ ಪ್ರತಿಯೋರ್ವನೂ ಹಕ್ಕುಗಳ ಕುರಿತು ಮಾತನ್ನಾಡುತ್ತಿರುತ್ತಾನೆ. ಆದಾಗ್ಯೂ ಈ ಜಗತ್ತಿನೆಲ್ಲೆಡೆ ದೃಷ್ಟಿ ಹಾಯಿಸಿದರೂ ಹಕ್ಕುಚ್ಯುತಿಗಳಾಗುತ್ತಿರುವುದೇ ನೋಡಲು ಸಿಗುತ್ತದೆ. ಕುರ್ ಆನ್ ಇದಕ್ಕೆ "ನಾಸ್ತಿಕತೆ" (ನಿರಾಕರಣೆ)–ಯೇ ಕಾರಣವೆನ್ನುತ್ತದೆ. ಅರ್ಥಾತ್ ವಿಷಯವೊಂದಕ್ಕೆ ಸರಿಯಾದ ಅರ್ಥವನ್ನು ನೀಡುವ ಬದಲು ಅಪಾರ್ಥವನ್ನು ಕಲ್ಪಿಸುವುದು.

ಪ್ರಸ್ತುತ ಜಗತ್ತಿನಲ್ಲಿ ನಾಸ್ತಿಕತೆಯ ಒಂದು ಸ್ವರೂಪವೇನೆಂದರೆ, ವೈಯಕ್ತಿಕ ಆಜ್ಞೆಯನ್ನು. ಅರ್ಥಾತ್ ವ್ಯಕ್ತಿಯೋರ್ವನು ತನ್ನನ್ನುದ್ದೇಶಿಸಿ ನೀಡಲಾದ ಆಜ್ಞೆಯನ್ನು ಬೇರೆಯವರ ಮೇಲೆ ಹೇರುವುದು. ಉದಾಹರಣೆಗೆ ಕುರ್ ಆನ್ ನಲ್ಲಿ, "وَرَبَّكَ فَكَبِّرْ وَثِيَابَكَ فَطَهِّرْ" (ದೇವನ ಮಹಾನತೆಯನ್ನು ಕೊಂಡಾಡಿರಿ ಮತ್ತು ನಿಮ್ಮ ವರ್ತನೆಯನ್ನು ಉತ್ತಮಪಡಿಸಿಕೊಳ್ಳಿರಿ) ಎಂದಿದೆ. ಇದರಲ್ಲಿರುವ "ನಿಮ್ಮ ವರ್ತನೆಯನ್ನು ಉತ್ತಮಪಡಿಸಿಕೊಳ್ಳಿರಿ" ಎಂದಿರುವುದನ್ನು "ಬೇರೆಯವರ ವರ್ತನೆಯನ್ನು ಉತ್ತಮಪಡಿಸಿರಿ" ಎಂದು ಅರ್ಥೈಸಿಕೊಂಡಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುವುದು. ವೈಯಕ್ತಿಕ ಸುಧಾರಣೆಗಾಗಿ ಮಾಡಲಾದ ನೈತಿಕಪಾಠವುಳ್ಳ ಸೂಕ್ತಕ್ಕೆ ಅಪಾರ್ಥ ಕಲ್ಪಿಸಿ, ಇತರರ ವಿರುದ್ಧ ದಂಗೆ ಏಳುವುದಕ್ಕೆ ದುರುಪಯೋಗ ಪಡಿಸಿದಂತಾಗುವುದು.

ಪ್ರತಿಯೊಂದು ದೇವನಾಜ್ಞೆಗೂ ಇದೇ ತೆರನಾದ ಅಪಾರ್ಥ ಕಲ್ಪಿಸಲಾಗಿದೆ ಎಂದರೆ ತಪ್ಪಾಗದು. ದೇವನು ನೀಡುವ ಆಜ್ಞೆಯು ಮೊತ್ತಮೊದಲು ವ್ಯಕ್ತಿಯ ವೈಯಕ್ತಿಕ ನೆಲೆಗಟ್ಟಿನಲ್ಲಿ ಅನ್ವಯವಾಗುವುದು. ಆದರೆ, ದುರದೃಷ್ಟವಶಾತ್ ನಮ್ಮ ಕ್ರಾಂತಿಕಾರಿ ಧಾರ್ಮಿಕ ನಾಯಕರು ದೇವನಾಜ್ಞೆಗಳನ್ನೆಲ್ಲಾ ಇತರರೆಡೆಗೆ ತಿರುಗಿಸಿಬಿಟ್ಟಿದ್ದಾರೆ. ಧರ್ಮದ ಹೆಸರಿನಲ್ಲಿ ಹಲವಾರು ಗಲಭೆ ನಡೆಯುವುದಕ್ಕೆ,

ಧರ್ಮವನ್ನು ಅನುಸರಿಸುವ ಜನರಲ್ಲಿ ವೈಯಕ್ತಿಕ ಸುಧಾರಣೆ ಕಾಣದಿರುವುದಕ್ಕೆ ಇದುವೇ ಪ್ರಮುಖ ಕಾರಣವಾಗಿದೆ.

ಪ್ರತಿಯೊಂದು ಸುಧಾರಣೆಯ ಹಿಂದಿರುವ ಮತ್ತು ಪ್ರತಿಯೊಂದು ಗಲಭೆಯ ಹಿಂದಿರುವ ಸಾರಾಂಶವನ್ನು ಈ ಎರಡು ವಾಕ್ಯಗಳಲ್ಲಿ ಅರ್ಥೈಸಿಕೊಳ್ಳಬಹುದು:

1. ದೇವನಷ್ಟೇ ಮಹಾನನು. ಹಾಗಾಗಿ ನಾನು ಮಹಾನನಾಗಲು ಸಾಧ್ಯವಿಲ್ಲ.
2. ದೇವನು ಮಹಾನನು. ಆದುದರಿಂದ ನೀವು ಮಹಾನರಾಗಲು ಸಾಧ್ಯವಿಲ್ಲ.

ಮೊದಲ ವಾಕ್ಯದಲ್ಲಿ "ಅಲ್ಲಾಹು ಅಕ್ಬರ್" (ದೇವನು ಮಹಾನನು) ಎಂಬ ಪದವನ್ನು ಸರಿಯಾಗಿ ಅರ್ಥೈಸಿಕೊಂಡ ಉದಾಹರಣೆಯಾದರೆ, ಎರಡನೇ ವಾಕ್ಯವು "ಅಲ್ಲಾಹು ಅಕ್ಬರ್"ನ ಪದಕ್ಕೆ ಅಪಾರ್ಥ ಕಲ್ಪಿಸುವುದರ ಉದಾಹರಣೆಯಾಗಿದೆ. ಒಂದು ವೇಳೆ ನಾವು "ದೇವನಷ್ಟೇ ಮಹಾನನು. ನಾನು ಮಹಾನನಲ್ಲ" ಎಂದು ಉದ್ಘೋಷಿಸಿಕೊಂಡಾಗ, ನಮ್ಮೊಳಗಿನ ಅಹಂಕಾರ ಮಾಯಾವಾಗಿ, ವೈಯಕ್ತಿಕ ಹಂತದಲ್ಲಿ ನಮ್ಮ ಸುಧಾರಣೆಯಾಗುವುದರ ಜೊತೆಗೆ ನಮ್ಮೊಳಗಿಂದ ಸಕಲ ಒಳಿತುಗಳ ಮೂಲವಾದ ಸಭ್ಯತೆ ಮತ್ತು ವಿನಯಶೀಲತೆಯಂತಹ ವಿಶಿಷ್ಟ ಗುಣಗಳು ಹೊರಹೊಮ್ಮುವವು.

ಇದರ ತದ್ವಿರುದ್ಧವಾಗಿ, ನಾವು "ದೇವನು ಮಹಾನನು. ಆದುದರಿಂದ ನೀವು ಮಹಾನರಾಗಲು ಸಾಧ್ಯವಿಲ್ಲ." ಎಂದು ಘೋಷಿಸಿದಾಗ, ನಮ್ಮೊಳಗೆ ಅಹಂಕಾರದ ಮನೋಭಾವವು ಮೊಳಕೆಯೊಡೆದು, ಇನ್ನೊಬ್ಬರ ವಿರುದ್ಧ ಹಿಂಸೆ ಮತ್ತು ಗೂಂಡಾ ಪ್ರವೃತ್ತಿಯಂತಹ ರಾಜಕೀಯ ಮನೋವ್ಯಾಧಿಯು ಬೆಳೆಯುವುದು. ಆಗ, ಇತರರ ಸುಧಾರಣೆಯ ಹೆಸರಿನಲ್ಲಿ ಎಂದಿಗೂ ನಿಲ್ಲದ ಗಲಭೆಯು ರೂಪತಳೆಯುವ ಅಪಾಯ ತಪ್ಪಿದ್ದಲ್ಲ.

# ದೇವನೆಡಗಿನ ನಿರ್ಲಕ್ಷ್ಯ

ನೀವು ಯಾರಾದಾದರೂ ಬಳಿ ಅವರ ಸುಪುತ್ರನ ಕುರಿತು ಪ್ರಸ್ತಾಪಿಸಿದರೆ, ಅವರ ಬಳಿ ತನ್ನ ಮಗನ ಕುರಿತು ಹೇಳಬೇಕಾದ ಮಾತುಗಳು ಎಂದಿಗೂ ಮುಗಿಯಲಾರವೇನೋ ಎಂಬಷ್ಟಿರುತ್ತವೆ. ಅದೇ ವ್ಯಕ್ತಿಯ ಬಳಿ ನೀವು ದೇವನ ಕುರಿತು ಪ್ರಸ್ತಾಪಿಸಿದರೆ, ದೇವನ ಕುರಿತು ತನಗೆ ಹೇಳಲೇನೂ ಉಳಿದಿಲ್ಲ ಅಥವಾ ತನಗೆ ದೇವನ ಕುರಿತು ಏನೇನೂ ತಿಳಿದೇ ಇಲ್ಲ ಎಂಬಂತೆ ಆ ವ್ಯಕ್ತಿ ಒಮ್ಮಿಂದೊಮ್ಮೆಲೆ ನಿಶ್ಚಲನಾಗಿಬಿಡುತ್ತಾನೆ.

ಯಾವುದಾದರೂ ವ್ಯಕ್ತಿಯ ಬಳಿ ಅವನ ಕುಂಟುಂಬದ ಹಿರಿಯರನ್ನು ನೆನಪಿಸಿದರೆ, ಅವನೊಳಗಿನ ಭಾವನೆಗಳೆಲ್ಲಾ ಸ್ಫುರಿಸತೊಡಗಿ, ಅವನು ಅತ್ಯುತ್ಸಾಹದಿಂದ ಆ ಹಿರಿಯರ ಕುರಿತು ಮಾತನಾಡತೊಡಗುವನು. ಅದೇ ವ್ಯಕ್ತಿಯ ಬಳಿ ದೇವನ ಕುರಿತು ನೆನಪಿಸಿದಾಗ, ಅವನ ಉತ್ಸಾಹವೆಲ್ಲಾ ಬತ್ತಿ ಹೋದಂತಾಗಿ, ದೇವನ ಕುರಿತು ಹೇಳಲಿಕ್ಕೇನಿದೆ? ಎಂಬಂತೆ ನೀರಸವಾಗಿ ಪ್ರತಿಕ್ರಿಯಿಸತೊಡಗುವನು.

ಯಾವುದಾದರೂ ವ್ಯಕ್ತಿಯ ಬಳಿ ಅವನು ಅವನು ತನ್ನ ಸಂಬಂಧ ಹೊಂದಿರುವ ಸಂಘಟನೆ ಅಥವಾ ಜಮಾಅತ್ ನ ಹಿರಿಯ ನಾಯಕರ ಪ್ರಸ್ತಾಪ ಮಾಡಿ ನೋಡಿ, ತಕ್ಷಣ ಅವನ ನಾಲಗೆಯಲ್ಲಿ ಅವರ ಕುರಿತು ಪ್ರಶಂಸಾತ್ಮಕ ಪದಗಳ ಸಾಗರವೇ ಉಕ್ಕಿ ಹರಿಯತೊಡಗುವುದು. ಎಲ್ಲಿಯವರೆಗೆಂದರೆ, ನೀವು ಮಧ್ಯೆ ಪ್ರವೇಶಿಸಿ ವಿಷಯಾಂತರ ಮಾಡುವ ತನಕ ಅವನು ಹೇಳುವುದನ್ನು ಎಷ್ಟು ಮಾತ್ರಕ್ಕೂ ನಿಲ್ಲಿಸಲಾರ. ಅದೇ ವ್ಯಕ್ತಿಯ ಬಳಿ ದೇವನ ಕುರಿತು ಪ್ರಸ್ತಾಪ ಮಾಡಿ ನೋಡಿ, ಅವನಲ್ಲಿ ತಕ್ಷಣವೇ ದೇವನ ಕುರಿತು ಹೇಳುವಂತಹ ವೈಶಿಷ್ಟ್ಯ ಏನಿದೆ ಎಂಬಂತೆ ನಿರುತ್ಸಾಹ ತಾಳುವುದನ್ನು ನೀವು ನೋಡಬಲ್ಲಿರಿ.

ಒಬ್ಬ ವ್ಯಕ್ತಿಯ ಮುಂದೆ ಅವನು ಪ್ರತಿನಿಧಿಸುವ ಅವನ ಸಮುದಾಯದ ಹೀರೋನ ಕುರಿತು ಚರ್ಚಿಸಿ ನೋಡಿ, ಅವನು ತುಂಬು ಹುಮ್ಮಸ್ಸಿನೊಂದಿಗೆ ಆ ಹೀರೋನನ್ನು ರಾಜ–ಮಹಾರಾಜನಂತೆ ಪ್ರತಿಬಿಂಬಿಸುವುದನ್ನು ನೀವು ಕಾಣಬಲ್ಲಿರಿ. ಅದೇ ವ್ಯಕ್ತಿಯ ಬಳಿ, ದೇವನ ಕುರಿತು ಚರ್ಚಿಸಿ ನೋಡಿ. ತಕ್ಷಣವೇ ಅವನೊಳಗಿನ ಹುಮ್ಮಸ್ಸು ಬತ್ತಿಹೋದಂತಾಗಿ, ದೇವನ ಕುರಿತು ಹೇಳಲೇನಿದೆ? ಎಂಬಂತೆ ಮೌನವಾಗಿ ಬಿಡುವುದನ್ನು ನೀವು ವೀಕ್ಷಿಸಬಲ್ಲಿರಿ.

ವ್ಯಕ್ತಿಗಳ ಕುರಿತು ಹೇಳಲು ಪ್ರಶಂಸಾತ್ಮಕ ಪದಗಳ ಸಾಗರಗಳೇ ಇರುವ, ಆದರೆ ದೇವನ ಕುರಿತು ಹೇಳಲು ಮಾತೇ ಹೊರಡದ, ಜನರ ಕುರಿತು ಮಾಹಿತಿಯ ಕಣಜವನ್ನೇ ಹೊತ್ತಿರುವ, ದೇವನ ಕುರಿತು ಎಳ್ಳಷ್ಟೂ ಜ್ಞಾನವಿರದ ಜನರ ಹೃದಯದಲ್ಲಿನ ಈಮಾನ್ (ದೇವವಿಶ್ವಾಸ)ನ ಬತ್ತಿ ಆರಿ ಹೋಗಿದೆಯೇ?.

ಇತರ ಜನರಿಗೆ ವಿವರಿಸಿ ಹೇಳಬೇಕಾದ ದೇವನ ಶ್ರೇಷ್ಠತೆ, ಅವನ ಮಹಾನತೆಯನ್ನು ಈ ಜನರು ಖುದ್ದು ಅರಿತಿಲ್ಲವೇ?. ಇದುವರೆಗೆ ದೇವನ ಮಹಿಮೆಯ ಕುರಿತು ಈ ಜನರು ಯಾವುದೇ ವಿಶಿಷ್ಟ ಅನುಭವಕ್ಕೊಳಗಾಗಿಲ್ಲವೇನು?. ಸೃಷ್ಟಿಗಳ ಕುರಿತಷ್ಟೇ ಗೊತ್ತಿರುವ ಈ ಜನರಿಗೆ ಏಕಮಾತ್ರನೂ, ಸರ್ವಶಕ್ತನೂ ಆದ ಸೃಷ್ಟಿಕರ್ತನ ಕುರಿತು ಚಿಕ್ಕ ಮಾಹಿತಿಯೂ ಇಲ್ಲದೆ ಹೋದರೆ ಅದೆಂತಹ ಈಮಾನು?.

# ಮುಗಿಯಲಿರುವ ಸಂಘರ್ಷ

ನಾನು ಜನವಸತಿಯ ಪ್ರದೇಶದಿಂದ ದೂರವಿರುವ ಬೆಟ್ಟವೊಂದರ ಬಳಿ ನಿಂತಿದ್ದೆ. ಹಚ್ಚ ಹಸಿರಿನಿಂದ ಕೂಡಿದ ಬೃಹದಾಕಾರದ ಮರಗಳು ನನ್ನ ಮುಂದೆ ಹರಡಿಕೊಂಡಿದ್ದವು. ಗುಬ್ಬಚ್ಚಿಗಳ ಚಿಲಿಪಿಲಿ ನಾದ ಕಿವಿಗೆ ಇಂಪು ಕೊಡುತ್ತಿತ್ತು. ವಿವಿಧ ರೀತಿಯ ಪ್ರಾಣಿಗಳು ನಡೆದಾಡುತ್ತಿರುವುದು ಕಾಣಿಸುತ್ತಿತ್ತು. ಇದನ್ನೆಲ್ಲಾ ನೋಡುತ್ತಾ, ಆಲಿಸುತ್ತಲಿದ್ದ ನಾನು ರೋಮಾಂಚನಗೊಂಡು ಹೀಗೆ ಯೋಚಿಸತೊಡಗಿದೆ: ಇಷ್ಟೊಂದು ವಿಸ್ತಾರ ಮತ್ತು ವಿಶಾಲವಾದ ಜಗತ್ತನ್ನು ಸೃಷ್ಟಿಸಿ, ಅದನ್ನು ತೀರಾ ಬದ್ಧತೆ ಹಾಗೂ ಅಚ್ಚುಕಟ್ಟಿನೊಂದಿಗೆ ತನ್ನ ನಿರ್ದೇಶನಕ್ಕನುಗುಣವಾಗಿ ಕಾರ್ಯನಿರ್ವಹಿಸಲು ನಿರ್ಬಂಧಿಸಿದ ದೇವನೆಷ್ಟು ಮಹಾನ್ ಪರಿಪೂರ್ಣ ಅಸ್ತಿತ್ವವುಳ್ಳವನಾಗಿರಬಹುದಲ್ಲವೇ?.

ಎಷ್ಟೊಂದು ಸುಂದರ ಮತ್ತು ನಿಷ್ಕಳಂಕ ಜಗತ್ತಲ್ಲವೇ ಇದು?. ಇಲ್ಲಿನ ಗುಬ್ಬಚ್ಚಿಗಳು ಅವುಗಳ ಸೃಷ್ಟಿಕರ್ತನು ಅವುಗಳಿಗೆ ಕಲಿಸಿದ ಹಾಗೆಯೇ ಧ್ವನಿಯನ್ನು ಹೊರಡಿಸುತ್ತವೆ. ಬೆಕ್ಕು ಮತ್ತು ಮೇಕೆಗಳು ಹುಟ್ಟಿನಿಂದಲೇ ಅವುಗಳಿಗೆ ಏನನ್ನು ನಿಗದಿಪಡಿಸಲಾಗಿದೆಯೋ ಅದೇ ಆಹಾರ ಕ್ರಮವನ್ನು ಅವುಗಳು ಚಾಚೂ ತಪ್ಪದೆ ಪಾಲಿಸುತ್ತಿವೆ. ಇಲ್ಲಿನ ವೃಕ್ಷಗಳು ಅನಾದಿಕಾಲದಿಂದಲೂ ತಮ್ಮ ಒಡೆಯನ ಕಡೆಯಿಂದ ನಿಗದಿತವಾದ ಕ್ರಮಕ್ಕನುಸಾರವಾಗಿ ಮೊಳಕೆಯೊಡೆದು ಗಿಡವಾಗಿ, ಮರವಾಗಿ ಬೆಳೆದು ನಿಲ್ಲುತ್ತಿವೆ. ಇಲ್ಲಿನ ನದಿಗಳೆಲ್ಲವೂ ಸದಾ ದೇವವಿಧಿತ ಯೋಜನೆಗನುಗುಣವಾಗಿ ನಿಖರ ದಿಕ್ಕಿಗನುಸಾರವಾಗಿ ಹರಿಯುತ್ತಲಿವೆ. ದೇವನು ನಿರ್ಮಿಸಿದ ಈ ಜಗತ್ತು ಪರಿಪೂರ್ಣತೆಯ ಆಗರವಾಗಿದೆ. ಇಲ್ಲಿನ ಪ್ರತಿಯೊಂದು ವಸ್ತುವೂ ಸಂಪೂರ್ಣ ಅಂಗೀಕಾರದೊಂದಿಗೆ, ದೇವ ನಿರ್ದೇಶನವನ್ನು ಎಳ್ಳಷ್ಟೂ ಮೀರದೆ, ದೇವಾಜ್ಞೆಗನುಗುಣವಾಗಿ ಕಾರ್ಯನಿರ್ವಹಿಸುತ್ತಿವೆ.

ಆದರೆ, ಮನುಷ್ಯನ ಪರಿಸ್ಥಿತಿ ಇದಕ್ಕೆ ತೀರಾ ತದ್ವಿರುದ್ಧವಾಗಿದೆ. ದೇವನು ಅನುಮತಿಯನ್ನೇ ನೀಡಿರದ ಪದಗಳನ್ನು ತನ್ನ ಬಾಯಿಯಿಂದ ಹೊರಡಿಸುತ್ತಾನೆ. ದೇವನು ಅವನ ಪಾಲಿಗೆ ನಿಷಿದ್ಧಗೊಳಿಸಿದ ಆಹಾರವನ್ನವನು ಉಪಯೋಗಿಸುತ್ತಾನೆ. "ಈ ಮಾರ್ಗದಲ್ಲಿ ಜೀವನ ಸಾಗಿಸುವುದನ್ನು ನಿಷಿದ್ಧಗೊಳಿಸಲಾಗಿದೆ" ಎಂಬ ದೇವಫಲಕವನ್ನು ಕಡೆಗಣಿಸಿ ಅದೇ ಮಾರ್ಗದಲ್ಲಿ ಮನುಷ್ಯನು ಜೀವನ ಸಾಗಿಸುತ್ತಾನೆ. ಮನುಷ್ಯನು ದೇವನಿರ್ಮಿತ ವಿಶಾಲ ಜಗತ್ತಿನ ತುಂಬಾ ಚಿಕ್ಕದಾದ ಅಂಶವಾಗಿದ್ದಾನೆ. ಆದರೆ ಅವನು ಈ ಮಹಾ ವಿಶಾಲ ಜಗತ್ತಿನ ಸಾಮೂಹಿಕ ನಿಯಮಗಳನ್ನು ಗಾಳಿಗೆ ತೂರುತ್ತಾನೆ. ಅವನು ದೇವನ ಸುಧಾರಿತ ಜಗತ್ತಿನಲ್ಲಿ ಗಲಭೆಯುಂಟು ಮಾಡುವ ಮೂಲಕ ಬಂಡಾಯವೆದ್ದಂತೆ ವರ್ತಿಸುತ್ತಾನೆ.

ಇದು ದೇವನ ಸಂಘರ್ಷರಹಿತ ಪ್ರಪಂಚದಲ್ಲಿ ಸಂಘರ್ಷವನ್ನುಂಟುಮಾಡುವ ಪ್ರಯತ್ನವಾಗಿದೆ. ಇದು ಸಾಮರಸ್ಯವುಳ್ಳ ಜಗತ್ತಿನಲ್ಲಿ ಬಿಕ್ಕಟ್ಟು ಮೂಡಿಸುವ ಯತ್ನವಾಗಿದೆ. ಇದು ಒಂದು ಸ್ವಚ್ಛ, ಸುಂದರ ಚಿತ್ರವುಳ್ಳ ಹಾಳೆಯ ಮೇಲೆ ಕೊಳಕು ಕಲೆ ಮೂಡಿಸುವ ಕುತಂತ್ರದಂತೆ. ಇದು, ಒಂದು ಪರಿಪೂರ್ಣವಾದ ಜಗತ್ತಿನಲ್ಲಿ ಅಪರಿಪೂರ್ಣವಾದ ವಸ್ತುವೊಂದನ್ನು ಸೇರಿಸಿದಂತೆ. ಇದು, ದೇವಚರರು ಸಕ್ರಿಯವಾಗಿರುವ ಜಗತ್ತಿನಲ್ಲಿ ಷೈತಾನನ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಂತೆ.

ಪ್ರತಿಕ್ಷಣವೂ ದೇವನ ಮಹಿಮೆ, ಅವನ ಉತ್ತಮ ಅಭಿರುಚಿಯ ಪ್ರತಿಬಿಂಬದಂತೆ ಕಾಣಿಸುವ ಈ ಮಹಾವಿಶ್ವವು, ಮನುಷ್ಯನ ಸಂಘರ್ಷಾತ್ಮಕ ಮನೋಭಾವದಿಂದಾಗಿ ಪರಿಸ್ಥಿತಿಯು ಮುಂದೆಯೂ ಹೀಗೆ ಇರುಬಹುದೆಂಬ ನಿರೀಕ್ಷೆಯನ್ನು ಹುಸಿಯಾಗಿಸುತ್ತದೆ. ದೇವನು ಖಂಡಿತವಾಗಿಯೂ ಈ ಅಕ್ರಮಗಳಿಗೆ ಎಂದಿಗೂ ಅನುಮತಿ ನೀಡನು. ದೇವನ ಉತ್ತಮ ಅಭಿರುಚಿಯು ಇಂತಹ

ಸಂಘರ್ಷದ ಮನೋಭಾವವನ್ನೆಂದೂ ಸಹಿಸದು. ಹಾಗಾಗಿ ದೇವನಿಚ್ಛೆಸದ ಈ ಸಂಘರ್ಷವು ಮುಗಿಸಲ್ಪಡುವ ಮಹಾದಿನವೊಂದು ಆವಶ್ಯವಾಗಿ ಮುಂಬರಲಿರುವುದು. ಆಗ ಜಗತ್ತಿನ ಇತರ ವಸ್ತು, ಪ್ರಾಣಿಗಳ ಮೇಲೆ ದೇವೆಚ್ಛೆಯು ಅನ್ವಯವಾದಂತೆಯೇ ಮನುಷ್ಯನ ಮೇಲೂ ಸಂಪೂರ್ಣ ಅನ್ವಯವಾಗಲಿರುವುದು.

# ದೇವನ ಸಂಕೇತಗಳು

ಮ್ಯಾಕ್ಸ್ ವೆಲ್ ಪ್ರಕೃತಿಯಲ್ಲಿನ ವಿದ್ಯುತ್ಕಾಂತೀಯ ಕ್ರಿಯೆಯ ನಿಯಮಗಳನ್ನು ಗಣಿತದ ಸಮೀಕರಣದ ಮೂಲಕ ಅತ್ಯಂತ ಯಶಸ್ವಿಯಾಗಿ ವಿವರಿಸಿದ ವ್ಯಕ್ತಿಯಾಗಿರುವರು. ಮಹಾನ್ ಜರ್ಮನ್ ವಿಜ್ಞಾನಿ Boltzmann ಇದನ್ನು ನೋಡಿದಾಗ ದಿಗ್ಭ್ರಾಂತರಾಗಿ, "ಇದನ್ನು ಬರೆದ ದೇವನಾರು?." ಎಂದು ಉದ್ಗರಿಸಿದರೆಂದು ಹೇಳಲಾಗುತ್ತದೆ.

Maxwell put the laws of electromagnetic interactions into equations so marvellous that when the great German physicist, Boltzmann, saw them he exclaimed, 'Who was the God wrote these signs?.

ವಿಶ್ವದ ಅಧ್ಯಯನ ನಿರತ ವ್ಯಕ್ತಿಗಳ ಪಾಲಿಗೆ ಅತ್ಯಂತ ಸೋಜಿಗದ ಸಂಗತಿ ಏನೆಂದರೆ, ಅವರ ಪ್ರತಿಯೊಂದು ಅಧ್ಯಯನದ ಅಂತ್ಯವೂ; ಸಂಪೂರ್ಣ ನಿಗೂಢತೆ ಹೊಂದಿದ ಅತ್ಯಂತ ಯುಕ್ತಿಪೂರ್ಣ ವಸ್ತುವೊಂದರೊಂದಿಗೆ ಮುಕ್ತಾಯಗೊಳ್ಳುತ್ತದೆ. ವಿಶ್ವದ ಆಳವಾದ ಅಧ್ಯಯನ ಮಾಡಿದ ಯಾರೇ ಆದರೂ, "ವಿಶ್ವವೆಂಬುದು ಸುವ್ಯವಸ್ಥಿತ ಹಾಗೂ ಸಂಯೋಜನಾತ್ಮಕ ವಿದ್ಯಮಾನವೇ ಹೊರತು ಹಠಾತ್ ವಿದ್ಯಮಾನವೋ ಅಥವಾ ಯಾವುದೇ ಸಂಯೋಜನೆ ಇಲ್ಲದ ಅವ್ಯವಸ್ಥೆಗಳ ಆಗರವೋ ಖಂಡಿತ ಅಲ್ಲ" ಎಂಬುದಾಗಿ ತಮ್ಮ ಅಂತಿಮ ವಿಶ್ಲೇಷಣೆಯಲ್ಲಿ ಹೇಳಬಲ್ಲರು. ಒಬ್ಬ ಅತ್ಯುನ್ನತ ಸಂಯೋಜನಕನ ಹೊರತು ಈ ಸುವ್ಯವಸ್ಥಿತ, ಸಂಯೋಜಿತ ವಿಶ್ವದ ವ್ಯವಸ್ಥೆಯು ಇಷ್ಟೊಂದು ಯಥಾವತ್ತಾಗಿ ನಡೆದುಕೊಂಡು ಹೋಗಲು ಸಾಧ್ಯವಿಲ್ಲ ಎಂಬುದನ್ನು ಅವರು ಚೆನ್ನಾಗಿ ಮನಗಾಣಬಲ್ಲರು.

ಐನ್ ಸ್ಟೈನ್ ಅವರು ಶುದ್ಧ ವೈಜ್ಞಾನಿಕ ಮನಸ್ಥಿತಿವುಳ್ಳ ವ್ಯಕ್ತಿಯಾಗಿದ್ದರು. ಆದಾಗ್ಯೂ ಅವರು, "ಭೌತಶಾಸ್ತ್ರಜ್ಞಕ್ಕಿಂತ ಹೆಚ್ಚಾಗಿ ನಾನೊಬ್ಬ ತತ್ವಜ್ಞಾನಿಯಾಗಿದ್ದೇನೆ.

ಏಕೆಂದರೆ ನಮ್ಮ ಹೊರಗೂ ಒಂದು ವಾಸ್ತವಿಕತೆ ಇದೆ ಎಂಬುದನ್ನು ಮನಃಪೂರ್ವಕವಾಗಿ ಒಪ್ಪುವವನು ನಾನು" ಎಂದಿರುವರು.

I am more a philosopher than a physicist, for I believe there is a reality outside of us. (The World As I see it.) ಐನಸ್ಟೈನ್ ತನ್ನ ಮನೋಭಾವದ ಆಧಾರದ ಮೇಲೆ ತನ್ನನ್ನು ತಾನು, "ನಾನೊಬ್ಬ ಸಂಪೂರ್ಣ ಧಾರ್ಮಿಕ ವ್ಯಕ್ತಿ" ಎಂಬುದಾಗಿ ಹೇಳಿಕೊಳ್ಳುತ್ತಾರೆ.

ಈ ಇಡೀ ವಿಶ್ವವು ದೇವನ ಸಂಕೇತವಾಗಿದೆ. ಅದು ಸೃಷ್ಟಿಯ ರೂಪದಲ್ಲಿ ದೇವನ ಪ್ರತಿಬಿಂಬವನ್ನು ತೋರಿಸುತ್ತದೆ. ಯಾವುದಾದರೂ ವ್ಯಕ್ತಿ ಮುಕ್ತ ಮನಸ್ಸಿನೊಂದಿಗೆ ವಿಶ್ವದ ಅವಲೋಕನ ನಡೆಸಿದ್ದೇ ಆದಲ್ಲಿ, ಅವನು ದೇವನನ್ನು ಪಡೆಯಲು ಸಾಧ್ಯ. ಇನ್ನು ವಕ್ರಬುದ್ಧಿಯುಳ್ಳ ಜನರಂತೂ ಬೆಳಕಿದ್ದರೂ ಕಗ್ಗತ್ತಲೆಯಲ್ಲೇ ವಾಸಿಸಲಿಚ್ಛಿಸುವವರು. ಅಂತಹವರನ್ನು, ದೇವನು ಸಮೀಪವಿದ್ದರೂ ದೇವನನ್ನು ಪಡೆಯಲಾಗದಂತಹ ಅದೃಷ್ಟಹೀನರೆಂದು ವ್ಯಾಖ್ಯಾನಿಸಬಹುದು!.

# ನೈಸರ್ಗಿಕ ದೃಶ್ಯಗಳು

ಮಿಸ್ಟರ್ ಯುಕೆ ಮುಖ್ಯೋಪಾಧ್ಯಾಯ್, ಇವರೊಮ್ಮೆ ಲಂಡನ್ ಗೆ ತೆರಳಿದ್ದ ಸಂದರ್ಭದಲ್ಲಿ, ಒಬ್ಬ ಹಿರಿಯ ಆಂಗ್ಲವ್ಯಕ್ತಿಯೊಂದಿಗೆ ಭೇಟಿಯಾಯಿತು. ಆ ಹಿರಿಯ ಆಂಗ್ಲವ್ಯಕ್ತಿ, 50 ವರ್ಷಗಳ ಹಿಂದೆ (ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ) ರಾಯಲ್ ಏರ್ ಫೋರ್ಸ್ ನಲ್ಲಿ ಅಧಿಕಾರಿಯಾಗಿ ಭಾರತದಲ್ಲಿ ಕಾರ್ಯನಿರ್ವಹಿಸಿದ್ದಂತಹವರು. ಕುಶಲೋಪರಿಯ ಬಳಿಕ ಆ ವ್ಯಕ್ತಿ ತುಂಬಾ ಆಸಕ್ತಿಯೊಂದಿಗೆ ಭಾರತದ ಸ್ಥಿತಿ–ಗತಿಯ ಕುರಿತು ಪ್ರಶ್ನಿಸಿದರು. ಈ ತನ್ಮಧ್ಯೆ ತಾನು ಮುಂಬೈ ಹಾಗೂ ಪುಣೆಯಲ್ಲಿ ಹೆಚ್ಚು ವಾಸ್ತವ್ಯ ಹೂಡಿದ್ದೆ ಎಂಬುದಾಗಿಯೂ, ಅಲ್ಲಿ ತನಗೆ ಮುಂಬೈ–ಪುಣೆಯ ನಡುವಿನ ನದಿ–ಕಾಡು–ಗುಡ್ಡ–ಬೆಟ್ಟಗಳ ಹಾದಿಯಾಗಿ ಚಲಿಸುವ ರೈಲು ಪ್ರಯಾಣ ಬಹು ಇಷ್ಟವಾದುದಾಗಿತ್ತೆಂದೂ ತಿಳಿಸಿದರು. ಬಳಿಕ, ತನ್ನಿಷ್ಟದ ರೈಲು ಪ್ರಯಾಣದ ನಡುವಿನ ಆ ನಯನ ಮನೋಹರ ನೈಸರ್ಗಿಕ ದೃಶ್ಯಗಳನ್ನು ಇನ್ನೊಮ್ಮೆ ಕಣ್ತುಂಬಿಸಿಕೊಳ್ಳುವ ಸಲುವಾಗಿ ಮತ್ತೊಮ್ಮೆ ಭಾರತಕ್ಕೆ ಬರುವ ತನ್ನ ಮನದಿಂಗಿತವನ್ನೂ ಈ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದರು.

ಈ ತನ್ಮಧ್ಯೆ ಮುಖ್ಯೋಪಾಧ್ಯಾಯರು, ಆ ಹಿರಿಯ ಆಂಗ್ಲವ್ಯಕ್ತಿಗೆ, "ಈಗ ಪೂನಾವು ಮೊದಲಿನ ಆ ಪೂನಾದಂತಿಲ್ಲ. ಅದಕ್ಕೀಗ "ಪುಣೆ" ಎಂದು ಹೆಸರಿಸಲಾಗಿದೆ. ಅಲ್ಲಿನ ಜನಸಂಖ್ಯೆ ಈಗ ಹತ್ತು ಪಟ್ಟರಷ್ಟು ಹೆಚ್ಚಾಗಿದೆ. ಹೊಸ ಹೊಸ ರಸ್ತೆಗಳ ನಿರ್ಮಾಣ, ವಿದ್ಯುತ್ ದೀಪಾಲಂಕಾರ ಇವೆಲ್ಲವುಗಳಿಂದಾಗಿ ಅಲ್ಲೀಗ ನೈಸರ್ಗಿಕ ದೃಶ್ಯಾವಳಿಗಿಂತ ಯಾಂತ್ರಿಕ ದೃಶ್ಯಾವಳಿಗಳೇ ಹೆಚ್ಚು ನೋಡಲು ಸಿಗುತ್ತವೆ" ಎಂದು ತಿಳಿಸಿದರು. ಇದನ್ನು ಕೇಳಿದಾಕ್ಷಣ ಆ ಹಿರಿಯ ಆಂಗ್ಲ ವ್ಯಕ್ತಿಯ ಉತ್ಸಾಹವೆಲ್ಲವೂ ಬತ್ತಿ ಹೋಯಿತು. ಅವರು ತಣ್ಣನೆಯ ಧ್ವನಿಯಲ್ಲಿ ಹೀಗೆ ಉದ್ಗರಿಸಿದರು: "ಇಲ್ಲ. ಭಾರತಕ್ಕೆ ಪುನಃ ಬರಬೇಕೆಂಬ ಹಂಬಲ ನನ್ನಲ್ಲೀಗ ಬಾಕಿ

ಉಳಿದೆರಬಹುದೆಂದು ಅನಿಸುವುದಿಲ್ಲ. ನಾನು ನೋಡಲು ಹಂಬಲಿಸುತ್ತಿದ್ದ ಭಾರತ ಈಗ ಮೊದಲಿನಂತಿಲ್ಲ"

No, I don't think I will go to India My India probably does not exist. (Times of India 3 ಫೆಬ್ರವರಿ, 1984)

ಯಾಂತ್ರಿಕ ದೃಶ್ಯಗಳನ್ನು ನೋಡುವಾಗ ಮನುಷ್ಯನಷ್ಟೇ ನೆನಪಿಗೆ ಬರಲು ಸಾಧ್ಯ. ಆದರೆ, ನೈಸರ್ಗಿಕ ದೃಶ್ಯಗಳನ್ನು ನೋಡುವಾಗ ದೇವನು ಸ್ಮೃತಿಪಟಲದಲ್ಲಿ ಹಾದು ಹೋಗುತ್ತಾನೆ. ಯಾಂತ್ರಿಕ ದೃಶ್ಯಗಳಲ್ಲಿ ಮಾನವನ ಕೈ ಚಳಕವು ಗಮನಸೆಳೆದರೆ, ನೈಸರ್ಗಿಕ ದೃಶ್ಯಗಳಲ್ಲಿ ದೇವನ ನೈಪುಣ್ಯತೆಯು ಮನಸ್ಸು ಮುಟ್ಟುತ್ತದೆ. ಯಾಂತ್ರಿಕ ದೃಶ್ಯಗಳಿಂದ ಮನುಷ್ಯನ ಸಂಪರ್ಕವೇರ್ಪಟ್ಟರೆ ನೈಸರ್ಗಿಕ ದೃಶ್ಯಗಳ ಮೂಲಕ ದೇವನನ್ನು ತಲುಪಲು ಸಾಧ್ಯವಾಗುತ್ತದೆ. ಆದುದರಿಂದಲೇ ನೈಸರ್ಗಿಕ ದೃಶ್ಯಾವಳಿಗಳಲ್ಲಿ ತಲ್ಲೀನರಾದಾಗ ಸಿಗುವ ಶಾಂತಿ–ನೆಮ್ಮದಿಯು ಯಾಂತ್ರಿಕ ದೃಶ್ಯಾವಳಿಗಳ ಮೂಲಕ ಸಿಗಲು ಎಂದಿಗೂ ಸಾಧ್ಯವಿಲ್ಲ.

ನೈಸರ್ಗಿಕ ದೃಶ್ಯಗಳು ದೇವನ ಗುಣವೈಶಿಷ್ಟ್ಯಗಳ ಪ್ರತಿಬಿಂಬವಾಗಿವೆ. ಆಕಾಶದ ವಿಶಾಲತೆಯು ದೇವನ ಅನಂತ ಅಸ್ತಿತ್ವದ ಪರಿಚಯ ಮಾಡಿಸುತ್ತದೆ. ಸೂರ್ಯನು ದೇವನು ಪ್ರಖರ ಪ್ರಕಾಶವುಳ್ಳವನೆಂದು ಘೋಷಿಸುತ್ತಿದೆ. ನದಿಯ ಹರಿವು ದೇವನೆಷ್ಟು ದೊಡ್ಡ ಕರುಣಾ ಸಾಗರನೆಂಬುದನ್ನು ಸಾರುವಂತಿದೆ. ಹೂವುಗಳ ಸುವಾಸನೆ ಮತ್ತು ಸೌಂದರ್ಯವು ದೇವನು ಸುಂದರತೆಯ ದೂರದ ಪರಿಚಯವನ್ನು ಮೂಡಿಸುತ್ತದೆ. ನೋಡುವ ಕಣ್ಣುಗಳಿದ್ದರೆ ನೈಸರ್ಗಿಕ ವಿಹಂಗಮ ದೃಶ್ಯಗಳಲ್ಲಿ ದೇವನ ಅಪೂರ್ವ ತೇಜಸ್ಸು ಕಾಣಸಿಗುತ್ತದೆ.

# ಗುರುತಿನ ಚೀಟಿಯ ಹೊರತು..

ಹಳ್ಳಿ ಹುಡುಗನೋರ್ವ ಪಟ್ಟಣಕ್ಕೆ ಬಂದ. ರಸ್ತೆಯಲ್ಲಿ ನಡೆಯುತ್ತಾ, ಅವನೊಂದು ಶಾಲೆಯ ಕಟ್ಟಡದ ಮುಂದೆ ಹಾದು ಹೋಗುತ್ತಿದ್ದ. ಅಂದು ಶಾಲೆಯ ವಾರ್ಷಿಕೋತ್ಸವದ ದಿನ. ನೂರಾರು ಹುಡುಗರು ಶಾಲಾ ಕಿಟಕಿಯ ಮುಂದೆ ಸಾಲುಗಟ್ಟಿ ನಿಂತಿದ್ದರು. ಹಳ್ಳಿ ಹುಡುಗ ಸಮೀಪ ಹೋಗಿ ನೋಡಿದಾಗ ಕಿಟಕಿಯಲ್ಲಿ ಸಿಹಿತಿಂಡಿ ವಿತರಿಸುತ್ತಿರುವುದನ್ನು ಕಂಡ. ಸಾಲಿನಲ್ಲಿ ನಿಂತವರು ಒಬ್ಬೊಬ್ಬರಂತೆ ಸಿಹಿತಿಂಡಿಯ ಪೊಟ್ಟಣ ಪಡೆದು ಹೊರಬರುತ್ತಿದ್ದರು. ಇದನ್ನು ನೋಡಿದ ಹುಡುಗ ತಾನೂ ಸಾಲಿನಲ್ಲಿ ಸೇರಿಕೊಂಡ. ತನ್ನ ಬಾರಿ ಬಂದಾಗ ತನಗೂ ಬೇರೆ ಹುಡುಗರಂತೆ ಸಿಹಿತಿಂಡಿಯ ಪೊಟ್ಟಣ ದೊರೆಯುವುದೆಂದು ಭಾವಿಸುತ್ತಾ, ಮಂದಗತಿಯಲ್ಲಿ ಮುಂದೆ ಸಾಗುತ್ತಿದ್ದ ಸಾಲಿನಲ್ಲಿ ನಿಧಾನವಾಗಿ ಹುಡುಗನೂ ಮುಂದೆ ಮುಂದೆ ಸಾಗುತ್ತಲಿದ್ದ.

ಮಂದ ಗತಿಯಲ್ಲಿ ಸಾಗುತ್ತಿದ್ದ ಸಾಲಿನಲ್ಲಿ ಕೊನೆಗೂ ಹುಡುಗನ ಬಾರಿ ಬಂತು. ಹುಡುಗನು ಸಿಹಿತಿಂಡಿಯ ಪೊಟ್ಟಣ ಪಡೆದುಕೊಳ್ಳಬೇಕೆಂಬ ಲಗುಬಗೆಯಲ್ಲಿ ಕಿಟಕಿಯೆಡೆಗೆ ಕೈ ಚಾಚಿದ. ಕಿಟಕಿಯೊಳಗಿಂದ ಧ್ವನಿ ಬಂತು, "ನಿಮ್ಮ ಗುರುತಿನ ಚೀಟಿ ನೀಡಿರಿ". ಗುರುತಿನ ಚೀಟಿ ಇಲ್ಲದ ಹಳ್ಳಿ ಹುಡುಗನಿಗೆ ಮಿಠಾಯಿ ಪೊಟ್ಟಣವನ್ನು ಕೊಡದೆ ಬರಿಗೈಯಲ್ಲಿ ಕಳುಹಿಸಲಾಯಿತು. "ಈ ಮಿಠಾಯಿ ಪೊಟ್ಟಣ ವರ್ಷಪೂರ್ತಿ ಶಾಲೆಗೆ ಹಾಜರಾತಿ ನೀಡಿದ್ದ ಶಾಲಾ ವಿದ್ಯಾರ್ಥಿಗಳಿಗಷ್ಟೇ ಮೀಸಲಾಗಿತ್ತೇ ಹೊರತು ಎಲ್ಲಿಂದಲೋ ಅಚಾನಕ್ ಆಗಿ ಬಂದು ಕಿಟಕಿಯ ಮುಂದೆ ನಿಂತ ವ್ಯಕ್ತಿಗಳಿಗಾಗಿರಲಿಲ್ಲ" ಎಂಬ ವಾಸ್ತವವು ಆ ಹಳ್ಳಿಹುಡುಗನಿಗೆ ಚೆನ್ನಾಗಿ ಮನದಟ್ಟಾಯಿತು.

ಇದೇ ತೆರನಾದ ಸಂದರ್ಭವು ಪರಲೋಕದಲ್ಲಿಯೂ ಎದುರಾಗಲಿರುವುದು. ಪರಲೋಕದ ಆ ದಿನವು, ದೇವನ ತೀರ್ಪಿನ ದಿನವಾಗಿರುವುದು. ಆ ದಿನ ಎಲ್ಲಾ

ಜನರೂ ದೇವನ ಮುಂದೆ ಜಮೆಗೊಳ್ಳಲಿರುವರು. ಆ ದಿನ, ಜನರಿಗೆ ಅವರವರ ಪಾಲಿನ ಪುರಸ್ಕಾರ ದೊರೆಯಲಿರುವುದು. ಆದರೆ, ಯಾರು ಈ ತೀರ್ಪಿನ ದಿನ ಬರುವ ಮುನ್ನವೇ ಅದಕ್ಕೆ ಬೇಕಾದ ತಯಾರಿ ನಡೆಸಿರುವರೋ, ಯಾರು ತಮ್ಮ "ಗುರುತಿನ ಚೀಟಿ" ಯನ್ನಲ್ಲಿ ತಂದಿರುವರೋ ಅವರಷ್ಟೇ ಪುರಸ್ಕಾರವನ್ನು ಪಡೆಯಲು ಅರ್ಹರೆನಿಸುವರು.

ನೇರವಾಗಿ ದೇವನನ್ನು ನೋಡುವ ಸೌಭಾಗ್ಯವನ್ನು ತರುವ ದಿನವಾಗಿರುವುದದು. ತಮ್ಮ ಸೃಷ್ಟಿಕರ್ತನ ಸ್ಪರ್ಶದ ಹಿತವನ್ನು ಪಡೆಯುವುದಕ್ಕಿಂತ ಮಹಾ ಸೌಭಾಗ್ಯ ಬೇರೆನಿರಲು ತಾನೇ ಸಾಧ್ಯ?. ತಮ್ಮ ಒಡೆಯನ ಸನ್ನಿಧಾನದ ಮುಂದೆ ಶಿರಬಾಗಿ ಸಾಷ್ಟಾಂಗವೆರಗುವುದಕ್ಕಿಂತ ಹೆಚ್ಚಿನ ಗೌರವ, ಹೆಮ್ಮೆ ಮನುಷ್ಯನ ಪಾಲಿಗೆ ಬೇರೇನೂ ಇಲ್ಲ. ಆದರೆ, ಆ ದಿನ ಬರುವುದಕ್ಕಿಂತ ಮುಂಚೆ ದೇವನನುಗ್ರಹಕ್ಕೆ ತಮ್ಮನ್ನು ತಾವು ಅರ್ಹರೆಂದು ಸಾಬೀತುಪಡಿಸಿಕೊಂಡವರು ಮಾತ್ರ ಈ ಎಲ್ಲಾ ಸೌಭಾಗ್ಯಗಳನ್ನು ತಮ್ಮದಾಗಿಸಿಕೊಳ್ಳುವ ಭಾಗ್ಯಶಾಲಿಗಳಾಗಿರುವರು. ನಡುವಿನ ಇನ್ನುಳಿದ ಜನರ ಪಾಲಿಗೆ, ಇಹಲೋಕದಲ್ಲಿ ದೇವನೆಡೆಗೆ ತಾಳಿದ ನಿರ್ಲಕ್ಷ್ಯವೇ ತಮ್ಮ ಮತ್ತು ದೇವನ ನಡುವಿನ ತಡೆಗೋಡೆಯಾಗುವುದು. ದೇವನ ಬಳಿ ತಲುಪಿಯೂ ದೇವನ ದರ್ಶನ ಪಡೆಯಲಾಗದ ದೌರ್ಭಾಗ್ಯಶಾಲಿಗಳವರು. ಮಹಾ ಪುರಸ್ಕಾರದ ದಿನವೂ ತಮ್ಮ ಪಾಲಿಗೇನೂ ಪಡೆಯಲಾಗದೇ ಹೋದ ವಂಚಿತ ಜನರವರು.

# ಪರದೆ ಸರಿದಾಗ

ಅಮೆರಿಕದ ಅಧ್ಯಕ್ಷ ರೊನಾಲ್ಡೋ ರೇಗನ್ 1981ರ ಮಾರ್ಚ್ 30ರಂದು ತುಂಬು ಆತ್ಮವಿಶ್ವಾಸದೊಂದಿಗೆ ತನ್ನ ಅಧ್ಯಕ್ಷೀಯ ಭವನವಾದ ಶ್ವೇತಭವನದಿಂದ (White House) ಹೊರಟರು. ಅವರ ಭದ್ರತಾ ಪಡೆಗಳಿದ್ದ ಕಾರುಗಳು ಅವರನ್ನು ವಾಷಿಂಗ್ಟನ್ ನ ಹೋಟೆಲ್ ಹಿಲ್ಟನ್ ಕಡೆಗೆ ಕರೆದೊಯ್ದುವು. ಮೊದಲೇ ನಿಮಿತ್ತವಾದ ಕಾರ್ಯಕ್ರಮದಂತೆ ಅವರು ಆ ಹೋಟೆಲ್ ನ ಭವ್ಯ ಸಭಾಂಗಣದಲ್ಲೊಂದು ಭಾಷಣ ಮಾಡಿದರು. ಅವರ ಆ ಭಾಷಣಕ್ಕೆ ಮೆಚ್ಚುಗೆಯ ಮಹಾಪೂರವೇ ಹರಿದುಬಂತು.

ಅವರು ತನ್ನ ಭಾಷಣ ಮುಗಿಸಿ ಜನರ ಗುಂಪಿನ ನಡುವೆ ಮಂದಹಾಸದೊಂದಿಗೆ ಹೊರಬಂದರು. ತನ್ನ ಬುಲೆಟ್ ಪ್ರೂಫ್ ಕಾರ್ ಲಿಮೋಸಿನ್ (limousine) ಕಾರಿನಿಂದ ಅವರು ಕೆಲವೇ ಕೆಲವು ಹೆಜ್ಜೆಗಳಷ್ಟು ಅಂತರದಲ್ಲಿದ್ದಾಗ, ಇದ್ದಕ್ಕಿಂದ್ದಂತೆ ಜನರ ಗುಂಪಿನ ನಡುವಿನಿಂದ ಗುಂಡುಗಳನ್ನು ಹಾರಿಸುವ ಶಬ್ದ ಕೇಳತೊಡಗಿತು. ಜಾನ್ ಹಿಂಕ್ಲಿ (Jhon hinkley) ಎಂಬ ಯುವಕನೋರ್ವ ಕೇವಲ 2 ಸೆಕೆಂಡುಗಳ ಅಂತರದಲ್ಲಿ ಆರು ಬಾರಿ ಗುಂಡಿನ ದಾಳಿ ನಡೆಸಿದ್ದನು. ಅವುಗಳ ಪೈಕಿ ಒಂದು ಗುಂಡು ಮಿ. ರೇಗನ್ ರ ಎದೆಯೊಳಗೆ ಹೊಕ್ಕಿತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅವರನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತು. ಅಚಾನಕ್ ಆಗಿ ನಡೆದ ಈ ಗುಂಡಿನ ದಾಳಿಯಿಂದಾಗಿ ಅಮೆರಿಕದ ಅಧ್ಯಕ್ಷರ ಎಷ್ಟು ಕಂಗಾಲಾದರೆಂಬುದನ್ನು ಎಪಿಯ ವರದಿಗಾರನೋರ್ವನು ಈ ರೀತಿಯಾಗಿ ವರದಿ ಮಾಡಿರುವನು.

“Mr Reagan appeared stunned. The smile faded from his lips.” “ಮಿ. ರೇಗನ್ ದಿಗ್ಭ್ರಾಂತರಾದಂತೆ ಕಂಡುಬಂದರು. ಅವರ ತುಟಿಗಳಲ್ಲಿನ ಮಂದಹಾಸ ಮರೆಯಾಗಿತ್ತು.”

(Times of India 31 ಮಾರ್ಚ್, 1981)

ಈ ಘಟನೆಯು ವ್ಯಕ್ತಿಯೊಬ್ಬನೆದುರು ಹಠಾತ್ ಸಾವು ಪ್ರತ್ಯಕ್ಷವಾದಾಗ ಆ ವ್ಯಕ್ತಿಯ ಸ್ಥಿತಿ ಹೇಗಿರುತ್ತಿದೆಂಬುದರ ಚಿತ್ರಣವಾಗಿದೆ. ಪ್ರಸ್ತುತ ಜಗತ್ತಿನಲ್ಲಿ ಮನುಷ್ಯನು ತನ್ನನ್ನು ತಾನು ಸರ್ವ ಸ್ವತಂತ್ರನೆಂದು ಭಾವಿಸಿಕೊಂಡು ಜೀವಿಸುತ್ತಿರುವನು. ಅವನು ನಿರ್ಭಯವಾಗಿ ಮನಬಂದದ್ದನ್ನೆಲ್ಲಾ ಹೇಳುತ್ತಾ, ಸ್ವೇಚ್ಛೆಯೊಂದಿಗೆ ಜೀವಿಸುತ್ತಾ ಇದ್ದಾನೆ. ಒಂದು ವೇಳೆ ಯಾವುದಾದರೂ ವ್ಯಕ್ತಿಯ ಬಳಿ ಒಂದಿಷ್ಟು ಸಂಪತ್ತು ಒಟ್ಟುಗೂಡಿದಾಗ, ಆತನ ತನ್ನ ಭವಿಷ್ಯವಿನ್ನು ಸುಭದ್ರವಾಯಿತೆಂದೇ ಭಾವಿಸುತ್ತಾನೆ. ಇನ್ನು ಅವನ ಕೈಗೆ ಒಂದಿಷ್ಟು ಅಧಿಕಾರ ದೊರೆತರೆ, ಆ ಅಧಿಕಾರವಿನ್ನೆಂದಿಗೂ ಕಸಿಯಲ್ಪಡುವುದಿಲ್ಲ ಎಂಬಂತೆ ಅದನ್ನು ದುರುಪಯೋಗಗೊಳಿಸತೊಡಗುತ್ತಾನೆ. ಇಲ್ಲಿ ಪ್ರತಿಯೋರ್ವರಲ್ಲೂ ಆತ್ಮವಿಶ್ವಾಸ ತುಂಬಿ ತುಳುಕುತ್ತಿದೆ. ಪ್ರತಿಯೋರ್ವರೂ ತಮ್ಮ ತುಟಿಗಳ ನಡುವೆ ಮಂದಹಾಸ ಬೀರುತ್ತಿದ್ದಾರೆ. ಪ್ರತಿಯೋರ್ವರೂ ತಮ್ಮ ಲಿಮೋಸಿನ್ (limousine)ನ ಕಡೆಗೆ ಧಾವಿಸುತ್ತಿದ್ದಾರೆ. ಒಂದು ದಿನ ಅಚಾನಕ್ ಪರದೆ ಸರಿಯುತ್ತದೆ. ಮೃತ್ಯುದೂತನಾಗಿರುವ ದೇವಚರ ಪ್ರತ್ಯಕ್ಷನಾಗಿ ನಮ್ಮನ್ನು ಪ್ರಸಕ್ತ ಜಗತ್ತಿನಿಂದ ಬೇರ್ಪಡಿಸಿ, ಮುಂದಿನ ಲೋಕಕ್ಕೆ ತಲುಪಿಸಿ ಬಿಡುತ್ತಾನೆ.

ಇದು ಪ್ರತಿಯೊಬ್ಬ ಮಾನವನು ತನ್ನ ಬದುಕಿನಲ್ಲಿ ಎದುರಿಸಬೇಕಿರುವ ಅತ್ಯಂತ ಭಯಾನಕ ಕ್ಷಣವಾಗಿದೆ. ವ್ಯಕ್ತಿಯು ಈ ಕ್ಷಣ ಎದುರಾದಾಗ ತನ್ನ ನಿರೀಕ್ಷೆಗಳಿಗೆ ಸಂಪೂರ್ಣ ತದ್ವಿರುದ್ಧವಾದ ಪರಿಸ್ಥಿತಿಯನ್ನು ನೋಡಿ ಒಮ್ಮೆಲೇ ಬೆಚ್ಚಿ ಬೀಳುತ್ತಾನೆ. "ನಾನು ಯಾವ ಇಹದ ಜೀವನವನ್ನು ಅತ್ಯಂತ ದೊಡ್ಡ ವಾಸ್ತವವೆಂದು ತಿಳಿದಿದ್ದೆನೋ ಅದೊಂದು ವಂಚನೆಯ ಸಾಮಾಗ್ರಿಯ ವಿನಹ ಬೇರೇನೂ ಆಗಿರಲಿಲ್ಲ" ಎಂಬುದು ಅವನಿಗೆ ಆ ಕ್ಷಣವೇ ಸಂಪೂರ್ಣವಾಗಿ ಮನದಟ್ಟಾಗುವುದು. "ನಾನು ನನ್ನನ್ನು ಸರ್ವ ಸ್ವತಂತ್ರನೆಂದೇ ಭಾವಿಸಿಕೊಂಡಿದ್ದೆ. ಆದರೆ, ನಾನು ಯಾವುದರ

ಮೇಲೂ ನಿಯಂತ್ರಣವಿರದ ಒಬ್ಬ ಹುಲು ಮಾನವನ ವಿನಃ ಬೇರೇನೂ ಅಲ್ಲ. ನನ್ನ ಬಳಿ ಆಸ್ತಿ, ಸೊತ್ತು-ಸಂತಾನಗಳಿವೆ, ನಾನೊಬ್ಬ ಬಹಳ ಪ್ರಭಾವಿ ವ್ಯಕ್ತಿಯಾಗಿರುವೆನು ಎಂಬುದೆಲ್ಲಾ ಕೇವಲ ನನ್ನ ಭ್ರಮೆಯಾಗಿತ್ತು. ಇಂದು ನಾನು ಹುಟ್ಟುವಾಗ ಇದ್ದಂತೆ ನನ್ನ ಕೈಗಳು ಬರಿದಾಗಿವೆ. ನನ್ನನ್ನು ನಾನು ಬಹಳ ಬಲಶಾಲಿ ವ್ಯಕ್ತಿ ಎಂದೇ ಭಾವಿಸುತ್ತಿದ್ದೆ. ಆದರೆ ದೇವನ ಈ ಮಹಾ ವಿಸ್ತಾರ ಜಗತ್ತಿನಲ್ಲಿ ನಾನು ಸೊಳ್ಳೆ-ನೊಣಗಳಿಗಿಂತಲೂ  ಹಗುರವಾಗಿದ್ದೆ. ನನ್ನ ಬಳಿ ದೊಡ್ಡ ಜನಬಲ ಇದೆ ಎಂದು ನಾನು ಗರ್ವ ಪಡುತ್ತಿದ್ದೆ. ಆದರಿಲ್ಲಿ ನಾನು ಏಕಾಂಗಿಯಾಗಿ ಅಸಾಹಯಕತೆಯನ್ನು ಅನುಭವಿಸುತ್ತಾ ನಿಂತಿದ್ದೇನೆ." ಎಂಬ ವಾಸ್ತವ ಸತ್ಯವನ್ನು ಅವನಾಗ ಅರಿಯುವನು.

ಅಯ್ಯೋ!, ಯಾವ ವಿಷಯವನ್ನು ಮಾನವನು ಬಹಳ ವಿಸ್ತಾರವಾಗಿ ಅರಿಯುವ ತೀವ್ರ ಆವಶ್ಯಕತೆ ಇದೆಯೋ, ಅದರ ಕುರಿತು ಅವನಿಗೆ ಎಳ್ಳಷ್ಟೂ ಅರಿವಿಲ್ಲದಿರುವುದು ಮಹಾ ವಿಪರ್ಯಾಸವೇ ಸರಿ.

# ಪೊಳ್ಳು ಮಹಾನತೆ

ಹಝ್ರತ್ ಉಮರ್ ಫಾರೂಕ್ (ರ.ಅ.) ಮದೀನಾದಲ್ಲಿ ಖಲೀಫರೆಂಬ ನೆಲೆಯಲ್ಲಿ ಭಾಷಣ ಮಾಡುತ್ತಿದ್ದ ಸಂದರ್ಭ; ತನ್ಮಧ್ಯೆ ವ್ಯಕ್ತಿಯೋರ್ವ ಎದ್ದು ನಿಂತು ಹೀಗೆ ಹೇಳತೊಡಗಿದ: "ದೇವನಾಣೆ!, ನಿಮ್ಮಲ್ಲೇನಾದರೂ ನಮಗೆ ವಕ್ರತೆ ಕಂಡುಬಂದರೆ ಈ ಖಡ್ಗದಿಂದಲೇ ಅದನ್ನು ಸರಿಪಡಿಸುವುದನ್ನು ನಾವು ಚೆನ್ನಾಗಿ ಬಲ್ಲೆವು". ಬಾಹ್ಯನೋಟಕ್ಕೆ ಇದು ಬಹಳ ಒರಟು ವರ್ತನೆ ಮತ್ತು ಉದ್ದಟನತವೆನಿಸುವುದು. ಆದರೆ, ಉಮರ್ (ರ.ಅ.) ಅದಕ್ಕೆ ಬೇಸರಪಟ್ಟುಕೊಳ್ಳುವುದಿಲ್ಲ. ಅಲ್ಲಿದ್ದ ಸಭಿಕರ ಪೈಕಿ ಯಾರೊಬ್ಬರೂ ಎದ್ದು ನಿಂತು, "ನೀನು ಹೀಗೆ ವರ್ತಿಸಬಾರದಿತ್ತು" ಎಂದು ಹೇಳುವುದಿಲ್ಲ. ಈ ರೀತಿಯ ವಿಮರ್ಶಾತ್ಮಕ ಸನ್ನಿವೇಶಗಳು ಪ್ರವಾದಿವರ್ಯರ ಸಹಚರರ ನಡುವೆ ದಿನನಿತ್ಯವೆಂಬಂತೆ ಘಟಿಸುತ್ತಿದ್ದವು. ಪ್ರವಾದಿವರ್ಯರ ಸಂಗಾತಿಗಳ ಕಾಲಾನಂತರ ಬಂದ ಅವರನ್ನು ಅನುಸರಿಸುತ್ತಿದ್ದ ತಾಬಾಈಗಳ ಕಾಲ ಮತ್ತು ತಾಬಾಈಗಳನ್ನು ಅನುಸರಿಸುತ್ತಿದ್ದ ತಬೆ-ತಾಬಾಈಗಳ ಕಾಲದಲ್ಲಿಯೂ ಇದೇ ಯಥಾಸ್ಥಿತಿ ಮುಂದುವರಿದುಕೊಂಡು ಹೋಯಿತು. ಆದರೆ ಆ ಕಾಲದಲ್ಲಿ ಯಾರೊಬ್ಬರೂ ಅಂತಹ ವಿಮರ್ಶೆಗಳ ಕುರಿತು ಬೇಸರಪಡಲಿಲ್ಲ, ಅದರಿಂದ ಅಪಾರ್ಥಕ್ಕೊಳಗಾಗಲಿಲ್ಲ. ಹೆಚ್ಚೆಂದರೆ, "ನೀವು ಯಾರದಾದರೂ ವಿಮರ್ಶೆ ಮಾಡುವುದಿದ್ದರೆ ಸಾಕಷ್ಟು ಪುರಾವೆಯೊಂದಿಗೆ ವಿಮರ್ಶೆ ಮಾಡಿರಿ. ಇನ್ನೊಬ್ಬರ ವಿರುದ್ಧ ಪುರಾವೆರಹಿತ ವಿಮರ್ಶೆ ಸರಿಯಲ್ಲ." ಎಂದಷ್ಟೇ ಬುದ್ಧಿಮಾತು ಹೇಳುತ್ತಿದ್ದರು.

ಇದಕ್ಕೆ ಮುಖ್ಯ ಕಾರಣವೇನೆಂದರೆ ಆಗಿನ ಜನರು, ವ್ಯಕ್ತಿಗಳ ಶ್ರೇಷ್ಠತೆಯ ಹಿಂದೆ ಬೀಳುತ್ತಿರಲಿಲ್ಲ. ಬದಲಿಗೆ ಅವರು ಬದುಕುತ್ತಿದ್ದುದು, ಅವರು ಉಸಿರಾಡುತ್ತಿದ್ದುದು ದೇವನ ಶ್ರೇಷ್ಠತೆಯ ನೆರಳಲ್ಲಾಗಿತ್ತು. ಅವರ ಕಾಲದಲ್ಲಿ

ಯಾರಾದರೂ ಇನ್ನೊಬ್ಬರ ವಿರುದ್ಧ ವಿಮರ್ಶೆ ಮಾಡಿದಾಗ ಅದನ್ನು ಗಂಭೀರವಾಗಿ ಪರಿಗಣಿಸುತ್ತಲೇ ಇರಲಿಲ್ಲ, ಅದರಿಂದ ಅವರಿಗೆ ನೋವುಂಟಾಗುತ್ತಲೂ ಇರಲಿಲ್ಲ. ಯಾಕೆಂದರೆ, ಸಕಲ ಮಹಾನತೆ ಮತ್ತು ಶ್ರೇಷ್ಠತೆಗೆ ದೇವನೊಬ್ಬನೇ ಅರ್ಹನು ಎಂಬುದನ್ನು ಅವರ ಬಲವಾದ ನಿಲುವಾಗಿತ್ತು. ಇನ್ನು, ಯಾರಾದರೂ ಜನರ ವಿರುದ್ಧ ವಿಮರ್ಶೆ ಮಾಡಿದರೆ, ದೇವನ ಶ್ರೇಷ್ಠತೆಗೇನೂ ಕುಂದುಂಟಾಗದು.

ಇದಕ್ಕೆ ವ್ಯತಿರಿಕ್ತವಾಗಿ ಪ್ರಸಕ್ತ ಕಾಲದಲ್ಲಿ ಏನಾದರೂ ವ್ಯಕ್ತಿಯೋರ್ವನ ವಿರುದ್ಧ ವಿಮರ್ಶೆ ಮಾಡಿದರೆ, ಆ ವಿಮರ್ಶೆ ಎಷ್ಟೇ ವಾಸ್ತವ ಮತ್ತು ಪುರಾವೆಯೊಂದಿಗೆ ಕೂಡಿದ್ದರೂ ಯಾರ ವಿರುದ್ಧ ವಿಮರ್ಶೆ ಮಾಡಲಾಗಿದೆಯೋ ಆ ವ್ಯಕ್ತಿಯ ಹಿಂಬಾಲಕರು ತಕ್ಷಣವೇ ಕೋಪೋದ್ರಿಕ್ತರಾಗುವುದನ್ನು ನೀವು ಕಾಣಬಲ್ಲಿರಿ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಅಂತಹವರು ಮಾನವರನ್ನೇ ತಮ್ಮ ಪಾಲಿನ "ಮಹಾನ್" ಗಳಾಗಿ ಮಾಡಿಕೊಂಡವರು. ಮಾನವರ ಶ್ರೇಷ್ಠತೆಗೆ ತಲೆಬಾಗಿದವರವರು. ಹೀಗಿರುವಾಗ, ತಾವು ಮಾಡಿಕೊಂಡಿರುವ ತಮ್ಮ ಹೆಮ್ಮೆಯ ಗೋಪುರ ಬೀಳುವುದನ್ನು ಅವರು ಹೇಗೆ ತಾನೆ ಸಹಿಸಿಯಾರು?. ಅಝಾನ್ ಮತ್ತು ನಮಾಝ್ ನಲ್ಲಿ ಜನರು ಪದೇ ಪದೇ ಉಚ್ಛರಿಸುವ "ಅಲ್ಲಾಹು ಅಕ್ಬರ್" (ದೇವನು ಮಹಾನನು) ಕೇವಲ ಪದಗಳಿಗಷ್ಟೇ ಸೀಮಿತವಾಗಿದೆ. ವಾಸ್ತವದಲ್ಲಿ ಜನರು, ವ್ಯಕ್ತಿಗಳ ಮಹಾನತೆಯಲ್ಲೇ ಬದುಕುತ್ತಿರುವರೆ ಹೊರತು ದೇವನ ಮಹಾನತೆಯನ್ನು ಅವರು ಸರಿಯಾಗಿ ಅರಿತಂತಿಲ್ಲ!

ಜನರ ಮಹಾನತೆಯ ನೆರಳಿನಡಿಯಲ್ಲಿ ಬದುಕುತ್ತಿರುವ ಜನರು, "ಇದರ ಅವಧಿ ಕೇವಲ ಇಹಜೀವನದ ಪ್ರಾಯೋಗಿಕ ಹಂತ ಮುಗಿಯುವ ತನಕ ಮಾತ್ರ" ಎಂಬುದನ್ನು ಅರಿತರೆ ಬಹು ಚೆನ್ನ. ಏಕೆಂದರೆ ಈ ಬದುಕಿನ ಪ್ರಾಯೋಗಿಕ ಹಂತ ಮುಗಿದಾಕ್ಷಣವೇ ಜನರ ಮಹಾನತೆಯ ನೆರಳು ಕೂಡ ಅವರಿಂದ

ಮರೆಯಾಗಿಬಿಡುವುದು. ಇನ್ನು ಯಾರು, ವ್ಯಕ್ತಿಗಳ ಪೊಳ್ಳು ಮಹಾನತೆಯ ನೆರಳಿನಡಿಯಲ್ಲಿ ಆಶ್ರಯ ಪಡೆದಿರುವರೋ, ಅಂತಹವರು ದೇವೇತರರ ಪೊಳ್ಳು ಮಹಾನತೆಯೆಲ್ಲವೂ ಮುಗಿದುಹೋಗಿ, ದೇವನೊಬ್ಬನದೇ ನೈಜ ಮಹಾನತೆ ಬಾಕಿ ಉಳಿಯುವ ಸಮಯ ಬಂದಾಗ ಅದಾರ ಮಹಾನತೆಯ ನೆರಳಿನಾಶ್ರಯದ ಮೊರೆ ಹೋಗಬಲ್ಲರು?.

# ದೇವಪುರಾವೆ

إِنَّ فِي السَّمَاوَاتِ وَالْأَرْضِ لَآيَاتٍ لِلْمُؤْمِنِينَ .
وَفِي خَلْقِكُمْ وَمَا يَبُثُّ مِنْ دَابَّةٍ آيَاتٌ لِقَوْمٍ يُوقِنُونَ .
وَاخْتِلَافِ اللَّيْلِ وَالنَّهَارِ وَمَا أَنْزَلَ اللَّهُ مِنَ السَّمَاءِ مِنْ رِزْقٍ فَأَحْيَا بِهِ الْأَرْضَ بَعْدَ مَوْتِهَا وَتَصْرِيفِ
الرِّيَاحِ آيَاتٌ لِقَوْمٍ يَعْقِلُونَ .

45:3–5

ನಿಸ್ಸಂದೇಹವಾಗಿಯೂ ದೇವವಿಶ್ವಾಸಿಗಳಿಗೆ ಆಕಾಶ–ಭೂಮಿಗಳಲ್ಲೂ ಹೇರಳ ಪುರಾವೆಗಳಿವೆ. ಇನ್ನು, ಸ್ವತಃ ನಿಮ್ಮದೇ ದೇಹರಚನೆ ಹಾಗೂ ದೇವನು ಭೂಮಿಯಲ್ಲಿ ಹರಡಿರುವ ಜಾನುವಾರಗಳಲ್ಲೂ ನಿಮಗೆ ಬೇಕಾದಷ್ಟು ಪುರಾವೆಗಳಿವೆ. ಹಾಗೆಯೇ, ರಾತ್ರಿ ಹಾಗೂ ಹಗಲುಗಳು ನಿರಂತರ ಒಂದರ ಹಿಂದೊಂದರಂತೆ ಬರುವುದರಲ್ಲಿ, ದೇವನು ಆಗಸದಿಂದ ಇಳಿಸಿಕೊಡುವ ಆಹಾರದಲ್ಲಿ, ಬಂಜರು ಭೂಮಿಗೆ ಜೀವ ನೀಡಿ, ಅದನ್ನು ಪುನಶ್ಚೇತನಗೊಳಿಸುವುದರಲ್ಲಿ ಮತ್ತು ಗಾಳಿಯ ಚಲನವಲನಗಳಲ್ಲಿ ಚಿಂತನೆ ಮಾಡುವವರ ಪಾಲಿಗೆ ಯಥೇಚ್ಛ ಪುರಾವೆಗಳಿವೆ.

ಜಗತ್ತಿನಲ್ಲಿ ಚಿಂತಿಸುವವರ ಪಾಲಿಗೆ ಯಥೇಚ್ಛ ಪುರಾವೆಗಳಿವೆ ಎನ್ನುವ ಸೂಕ್ತಗಳು ಕುರ್ ಆನಿನಲ್ಲಿ ಹೇರಳ ಇವೆ. ಅರ್ಥಾತ್ ದೇವನು ಮನುಷ್ಯನನ್ನು ಯಾವ ವಾಸ್ತವದ ಮೇಲೆ ವಿಶ್ವಾಸವಿರಿಸಲು ಹೇಳುತ್ತಿರುವನೋ; ಅದಕ್ಕೆ ಬೇಕಾದ ಹೇರಳ ಪುರಾವೆಗಳನ್ನು ಒದಗಿಸುವ ಬಹಳಷ್ಟು ಭೌತಿಕ ವಸ್ತುಗಳನ್ನೂ ಈ ಜಗತ್ತಿನಲ್ಲಿ ಸೃಷ್ಟಿಸಿಟ್ಟಿದ್ದಾನೆ. ಮಾನವನಿಗೆ ವಾಸ್ತವದ ಮೇಲೆ ವಿಶ್ವಾಸವಿರಿಸಲು ಸುಲಭವಾಗಲಿ, ಬಾಹ್ಯಗಣ್ಣಿಗೆ ಗೋಚರಿಸುವ ವಸ್ತುಗಳ ಮೂಲಕ ಬಾಹ್ಯಗಣ್ಣಿಗೆ ಗೋಚರಿಸದ ಪರೋಕ್ಷ ವಾಸ್ತವವನ್ನು ನೋಡಲು ಅವನಿಗೆ ಸಾಧ್ಯವಾಗಲಿ ಎಂಬುದೇ ಇದರ ಹಿಂದಿರುವ ಉದ್ದೇಶ.

ಸೂರ್ಯ–ಚಂದ್ರರು ದೇವನ ಪ್ರಕಾಶಮಯವಾದ ಅಸ್ತಿತ್ವದ ಪರಿಚಯ ಮಾಡಿಸಿದರೆ, ಗುಬ್ಬಚ್ಚಿ ಮತ್ತು ಜಾನುವಾರುಗಳು ದೇವನ ದೇವತ್ವವನ್ನು ಸಾರುವ ಮುಗ್ಧ ಪ್ರತಿನಿಧಿಗಳಾಗಿವೆ. ಆಕಾಶವು ದೇವನ ಅನಂತ ಮಹಿಮೆಯ ಉದ್ಘೋಷವಾದರೆ, ನೀರು ಮತ್ತು ಗಾಳಿಯು ದೇವನ ದಯೆ–ಸಹಾನುಭೂತಿಯ ಉಪಮೆಯಾಗಿದೆ. ವೃಕ್ಷ ಮತ್ತು ಪರ್ವತಗಳು ದೇವನ ಅಸೀಮ ಚೆಲುವನ್ನು ಬಣ್ಣಿಸುತ್ತಿವೆ.

ಒಂದು ವೇಳೆ ಮನುಷ್ಯನು ಈ ಜಗತ್ತನ್ನು ತೆರೆದ ಮನಸ್ಸಿನೊಂದಿಗೆ ಸರಿಯಾಗಿ ಅವಲೋಕಿಸಿದ್ದೇ ಆದಲ್ಲಿ, ಇಲ್ಲಿರುವ ಪ್ರತಿಯೊಂದು ವಸ್ತುವೂ ಅವನಿಗೆ ದೇವಸ್ಮರಣೆಯ ಸಾಧನಗಳಾಗಿ ತೋರುವವು. ಆಗ ಅವನು ಇಲ್ಲಿರುವ ಪ್ರತಿಯೊಂದು ವಸ್ತುವಿನಲ್ಲೂ ದೇವನ ಪ್ರಕಾಶವನ್ನು ಪಡೆಯುವವನಾಗುವನು. ಈ ಮೂಲಕ ಪ್ರತಿಯೊಂದು ವಸ್ತುವಿನ ಹಿಂದೆಯೂ ದೇವನ ಯುಕ್ತಿ ಅಡಗಿರುವುದನ್ನಾತ ಕಂಡುಕೊಳ್ಳುವನು. ಈ ಜಗತ್ತೇ ಅವನ ಪಾಲಿಗೆ ದೇವಮಹಿಮೆಯ ದಿವ್ಯಸಾಗರವಾಗಿ ಮಾರ್ಪಡುವುದು; ಅವನದರಲ್ಲಿ ದಿನನಿತ್ಯ ಮಿಂದೇಳುವ ದಿವ್ಯ ಅನುಭೂತಿಯನ್ನು ಪಡೆಯುವನಾಗುವನು. ಭೂಮಿ ಆಕಾಶಗಳು ಅವನ ಪಾಲಿಗೆ ದೇವನನ್ನು ಸಂಧಿಸುವ, ದೇವನ ಅದ್ಭುತ ಅನುಭೂತಿಯನ್ನು ಪಡೆಯುವ ಭವ್ಯ ಸ್ಥಳವಾಗುವುದು.

# ದೇವನ ವರದಾನ

ಮೊದಲು ನಮ್ಮ ಮನೆಯಲ್ಲೊಂದು ಸರಳವಾದ ಮೀಟರ್ ಬ್ಯಾಂಡ್ ಟ್ರಾನ್ಸಿಸ್ಟರ್ ಇತ್ತು. ಅದರಲ್ಲಿ ಕೇವಲ ದೆಹಲಿಯ ರೆಡಿಯೋ ಸ್ಟೇಶನ್ ನ ಪ್ರಸಾರ ಮಾತ್ರ ಬರುತ್ತಿತ್ತು. ನಾವದರಲ್ಲಿ ದೆಹಲಿಯ ಸುದ್ದಿ–ಸಮಾಚಾರಗಳನ್ನಷ್ಟೇ ಆಲಿಸುತ್ತಿದ್ದೆವು. ಅಂತರ್ ರಾಷ್ಟ್ರೀಯ ಮಟ್ಟದ ಸುದ್ದಿ–ಸಮಾಚಾರಗಳು ಅದರ ಮೂಲಕ ಪ್ರಸಾರವಾಗುವುದಂತೂ ಸಾಧ್ಯವಿರದ ಮಾತಾಗಿತ್ತು. ಬಹಳ ವರ್ಷಗಳ ತನಕ ನಮ್ಮ ಮನೆಯಲ್ಲಿದ್ದ ಈ ಸಣ್ಣ ಟ್ರಾನ್ಸಿಸ್ಟರ್ ನಮಗೆ ರೇಡಿಯೋ ತರಂಗಗಳನ್ನು ಆಲಿಸುವ ಏಕೈಕ ಸಾಧನವಾಗಿತ್ತು.

ಆ ಬಳಿಕ ನಾವು ಚಾರಿಟರ್ ರೆಡಿಯೋ ಸೆಟ್ ಅನ್ನು ಖರೀದಿಸಿದೆವು. ಇದರಲ್ಲಿ ಜಗತ್ತಿನ ಎಲ್ಲಾ ರೇಡಿಯೋ ಕೇಂದ್ರಗಳ ತರಂಗಗಳನ್ನು ಸೆಳೆಯುವ, ಅದರಲ್ಲಿನ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಸಾಮರ್ಥ್ಯವಿತ್ತು. ಈ ಮೂಲಕ ನಾವು ಬಿಬಿಸಿಯಾದಿಯಾಗಿ ಮತ್ತಿತ್ತರ ವಿದೇಶಿ ರೆಡಿಯೋ ಸ್ಟೇಶನ್ ಗಳ ಮೂಲಕ ಪ್ರಸಾರವಾಗುತ್ತಿದ್ದ ಸುದ್ದಿ–ಸಮಾಚಾರ, ಮತ್ತಿತರ ಕಾರ್ಯಕ್ರಮಗಳನ್ನು ಆಲಿಸತೊಡಗಿದೆವು. ಇದರಿಂದಾಗಿ ನಾವು ಅದೆಷ್ಟು ಅಮೂಲ್ಯ ವಿಷಯಗಳಿಂದ ವಂಚಿತರಾಗಿದ್ದೆವಲ್ಲವೇ? ಎಂಬುದರ ಅರಿವೂ ಆಮೇಲಾಯಿತು. ಪ್ರತಿನಿತ್ಯವೂ ವಿದೇಶಿ ರೆಡಿಯೋ ಸ್ಟೇಶನ್ ಗಳು ಅತ್ಯಮೂಲ್ಯವೆನಿಸುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ. ಅವುಗಳನ್ನು ಆಲಿಸುವುದರಿಂದ ಅಗಾಧವಾದ ಬೌದ್ಧಿಕ ವಿಚಾರಗಳನ್ನು ಅರಿಯುವ, ಅನೇಕ ವಿಚಾರಗಳ ಕುರಿತು ಮಾಹಿತಿಗಳ ಪಡೆಯುವ ಸತ್ಪ್ರಯೋಜನವಾಗುವುದು. ಆದರೆ, ದೊಡ್ಡದೊಂದು ರೆಡಿಯೋ ಸೆಟ್ ಖರೀದಿಸುವ ತನಕ ಇಷ್ಟೊಂದು ಜ್ಞಾನ ಭಂಡಾರವಿರುವ ವಿಷಯಗಳನ್ನು ಅರಿಯಲು ನಮಗೆ ಸಾಧ್ಯವಾಗಿರಲಿಲ್ಲ.

ದೇವ ಮತ್ತು ದೇವದಾಸನ ಉದಾಹರಣೆಯೂ ಇದೇ ತೆರನದ್ದಾಗಿದೆ. ದೇವನ ವರದಾನವು ಅಸೀಮಿತವಾದುದು. ದೇವನ ಈ ವರದಾನವು ವರ್ಷಧಾರೆಯ ರೂಪದಲ್ಲಿ

ಭೂ ವಾಸಿಗಳ ಮೇಲೆ ಸದಾ ವರ್ಷಿಸುತ್ತಲೇ ಇರುತ್ತದೆ. ಆದರೆ, ಇದರಲ್ಲಿ ನೀವು ಪಡೆಯಬಹುದಾದ ಪಾಲೆಷ್ಟು ಎಂಬುದನ್ನು ನಿಮ್ಮ ಬಳಿಯಿರುವ "ರೇಡಿಯೊ ಸೆಟ್"ನ ಮೇಲೆ ಅವಲಂಬಿತವಾಗಿದೆ. ಒಂದು ವೇಳೆ ನಿಮ್ಮ ಬಳಿಯಿರುವ ರೇಡಿಯೊ ಸೆಟ್ ತುಂಬಾ ಚಿಕ್ಕದಾಗಿದ್ದರೆ, ದೇವನನುಗ್ರಹದ ಬಹುದೊಡ್ಡ ಪಾಲಿನಿಂದ ನೀವು ವಂಚಿತರಾಗುವಿರಿ. ಅದೇ ನೀವು, ದೊಡ್ಡ ರೇಡಿಯೊ ಸೆಟ್ ಒಂದನ್ನು ನಿಮ್ಮ ಬಳಿ ಹೊಂದಿದ್ದರೆ, ನಿಮ್ಮ ಮೇಲೆ ದೇವನ ವರದಾನಗಳ ವರ್ಷಧಾರೆ ಸುರಿಯತೊಡಗುವುದು. ಆಗ ನೀವು ದಿನನಿತ್ಯವೂ ದೇವನನುಗ್ರಹದ ಅಮಿತ ಸಾಗರದಲ್ಲಿ ಮಿಂದೇಳಬಲ್ಲಿರಿ.

ಇಂದಿನ ಜಗತ್ತಿನಲ್ಲಿ ಪ್ರತಿಯೋರ್ವ ವ್ಯಕ್ತಿಯೂ ಒಂದಲ್ಲಾ ಒಂದು ರೀತಿಯ ಮಿತಿಯುಳ್ಳ ಅಥವಾ ತೀವ್ರ ಸಂದಿಗ್ಧತೆಗೊಳಗಾಗಿರುವ ಬದುಕಿನಿಂದ ಬಳಲುತ್ತಿದ್ದಾನೆ. ಓರ್ವನು ಯಾರದೋ ಕಪಿಮುಷ್ಟಿಯಲ್ಲಿ ತನ್ನನ್ನು ತಾನು ಬಂಧಿಯಾಗಿ ಮಾಡಿಕೊಂಡು ಜೀವಿಸುತ್ತಿದ್ದರೆ, ಇನ್ನೋರ್ವನು ತನ್ನ ಸ್ವ–ಹಿತಾಸಕ್ತಿಯಳ್ಳ, ತೀರಾ ಕಳಪೆ ಅಭಿರುಚಿಯ ಬದುಕಿನ ಹಿಂದೆ ಎಷ್ಟು ವ್ಯಸ್ತನಾಗಿದ್ದಾನೆಂದರೆ, ಆತನಿಗೆ ತನ್ನ ಸುತ್ತಮುತ್ತಲಿನ ಕುರಿತು ಏನೇನೂ ಅರಿವಿದ್ದಂತಿಲ್ಲ. ಇನ್ನು ಕೆಲವರಲ್ಲಿರುವ ಸಂಕುಚಿತ ಮನೋಭಾವವು, ಆಳವಾದ ವಾಸ್ತವಿಕತೆಯನ್ನು ತಲುಪಲಾಗದಂತಿರುವ ಅವರ ಪಾಲಿನ ತಡೆಗೋಡೆಯಾಗಿದೆ.

ಬಾಗಿಲು, ಕಿಟಕಿಗಳನ್ನು ಮುಚ್ಚಿದ ಕೊಠಡಿಯೊಳಗೆ ಹೇಗೆ ಸೂರ್ಯನ ಕಿರಣಗಳು ತಲುಪುವುದಿಲ್ಲವೋ, ಅದೇ ರೀತಿ ಅವಲೋಕನವಿಲ್ಲದ ಮುಚ್ಚಿದ ಮನಸ್ಸುಗಳೆಡೆಗೆ ದೇವನ ವರದಾನಗಳೆಂದಿಗೂ ತಲುಪಲಾರವು. ಯಾರು ತನ್ನ ಅಂತರಂಗದ ಕಿಟಕಿಗಳನ್ನು ತೆರೆದಿಟ್ಟು, ಮುಕ್ತ ಮನಸ್ಸಿನೊಂದಿಗೆ ಈ ಜಗತ್ತಿನ ಅವಲೋಕನ ಮಾಡುತ್ತಾರೋ, ಅಂತವರಷ್ಟೇ ದೇವನ ವರದಾನಗಳಿಗೆ ಅರ್ಹರಾಗುವರು.

# ನೈಸರ್ಗಿಕ ಧರ್ಮ

ಸಮುದ್ರದಲ್ಲಿ ಒಬ್ಬ ವ್ಯಕ್ತಿ ಪಯಣ ಮಾಡಲು ಹೊರಡುವಾಗ, ನೆಲದ ಮೇಲೆ ಬರಿಗಾಲಿನಲ್ಲಿ ನಡೆದಂತೆ ಜಲದಲ್ಲಿ ನಡೆದು ಹೋಗಲಿಕ್ಕಾಗುವುದಿಲ್ಲ. ಹಾಗಾಗಿ, ತನ್ನ ಜಲಪಯಣಕ್ಕಾಗಿ ದೋಣಿಯೊಂದನ್ನು ಆತ ಅಣಿಗೊಳಿಸಿಕೊಳ್ಳುತ್ತಾನೆ. ಆ ಬಳಿಕ ಅದರಲ್ಲಿ ಕುಳಿತು ತನ್ನ ಸಮುದ್ರ ಪ್ರಯಾಣವನ್ನಾತ ಆರಂಭಿಸುತ್ತಾನೆ.

ವ್ಯಕ್ತಿಯ ಈ ಪ್ರಕ್ರಿಯೆಯ ನಡುವಿನಲ್ಲಿ ಅವನಿಗೆ, "ತಾನಿರುವುದು, ದೇವ ನಿರ್ಮಿತ ಜಗತ್ತಿನಲ್ಲೇ ಹೊರತು ಮಾನವ ನಿರ್ಮಿತ ಜಗತ್ತಿನಲ್ಲಲ್ಲ. ಈ ಜಗತ್ತು ನಡೆಯುತ್ತಿರುವುದೂ ದೇವನಿರ್ಮಿತ ವಿಧಾನದನುಸಾರವೇ ಆಗಿದೆ." ಎಂಬ ವಾಸ್ತವ ಬಹಳ ಚೆನ್ನಾಗಿ ಮನದಟ್ಟಾಗುತ್ತದೆ. ದೇವನಿರ್ಮಿತ ವಿಧಾನವನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಲು ಮಾನವನೂ ನಿರ್ಬಂಧಿತನಾಗಿದ್ದಾನೆ. ಒಂದು ವೇಳೆ, ಈ ಜಗತ್ತು ಮಾನವ ನಿರ್ಮಿತವಾಗಿರುತ್ತಿದ್ದರೆ, ಮಾನವರ ನಿಯಮನುಸಾರ ಈ ಜಗತ್ತು ನಡೆಯುತ್ತಿದ್ದಿದ್ದರೆ; ಯಾವುದೇ ಸಾಧನವಿಲ್ಲದೆ ಅವನು ನೆಲದ ಮೇಲೆ ನಡೆದ ಹಾಗೆ ನೀರಿನಲ್ಲೂ ಲೀಲಾಜಾಲವಾಗಿ ನಡೆಯಬೇಕಿತ್ತು.

ಜಗತ್ತಿನ ನೈಸರ್ಗಿಕ ಈ ನಿಯಮಗಳಿಗನುಗುಣವಾದ ಸಾಮರಸ್ಯದ ಈ ವಿಧಾನವನ್ನು ಜನರು ತಮ್ಮ ಜೀವನದಲ್ಲಿ "50 ಪ್ರತಿಶತ" ಅಳವಡಿಸಿಕೊಂಡಿರುವರು. ಅದರಿಂದ ಅವರು ಸ್ವಲ್ಪವೂ ವಿಚಲಿತಗೊಳ್ಳುವುದಿಲ್ಲ. ಆದರೆ, ತಮ್ಮ ಜೀವನದ ಉಳಿದರ್ಧ ಭಾಗದಲ್ಲಿ ಅದನ್ನವರು ಸಂಪೂರ್ಣವಾಗಿ ತೊರೆದಿರುವರು. ಇಸ್ಲಾಂ ಜನರಿಗೆ ಕೊಡುವ ಮುಖ್ಯ ಸಂದೇಶವೂ ಇದೇ ಆಗಿದೆ. ಅದೇನೆಂದರೆ; ತಮ್ಮ ಜೀವನದ ಮೊದಲಾರ್ಧ ಭಾಗದಲ್ಲಿ ನೀವು ನೈಸರ್ಗಿಕ ನಿಯಮಗಳನ್ನು ಅಳವಡಿಸಿಕೊಂಡಂತೆ, ತಮ್ಮ ಬದುಕಿನ ಉತ್ತರಾರ್ಧದಲ್ಲೂ ಅಳವಡಿಸಿಕೊಳ್ಳಿ ಎಂಬುದು.

ಮನುಷ್ಯ ಜೀವನವನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು. ಮೊದಲನೆಯದು ಭೌತಿಕ ವಿಭಾಗವಾದರೆ ಎರಡನೆಯದು ನೈತಿಕ ವಿಭಾಗ. ಮನುಷ್ಯನು

ತನ್ನ ಜೀವನದ ಭೌತಿಕ ವಿಭಾಗದಲ್ಲಿ, ಇನ್ನಿತರ ವಿಷಯಗಳಲ್ಲಿ ದೇವನಿರ್ಮಿತ ವಿಧಾನವನ್ನು ಅನುಸರಿಸದಂತೆಯೇ ದೇವನಿರ್ಮಿತ ವಿಧಾನವನ್ನು ಸಂಪೂರ್ಣವಾಗಿ ಅನುಸರಿಸಲು ಬದ್ಧನು. ಆದರೆ ಮನುಷ್ಯನ ತನ್ನ ಜೀವನದ ನೈತಿಕ ವಿಭಾಗದಲ್ಲಿ ದೇವನಿರ್ಮಿತ ವಿಧಾನವನ್ನು ತೊರೆದು ಸಂಪೂರ್ಣ ಸ್ವೇಚ್ಛಾಚಾರವನ್ನು ಅಳವಡಿಸಿಕೊಂಡಿರುವನು. ಅವನು ಈ ವಿಷಯದಲ್ಲಿ ದೇವನನುಸರಣೆಯನ್ನು ಮಾಡುವ ಬದಲು, ಬಂಡಾಯಕೋರತನವನ್ನು ತನ್ನದಾಗಿಸಿಕೊಂಡಿರುವನು. ವ್ಯಕ್ತಿಯೋರ್ವ ಇಸ್ಲಾಮಿನ ಮಾರ್ಗದರ್ಶನಕ್ಕನುಗುಣವಾಗಿ ನಡೆಯುವುದರ ತಾತ್ಪರ್ಯವೇನೆಂದರೆ, ತನ್ನ ಜೀವನದ ಭೌತಿಕ–ನೈತಿಕ ವಿಭಾಗಗಳ ನಡುವಣ ಇರುವ ವಿರೋಧಾಭಾಸವನ್ನು ಸಂಪೂರ್ಣವಾಗಿ ತೊರೆದು, 100 ಪ್ರತಿಶತ ದೇವನನುಸರಣೆಗೆ ತನ್ನನ್ನು ತಾನು ಬದ್ಧನನ್ನಾಗಿ ಮಾಡಿಕೊಳ್ಳುವುದಾಗಿದೆ.

ಭೌತಿಕ ಜಗತ್ತಿನಲ್ಲಿ ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ವರ್ತಿಸಿದಲ್ಲಿ ಅದರ ದುಷ್ಪರಿಣಾಮವನ್ನು ತಕ್ಷಣವೇ ಅನುಭವಿಸಬೇಕಾಗುವುದರಿಂದ ಸಾಮಾನ್ಯವಾಗಿ ಮಾನವನು ತನ್ನ ಜೀವನದ ಭೌತಿಕ ವಿಭಾಗದಲ್ಲಿ ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ವರ್ತಿಸುವ ಧೈರ್ಯ ತೋರುವುದಿಲ್ಲ. ಆದರೆ, ವ್ಯಕ್ತಿಯೋರ್ವ ತನ್ನ ಜೀವನದ ನೈತಿಕ ವಿಭಾಗದಲ್ಲಿ ತದ್ವಿರುದ್ಧವಾಗಿ ವರ್ತಿಸಿದಲ್ಲಿ, ಅದರ ಅಡ್ಡಪರಿಣಾಮವು ತಕ್ಷಣವೇ ಆ ವ್ಯಕ್ತಿಯ ಎದುರಿಗೆ ಬರುವುದಿಲ್ಲವಾದ್ದರಿಂದ, ಅವನು ತನ್ನ ಜೀವನದ ನೈತಿಕ ನಿಯಮಗಳನ್ನು ಉಲ್ಲಂಘಿಸುತ್ತಲೇ ಹೋಗುತ್ತಾನೆ.

ರೈತರು ಬಿತ್ತನೆ ಮಾಡುವಾಗ ಕೃಷಿನಿಯಮವನ್ನು ಸರಿಯಾಗಿ ಪಾಲಿಸದಿದ್ದಲ್ಲಿ, ಕಟಾವು ಮಾಡುವ ದಿನದಂದು ಅವರು ದೊಡ್ಡ ನಷ್ಟವನ್ನು ಅನುಭವಿಸುವರು. ಇದೇ ರೀತಿ, ಪ್ರಸ್ತುತ ಜಗತ್ತಿನಲ್ಲಿ ಬದುಕು ಸಾಗಿಸುವಾಗ ವ್ಯಕ್ತಿಯೋರ್ವನು ನೈತಿಕತೆಯನ್ನು ಪಾಲಿಸದೇ ಹೋದಲ್ಲಿ, ಪರಲೋಕದ ದಿನದಂದು ಅವನ ಪಾಲಿಗೆ ಮಹಾನಷ್ಟ ಮತ್ತು ಅವಮಾನದ ಹೊರತು ಬೇರೇನೂ ದಕ್ಕುವುದಿಲ್ಲ.

# ಜಗತ್ತಿನ ರಹಸ್ಯ

ಆರ್ಥರ್ ಕೊಯಿಸ್ಲರ್ (Arthor Koestler) ಆಲ್ಬರ್ಟ್ ಐನ್ ಸ್ಟೈನ್ ರ ಹೇಳಿಕೆಯೊಂದನ್ನು ಉಲ್ಲೇಖಿಸಿರುವರು. "ಜಗತ್ತಿನಲ್ಲಿ ಬೇರೂರಿರುವ ಧಾರ್ಮಿಕತೆಯೇ ವೈಜ್ಞಾನಿಕ ಸಂಶೋಧನೆಯ ಪ್ರಬಲ ಮತ್ತು ಉದಾತ್ತ ಪ್ರೇರಣಾ ಶಕ್ತಿಯಾಗಿದೆ ಎಂಬುದನ್ನು ನಾನು ಸಮರ್ಥಿಸುತ್ತೇನೆ. "ಇಂದಿನ ಪ್ರಸ್ತುತ ಭೌತಿಕ ಜಗತ್ತಿನಲ್ಲೂ ಓರ್ವ ಆಳವಾದ ಧಾರ್ಮಿಕ ವ್ಯಕ್ತಿ ಮಾತ್ರ ವಾಸ್ತವವನ್ನು ತಲುಪಬಲ್ಲ ಉನ್ನತ ಸಂಶೋಧನೆಯನ್ನು ಮಾಡಬಲ್ಲ" ಎಂದು ನಮ್ಮ ಸಮಕಾಲೀನ ವಿಜ್ಞಾನಿಯೋರ್ವರು ಹೇಳಿರುವುದು ಸರಿಯಾಗಿಯೇ ಇದೆ."

I maintain that cosmic religiousness is the strongest and most noble driving force of scientific research. A contemporary has said, not unrightly, that the serious research scholar in our generally materialistic age is the only deeply religious human being. (Einstin as quoted by Koestler in Janus)

ಪರೋಕ್ಷದ ಮೇಲೆ ಹೊಂದಿರುವ ನಂಬಿಕೆಯನ್ನೇ ಐನ್ ಸ್ಟೈನ್ ಇಲ್ಲಿ ಧಾರ್ಮಿಕತೆ ಎಂದಿರುವರು. ವಿಜ್ಞಾನಿಯೋರ್ವನು ಹೊಸ ವಿಷಯದ ಅನ್ವೇಷಣೆಗೆ ಹೊರಟಾಗ, ಜಗತ್ತಿನಲ್ಲಿರುವ ಏಕತೆಯ ಬಗ್ಗೆ ಮತ್ತು ಇದರ ಸೃಷ್ಟಿಯ ಹಿಂದಿರುವ ಸದುದ್ದೇಶದ ಕುರಿತು ಅವನೊಳಗೆ ಹುದುಗಿರುವ ನಂಬಿಕೆ ಅವನ ಆ ಹುಡುಕಾಟಕ್ಕೆ ನೆರವಾಗುವುದು, ಅದೇ ಅವನಿಗೆ ಸರಿಯಾದ ದಿಕ್ಕಿನಲ್ಲಿ ಸಾಗುವುದಕ್ಕೆ ಮಾರ್ಗದರ್ಶನ ಮಾಡುವುದು. ಒಂದು ವೇಳೆ ಆತನಲ್ಲಿ ಈ ಕುರಿತು ನಂಬಿಕೆ ಇರದೇ ಹೋದಲ್ಲಿ ಅವನೆಂದೂ ತನ್ನ ಅನ್ವೇಷಣೆಯಲ್ಲಿ ವಾಸ್ತವಿಕತೆಯೆಡೆಗೆ ತಲುಪಲಾರ.

ಹಾಗೆ ನೋಡಲು ಹೋದರೆ, ಒಬ್ಬ ಧಾರ್ಮಿಕ ವ್ಯಕ್ತಿ ಹಾಗೂ ವಿಜ್ಞಾನಿಯ ನಡುವೆ ಅಂತಹ ದೊಡ್ಡ ವ್ಯತ್ಯಾಸವೇನಿಲ್ಲ. ಒಬ್ಬ ಧಾರ್ಮಿಕ ವ್ಯಕ್ತಿಯು, ದೇವನ

ಸಂತುಷ್ಟಿಯನ್ನು ಪಡೆಯುವ ಸಲುವಾಗಿ ಹಾಗೂ ಪರಲೋಕದಲ್ಲಿ ಸತ್ಫಲವನ್ನು ಗಳಿಸುವ ಉದ್ದೇಶದೊಂದಿಗೆ ಸತ್ಕರ್ಮಗಳನ್ನೆಸುಗುತ್ತಾನೆ. ಆ ಧಾರ್ಮಿಕ ವ್ಯಕ್ತಿಯು ದೇವನನ್ನಾಗಲೀ, ಪರಲೋಕ–ವನ್ನಾಗಲೀ ಕಣ್ಣಾರೆ ನೋಡಿರುವುದಿಲ್ಲ. ಆದರೂ ಸಂಪೂರ್ಣ ತನ್ಮಯತೆಯಿಂದ ತನ್ನ ಕಾರ್ಯದಲ್ಲಾತನು ಮಗ್ನನಾಗಿರುತ್ತಾನೆ. ಈ ತನ್ಮಯತೆಯ ಕಾರಣದಿಂದಲೇ ಕಣ್ಣಿಗೆ ಕಾಣದ ಪರೋಕ್ಷದ ವಾಸ್ತವಿಕತೆಯ ಮೇಲಾತನು ಸಂಪೂರ್ಣ ವಿಶ್ವಾಸ ಹೊಂದಿರುತ್ತಾನೆ. ವಿಜ್ಞಾನಿಯದ್ದೂ ಇದೇ ರೀತಿಯ ಸ್ಥಿತಿಯಾಗಿದೆ. ಆತನು ತನ್ನ ಪೂರ್ತಿ ಆಯಸ್ಸನ್ನು ಯಾವುದೋ ವಾಸ್ತವಿಕತೆಯ ಅನ್ವೇಷಣೆಯಡಿಯಲ್ಲಿ ಕಳೆಯುತ್ತಾನೆ. ಆ ವಾಸ್ತವಿಕತೆಯು ಅಜ್ಞಾತ ಲೋಕದಲ್ಲಿ ಅಡಗಿರುತ್ತದೆ. ಆ ವಿಜ್ಞಾನಿಯು ಯಾವ ವಸ್ತುವಿನ ಅನ್ವೇಷಣೆಯಲ್ಲಿ ತೊಡಗಿರುತ್ತಾನೋ, ಅದನ್ನು ಕಾಣುವ ಮೊದಲೇ, ಅದರ ಕುರಿತು ಸಂಪೂರ್ಣ ಅರಿವನ್ನು ಪಡೆಯುವ ಮೊದಲೇ, ಅದರ ಇರುವಿಕೆಯ ಕುರಿತು ಆತ ವಿಶ್ವಾಸ ತಾಳಿರುತ್ತಾನೆ.

ಪರೋಕ್ಷದ ಮೇಲೆ ಅಥವಾ ಅಜ್ಞಾತ ಲೋಕದ ಮೇಲೆ ವಿಶ್ವಾಸವಿರಿಸುವುದೇ ಅಸಲಿಗೆ ಧರ್ಮದ ಮೂಲತತ್ವವಾಗಿದೆ. ಆ ಅಜ್ಞಾತ ಲೋಕವಾಗಲಿ, ಅದರಲ್ಲಿರುವ ವಸ್ತುಗಳಾಗಲಿ ನಮ್ಮ ಹೊರಗಣ್ಣಿಗೆ ಗೋಚರಿಸುವುದಿಲ್ಲ. ವೈಜ್ಞಾನಿಕ ಅನ್ವೇಷಣೆಯ ಮೂಲತತ್ವವೂ ಇದೇ ಸ್ವರೂಪದ್ದಾಗಿದೆ. ಪ್ರಸ್ತುತ ಜಗತ್ತಿನಲ್ಲಿ ಧಾರ್ಮಿಕ ವ್ಯಕ್ತಿ ನಿಂತಿರುವ ಸ್ಥಳದಲ್ಲೇ ವಿಜ್ಞಾನಿಯೂ ನಿಂತಿರುವನು. ಈ ಜಗತ್ತಿನಲ್ಲಿ ಎಲ್ಲ ಉನ್ನತ ವಾಸ್ತವಿಕತೆಗಳೂ ಅಜ್ಞಾತವಾಗಿರುವ ವಾಸ್ತವಿಕತೆಗಳೇ ಆಗಿವೆ. ಆದುದರಿಂದ ಯಾವ ವ್ಯಕ್ತಿಯು ಪರೋಕ್ಷ ಅಥವಾ ಅಜ್ಞಾತ ಲೋಕದ ಮೇಲೆ ಸಂಪೂರ್ಣ ಭರವಸೆ ಹೊಂದಿರುವನೋ, ಅವನು ಮಾತ್ರ ಇಂತಹ ಉನ್ನತ ಅನ್ವೇಷಣಾ ಕಾರ್ಯದಲ್ಲಿ ಸಂಪೂರ್ಣವಾಗಿ ತನ್ನನ್ನು ತಾನು ತೊಡಗಿಸಿಕೊಂಡು ಅದರಲ್ಲಿ ಯಶಸ್ಸು ಸಾಧಿಸಬಲ್ಲನು.

# ಮಾನವನ ಅಸಹಾಯಕತೆ

ಬಾಂಗ್ಲಾವು ಹಲವಾರು ದ್ವೀಪಗಳುಳ್ಳ ದೇಶವಾಗಿದೆ. ಆ ದ್ವೀಪಗಳಲ್ಲಿ ಆಗಾಗ್ಗೆ ಬೀಸುವ ಚಂಡಮಾರುತದಿಂದಾಗಿ ಅಲ್ಲಿನ ವಾಸಿಗಳಿಗೆ ಅಪಾರ ಹಾನಿಯುಂ–ಟಾಗುತ್ತಿರುತ್ತದೆ. ಇದುವರೆಗೆ ಬಂದ ವರದಿಗಳು ಹೀಗೆ ಹೇಳುತ್ತಿವೆ: 1976ರಲ್ಲಿ ಅಲ್ಲಿ ಪ್ರಬಲ ಚಂಡಮಾರುತವೊಂದು ಬೀಸಿದ ಪರಿಣಾಮವಾಗಿ ಸರಿಸುಮಾರು 3 ಲಕ್ಷ ಮಾನವರು ಜೀವ ಕಳೆದುಕೊಂಡದ್ದಲ್ಲದ್ದೇ ಅಲ್ಲಿನ ಅಪಾರ ಆಸ್ತಿ–ಪಾಸ್ತಿಗಳು ಹಾನಿಗೊಳಗಾದವು.

1985ರಲ್ಲಿ ಇಲ್ಲಿ ಮತ್ತೊಮ್ಮೆ ಭೀಕರ ಚಂಡಮಾರುತವೆರಗಿತು. ಈ ಚಂಡಮಾರುತವು ಘಂಟೆಗೆ 50 ಕಿ.ಮೀ. ವೇಗದೊಂದಿಗೆ ಬಾಂಗ್ಲಾದ ಸರಿಸುಮಾರು 1,000 ದ್ವೀಪಗಳ ಮೇಲಪ್ಪಳಿಸಿತು. ಇನ್ನೊಂದೆಡೆ ನಾಲ್ಕು ಮೀಟರ್ ಗಳಿಗಿಂತಲೂ ಹೆಚ್ಚಿನ ಎತ್ತರದ ಅಲೆಗಳು ದ್ವೀಪಗಳನ್ನಾವರಿಸಿದವು. ಸರಿ–ಸುಮಾರು ಒಂದು ಲಕ್ಷ ಜನರು ಆಗಿನ ದುಸ್ಥಿತಿಯನ್ನೆದುರಿಸಲಾಗದೇ ಪ್ರಾಣ ತೆತ್ತರು. ನೂರಾರು ಊರುಗಳು ಅಲೆಗಳಲ್ಲಿ ಹುಲ್ಲು ಕಡ್ಡಿಯಂತೆ ತೇಲಿ ಹೋದವು. ತನ್ನ ಕಣ್ಣೆದುರೇ ನಡೆದ ಈ ಘಟನೆಯನ್ನು ಆಂಗ್ಲ ದಿನಪತ್ರಿಕೆಯೊಂದರ ವರದಿಗಾರ ಈ ರೀತಿ ವಿವರಿಸಿರುವನು.

Urir Char.. looks like it has been bombed relentlessly. Not a single structure, save the concrete forest office stands erect. In fact so fierce has been the force of the gale and tidal waves that not only the houses, but even the building materials were washed away, leaving behind just mounds.

ಇನ್ನೋರ್ವ ಆಂಗ್ಲ ಪತ್ರಿಕೆಯ ವರದಿಗಾರ (29 ಮೇ, 1985) ಈ ಚಂಡಮಾರುತದ ಭೀಕರ ಘಟನೆಯನ್ನು ವಿಮರ್ಶಿಸುತ್ತಾ ಹೀಗೆ ಬರೆಯುತ್ತಾನೆ. "ಪ್ರಕೃತಿಯ ವಿಕೋಪದ ಮುಂದೆ ಮಾನವನೆಷ್ಟು ಅಸಹಾಯಕ ಎಂಬುದನ್ನು ಈ

ಮಾರಕ ಚಂಡಮಾರುತವು ಅನಾವರಣ ಮಾಡಿದೆ.” “murderous cyclones which expose man’s helpessness before nature’s fury.”

ಇಂತಹ ಭೀಕರ ಘಟನೆಗಳು ಮನುಷ್ಯನಿಗೆ ವಾಸ್ತವಿಕತೆಯ ಅನಾವರಣ ಮಾಡಿಸುತ್ತವೆ. ದೇವನೆದುರು ಮನುಷ್ಯನೆಷ್ಟು ದುರ್ಬಲನಾಗಿರುವನೆಂಬುದರ ಅನಾವರಣವದು. ಇಂತಹ ಘಟನೆಗಳು, ‘ಈ ದಿನ ದೇವನ ಹಿಡಿತದಿಂದ ಪಾರಾಗಲು ಸಾಧ್ಯವಿಲ್ಲದಿರುವಾಗ, ನಾಳೆಯ ದಿನ ಪರಲೋಕದಲ್ಲಿ ದೇವನ ಹಿಡಿತದಿಂದ ಪಾರಾಗಲು ಸಾಧ್ಯವೇ?’ ಎಂಬುದನ್ನು ಎಚ್ಚರಿಸುವ ಕರೆಘಂಟೆಗಳಾಗಿವೆ. ಈ ನಶ್ವರ ಜಗತ್ತಿನಲ್ಲಿ ಮನುಷ್ಯನಿಗೆ ಇಂತಹ ದುಸ್ಥಿತಿ ಒದಗಿದರೆ, ಮುಂದೆ ಶಾಶ್ವತವಾದ ಪರಲೋಕದಲ್ಲಿ ತಾನು ಮಾಡಿದ ಪಾಪದ ಫಲವನನ್ನುಭವಿಸುವಾಗ ಆತನ ಸ್ಥಿತಿ ಎಷ್ಟು ಭಯಾನಕವಾಗಿರಬಹುದು?.

# ಮನುಷ್ಯನ ಹುಡುಕಾಟ

ಫಿಲಿಫ್ ಜಾನ್ ಬೇಯರ್ (Philiph Jhon Bayer) ಅಮೆರಿಕದ ಒಬ್ಬ ಬಹುದೊಡ್ಡ ವ್ಯಾಪಾರಿಯಾಗಿದ್ದರು. ಅವರು ಕ್ವಿಕ್ಕರ್ ಸ್ಟೇಟ್ ರಿಫೈನಿಂಗ್ ಕೊ. ನ (Quaker State Refining Co.) ಸ್ಥಾಪಕರು. ಅವರಿಗಿದ್ದದ್ದು ಕೇವಲ ಒಬ್ಬನೇ ಒಬ್ಬ ಮಗ. ಅವರ ಆ ಮಗನಿಗೆ ತಾನು ಇಹಲೋಕ ತೊರೆಯುವಾಗ ಬಿಟ್ಟುಹೋಗಿದ್ದು ಕೇವಲ ಒಬ್ಬಳೇ ಒಬ್ಬ ವಾರೀಸುದಾರಳನ್ನು; ಆಕೆಯ ಹೆಸರು ಎಲೀನರ್ ರಿಚಿ (Eleanor Ritchey).

ಎಲೀನರ್ ರಿಚಿ ಅಪಾರ ಸಂಪತ್ತಿನ ಒಡತಿಯಾಗಿದ್ದಳು. ಜನರನ್ನು ಸದಾ ದ್ವೇಷಿಸುತ್ತಿದ್ದ ಆಕೆ, ವಿವಾಹವೂ ಆಗದೆ ತನ್ನ ಬದುಕಿನುದ್ದಕ್ಕೂ ಒಬ್ಬಂಟಿಯಾಗಿಯೇ ಉಳಿದಳು. ಅಕ್ಟೋಬರ್ 14, 1968ರಲ್ಲಿ ಮರಣ ಹೊಂದಿದಾಗ ಆಕೆ 58 ವಯಸ್ಸಿನವಳಾಗಿದ್ದಳು. ಮನುಷ್ಯರೊಂದಿಗೆ ಬೆರೆಯದ ಆಕೆ, ತನ್ನ ಮನಸ್ಸಂತೋಷಕ್ಕಾಗಿ ವಿಚಿತ್ರ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದಳು. ಉದಾ: ಆಕೆ ಹೆಚ್ಚೆಚ್ಚು ಪಾದರಕ್ಷೆಗಳನ್ನು ಕೊಂಡುಕೊಳ್ಳುತ್ತಿದ್ದಳು. ಹಾಗೆ ಖರೀದಿಸಿದ ಹೊಸ ಪಾದರಕ್ಷೆಗಳನ್ನಾಕೆ ಧರಿಸುತ್ತಿದ್ದುದು ಕೇವಲ ಒಂದೇ ಒಂದು ಬಾರಿ. ಹಾಗಾಗಿಯೇ ಆಕೆ ಮರಣ ಹೊಂದುವಾಗ ಆಕೆಯ ಮನೆಯಲ್ಲಿ 1707 ಜೋಡಿ ಪಾದರಕ್ಷೆಗಳಿದ್ದವು. ಇದೇ ರೀತಿ ಅವಳ ಮನೆಯಲ್ಲಿ 1224 ಸ್ಟೇಶನರಿ ಪೆಟ್ಟಿಗೆಗಳಿದ್ದವು. ಇತ್ಯಾದಿ…

ನಾಯಿ ಸಾಕುವುದೂ ಆಕೆಯ ವಿಚಿತ್ರ ಹವ್ಯಾಸಗಳ ಪೈಕಿ ಒಂದಾಗಿತ್ತು. ತನ್ನ ಕಾರಿನಲ್ಲಿ ಆಕೆ ಸುತ್ತಲು ಹೊರಟಾಗ ಯಾವುದಾದರೂ ಬೀದಿನಾಯಿಯನ್ನು ಕಂಡಲ್ಲಿ, ಅದನ್ನು ತನ್ನ ನೌಕರರ ಮೂಲಕ ಹಿಡಿದು, ಮನೆಗೆ ತಂದು ಅದರ ವಿಶೇಷ ಆರೈಕೆ ಮಾಡುತ್ತಿದ್ದಳು. ಈ ರೀತಿ ಆಕೆಯ ಬಳಿ 150 ನಾಯಿಗಳು ಒಟ್ಟುಗೂಡಿದ್ದವು. ಆಕೆಯ

ಮನೆಯ ವರಾಂಡದಲ್ಲಿರುವ ಜಾಗ ನಾಯಿಗಳಿಗೆ ಸಾಕಾಗುವುದಿಲ್ಲ ಎಂದೆಸಿದಾಗ ಆಕೆ, ಮೊತ್ತಮೊದಲು 12 ಎಕರೆ ಜಮೀನನ್ನು ಖರೀದಿಸಿದಳು. ಅದೂ ಸಾಕಾಗಾದಾಗ ಇನ್ನೂ 180 ಎಕರೆ ಜಮೀನನ್ನು ಆ ಬೀದಿ ನಾಯಿಗಳ ವಿಶೇಷ ಆರೈಕೆಗೆಂದೇ ಕೊಂಡುಕೊಂಡಳು.

ಎಲೀನರ್ ರಿಚಿಯು ತನ್ನ ಮರಣಕ್ಕಿಂತ ಮುಂಚೆ ವಿಶೇಷ ಉಯಿಲೊಂದನ್ನು ತಯ್ಯಾರು ಮಾಡಿದಳು, ಅದರಲ್ಲಾಕೆ, "ನನ್ನ ಕಾಲಾನಂತರ ನನ್ನ ಸಂಪತ್ತೆಲ್ಲವೂ ನನ್ನ ಸಾಕು ನಾಯಿಗಳ ಆರೈಕೆಗೆ ವಿನಿಯೋಗವಾಗಬೇಕು. ಆ ನಾಯಿಗಳೆಲ್ಲಾ ಒಂದೊಂದಾಗಿ ಎಲ್ಲವೂ ಸತ್ತ ನಂತರ ನನ್ನ ಸಂಪೂರ್ಣ ಆಸ್ತಿಯನ್ನು ಅಲ್ಬಾಮಾ ಪಶುವೈದ್ಯ ವಿಜ್ಞಾನ ಶಾಲೆಯ (School of Veterinary Science) ಸುಪರ್ದಿಗೆ ನೀಡಬೇಕು" ಎಂದು ತಾಕೀತು ಮಾಡಿದಳು. ಈಗ ಅವಳ ನಾಯಿಗಳ ಪೈಕಿ ಕೇವಲ ಒಂದೇ ಒಂದು ನಾಯಿ ಜೀವಂತವಿದೆ. ಅದರ ಹೆಸರು ಮಸ್ಕಿಟೀರ್ (Musketeer) ಎಂದಾಗಿದೆ. ಈ ನಾಯಿ ಎಷ್ಟು ಮುದಿಯಾಗಿದೆಯೆಂದರೆ, 23ರ ಹರೆಯದ ಈ ನಾಯಿ ನಡೆಯುವಾಗ ಕಂಪಿಸುವಷ್ಟು ಬಲಹೀನವಾಗಿದೆ. ಮತ್ತದು ಸೀನಿದಾಗ ಬಲ ಸಾಕಾಗಲಾರದೆ ನೆಲಕ್ಕೆ ಬೀಳುವಷ್ಟು ಮುದಿಯಾಗಿದೆ. ಈ ನಾಯಿಯ ಪರಿಸ್ಥಿತಿ ನೋಡಿದರೆ ಅದು ಶೀಘ್ರದಲ್ಲೇ ಸಾವನ್ನಪ್ಪುವಂತೆ ತೋರುತ್ತದೆ. ಅದು ಸತ್ತಬಳಿಕ ತನ್ನಿಂತಾನೆ ಅಲ್ಬಾಮಾ ಪಶುವೈದ್ಯ ವಿಜ್ಞಾನ ಶಾಲೆಗೆ ಎಲೀನರ್ ರಿಚಿಯ 12 ಮಿಲಿಯನ್ ಡಾಲರ್ ಸಂಪತ್ತು ವರ್ಗಾವಣೆ ಆಗುತ್ತದೆ.

(ಟೈಮ್ಸ್ ಆಫ್ ಇಂಡಿಯಾ, 2 ಜನವರಿ, 1984)

ಮನುಷ್ಯನಿಗೆ ಒಂದು ವೇಳೆ ಆದರ್ಶ ವ್ಯಕ್ತಿಯು ದೊರೆಯದೇ ಹೋದಲ್ಲಿ, ಅವನು ಆದರ್ಶ ಸಿದ್ಧಾಂತವನ್ನು ಹುಡುಕಬೇಕು. ಎಲೀನರ್ ರಿಚಿಯ ಬಳಿ ಒಂದು ವೇಳೆ ಆದರ್ಶ ಸಿದ್ಧಾಂತವಿದ್ದಿದ್ದರೆ ಬಹುಶಃ ಆಕೆಯ ಪಾಲಿಗೆ ಮನುಷ್ಯರು ದ್ವೇಷದ ವಸ್ತುವಾಗುವ ಬದಲು ಪ್ರೀತಿಯ ಚಿಲುಮೆಯಾಗುತ್ತಿದ್ದರೇನೋ!

# ಮಾನವನ ಗಳಿಕೆ

“ಸತ್ಯ ಧಿಕ್ಕಾರಿಗಳನ್ನು ನರಕದೆದುರು ತರಲಾಗುವ ದಿನ ಅವರೊಡನೆ ಹೇಳಲಾಗುವುದು, ನೀವು ನಿಮ್ಮ ಪಾಲಿನ ಒಳ್ಳೆಯ ವಸ್ತುಗಳನ್ನೆಲ್ಲಾ ನೀವು ಇಹಜೀವನದಲ್ಲೇ ಪಡೆದುಬಿಟ್ಟಿರುವಿರಿ. ಅಲ್ಲಿ ನಿಮ್ಮಿಷ್ಟದ ವಸ್ತುಗಳನ್ನೆಲ್ಲಾ ಧಾರಾಳ ಭೋಗಿಸಿದಿರಿ. ಇಂದಿಲ್ಲಿ ನಿಮಗೆ ಸಿಗಲಿರುವುದು ಅವಮಾನಕಾರಿ ಶಿಕ್ಷೆ ಮಾತ್ರ. ಇದು, ನೀವು ಭೂಮಿಯಲ್ಲಿ ಅನ್ಯಾಯವಾಗಿ ಮೆರೆದ ಅಹಂಕಾರ ಮತ್ತು ನಿಮ್ಮ ಅವಿಧೇಯತೆಯ ಪ್ರತಿಫಲವಾಗಿದೆ.” (ಅಲ್ ಅಹ್ ಕಾಫ್– 20)

ಈ ಜಗತ್ತಿನಲ್ಲಿ ಮಾನವನಿಗೆ ದೊರೆಯುವ ದೈಹಿಕ ಶಕ್ತಿ, ಬುದ್ಧಿ ಶಕ್ತಿ, ಸಂಪತ್ತು, ಸ್ಥಾನ–ಮಾನ, ಅವಕಾಶಗಳು ಮುಂತಾದ ಎಲ್ಲ ಸಾಧನ–ಸಂಪನ್ಮೂಲಗಳು ದೇವನ ಕೊಡುಗೆಯಾಗಿದೆ. ಈ ಸಾಧನಗಳ ಮೂಲಕ ಮನುಷ್ಯನು ತನಗಾಗಿ ಏನಾದರೂ ಗಳಿಸಲೆಂದು ದೇವನು ಇವೆಲ್ಲವನ್ನೂ ನೀಡಿದ್ದಾನೆ.

ಇಲ್ಲಿ ಗಳಿಕೆ ಎಂದು ಹೇಳಿರುವುದರ ತಾತ್ಪರ್ಯ ಮಾನಸಿಕ ಗಳಿಕೆಯಾಗಿದೆ. ಅವುಗಳಲ್ಲಿ ಎರಡು ವಿಧ. ಮೊದಲನೆಯದು ಮೇಲೆ ನೀಡಲಾದ ಕುರ್ ಆನ್ ಸೂಕ್ತದಲ್ಲಿ ಹೇಳಲಾದ ದುರಂಹಕಾರ ಮತ್ತು ಕರ್ಮಭ್ರಷ್ಟತನವಾಗಿದ್ದರೆ, ಎರಡನೆಯ ವಿಧ ಇದಕ್ಕೆ ತದ್ವಿರುದ್ಧವಾದ ನಯ–ವಿನಯ ಹಾಗೂ ಕೃತಜ್ಞಾಭಾವವಾಗಿದೆ.

ಒಂದು ವೇಳೆ ದೇವನ ಕೊಡುಗೆಗಳನ್ನು ಪಡೆದ ವ್ಯಕ್ತಿಯು ದುರಂಹಕಾರದಲ್ಲಿ ಮುಳುಗಿದರೆ ಅಥವಾ ಜನರು ತನ್ನ ಹಿರಿಮೆಯ ಗುಣಗಾನ ಮಾಡಲಿ ಎಂದು ಬಯಸಿದರೆ, ಅಥವಾ ಅವುಗಳನ್ನು ತನ್ನ ಪ್ರಸಿದ್ಧಿ ಅಥವಾ ನಾಯಕತ್ವ ಪಡೆಯಲು ಬಳಸಿದರೆ ಅವನು ತನಗೆ ಸಿಕ್ಕ ಸದವಾಕಾಶವನ್ನು ನಾಶಪಡಿಸಿಕೊಂಡಂತಾಗುವುದು. ಆತನಿಗೆ ತನ್ನ ಶಾಶ್ವತ ಪರಲೋಕದ ಗಳಿಕೆಗಾಗಿ ಯಾವ ಪರಿಕರಿಗಳನ್ನು ನೀಡಲಾಗಿತ್ತೋ ಅದನ್ನಾತ ಕೇವಲ ಈ ನಶ್ವರ ಜಗತ್ತಿಗಾಗಿ

ಬಳಸಿಕೊಂಡಂತಾಗುವುದು. ಅಂತಹ ವ್ಯಕ್ತಿಯು ತನ್ನ ಭವಿಷ್ಯದ ಪರಲೋಕದ ಜೀವನವನ್ನು ಭೀಭತ್ಸತೆಯೊಂದಿಗಿನ ಮಹಾನಷ್ಟದಲ್ಲೇ ಕಳೆಯಬೇಕಾಗುವುದು.

ಇನ್ನೋರ್ವ ವ್ಯಕ್ತಿಯು ಜೀವನ ಸಾಧನಗಳನ್ನು ಪಡೆದ ಬಳಿಕ, ಅವುಗಳನ್ನು ದೇವನಿಂದ ದೊರೆತ ವಸ್ತುಗಳಿವು ಎಂದು ಅರಿತುಕೊಂಡು, ತನ್ನೊಳಗೆ ನಯ–ವಿನಯ ಅಳವಡಿಸಿಕೊಂಡವನು. ಅವನವುಗಳನ್ನು ದೇವನ ಕೊಡುಗೆಯೆಂದು ಭಾವಿಸುತ್ತಾ ದೇವನಿಗೆ ಕೃತಜ್ಞೆಯನ್ನರ್ಪಿಸುವವನು. ಅವನು ತನಗೆ ದೊರೆತ ಜೀವನ ಸಾಧನಗಳನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಬದಲು, ದೇವಮಾರ್ಗದಲ್ಲಿ ವ್ಯಯಿಸುವವನು. ಈ ವ್ಯಕ್ತಿಯು ತನಗೆ ದೊರೆತ ಅವಕಾಶಗಳನ್ನು ತನ್ನ ಪರಲೋಕದ ಉತ್ತಮ ಭವಿಷ್ಯದ ಸಲುವಾಗಿ ಸದ್ಬಳಕೆ ಮಾಡಿಕೊಂಡವನು. ಇಂತಹ ವ್ಯಕ್ತಿಯು ತನ್ನ ಮರಣದ ಬಳಿಕ ಅತ್ಯುತ್ತಮ ಪಾರಿತೋಷಕವನ್ನು ಪಡೆಯುವನು. ಅವನ ಈ ಅತ್ಯುತ್ತಮ ಗಳಿಕೆಯ ಪ್ರತಿಫಲವನ್ನು ಆತನಿಗೆ ಶಾಶ್ವತ ಸ್ವರ್ಗೋದ್ಯಾನಗಳ ಸ್ವರೂಪದಲ್ಲಿ ಅವನೆಡೆಗೆ ಮರಳಿಸಲಾಗುವುದು. ಪ್ರಸ್ತುತ ಜಗತ್ತಿನಲ್ಲಿ ಪ್ರತಿಯೋರ್ವರಿಗೂ ಸಮಾನ ಅವಕಾಶಗಳನ್ನು ನೀಡಲಾಗಿದೆ. ಈ ಅವಕಾಶಗಳ ಮೂಲಕ ಓರ್ವನು ತನ್ನ ಇಹಲೋಕ ನಿರ್ಮಿಸುತ್ತಿದ್ದರೆ ಇನ್ನೋರ್ವನು ತನ್ನ ಪರಲೋಕ ನಿರ್ಮಿಸುವುದರಲ್ಲಿ ತಲ್ಲೀನನಾಗಿರುವನು ಅಷ್ಟೇ!

# ದೇವನ ಕುರಿತ ದುರ್ವ್ಯಾಖ್ಯಾನ

ಒಬ್ಬ ಕುಖ್ಯಾತ ದರೋಡೆಕೋರನಾಗಿದ್ದ ದೇವಿಸಿಂಗ್ 1984ರಲ್ಲಿ ಪೋಲಿಸರೊಂದಿಗಿನ ಚಕಮಕಿಯಲ್ಲಿ ಕೊಲ್ಲಲ್ಪಟ್ಟ. ಸಿಯೋರಾ ಗ್ರಾಮದಲ್ಲಿ ಅಮೃತ್ ಪ್ರೀತಮ್ ಸಿಂಗ್ ಅಚಾನಕ್ ಆಗಿ ಈ ಡಕಾಯಿತನೊಂದಿಗೆ ಭೇಟಿಯಾಗಬೇಕಾಗಿ ಬಂತು. ಆ ಸಂದರ್ಭದಲ್ಲಿ ಅವರೀರ್ವರ ನಡುವೆ ನಡೆದ ಸ್ವಾರಸ್ಯಕರ ಮಾತುಕತೆಯ ಸಾರಾಂಶ ಹಿಂದೂಸ್ತಾನ್ ಟೈಮ್ಸ್ ನಲ್ಲಿ (1984, ಜನವರಿ 22) ಪ್ರಕಟವಾಗಿದೆ.

ದೇವಿಸಿಂಗ್: ನಾನು ಇಲ್ಲಿಯ ತನಕ 100ಕ್ಕೂ ಹೆಚ್ಚು ದರೋಡೆ ಎಸಗಿದ್ದೇನೆ. ನಿಜವಾಗಿ ಹೇಳಬೇಕೆಂದರೆ ನಾವು ದರೋಡೆಕೋರರಲ್ಲ, ಬದಲಿಗೆ ಸರ್ಕಾರದ ವಿರುದ್ಧ ದಂಗೆ ಎದ್ದ ಬಂಡಾಯಕೋರರಾಗಿದ್ದೇವೆ. ನಾವು ಸಂಪತ್ತನ್ನು ದೋಚಿರುವುದು ನಿಜವಾದರೂ ಇಲ್ಲಿಯ ತನಕ ನಾವು ಯಾವುದೇ ಸ್ತ್ರೀಯ ಮಾನಭಂಗವನ್ನು ಮಾಡಿಲ್ಲ. ಇದು ನಮ್ಮ ಕಠಿಣ ನೈತಿಕ ಸಿದ್ಧಾಂತವಾಗಿದೆ. ನಮ್ಮ ಪೈಕಿ ಯಾರಾದರೂ ಇದರ ವಿರುದ್ಧ ಕಾರ್ಯವೆಸಗಿದರೆ ಆ ಕ್ಷಣವೇ ಆತನನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ.

ಅಮೃತ್ ಪ್ರೀತಮ್ ಸಿಂಗ್: ದೇವಿ ಸಿಂಗ್, ನಿಮ್ಮ ತಂಡದಲ್ಲಿರುವ ಒಟ್ಟು ಸದಸ್ಯರೆಷ್ಟು ಮಂದಿ?

ದೇವಿಸಿಂಗ್: ಏಳು ಮಂದಿ ಎಂಟನೆಯವನು ದೇವನು (Seven men, and the eighth God)

ಬಾಹ್ಯನೋಟಕ್ಕೆ ಇದು ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಕುರ್ ಆನ್ ಸೂಕ್ತವೊಂದಕ್ಕೆ ಹೋಲುತ್ತದೆ. ಕುರ್ ಆನಿನ ಆ ಸೂಕ್ತದಲ್ಲಿ ಹೀಗೆ ಹೇಳಲಾಗಿದೆ: "ನೀವು ಐದು ಜನರಿರುವ ಸ್ಥಳದಲ್ಲಿ ಆರನೆಯವನಾಗಿ ದೇವನಿರುತ್ತಾನೆ." (ಮುಜಾದಲಃ). ಹಾಗಾದರೆ ಡಕಾಯಿತ ವ್ಯಕ್ತಿಯ ಹೇಳಿಕೆಯ ತಾತ್ಪರ್ಯ ಇದೇ ಆಗಿತ್ತೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಖಂಡಿತ ಅಲ್ಲ. ಇವೆರಡರ ಮಧ್ಯೆ ವಾಕ್ಯಗಳ ನಡುವೆ ಹೋಲಿಕೆ ಇದೆಯಾದರೂ ತಾತ್ಪರ್ಯದಲ್ಲಿ ಯಾವುದೇ ಸಾಮ್ಯತೆಗೆ ಅವಕಾಶವಿಲ್ಲ.

ಡಕಾಯಿತ ವ್ಯಕ್ತಿಯು ಹೇಳಿದ ಮಾತಿನ ತಾತ್ಪರ್ಯವೇನಾಗಿತ್ತೆಂಬುದು ಆ ಸಂದರ್ಶನದ ಮುಂದುವರಿದ ಭಾಗದಲ್ಲೇ ಇದೆ. ಅದರಲ್ಲಿ ಆ ವ್ಯಕ್ತಿಯು ತನ್ನ ಮಾತನ್ನು ಮುಂದುವರಿಸುತ್ತಾ ಹೀಗೆ ಹೇಳುತ್ತಾನೆ,"ನಾವು ಮಾಡಿದ ಡಕಾಯಿತಿಯಿಂದ ದೊರೆತ ಸಂಪತ್ತನ್ನು ನಾವು ತಂಡದ ನಡುವೆ ಪರಸ್ಪರ ಹಂಚಿಕೊಳ್ಳುತ್ತೇವೆ. ಉದಾ: ನಮ್ಮ ತಂಡದಲ್ಲಿ ನನ್ನನ್ನೂ ಸೇರಿಸಿ 7 ಮಂದಿಯಿರುವರು. ಆದರೆ ನಾವು ನಾವು ಲೂಟಿ ಮಾಡಿದ ಸಂಪತ್ತನ್ನು ಏಳರ ಬದಲು ಎಂಟು ಭಾಗಗಳಾಗಿ ವಿಂಗಡಿಸುತ್ತೇವೆ. 7 ಭಾಗ ಪರಸ್ಪರ ನಮಗಾದರೆ 8ನೆಯ ಭಾಗ ದೇವನಿಗೆ ಮೀಸಲಾಗಿದೆ. ದೇವನಿಗೆ ಮೀಸಲಿಟ್ಟ ಆ ಭಾಗವನ್ನು ನಾವು ಬಡವರ ನಡುವೆ ಹಂಚಿಬಿಡುತ್ತೇವೆ. ತಮ್ಮ ಗಳಿಕೆಯ ಒಂದು ಭಾಗವನ್ನು ಮೀಸಲಿಡುವ ಈ ಪದ್ಧತಿ ಪ್ರತಿಯೊಂದು ಡಕಾಯಿತರ ತಂಡದಲ್ಲೂ ಚಾಲ್ತಿಯಲ್ಲಿರುವ ಸಂಗತಿ."

ಕುರ್ ಆನ್ ಸೂಕ್ತ ದೇವನು ಎಲ್ಲವನ್ನೂ ನೋಡುತ್ತಿರುವನು ಆದುದರಿಂದ ಯಾರ ಮೇಲೂ ಅನ್ಯಾಯವೆಸಗದಿರಿ ದೇವನನ್ನು ಭಯಪಟ್ಟು ವರ್ತಿಸಿರಿ ಎಂಬ ಸಂದೇಶವನ್ನಿತ್ತರೆ, ಡಕಾಯಿತರು ದೇವನ ಕುರಿತು ಯಾವುದೇ ಭಯವಿಲ್ಲದಂತೆ ವರ್ತಿಸುತ್ತಿದ್ದಾರೆ. "ದೇವನು ನಿಮ್ಮೊಂದಿಗಿರುವನು" ಎಂಬ ಭಾವವು ಜನರನ್ನು ಅನ್ಯಾಯದಿಂದ ತಡೆಯಲಿಕ್ಕಿರುವುದು. ಆದರೆ ದರೋಡೆಕೋರರು ದೇವನಿಗೆ ಒಂದು ಭಾಗವನ್ನು ಮೀಸಲಿರಿಸಿ ದೇವನನ್ನು ತಮ್ಮ ದರೋಡೆಗೆ ಚ್ಯುತಿ ಬರದಂತೆ ಕಾಪಾಡುವ ಕಾವಲುಗಾರರನ್ನಾಗಿ ಮಾಡಿರುವರು. ಅರ್ಥಾತ್ ಈ ಏಳು ಜನರು ದರೋಡೆ ಮಾಡುವಾಗ ಎಂಟನೆಯವನಾಗಿ ದೇವನು ತಮ್ಮನ್ನು ಸದಾ ಕಾಪಾಡುವನು ಎಂಬುದು ದೇವನ ಕುರಿತು ಅವರಲ್ಲಿರುವ ದುರ್ವ್ಯಾಖ್ಯಾನ.

# ವಾಸ್ತವದಿಂದ ವಂಚಿತ

ಫ್ರಾನ್ಸ್ ನಲ್ಲಿ ಮಾಟಗಾರಿಕೆ ಮತ್ತು ಜ್ಯೋತಿಷ್ಯದಂತಹ ಕ್ಷುದ್ರ ವಿದ್ಯೆಗಳು ತುಂಬಾ ವೇಗವಾಗಿ ಹರಡುತ್ತಿವೆ. 1984ರ ವರದಿಯೊಂದರ ಪ್ರಕಾರ ಸರಿಸುಮಾರು 80 ಲಕ್ಷ ಜನರು ಈ ಕ್ಷುದ್ರವಿದ್ಯೆಯ ಮೊರೆ ಹೋಗಿರುವರು. ಅಂಕಿಅಂಶದ ಆಧಾರದಲ್ಲಿ ಹೇಳುವುದಾದರೆ ಫ್ರೆಂಚ್ ಪ್ರತಿ 4 ನಾಗರಿಕರಲ್ಲಿ ಒಬ್ಬರು ಕ್ಷುದ್ರವಿದ್ಯೆಯತ್ತ ವಾಲಿದ್ದಾರೆ ಎಂದಾಯಿತು.

ಫ್ರಾನ್ಸ್ ನಲ್ಲಿ ಜ್ಯೋತಿಷ್ಯ ಮತ್ತು ಮಾಟಗಾರಿಕೆಯು ಒಂದು ಬೃಹತ್ ವ್ಯಾಪಾರದ ಸ್ವರೂಪ ತಾಳಿದೆ ಎಂದರೆ ತಪ್ಪಾಗಲಾರದು. ಅಲ್ಲಿನ ತೆರಿಗೆ ಇಲಾಖೆಯಲ್ಲೂ 50 ಸಾವಿರ ಮಂದಿ ತಮ್ಮ ಆದಾಯದ ಮೂಲವನ್ನು ಕ್ಷುದ್ರವಿದ್ಯೆಯ ಹೆಸರಲ್ಲಿ ನೋಂದಣಿ ಮಾಡಿಟ್ಟಿದ್ದಾರೆ. ಈ ಸಂಖ್ಯೆಯು ಫ್ರಾನ್ಸ್ ನಲ್ಲಿರುವ ಪಾದ್ರಿ ಹಾಗೂ ಡಾಕ್ಟರ್ ಗಳ ಸಂಖ್ಯೆಗಿಂತಲೂ ಅಧಿಕವಾಗಿದೆ. ಈ ಜ್ಯೋತಿಷ್ಯ, ಮಾಟ-ಮಂತ್ರ ಮಾಡುವವರ ವಾರ್ಷಿಕ ಆದಾಯ 500 ರಿಂದ 600 ಮಿಲಿಯನ್ ಡಾಲರ್ ನಷ್ಟಿದೆ.

ಈ ಕುರಿತು ಎಎಫ್ ಪಿಯ ಪ್ಯಾರೀಸ್ ವರದಿ ಹೀಗಿದೆ: With the deepening economic recession, more and more people are turning to the occult for relief for their physical and psychological aliments.

"ಆಳವಾದ ಆರ್ಥಿತ ಹಿಂಜರಿತದಿಂದಾಗಿ ಹೆಚ್ಚೆಚ್ಚು ಜನರು ತಮ್ಮ ದೈಹಿಕ ಮತ್ತು ಮಾನಸಿಕ ಖಾಯಿಲೆಗಳ ಪರಿಹಾರಕ್ಕಾಗಿ ಅತೀಂದ್ರಿಯ ಶಕ್ತಿಯ ಮೊರೆ ಹೋಗುತ್ತಿದ್ದಾರೆ." (ಟೈಮ್ಸ್ ಆಫ್ ಇಂಡಿಯಾ, 5 ಮಾರ್ಚ್, 1985)

"ಕೇವಲ ಬಾಹ್ಯ ಹಾಗೂ ಭೌತಿಕ ಅಥವಾ ಲೌಕಿಕ ಬೆಂಬಲದಿಂದ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಾಗದು" ಎಂಬುದನ್ನು ಮನಷ್ಯನು ತನ್ನ ಅನುಭವದಿಂದ ಪದೇ ಪದೇ ಕಂಡುಕೊಳ್ಳುತ್ತಾನೆ. ಅವನು ತನಗೆ ಗೊತ್ತಿರುವ ಎಲ್ಲ ಬಾಹ್ಯ ಬೆಂಬಲಗಳನ್ನು ಬಳಸಿ ನೋಡಿದ ಬಳಿಕ ಅವುಗಳಿಂದ ಹತಾಶನಾಗಿ, ತನಗೆ ಗೊತ್ತಿರದ ಅಜ್ಞಾತ ಅಥವಾ ಅತೀಂದ್ರಿಯ ಬೆಂಬಲದ ಮೊರೆ ಹೋಗಿಬಿಡುತ್ತಾನೆ. ಆದರೆ, ಅತೀಂದ್ರಿಯ ಶಕ್ತಿಯ ಬೆಂಬಲದ ಹುಡುಕಾಟದಲ್ಲವನು ಯಾವುದೋ ಮಧ್ಯವರ್ತಿ ವ್ಯಕ್ತಿಯ ಸಹಾಯ ಯಾಚಿಸುವುದು ಎಷ್ಟು ಮಾತ್ರಕ್ಕೂ ಸರಿಯಾದ ಕ್ರಮವಲ್ಲ. ಇದರಿಂದ ಅವನಿಗೆ ವಾಸ್ತವದೆಡೆಗೆ ತಲುಪಲು ಅವನಿಗೆ ಸಾಧ್ಯವಾಗುವುದಿಲ್ಲ. ಮಧ್ಯವರ್ತಿ ವ್ಯಕ್ತಿಯ ಸಹಾಯ ಯಾಚಿಸುವುದರ ತಾತ್ಪರ್ಯ, ಸಹಾಯ ಮಾಡಲು ಸಾಧ್ಯವೇ ಇಲ್ಲದವನ ಬಳಿ ಸಹಾಯ ಬೇಡುವುದಾಗಿದೆ.

ವಾಸ್ತವದಲ್ಲಿ ಎಂತಹ ಸಂಕಷ್ಟದ ಸಮಯದಲ್ಲೂ ಮನುಷ್ಯನ ಸಹಾಯ ಮಾಡಲು ಶಕ್ತನಾಗಿರುವವನು ಕೇವಲ ಏಕಮಾತ್ರನು. ಅವನೇ ದೇವನು. ದೇವನೆಡೆಗೆ ತನ್ನ ಗಮನ ಹರಿಸಲೆಂದೇ ಮನುಷ್ಯನಿಗೆ ತನ್ನ ಜೀವನದಲ್ಲಿ ಭೌತಿಕ ಸಾಧನಗಳ ಕೊರತೆಯು ಉದ್ಭವಿಸುವುದು. ಆದರೆ, ಸಾಕಷ್ಟು ಲೌಕಿಕ ಬೆಂಬಲಗಳಿಲ್ಲದೆ ಅಸಹಾಯಕ ಸ್ಥಿತಿಗೆ ತಲುಪುವ ಮನುಷ್ಯನ ಕಹಿ ಅನುಭವವು, ಆತನಿಗೆ ಇನ್ನೊಂದು ರೀತಿಯ ಅಸಹಾಯಕತೆಡೆಗೆ ತಲುಪಿಸಿಬಿಡುವುದು. ಆಗ, ಮನುಷ್ಯ ತಾನು ವಾಸ್ತವದ ಹೊಸ್ತಿಲಿನಷ್ಟು ಸಮೀಪ ತಲುಪಿದ ಬಳಿಕವೂ ತನ್ನ ಅತೀ ಆತುರತೆಯಿಂದಾಗಿ ವಾಸ್ತವವನ್ನು ಪಡೆಯದೆ ಅದರಿಂದ ವಂಚಿತನಾಗಿಬಿಡುತ್ತಾನೆ.

# ಇದು ಕೂಡ ಸಾಧ್ಯ

ಮಗುವು ತನ್ನ ಪುಟ್ಟ ಕೈಯಿಂದ ತನ್ನ ತಾಯಿಯನ್ನು ಹೊಡೆಯಿತು. ತಾಯಿಯು ತನ್ನ ಮಗುವನ್ನೆತ್ತಿಕೊಂಡು ತನ್ನ ಎದೆಗವಚಿಕೊಂಡಳು. ಇದರ ತಾತ್ಪರ್ಯವೇನು?. ಬಾಹ್ಯ ನೋಟಕ್ಕೆ ಹೊಡೆದೇಟಿಗೆ ಪ್ರತಿಯಾಗಿ ಹೊಡೆಯುವ ಮೂಲಕ ಉತ್ತರ ಕೊಡಬೇಕಿದ್ದ ವಿಷಯವೊಂದನ್ನು ತಾಯಿಯು ಪ್ರೀತಿಯ ವಿಷಯವನ್ನಾಗಿ ಪರಿವರ್ತಿಸಿಕೊಂಡಳು. ಆಕೆಯು ಕೆಡುಕೊಂದನ್ನು ಒಳಿತಿನ ಖಾತೆಗೆ ವರ್ಗಾಯಿಸಿಕೊಂಡುಬಿಟ್ಟಳು. ಆಕೆ "ಶಿಕ್ಷೆ" ಕೊಡಬೇಕಾಗಿದ್ದ ವಿಷಯವೊಂದಕ್ಕೆ "ಭಕ್ಷೀಸು" ನೀಡಿದಳು. ಇದು ಸಾಮಾನ್ಯವಾಗಿ ಪ್ರತಿಯೋರ್ವರ ಮನೆಯಲ್ಲಿ ನಡೆಯುವ ವಿಷಯವಾಗಿದೆ. ತಾಯಿಯ ಮಮತೆಯ ವರ್ತನೆಯ ಸ್ವರೂಪದಲ್ಲಿ ತೋರಲ್ಪಡುವ ಈ ಗುಣವು ದೇವನ, ಗುಣವೈಶಿಷ್ಟ್ಯಗಳ ಪೈಕಿ ವಿಶಿಷ್ಟ ಗುಣಲಕ್ಷಣವೊಂದರ ಅಂಶವಾಗಿದೆ. ದೇವನು ತನ್ನ ಕರುಣೆಯ ಸ್ವರೂಪಗಳನ್ನು ಯಾವ ರೀತಿ ಅದ್ಭುತವಾಗಿ ಈ ಜಗತ್ತಿನಲ್ಲಿ ಹರಡಿದ್ದಾನೆಂಬುದರ ಸಂಕೇತ ಇದಾಗಿದೆ. ತಾಯಿಯೊಳಗೆ ಅಡಗಿರುವ ಈ ಅಪೂರ್ವ ಮಾದರಿಯ ಮಮತೆಯ ಸ್ವರೂಪವನ್ನು ತನ್ನೊಳಗೆ ಉಂಟುಮಾಡಿಕೊಂಡದ್ದು ಖುದ್ದು ತಾಯಿಯಲ್ಲ. ಈ ಮಮತೆಯ ವಿಶಿಷ್ಟ ಸ್ವರೂಪವನ್ನು ಆಕೆಯೊಳಗೆ ಇರಿಸಿರುವವನು ದೇವನಾಗಿದ್ದಾನೆ. ಯಾರು ಕರುಣೆಯ ಸೃಷ್ಟಿಕರ್ತನೋ ಅವನೊಳಗೆ ಇನ್ನೆಷ್ಟು ದೊಡ್ಡ ಕರುಣೆಯ ಸಾಗರವಿರಬೇಡ?.

ಮನುಷ್ಯನಿಗೆ ಪರೋಕ್ಷದ ಕುರಿತು ಯಾವುದೇ ಜ್ಞಾನವಿಲ್ಲ. ಇದರಿಂದಾಗಿ ಅವನು ಈ ಲೌಕಿಕ ಜೀವನದಲ್ಲಿ ಹಲವು ರೀತಿಯ ನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಅವನ ಇಚ್ಛಾಶಕ್ತಿಯು ಬಹಳ ದುರ್ಬಲ. ಹಾಗಾಗಿಯೇ ಅವನು ತನ್ನ ಬದುಕಿನ ಯಾವುದೋ ಹಂತದಲ್ಲಿ ತೀವ್ರ ಉನ್ಮಾದಕ್ಕೊಳಗಾಗಿ ದೊಡ್ಡ ದೊಡ್ಡ ತಪ್ಪುಗಳನ್ನು ಎಸಗಿಬಿಡುತ್ತಾನೆ. ಮಾನವನಿಗೆ ದೊರೆತ ಸಂಪನ್ಮೂಲಗಳು

ತೀರಾ ಸೀಮಿತವಾದುದು. ಇದರಿಂದಾಗಿ ಹೊರಗಿನ ಸಾಧನ-ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದಲು ಅವನಿಗೆ ಸಾಧ್ಯವಾಗದ ಕಾರಣ ಸೋಲನ್ನನುಭವಿಸುತ್ತಾನೆ. ಈ ರೀತಿಯ ವಿಷಯಗಳು ಮನುಷ್ಯನ ಜೀವನವನ್ನು ಬಹಳ ಸಂದಿಗ್ಧತೆಗೆ ಸಿಲುಕಿಸಿಬಿಟ್ಟಿದೆ.

ಭೂಮಿ ಮೇಲೆ ಜೀವಿಸುತ್ತಿರುವ ಪ್ರತಿಯೋರ್ವನೂ; ಆತ ಗುಡಿಸಲಲ್ಲಿರಲಿ ಅಥವಾ ಅರಮನೆಯಲ್ಲೇ ಇರಲಿ, 'ತಾನು ಸಾಧಿಸಬೇಕಿರುವುದನ್ನು ಸಾಧಿಸಲು ಅಸಮರ್ಥನಾಗಿದ್ದೇನೆ' ಎಂಬ ನಕರಾತ್ಮಕ ಭಾವನೆಯಿಂದ ಬಳಲುತ್ತಿರುವನು. ಇಲ್ಲಿ ಹಸನ್ಮುಖಿಯಂತೆ, ದೃಢಕಾಯ ದೇಹದಂತೆ ಕಾಣಿಸುತ್ತಿರುವ ಮನುಷ್ಯರೆಲ್ಲರೂ ತಮ್ಮೊಳಗೆ ಹತಾಶ ಭಾವನೆಯಿಂದ ಬಳಲುತ್ತಿರುವವರಾಗಿರುವರು. ಈ ಸಂದಿಗ್ಧತೆಯನ್ನು ವಿಶಾಲತೆಗೆ ಪರಿವರ್ತಿಸಿಕೊಳ್ಳಲು ಸಾಧ್ಯವಿದೆಯೇ?. ನಮ್ಮ ವೈಫಲ್ಯಗಳನ್ನು ಯಶಸ್ಸನ್ನಾಗಿ ಪರಿವರ್ತಿಸಿಕೊಳ್ಳುವ, ನಮ್ಮ ತಪ್ಪುಗಳನ್ನು ಭಕ್ಷೀಸಿನ ಖಾತೆಗೆ ವರ್ಗಾಯಿಸಿಕೊಳ್ಳುವ ಸಾಮರ್ಥ್ಯವನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಿದೆಯೇ?. ತಾಯಿಯ ಸ್ವರೂಪದಲ್ಲಿ ದೇವನು ತನ್ನ ವಿಶಿಷ್ಟ ಗುಣದ ಪ್ರತಿಬಿಂಬದ ಅಂಶವೊಂದನ್ನೇನು ಇರಿಸಿರುವನಲ್ಲ; ಅದೇ ಈ ಎಲ್ಲ ಪ್ರಶ್ನೆಗಳಿಗಿರುವ ಸಕರಾತ್ಮಕ ಉತ್ತರವಾಗಿದೆ.

ತಾಯಿಯು ತನ್ನ ಮಗುವಿನ ಪಾಲಿಗೆ ಎಷ್ಟು ಮಮತಾಮಯಿಯಾಗಿರುವಳೋ, ಅದಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಮಮತೆ ದೇವನು ತನ್ನ ಸೃಷ್ಟಿಗಳ ಪಾಲಿಗೆ ತೋರಿಸುವವನಾಗಿರುವನು. ದೇವನು ತಾಯಿಯ ಸ್ವರೂಪದಲ್ಲಿ, ತಾನು ಕೇಳಿದವರಿಗೆ ಕೊಡುವವನು ಎಂಬ ತನ್ನ ಸಂದೇಶವನ್ನಿರಿಸಿರುವನು. ಎಂತಹದೇ ಸನ್ನಿವೇಶದಲ್ಲೂ ಆ ದೇವನು "ಇಲ್ಲ" ವನ್ನು "ಇದೆ" ಯನ್ನಾಗಿ ಪರಿವರ್ತಿಸಬಲ್ಲನು. ಆದರೆ ದೇವನ ಈ ವಿಶಿಷ್ಟ ಭಕ್ಷೀಸು, ದೇವನನ್ನು ತಾಯಿಯ ಸ್ಥಾನದಲ್ಲಿರಿಸಿಕೊಂಡು, ಅವನೆದುರಿಗೆ ತನ್ನನ್ನು ತಾನು ಮಗುವಾಗನ್ನಾಗಿಸಿಕೊಂಡವನಿಗಷ್ಟೇ ಸಿಗಬಲ್ಲದು.

# ಅಸಹಾಯಕತೆಗಿರುವ ಮದ್ದು

ದೇವನು ಸರ್ವಶಕ್ತನೂ, ಪರಿಪೂರ್ಣ ಅಸ್ತಿತ್ವದ ಮಾಲಿಕನಾಗಿದ್ದರೆ, ಮನುಷ್ಯನೋರ್ವ ಅಪರಿಪೂರ್ಣನೂ ಅಸಹಾಯಕನೂ ಆದ ಸೃಷ್ಟಿಯಷ್ಟೇ ಆಗಿರುವನು. ಮನುಷ್ಯ ಮತ್ತು ದೇವನ ನಡುವಿನ ವಿಭಜನೆಯು ಜಾಸ್ತಿ ಮತ್ತು ಕಮ್ಮಿ ನಿಯಂತ್ರಣ ಹೊಂದಿದವರ ನಡುವಿನ ವಿಭಜನೆಯಲ್ಲ. ಬದಲಿಗೆ ಇದು ಪರಿಪೂರ್ಣ ನಿಯಂತ್ರಣ ಮತ್ತು ನಿಯಂತ್ರಣರಹಿತಗಳ ನಡುವಿನ ವಿಭಜನೆಯಾಗಿದೆ. ಮನುಷ್ಯನ ಸಹಿತ ಪ್ರತಿಯೊಂದು ವಸ್ತುವೂ ದೇವ ನಿಯಂತ್ರಿತ. ಮನುಷ್ಯ ಖುದ್ದು ತನ್ನ ಮೇಲೂ ನಿಯಂತ್ರಣವಿರದ ಓರ್ವ ಬಲಹೀನ ಸೃಷ್ಟಿ.

ತನ್ನ ಮೇಲಾಗಲಿ ಅಥವಾ ಜಗತ್ತಿನ ಇತರ ವಸ್ತುಗಳ ಮೇಲಾಗಲಿ ಯಾವುದೇ ರೀತಿಯ ಅಧಿಕಾರವಿರದ ಇಂತಹ ಒಂದು ಬಲಹೀನ, ಅಸಹಾಯಕ ಮನುಷ್ಯ ಸಮೂಹವನ್ನು ಸೃಷ್ಟಿಸುವ ಆವಶ್ಯಕತೆಯಾದರೂ ದೇವನಿಗೆ ಏನಿತ್ತು? ಎಂಬ ಪ್ರಶ್ನೆ ಈಗ ಉದ್ಭವಿಸುತ್ತದೆ.

ಮನುಷ್ಯನ ಅಸಹಾಯಕತೆಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಇರುವ ಪರಿಹಾರ ಮಾರ್ಗ ದೊರೆತರೆ, ಈ ಮೇಲಿನ ಪ್ರಶ್ನೆಗೂ ಸಮಂಜಸವಾದ ಉತ್ತರ ದೊರೆತಂತಾಗುವುದು. ಸಂಪೂರ್ಣ ಪರಿಹಾರ ಮಾರ್ಗದ ಹೊರತೂ ಈ ಪ್ರಶ್ನೆಗೆ ಬೇರಾವ ಉತ್ತರವೂ ಸಮಂಜಸವೆನಿಸದು. ಸಂಪೂರ್ಣ ಪರಿಹಾರ ಮಾರ್ಗವೆಂದರೆ, ಪ್ರಶ್ನೆಯ ಮಟ್ಟಕ್ಕನುಗುಣವಾಗಿ, ಅದರ ಆಳಕ್ಕನುಗುಣವಾಗಿ ಉತ್ತರದ ಮಟ್ಟವೂ, ಆಳವೂ ಇರಬೇಕೇಂಬುದು ಇಲ್ಲಿನ ಬೇಡಿಕೆ. ಅರ್ಥಾತ್ ಮನುಷ್ಯನ ಅಸಹಾಯಕತೆಯೇ ಅವನ ಬಲಹೀನತೆಯನ್ನು ಹೋಗಲಾಡಿಸುವ ಅಸ್ತ್ರವಾಗಿ ಬದಲಾಗುವಂತಾಗಬೇಕು.

ಮನುಷ್ಯನ ಈ ಅಸಹಾಯಕತೆಯನ್ನು ಹೋಗಲಾಡಿಸಲು ಬೇಕಾದ ಸರಿಯಾದ ಪರಿಹಾರ ಮಾರ್ಗ, ದೇವಗ್ರಂಥವಾದ ಕುರ್ ಆನ್ ಮತ್ತು ದೇವ ಪ್ರವಾದಿಯ ಶಿಕ್ಷಣದಲ್ಲಿ ನಮಗೆ ಸಿಗುವುದು. ದೇವನೊಂದಿಗೆ ಸಂಬಂಧವನ್ನು ಸ್ಥಾಪಿಸಲು ಸಾಧ್ಯವಾಗುವಂತೆ ಮಾಡುವ ಸಾಧನವಾದ ಪ್ರಾರ್ಥನೆಯೊಂದೇ ಈ ಬಲಹೀನತೆಯನ್ನು, ಅಸಹಾಯಕತೆಯನ್ನು ಹೋಗಲಾಡಿಸಲಿರುವ ಸರಿಯಾದ ಮಾರ್ಗವಾಗಿದೆ. ಕೇವಲ ಪ್ರಾರ್ಥಿಸುವುದರಿಂದ ನಮಗೆ ಬೇಕಾದುದನ್ನು ದೊರಕುವಂತೆ ಮಾಡಿರುವುದು ದೇವನ ವಿಶಿಷ್ಟ ಕಾರುಣ್ಯವಾಗಿದೆ. ಒಂದು ವೇಳೆ ನಿಜವಾಗಿಯೂ ಯಾರಾದರೂ ದೇವನೊಂದಿಗೆ ಪ್ರಾಮಾಣಿಕವಾಗಿ ಪ್ರಾರ್ಥಿಸಿದ್ದೇ ಆದರೆ, ಅವನು ತನಗಾಗಿ ಪ್ರಾರ್ಥಿಸಿರುವುದನ್ನು ಪಡೆಯುವುದು ಕೂಡ ಅಷ್ಟೇ ಸತ್ಯ.

ಮನುಷ್ಯನು ತನಗಾಗಿ ಬೇಕಾದುದನ್ನು ಸ್ವತಃ ತಾನೇ ಪಡೆದುಕೊಳ್ಳಲು ಅಸಮರ್ಥನಾದಾಗ, ಸರ್ವಶಕ್ತನಾದ ದೇವನೆಡೆಗೆ ಮೊರೆಯಿಡುವ ಹೊರತಾಗಿ ಅವನ ಪಾಲಿಗೆ ಬೇರಾವ ದಾರಿಯೂ ಬಾಕಿ ಉಳಿಯುವುದಿಲ್ಲ. ದೇವನಂತೂ ಪ್ರಾರ್ಥಿಸುವವರಿಗೆ ಸದಾ ನೀಡುವವನಾಗಿರುವನು. ವ್ಯಕ್ತಿಯೋರ್ವನು ಪ್ರಾಮಾಣಿಕವಾಗಿ ತನ್ನ ಹೃದಯಾಂತರಾಳದಿಂದ ಪ್ರಾರ್ಥಿಸಿದಾಗ ಆತನು ಬಯಸಿದ್ದು ಆತನಿಗೆ ದೊರೆಯುವುದು ಖಂಡಿತ. ಪ್ರಾರ್ಥನೆಯು ಸ್ವೀಕಾರವಾಗುವುದರ ತಾತ್ಪರ್ಯವೂ ಇದೇ ಆಗಿದೆ.

ಪ್ರವಾದಿ ಮುಹಮ್ಮದರು ಹೇಳಿದ್ದು ಕೂಡ ಇದೇ ಮಾತನ್ನೇ ಆಗಿದೆ. "Addawathu laa turaddu" "ಪ್ರಾಮಾಣಿಕ ಪ್ರಾರ್ಥನೆಯು ಎಂದೂ ತಿರಸ್ಕೃತವಾಗುವುದಿಲ್ಲ." (ಮುಸ್ನದ್ ಅಹ್ಮದ್, ಹದೀಸ್ ಸಂಖ್ಯೆ 13357) ಪ್ರವಾದಿ ಯೇಸುವವರು ಹೇಳಿದ ಇಂತಹುದೇ ಮಾತನ್ನು ಬೈಬಲ್ ನಲ್ಲಿಯೂ ಉಲ್ಲೇಖಿಸಲಾಗಿದೆ.

“ಕೇಳಿರಿ ನಿಮಗೆ ಕೊಡಲಾಗುವುದು. ಹುಡುಕಿರಿ, ನಿಮಗೆ ದೊರೆಯುವುದು. ಬಾಗಿಲನ್ನು ತಟ್ಟಿರಿ, ನಿಮಗಾಗಿ ತೆರೆಯಲ್ಪಡುವುದು. ಏಕೆಂದರೆ ಕೇಳಿದಾತನಿಗೆ ಕೊಡಲಾಗುವುದು. ಹುಡುಕುವಾತನಿಗೆ ದೊರೆಯುವುದು. ಬಾಗಿಲು ಬಡಿದವನ ಪಾಲಿಗದು ತೆರೆಯಲ್ಪಡುವುದು. ನಿಮ್ಮಲ್ಲಿ ಯಾರಾದಾದರೂ ಮಗ ತನ್ನ ತಂದೆಯ ಬಳಿ ರೊಟ್ಟಿ ಕೇಳಿದರೆ ಕಲ್ಲು ಕೊಡುವನೇನು?, ಮಗನು ಮೀನಿನ ತುಂಡು ಕೇಳಿದರೆ, ತಂದೆಯವನ ಕೈಯಲ್ಲಿ ಹಾವನ್ನಿಡುವನೇನು?. ನಿಮ್ಮ ಪೈಕಿ ಎಷ್ಟೇ ಕೆಟ್ಟವರಿದ್ದರೂ ಕೂಡ ತಮ್ಮ ಮಕ್ಕಳೊಂದಿಗೆ ಈ ರೀತಿಯ ಕೆಟ್ಟ ವ್ಯವಹಾರ ಮಾಡಲಾರರು ಎಂದಾದರೆ ಆಕಾಶದ ಮೇಲಿರುವ ನಿಮ್ಮ ಕತೃನು ತನ್ನ ಬಳಿ ಬೇಡುವವರಿಗೆ ಕೆಟ್ಟ ವಸ್ತುಗಳನ್ನು ನೀಡುವನೇನು?. (ಮ್ಯಾಥ್ಯೂ, 7:7–11)

# ಪರಸ್ಪರರ ಹಿತಾಸಕ್ತಿ

ಎಮರ್ ಸನ್ (Emerson) ನ ಹೇಳಿಕೆ ಇದು. "ಪ್ರತಿಯೋರ್ವನೂ ಜಗತ್ತಿನ ಎಲ್ಲರ ಹಿತಾಸಕ್ತಿಯನ್ನು ಬಯಸಬೇಕು. ಜಗತ್ತಿನಲ್ಲಿರುವ ಎಲ್ಲರೂ ಇಲ್ಲಿನ ಪ್ರತಿಯೋರ್ವರ ಹಿತಾಸಕ್ತಿಯನ್ನು ಬಯಸುವಂತಾಗಬೇಕೆಂಬುದು ಪ್ರಕೃತಿಯ ಸಿದ್ಧಾಂತವಾಗಿದೆ. ಇದೇ ಸಿದ್ಧಾಂತದನ್ವಯ ಪ್ರಕೃತಿಯು ಕಾರ್ಯನಿರ್ವಹಿಸುತ್ತಿದೆ ಕೂಡ".

"Nature works on a method of 'all for each and each for all' ಈ ಮೇಲಿನ ಸಂಕ್ಷಿಪ್ತ ವಾಕ್ಯವು ನಿಸರ್ಗದ ಕಾರ್ಯನಿರ್ವಹಣೆಯ ಕುರಿತಾದ ಅದ್ಭುತ ವಿವರಣೆಯಾಗಿದೆ. ಈ ಜಗತ್ತಿನಲ್ಲಿ ಅಸಂಖ್ಯಾತ ವಸ್ತುಗಳಿವೆ. ಆದರೆ, ಇವುಗಳೆಲ್ಲವೂ ಬೆರಗುಗೊಳಿಸುವಂತಹ ಪರಸ್ಪರ ವಿನಿಮಯ ವಿಧಾನದನ್ವಯ ಕಾರ್ಯನಿರ್ವಹಿಸುತ್ತಿವೆ. ಈ ವಸ್ತುಗಳ ಪೈಕಿ ಪ್ರತಿಯೊಂದು ವಸ್ತುವೂ ಇತರ ವಸ್ತುಗಳೊಂದಿಗೆ ಸಂಪೂರ್ಣ ಸಮನ್ವಯ ಪ್ರಕ್ರಿಯೆಗನುಗುಣವಾಗಿ ಪ್ರತಿಯೊಂದು ವಸ್ತುವೂ ಇನ್ನೊಂದು ವಸ್ತುವಿನ ಅಂಗವೇನೋ ಎಂಬಂತೆ ಪರಸ್ಪರ ಹೊಂದಾಣಿಕೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಇದು ದೇವನು ತಾನು ಸೃಷ್ಟಿಸಿದ ಜಗತ್ತಿನಲ್ಲಿ ಸ್ಥಾಪಿಸಿರುವ ಕಾರ್ಯವಿಧಾನದಂತಿದೆ. ಮನುಷ್ಯನೂ ಈ ವಿಧಾನವನ್ನನುಸರಿಸಲು ಬದ್ಧನಾಗಬೇಕಿದೆ. ಮಾನವ ಸಮೂಹಗಳ ನಡುವೆ ತುರ್ತು ಅಗತ್ಯವಿರುವ ವಿಷಯವೂ ಇದೇ ಆಗಿದೆ. ಒಬ್ಬನು ಇನ್ನೊಬ್ಬನಿಗೆ, ಒಂದು ಸಮೂಹ ಇನ್ನೊಂದು ಸಮೂಹಕ್ಕೆ ಪರಸ್ಪರ ಸಹಕಾರ ನೀಡುತ್ತಾ, ಪರಸ್ಪರ ಪ್ರಯೋಜನಕಾರಿಯಾಗುತ್ತಾ ಜೀವನ ಸಾಗಿಸಬೇಕೆಂಬುದು ಇದರ ತಾತ್ಪರ್ಯವಾಗಿದೆ. ಸಾಮೂಹಿಕ ಯಶಸ್ಸನಲ್ಲೇ ವೈಯಕ್ತಿಕ ಯಶಸ್ಸು ಅಡಗಿದೆ ಎನ್ನುವ ರೀತಿಯಲ್ಲಿ ಪರಸ್ಪರ ಸಹಕಾರ ನೀಡುವ

ಮೂಲಕ ಈ ಸಮನ್ವಯ ನೀತಿಯನ್ನು ಮನುಷ್ಯರಾದ ನಾವೆಲ್ಲರೂ ಅಳವಡಿಸಿಕೊಳ್ಳಬೇಕಿದೆ. ನಮ್ಮ ವೈಯಕ್ತಿಕ ಕಾರ್ಯವಿಧಾನವು ಜನಸಮೂಹಕ್ಕೆ ಪೂರಕವಾಗಿಯೂ ಪ್ರಯೋಜನಕಾರಿಯೂ ಆಗಿರಬೇಕು, ಅದೇ ತೆರನಾಗಿ ನಮ್ಮೆಲ್ಲರ ಸಾಮೂಹಿಕ ಕಾರ್ಯವೈಖರಿಯೂ ಯಾರೊಬ್ಬರ ಹಿತಕ್ಕೂ ಧಕ್ಕೆಯಾಗದಂತೆ, ಪ್ರತಿಯೋರ್ವ ವ್ಯಕ್ತಿಯ ಪಾಲಿಗೆ ಪೂರಕವಾಗಿಯೂ ಪ್ರಯೋಜನಕಾರಿಯೂ ಆಗಿರಬೇಕು. ಇದನ್ನೇ ಸಾಮರಸ್ಯ ಅಥವಾ ಸಮನ್ವಯ ಎಂದು ಕರೆಯುವುದು.

ಈ ಪ್ರಪಂಚದಲ್ಲಿ ಮನುಷ್ಯನು ಹೇಗೆ ಜೀವಿಸಬೇಕು ಹಾಗೂ ಹೇಗೆ ಜೀವಿಸಬಾರದು ಎಂಬುದನ್ನು ಪ್ರತಿನಿತ್ಯ ಕಣ್ಣಾರೆ ಕಂಡು ತಿಳಿದುಕೊಳ್ಳುವಂತಾಗಲು ದೇವನು ನಿಸರ್ಗದಲ್ಲಿ ನಮಗಾಗಿ ಅನೇಕಾನೇಕ ಉದಾಹರಣೆಗಳನ್ನು ಇರಿಸಿರುವನು. ಯಾವ ವ್ಯಕ್ತಿಯ ಕರ್ಮಗಳು ದೇವನ ಬಳಿ ಸ್ವೀಕಾರಾರ್ಹ ಹಾಗೂ ಯಾರ ಕರ್ಮಗಳು ಸ್ವೀಕಾರಾರ್ಹವಲ್ಲ ಎಂಬುದನ್ನು ತಿಳಿದುಕೊಳ್ಳಲು ನಿಸರ್ಗದ ಪಾಠವು ನಮಗೆ ಬಲು ಸಹಕಾರಿ.

ಒಂದು ವೃಕ್ಷ ಹಾಗೂ ಪ್ರಪಂಚದ ಉದಾಹರಣೆಯನ್ನೇ ತೆಗೆದುಕೊಳ್ಳಿ; ಪ್ರಪಂಚದಲ್ಲಿ ಗಾಳಿ, ಬೆಳಕು, ಗುರುತ್ವಾಕರ್ಷಣಾ ಬಲ ಹಾಗೂ ನೀರು ಇವೆಲ್ಲವೂ ಇವೆ. ಇವೆಲ್ಲವೂ ವೃಕ್ಷದ ಬೆಳವಣಿಗೆಗೆ ಸಹಕಾರಿಯೂ ಪ್ರಯೋಜನಕಾರಿಯೂ ಆಗಿವೆ. ಬ್ಯಾಕ್ಟೀರಿಯಾದಿಂದ ಒಳಗೊಂಡು ಸೂರ್ಯನ ಶಾಖದ ತನಕ ಪ್ರತಿಯೊಂದು ವಸ್ತುವೂ ವೃಕ್ಷದ ಪಾಲಿಗೆ ಉಣಬಡಿಸುವ ನಿಸರ್ಗದ ಊಟದ ತಟ್ಟೆಯಿದ್ದಂತೆ. ಪ್ರತಿಯೊಂದು ವಸ್ತುವೂ ವೃಕ್ಷಕ್ಕೆ ನಿಸರ್ಗದತ್ತವಾಗಿ ಯಾವುದರದೆಲ್ಲಾ ಆವಶ್ಯಕತೆ ಇದೆಯೋ ಅವೆಲ್ಲವನ್ನೂ ಪೂರೈಸಲು ತಮ್ಮಿಂದಾದ ಪಾತ್ರವನ್ನು ನಿಭಾಯಿಸುತ್ತಿವೆ.

ವೃಕ್ಷದಿಂದ ನಮಗೆ ದೊರೆಯುವ ಇನ್ನೊಂದು ಅದ್ಭುತ ಪಾಠವೇನೆಂದರೆ, ಅದು ಜಗತ್ತಿನ ಯಾವುದೇ ವಸ್ತುವಿನೊಂದಿಗೆ ಸಂಘರ್ಷಕ್ಕಿಳಿಯದೇ ತನ್ನ ವಿಕಾಸದ

ಪಯಣವನ್ನು ಮುಂದುವರಿಸುಕೊಂಡು ಹೋಗುತ್ತದೆ. ಅದರ ಕಟ್ಟಿಗೆ, ಅದರ ಎಲೆ, ಅದರ ಹೂವು, ಅದರ ಫಲ ಹೀಗೆ ಅದರಿಂದುಂಟಾಗುವ ಪ್ರತಿಯೊಂದು ವಸ್ತುವೂ ಈ ಲೋಕಕ್ಕೆ ಅತ್ಯಂತ ಉಪಯುಕ್ತಕರವಾಗಿದೆ. ಎಲ್ಲಿಯವರೆಗೆಂದರೆ; ಅದು ಹೊರಗಿನ ಇಂಗಾಲದ ಡೈ ಆಕ್ಸೈಡ್ ಅನ್ನು ಹೀರಿಕೊಂಡು ಆಮ್ಲಜನಕವನ್ನು ಹೊರಸೂಸುವ ಮೂಲಕ ಈ ಜಗತ್ತಿನ ಆವಶ್ಯಕತೆಯನ್ನು ಪೂರೈಸುವುದರಲ್ಲಿ ತನ್ನ ಮಹತ್ತರ ಪಾತ್ರವನ್ನು ನಿಭಾಯಿಸುತ್ತಿದೆ. ಆಂಶಿಕ ಮತ್ತು ಸಂಪೂರ್ಣ ಅಥವಾ ವ್ಯಕ್ತಿ ಮತ್ತು ಸಮೂಹಗಳ ನಡುವೆ ಇದೇ ರೀತಿಯ ಸಮನ್ವಯತೆ–ಸಾಮರಸ್ಯತೆಯ ಬದ್ಧತೆಯನ್ನು ಮನುಷ್ಯನು ರೂಢಿಸಿಕೊಳ್ಳಬೇಕು. ಪರಸ್ಪರ ಸಮನ್ವಯತೆ ಹಾಗೂ ಪರಸ್ಪರರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುವುದರ ಹೊರತಾಗಿ ಮನುಷ್ಯನ ಯಶಸ್ಸಿಗೆ ಇನ್ನಾವುದೇ ಪರ್ಯಾಯ ಮಾರ್ಗವಿಲ್ಲ.

# ಆತ್ಮಸಾಕ್ಷಿಯ ವಿರುದ್ಧ

"ಯಹೂದಿಗಳು, ಫೆಲಸ್ತೀನ್ ಕುರಿತು 'ಅದು ತಮ್ಮ ತಾಯ್ನಾಡು, ಹಾಗಾಗಿ ಫೆಲೆಸ್ತೀನ್ ಅನ್ನು ಪಡೆಯುವುದು ನಮ್ಮ ಜನ್ಮಸಿದ್ಧ ಹಕ್ಕು' ಎಂದು ಪ್ರತಿಪಾದಿಸುತ್ತಿರುವುದು ಹೇಗಿದೆಯೆಂದರೆ ರೆಡ್ ಇಂಡಿಯನ್ಸ್ ಬುಡಕಟ್ಟು ಜನಾಂಗ ಕೆನಡಾವನ್ನು ನಮಗೆ ಹಿಂದಿರುಗಿಸಿ ಎಂದು ಹೇಳಿದಂತಿದೆ. ಜರ್ಮನ್ ನಲ್ಲಿ ನಾಜಿಗಳು ತಮ್ಮ ಸಮೂಹದ ವಿರುದ್ಧ ನಡೆಸಿದ ಜನಾಂಗೀಯ ಹತ್ಯೆಯ ಕುರಿತು ಯಹೂದಿಗಳು ಅಸಂಖ್ಯಾತ ಪುಸ್ತಕಗಳನ್ನು ಬರೆದಿರುವರು. ಆದರೆ, ಇದೇ ಯಹೂದಿಗಳು ಫೆಲಸ್ತೀನ್ ನ ಅರಬ್ಬರ ವಿರುದ್ಧ ನಡೆಸುತ್ತಿರುವ ಅನಾಗರಿಕ ದೌರ್ಜನ್ಯ ಜರ್ಮನ್ ನಾಜಿಗಳ ದೌರ್ಜನ್ಯಕ್ಕಿಂತ ಕಮ್ಮಿಯದ್ದೇನಲ್ಲ." ಎಂದು ಪ್ರಸಿದ್ಧ ಬ್ರಿಟಿಷ್ ಇತಿಹಾಸಕಾರ ಅರ್ನಾಲ್ಡ್ ಟೈನ್ ಬಿ (1889– 1975) ತನ್ನ ಜೀವಿತದ ಕೊನೆಯ ಸಮಯದಲ್ಲಿರುವಾಗ ಒಮ್ಮೆ ಹೇಳಿದ್ದರು.

ಟೈನ್ ಬಿ ಅವರು ಈ ಹೇಳಿಕೆ ನೀಡಿದ್ದು ಕೆನಡಾದಲ್ಲಿ. ಆ ಸಂದರ್ಭದಲ್ಲಿ ಇಸ್ರೇಲ್ ರಾಯಭಾರಿಯಾಗಿ ಮಿ. ಹರ್ಗಿರ್ಝ್ ಕೆನಡಾದಲ್ಲಿದ್ದರು. ಬ್ರಿಟನ್ ಇತಿಹಾಸಕಾರನ ಈ ಹೇಳಿಕೆಯ ಬಳಿಕ ಇಸ್ರೇಲ್ ರಾಯಭಾರಿ ಅವರನ್ನು ಈ ವಿಷಯದಲ್ಲಿ ಚರ್ಚೆಗಾಗಿ ಆಹ್ವಾನಿಸಿದರು. ಅರ್ನಾಲ್ಡ್ ಟೈನ್ ಬಿ ಅವರು ಈ ಆಹ್ವಾನವನ್ನು ಸ್ವೀಕರಿಸಿದರು ಕೂಡ. ಆ ಬಳಿಕ ಕೆನಡಾದ ಮೆಕ್ ಗಿಲ್ ಯುನಿವರ್ಸಿಟಿಯಲ್ಲಿ ಇವರೀರ್ವರ ಮುಖಾಮುಖಿಯಾಯಿತು. ಈ ಸಂದರ್ಭದಲ್ಲಿ, "ಜರ್ಮನ್ ನಾಜಿಗಳು 60,000 ಯಹೂದಿಗಳ ಮಾರಣಹೋಮವೆಸಗಿದ್ದಾರೆ. ಫೆಲೆಸ್ತೀನಿನ ನಿರಾಶ್ರಿತ ಅರಬ್ಬರ ಸಂಖ್ಯೆ ತೀರಾ ವಿರಳ. ವಾಸ್ತವ ಹೀಗಿರುವಾಗ ನೀವು

ಹೇಗೆ ತಾನೇ ಈ ಎರಡು ಘಟನೆಗಳನ್ನು ಸಮಾನ ರೂಪದ್ದೆಂದು ನಿರೂಪಿಸಬಲ್ಲಿರಿ?" ಎಂದು ಹರ್ಗಿರ್ಝ್, ಟೈನ್ ಬಳಿ ಸವಾಲೆಸೆದರು.

ಆಗ ಟೈನ್ ಬಿ, "ನಾನು ಇಸ್ರೇಲಿ ಮತ್ತು ನಾಝಿಗಳ ನಡುವಣ ಹೋಲಿಕೆ ಮಾಡಿದ್ದು ಅಪರಾಧದ ಸ್ವರೂಪದ ಕುರಿತಾಗಿತ್ತೇ ವಿನಃ ಸಾವಿನ ಸಂಖ್ಯೆಗನುಗುಣವಾಗಿ ಅಲ್ಲ. ಈ ಜಗತ್ತಿನಲ್ಲಿ ಓರ್ವನು 100 ಪ್ರತಿಶತಕ್ಕಿಂತಲೂ ಹೆಚ್ಚು ಕೆಟ್ಟವನೆನಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಒಬ್ಬ ವ್ಯಕ್ತಿ ಸಮಾಜದಲ್ಲಿ ಕೊಲೆಗಾರನೆಂದು ಕರೆಸಿಕೊಳ್ಳಲು ಒಂದು ಕೊಲೆ ಮಾಡಿದರೂ ಸಾಕು. ಇಷ್ಟಕ್ಕೂ ನನ್ನ ಮಾತಿನಿಂದ ನೀವು ಇಷ್ಟು ವಿಚಲಿತರಾಗಿರುವುದು ನನ್ನನ್ನು ಅತ್ಯಂತ ಚಕಿತಗೊಳಿಸಿದೆ. ಯಾಕೆಂದರೆ, ನಿಮ್ಮ ಪೈಕಿ ಪ್ರತಿಯೋರ್ವನ ಆತ್ಮಸಾಕ್ಷಿಯ ನುಡಿಯುತ್ತಿರುವ ಮಾತನ್ನೇ ನಾನೂ ಹೇಳಿರುವುದು" ಎಂದುತ್ತರಿಸಿದರು.

ಯಾವುದಾದರೂ ವ್ಯಕ್ತಿ ಸತ್ಯವನ್ನು ನಿರಾಕರಿಸುವಾಗ ಸ್ವತಃ ತನ್ನ ಆತ್ಮಸಾಕ್ಷಿಯ ಕೂಗನ್ನೇ ಕಡೆಗಣಿಸುತ್ತಿರುತ್ತಾನೆ. ಸತ್ಯವೆಂಬುದು ಸದಾ ವ್ಯಕ್ತಿಯ ಖುದ್ದು ಆತ್ಮಸಾಕ್ಷಿಯ ಕೂಗಾಗಿರುತ್ತದೆ. ಆದರೆ, ವ್ಯಕ್ತಿಯು ತನ್ನ ಹಠಮಾರಿತನ, ವಿದ್ವೇಷ ಮತ್ತು ತನ್ನ ಸುಳ್ಳು ಅಹಂಕಾರಗಳಿಂದಾಗಿ ಆ ಆತ್ಮಸಾಕ್ಷಿಯ ಕೂಗನ್ನು ಕಡೆಗಣಿಸುತ್ತಿರುತ್ತಾನೆ. ಆತ ತನ್ನ ನಿರಾಕರಣೆಯನ್ನೇ ಸತ್ಯವೆಂದು ಸಾಬೀತು ಪಡಿಸುವ ಸಲುವಾಗಿ ಎಂತೆಂತಹ ಪದಪುಂಜಗಳನ್ನೆಲ್ಲಾ ಬಳಸುತ್ತಾನೆಂದರೆ ಅದರ ಕುರಿತು ಖುದ್ದು ಅವನ ಮನಸಾಕ್ಷಿಯೇ, "ನಿನ್ನೀ ವಾದದಲ್ಲಿ ಯಾವುದೇ ಹುರುಳಿಲ್ಲ" ಎಂಬ ಸಂದೇಶ ರವಾನಿಸುತ್ತದೆ.

ಖುದ್ದು ತನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಮನುಷ್ಯನ ಪಾಲಿನ ಅತಿದೊಡ್ಡ ದುರಂತವೆನ್ನಬಹುದು. ವ್ಯಕ್ತಿಯೋರ್ವನು, ಪೂರ್ವಗ್ರಹ ಪೀಡಿತ ವಿದ್ವೇಷ, ಹಠಮಾರಿತನ ಮತ್ತು ಲಾಲಸೆಯಿಂದಾಗಿ ಮನುಷ್ಯನು ತಪ್ಪು ದಾರಿ

ಹಿಡಿದಾಗಲೆಲ್ಲಾ ಅವನ ಮನಸಾಕ್ಷಿಯು, "ನೀನು ಹೋಗುತ್ತಿರುವ ಮಾರ್ಗ ಸರಿಯಾದುದಲ್ಲ" ಎಂಬ ಎಚ್ಚರಿಕೆಯ ಕರೆಗಂಟೆ ನೀಡುತ್ತದೆ. ತನ್ನ ಮನಸಾಕ್ಷಿಯ ಈ ಕೂಗನ್ನು ಕಡೆಗಣಿಸುವುದರ ಅರ್ಥ, ತನ್ನನ್ನು ತಾನೇ ಕೊಂದುಕೊಂಡಂತೆ. ಇದು ತನ್ನ ಅಪರಾಧಿತನದ ಕುರಿತು ಸ್ವತಃ ಸಾಕ್ಷಿ ನುಡಿದಂತೆ. ಎಂತಹ ವಿಚಿತ್ರ ದುರಂತವಿದು. ಆದರೆ, ಮನುಷ್ಯನ ತನ್ನ ಅಂತರಂಗದ ಕೂಗನ್ನು ಕಡೆಗಣಿಸುತ್ತಾ ಅಪರಾಧದ ಹಾದಿಯಲ್ಲಿ ಬಹುದೂರ ಚಲಿಸಿಬಿಟ್ಟಾಗ, ತನ್ನ ಪಾಲಿನ ದುರಂತವೂ ಅವನಿಗೆ ಮಹಾವಿಜಯದಂತೆ ತೋರಲ್ಪಡುವುದು. ವಾಸ್ತವದಲ್ಲಿ ಅವನು ತನ್ನ ಆತ್ಮಸಾಕ್ಷಿಯನ್ನು ಕೊಲ್ಲುವ ಮೂಲಕ ತನ್ನ ವಿನಾಶದ ಮುನ್ನುಡಿಯನ್ನು ಖುದ್ದು ಬರೆದುಕೊಳ್ಳುತ್ತಿದ್ದರೂ, ಆತ ಮಾತ್ರ, 'ತನ್ನ ಅಪರಾಧದ ಕಾರ್ಯಗಳನ್ನೇ ವಿಜಯದ ಮುನ್ನುಡಿ' ಎಂದು ಭ್ರಮಿಸುತ್ತಾ ಜೀವಿಸುತ್ತಿರುತ್ತಾನೆ.

# ಹೆಬ್ಬಾವು ಕೂಡ...

ಹೆಬ್ಬಾವು ಎಂಬ ಪದ ಕೇಳಿದ ಕೂಡಲೇ, ಒಂದು ಅಪಾಯಕಾರಿ ಜೀವಿಯ ಚಿತ್ರಣ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಹೆಬ್ಬಾವಿನಲ್ಲೂ ಅನೇಕ ಪ್ರಬೇಧಗಳಿವೆ. ಭಾರತದ ದಟ್ಟಾರಣ್ಯದಲ್ಲಿ ಕಂಡುಬರುವ ಹಾವಿನ ಈ ಜಾತಿಯನ್ನು ಪ್ರಾಣಿಶಾಸ್ತ್ರಜ್ಞರು 'ಮೊಲರಸ್ ಪೈಥಾನ್' (Molurus Python) ಎಂದು ಕರೆಯುತ್ತಾರೆ. ಸಂಪೂರ್ಣವಾಗಿ ಬೆಳವಣಿಗೆಯಾದ ಬಳಿಕ ಈ ಹಾವು ಸಾಮಾನ್ಯವಾಗಿ 20 ಅಡಿ ಉದ್ದ, 200 ಫೌಂಡ್ ಗೂ ಹೆಚ್ಚು ತೂಗುವ ದೈತ್ಯಾಕಾರ ತಾಳುತ್ತದೆ.

ತನ್ನ ದೈತ್ಯಾಕಾರದ ಹೊರತಾಗಿಯೂ ಹೆಬ್ಬಾವು ಇತರ ಕ್ರೂರ ಪ್ರಾಣಿಗಳಂತೆ ಹೆಚ್ಚು ಅಪಾಯಕಾರಿಯೇನಲ್ಲ. ಅದು ಮನುಷ್ಯ ಮತ್ತು ಇತರ ಪ್ರಾಣಿಗಳ ಮೇಲೆ ಕೇವಲ ಎರಡು ಪರಿಸ್ಥಿತಿಗಳಲ್ಲಷ್ಟೇ ದಾಳಿ ಮಾಡುತ್ತದೆ. ಮೊದಲನೆಯದು, ಅದು ತುಂಬಾ ಹಸಿದಿರುವ ಸ್ಥಿತಿಯಲ್ಲಿರುವಾಗ, ಎರಡನೆಯದು ಯಾರಾದರೂ ಅದರ ಮೇಲೆ ದಾಳಿ ಮಾಡಿದಾಗ. ಸಾಮಾನ್ಯ ಸ್ಥಿತಿಯಲ್ಲಿ ಅದು ನಿರುಪದ್ರವಿ ಪ್ರಾಣಿಗಳಂತೆ ನಿಶ್ಚಲವಾಗಿ ಬಿದ್ದುಕೊಂಡಿರುತ್ತದೆ. ಪ್ರಾಣಿಶಾಸ್ತ್ರದಲ್ಲಿ ಪರಿಣಿತಿ ಪಡೆದಿರುವ ಓರ್ವ ವ್ಯಕ್ತಿ ಹೀಗೆ ಬರೆದಿರುವರು:

A python, however large it may be, is nervous by nature and like all other snakes will never attack deliberately nor will it become aggressive unless provoked. It threatens by hissing or disappears if encountered in the wild but does not stand up and fight as one might imagine.

ಒಂದು ಹೆಬ್ಬಾವು ಅದು ಎಷ್ಟೇ ದೈತ್ಯಾಕಾರದ್ದಾಗಿದ್ದರೂ ನೈಸರ್ಗಿಕವಾಗಿ ನಿಷ್ಕ್ರಿಯ ಸ್ವಭಾವನ್ನು ಹೊಂದಿರುವ ನಿರುಪದ್ರವಿ ಸಸ್ತನಿಯಾಗಿದೆ. ಅದು, ಇತರ ಹಾವುಗಳಂತೆ ತಾನಾಗಿಯೇ ಮೈ ಮೇಲೆ ಬಿದ್ದು ಕಚ್ಚಿದ ಉದಾಹರಣೆಗಳಿಲ್ಲ. ಅದನ್ನು

ನಾವಾಗಿಯೇ ಪ್ರಚೋದಿಸದ ಹೊರತು ಅದು ಆಕ್ರಮಣಕಾರಿಯಾಗಿ ವರ್ತಿಸುವುದೂ ಇಲ್ಲ. ಕಾಡಿನಲ್ಲೇನಾದರೂ ಅದು ಕಣ್ಣಿಗೆ ಕಾಣಿಸಿದರೆ ಒಂದೋ 'ಬುಸ್ಸ್' ಎನ್ನುವ ತನ್ನ ವಿಶಿಷ್ಟ ಸದ್ದಿನ ಮೂಲಕ ನಮ್ಮನ್ನು ಹೆದರಿಸುತ್ತದೆ ಇಲ್ಲವೇ ತಾನಾಗಿಯೇ ನಮ್ಮ ಕಣ್ಣಿಂದ ಮರೆಯಾಗಿಬಿಡುತ್ತದೆ. ಅದಾಗಿಯೇ ಮುಂದೆ ಬಂದು ನಮ್ಮೊಂದಿಗೆ ಎಂದೂ ಘರ್ಷಣೆಗಿಳಿಯುವುದಿಲ್ಲ.

ಹೆಬ್ಬಾವಿನಲ್ಲಿರುವ ಈ ಸ್ವಭಾವವು ಕೇವಲ ಕಾಕತಾಳೀಯವೇನಲ್ಲ. ಬದಲಿಗಿದು, ಜಗತ್ತಿನ ಸೃಷ್ಟಿಕರ್ತನ ಯೋಜನೆಯ ನೇರ ಫಲಿತಾಂಶವಾಗಿದೆ. ಇದರಲ್ಲಿ ಹೆಬ್ಬಾವು ತನ್ನ ಕಡೆಯಿಂದ ಮನುಷ್ಯರ ಪಾಲಿಗೊಂದು ಮೂಕ ಸಂದೇಶ ರವಾನಿಸುತ್ತಿದೆ; 'ಒಂದು ವೇಳೆ ನಿಮ್ಮಲ್ಲಿ ಹೆಬ್ಬಾವಿನಷ್ಟು ಶಕ್ತಿ ಅಡಗಿದ್ದರೂ, ನೀವು ಇತರರಿಗೆ ತೊಂದರೆ ಕೊಡದಿರಿ. ನೀವು ಬೇರೆಯವರಿಗಿಂತ ಅದೆಷ್ಟೇ ಬಲಶಾಲಿಗಳಾಗಿದ್ದರೂ ಇನ್ನೊಬ್ಬರನ್ನು ಸತಾಯಿಸದಿರಿ' ಎಂದು ತನ್ನ ಕ್ರಿಯಾ ಭಾಷೆಯ ಮೂಲಕ ಮಾನವ ಸಮೂಹಕ್ಕೆ ಎಂಬ ಸಾರುತ್ತಿರುವ ಅಮೂಲ್ಯ ಸಂದೇಶವದು.

ಸಿಂಹ ಹಾಗೂ ಹೆಬ್ಬಾವಿನಂತಹ ಕ್ರೂರ ಜೀವಿಗಳೇ ಮನುಷ್ಯನಿಗೆ ಶಾಂತಿಯ ಪಾಠ ಹೇಳಿಕೊಡುತ್ತಿರುವಾಗ, ಖುದ್ದು ಮನುಷ್ಯ ಮಾತ್ರ ತನ್ನೊಡನೆ ಒಂದೇ ಸಮಾಜದಲ್ಲಿ ಜೀವಿಸುತ್ತಿರುವವರ ಪಾಲಿಗೆ ಬಲು ಕ್ರೂರಿಯಾಗಿರುವುದು ಎಷ್ಟೊಂದು ವಿಪರ್ಯಾಸವಲ್ಲವೇ?.

# ದೇವಾರಾಧನೆ

ಪ್ರಸ್ತುತ ನಾವು ಬದುಕುತ್ತಿರುವ ಈ ಜಗತ್ತಿನಲ್ಲಿ ಜೀವನ ನಡೆಸುವ ಎರಡು ವಿಧಾನಗಳಿವೆ. ಮೊದಲನೆಯದು ಮನಸೋ ಇಚ್ಛೆ (ನಮ್ಮ ಮನಸ್ಸಿಗೆ ಬಂದಂತೆ) ಜೀವಿಸುವುದು (Self oriented life). ಎರಡನೆಯದು ದೇವೇಚ್ಛೆಯಂತೆ ಜೀವಿಸುವುದು (God oriented life).

ಮನುಷ್ಯನೋ ಒಂದೋ ಸ್ವಯಂ ತನ್ನದೇ ಆರಾಧಕನಾಗಿರುವನು ಅಥವಾ ದೇವಾರಾಧಕನಾಗಿರುವನು. ಅವನ ಗಮನ ಒಂದೋ ಸ್ವ–ಕೇಂದ್ರಿತವಾಗಿರುವುದು ಇಲ್ಲವೋ ದೇವಕೇಂದ್ರಿತವಾಗಿರುವುದು. ಅವನು ಒಂದೋ ತನ್ನ ಮನಾಭಿಲಾಷೆಗಳನ್ನಷ್ಟೇ ಪೂರೈಸುವ ಮಾರ್ಗವನ್ನು ಆಯ್ಕೆ ಮಾಡುವನು ಇಲ್ಲವೋ ದೇವನನ್ನು ಮೆಚ್ಚಿಸುವ ಮಾರ್ಗವನ್ನು ಹಿಡಿಯುವನು. ಇದರ ಹೊರತಾದ ಮೂರನೇ ಮಾರ್ಗವಂತೂ ಖಂಡಿತ ಇಲ್ಲ. ಆದುದರಿಂದ ದೇವನನ್ನು ಮೆಚ್ಚಿಸುವ ಮಾರ್ಗದಲ್ಲಿ ಜೀವನ ಸಾಗಿಸುವುದೇ ನಮ್ಮ ಪಾಲಿನ ಅತ್ಯುತ್ತಮ ಆಯ್ಕೆಯಾಗಿದೆ.

ಸ್ವ–ಕೇಂದ್ರಿತ ಜೀವನ ಸಾಗಿಸುವುದರ ಅರ್ಥ ಮನುಷ್ಯನು ಕೇವಲ ತನ್ನ ಹಿತಾಸಕ್ತಿಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಜೀವಿಸುವುದಾಗಿದೆ. ಈ ರೀತಿಯ ಜೀವನದಲ್ಲಿ ಆತನು ತನಗೆ ದೊರೆತ ಸಂಪತ್ತನ್ನು, ಜೀವನ ಸಾಧನಗಳನ್ನು ಕೇವಲ ತನ್ನ ಹಿತಾಕಾಂಕ್ಷೆಯನ್ನು ಪೂರೈಸಿಕೊಳ್ಳಲಿಕ್ಕಾಗಿ ಮಾತ್ರ ಬಳಸಿಕೊಳ್ಳುವನು. ತಾತ್ವಿಕ ಭಾಷೆಯಲ್ಲಿ ಇಂತಹ ಬದುಕನ್ನು ಸ್ವ–ಕೇಂದ್ರಿತ ಜೀವನ (Self Centered thinking) ಎನ್ನುವರು. ನೈತಿಕ ಭಾಷೆಯಲ್ಲಿ ಇದನ್ನು ಸ್ವಾರ್ಥ ಬದುಕು, ತತ್ವರಹಿತ ಬದುಕು, ಆಸೆಬುರುಕ ಜೀವನ, ಸ್ವ–ಹಿತಾಸಕ್ತಿಯ ಬದುಕು ಎಂದೆಲ್ಲಾ ಹೆಸರಿಸಿರುವರು. ಈ ರೀತಿಯ ಬದುಕನ್ನು ಸಾಗಿಸುವ ಜನರು ಹೊರನೋಟಕ್ಕೆ ಮಾನವರಂತೆ ಕಂಡರೂ, ನಿಜವಾಗಿ

ಪ್ರಾಣಿಗಳಂತಿರುವರು. ಯಾಕೆಂದರೆ ಇಂತಹವರ ಜೀವನ ವಿಧಾನ ಪ್ರಾಣಿಗಳಿಗಿಂತ ಭಿನ್ನವಾಗಿಲ್ಲ.

ದೇವಕೇಂದ್ರಿತ ಜೀವನದಲ್ಲಿ (God oriented life) ಮನುಷ್ಯನ ಆಲೋಚನೆಯ ಕೇಂದ್ರಬಿಂದು ಕೇವಲ ಏಕದೇವ ಮಾತ್ರನಾಗಿರುವನು. ಈ ರೀತಿಯ ದೈವಿಕ ಮಾರ್ಗದರ್ಶನದಲ್ಲಿ ಜೀವನ ನಡೆಸುವಾತನು ದೇವನನ್ನು ಅವನ ಶ್ರೇಷ್ಠ ಅಸ್ತಿತ್ವದೊಂದಿಗೆ ಪಡೆಯುವನು. ಹಾಗೆ ಪಡೆದ ಬಳಿಕ ತಮ್ಮ ಸ್ವ-ಅಸ್ತಿತ್ವವನ್ನೂ ಸೇರಿಸಿ ಪ್ರತಿಯೊಂದು ವಿಷಯವೂ ಅವನಿಗೆ ದೇವನೆದುರು ಬಹಳ ಚಿಕ್ಕದಾಗಿ ಕಾಣಿಸತೊಡಗುವುದು. ಆತ ಸದಾ ದೇವನನ್ನು ಸ್ಮರಿಸಿಕೊಳ್ಳುತ್ತಲೇ ಇರುವನು. ಅವನು ತನ್ನ ಜೀವನದ ಎಲ್ಲ ಭರವಸೆಗಳ ಬೆಳಕು ದೇವನೊಬ್ಬನೇ ಎಂಬ ಅಚಲ ವಿಶ್ವಾಸ ತಾಳಿದವನಾಗಿರುವನು. ಆತನಿಗೆ ದೇವಭಯದ ಹೊರತು ಮತ್ತಾರ ಭಯವೂ ಕಾಡದು. ಅವನ ದೃಷ್ಟಿಯಲ್ಲಿ ದೇವನೇ ಸರ್ವಸ್ವವೂ ಆಗಿರುವನು. ತಾನು, ತನ್ನದೆಂಬ ಸ್ವಾರ್ಥ, ಅಹಂಕಾರ ಅವನನ್ನೆಂದೂ ಬಾಧಿಸದು.

ಪ್ರಸ್ತಾಪಿತ ಎರಡನೇ ವ್ಯಕ್ತಿಯು ನೈಜ ದೇವಾರಾಧಕ ವ್ಯಕ್ತಿಯಾಗಿರುವನು. ಅವನು ವಾಸ್ತವವನ್ನು ಮೆಚ್ಚಿ, ಅದನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡವನಾಗಿರುವನು. ಅವನು ಜಗತ್ತಿನ ಸಮಸ್ತ ವಸ್ತುಗಳೊಂದಿಗೆ ಸಂಪೂರ್ಣ ಹೊಂದಾಣಿಕೆಯಾಗುವ ಪ್ರಕೃತಿಯ ಸಾರ್ವತ್ರಿಕ ಮಾರ್ಗವನ್ನು ಅಳವಡಿಸಿಕೊಂಡಿರುವವನಾಗಿರುವನು. ಅವನು ದೇವನನ್ನು ಪಡೆಯಬಲ್ಲ ಅತ್ಯಂತ ಸ್ಪಷ್ಟ ಹಾಗೂ ನೇರವಾದ ಮಾರ್ಗದಲ್ಲಿ ಮುನ್ನಡೆದು ದೇವನನ್ನು ತಲುಪುವನು. ಈ ಮಾರ್ಗದ ವಿನಾ ದೇವನನ್ನು ಪಡೆಯಲು ಅನ್ಯ ಮಾರ್ಗವಿಲ್ಲ.

ಮನುಷ್ಯನ ಅಂತಿಮ ಗುರಿ ದೇವನೇ ಆಗಿರುವನು. ಆ ಏಕದೇವನ ಹೊರತಾದ ಬೇರಾವ ವಸ್ತುವೂ ಅವನನ್ನು ಅವನ ನೈಜ ಗಮ್ಯಸ್ಥಾನಕ್ಕೆ ಕೊಂಡಯ್ಯಲು ಶಕ್ತವಾಗಿಲ್ಲವೆಂಬುದೇ ವಾಸ್ತವ.

# ಬದುಕಿನ ಸಮಸ್ಯೆ

ಬ್ರೆಝಿಲ್ ಅಟ್ಲಾಂಟಿಕ್ ಕರಾವಳಿಯಲ್ಲಿರುವ ದಕ್ಷಿಣ ಅಮೆರಿಕಕ್ಕೆ ಸೇರಿದ ದೇಶವಾಗಿದೆ. ಸರಿಸುಮಾರು 12 ಕೋಟಿಗೂ ಅಧಿಕ ಜನಸಂಖ್ಯೆಯಿರುವ ಈ ಪ್ರದೇಶದಲ್ಲಿ ಹೆಚ್ಚಿನವರು ರೋಮನ್ ಕ್ಯಾಥೋಲಿಕ್ ಪಂಥದ ಅನುಯಾಯಿಗಳಾಗಿರುವರು. 1964ರಿಂದ ಬ್ರೆಝಿಲ್ ನಲ್ಲಿ ಮಿಲಿಟರಿ ಆಡಳಿತವಿತ್ತು. ಈ ಮಿಲಿಟರಿ ಆಡಳಿತದ ವಿರುದ್ಧ ಚಳುವಳಿಯನ್ನು ಹಮ್ಮಿಕೊಂಡ ನಾಯಕರ ಪೈಕಿ ಟ್ಯಾಂಕ್ರೆಡೊ ನೆವೆಸ್ (Tancredo Neves) ಪ್ರಮುಖ ಹೆಸರು. ಅವರ 21 ವರ್ಷಗಳ ಕಠಿಣ ಪರಿಶ್ರಮ ಬಳಿಕ ಮಿಲಿಟರಿ ಆಡಳಿತದ ವಿರುದ್ಧ ಹೋರಾಡಲು ಅಲ್ಲಿನ ಜನರನ್ನು ಅಣಿಯಾದರು. ಪ್ರಜೆಗಳ ತೀವ್ರ ವಿರೋಧದ ಬಳಿಕ, ಮಿಲಿಟರಿ ಆಡಳಿತದ ಬಳಿ ಸಾರ್ವತ್ರಿಕ ಚುನಾವಣೆ ನಡೆಸದೇ ಬೇರೆ ದಾರಿ ಇರಲಿಲ್ಲ.

1981ರ ಜನವರಿಯಲ್ಲಿ ಚುನಾವಣೆ ನಡೆಯಿತು. ಆ ಚುನಾವಣೆಯಲ್ಲಿ ಶ್ರೀಯುತ ನೋವೆಸ್ ಅವರು ಭಾರೀ ಬಹುಮತದೊಂದಿಗೆ ವಿಜಯಿಯಾಗಿ, ದೇಶದ ಅಧ್ಯಕ್ಷರಾಗಿ ಆಯ್ಕೆಯಾದರು. ಆಗಿನ ರೇಡಿಯೋ ಹಾಗೂ ಪತ್ರಿಕಾ ಮಾಧ್ಯಮವು ನೋವೆಸ್ ರ ವಿಜಯದ ಉಲ್ಲೇಖವನ್ನು "ತುಂಬಾ ಇದೊಂದು ಅಭೂತಪೂರ್ವ ಯಶಸ್ಸು" ಎಂದೆಲ್ಲಾ ಬಣ್ಣಿಸಿದವು. ಪತ್ರಿಕೆಯೊಂದು ಈ ವಿಜಯವನ್ನು ಉಲ್ಲೇಖಿಸುತ್ತಾ ಹೀಗೆ ಬರೆಯಿತು:

His victory capped a political career spanning nearly 50 years. "ನೋವೆಸ್ ರ ಈ ಅಭೂತ ಪೂರ್ವ ವಿಜಯವು ಅವರ ಐದು ದಶಕಗಳ ರಾಜಕೀಯ ಜೀವನಕ್ಕೆ ದೊರೆತ ಅವರ ಯಶಸ್ಸಿನ ಪರಾಕಷ್ಠೆಯಾಗಿದೆ."

15 ಮಾರ್ಚ್ 1985ರಂದು ಮಿ. ನೋಯೇಸ್ ಅವರ ಅಧ್ಯಕ್ಷೀಯ ಪ್ರಮಾಣವಚನ ಸಮಾರಂಭ ನಡೆಯಬೇಕಿತ್ತು. ಆದರೆ ಸಮಾರಂಭ ನಡೆಯಬೇಕಿದ್ದ

ಕೆಲವು ಗಂಟೆಗಳಷ್ಟೇ ಮೊದಲು ಅವರು ತೀವ್ರ ಅನಾರೋಗ್ಯಕ್ಕೀಡಾದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ದೇಶದ ಹೆಸರಾಂತ ಆಸ್ಪತ್ರೆಯಲ್ಲಿ ನಿರಂತರ ಒಂದು ತಿಂಗಳ ತನಕ ಪರಿಣಿತ ವೈದ್ಯರ ತಂಡ ಅವರ ಆರೈಕೆಯಲ್ಲಿ ತೊಡಗಿತು. ಈ ಅವಧಿಯಲ್ಲಿ ಅವರಿಗೆ ಏಳು ಶಸ್ತ್ರಚಿಕಿತ್ಸೆಗಳಿಗೊಳಗಾದರು. ಆದರೆ ಈ ಎಲ್ಲ ಪ್ರಯತ್ನಗಳ ಬಳಿಕವೂ ಅವರನ್ನು ಜೀವಂತ ಉಳಿಸಿಕೊಳ್ಳಲಾಗಲಿಲ್ಲ. 21 ಮಾರ್ಚ್ 1985ರಂದು ನೋಯೇಸ್ ತನ್ನ ಕೊನೆಯುಸಿರೆಳೆದರು. ಆಗ ಅವರಿಗೆ 75 ವರ್ಷ ವಯಸ್ಸಾಗಿತ್ತು.

ಕಠಿಣ ಪರಿಶ್ರಮದ ಹೊರತಾಗಿಯೂ ಅದರ ಫಲವನ್ನು ಪಡೆಯದೇ ಈ ಲೋಕದಿಂದ ನಿರ್ಗಮಿಸುವ ಮನುಷ್ಯನ ಸ್ಥಿತಿ ಎಷ್ಟೊಂದು ವಿಚಿತ್ರವಲ್ಲವೇ?. ವಿಜಯದ ಕಿರೀಟವು ಸಿದ್ಧವಾಗಿದ್ದರೂ ಅದನ್ನು ತೊಡುವ ಅದೃಷ್ಟ ಅವನ ಪಾಲಿಗೆ ಒದಗಿಬರುವುದಿಲ್ಲ. ಅವನ ಪ್ರಯತ್ನಗಳ ಪರಾಕಷ್ಠೆಯು ಅವನ ಪಾಲಿನ ದೌರ್ಭಾಗ್ಯದ ಪರಾಕಷ್ಠೆಯಾಗಿ ಕೊನೆಗೊಳ್ಳುತ್ತದೆ.

ಇಂತಹ ಮನಕುಲುಕುವ ಘಟನೆಗಳಿಂದ ನಮಗೆ ದೊರೆಯುವ ಪಾಠವೇನೆಂದರೆ; ಈ ಜಗತ್ತು ಕೇವಲ ಕರ್ಮಗಳನ್ನೆಸಗುವ ಲೋಕವಾಗಿದೆ. ಇದು ಪ್ರತಿಫಲವನ್ನು ಪಡೆಯುವ ಲೋಕವಲ್ಲ. ಪ್ರತಿಫಲ ಸಿಗುವ ಲೋಕವು ಈ ಲೌಕಿಕ ಜಗತ್ತಿನಾಚೆಗೆ ಬೇರೆಲ್ಲೋ ಇದೆ. ಅದೇ ಮಾಡಿದ ಕರ್ಮಗಳ ಪ್ರತಿಫಲ ಪಡೆಯುವ ಪರಲೋಕವಾಗಿದೆ.

# ಕಂಪನದಗತ್ಯ.

ದೇವನ ಸ್ವರ್ಗವೂ ಎಷ್ಟು ಅಮೂಲ್ಯವಾಗಿದೆಯೋ ಅದಕ್ಕಾಗಿ ತೆರಬೇಕಾದ ಮೌಲ್ಯವೂ ಅಷ್ಟೇ ಅಮೂಲ್ಯದ್ದಾಗಿದೆ. ಸ್ವರ್ಗವನ್ನು ಪಡೆಯಲಿಕ್ಕಾಗಿ ಕಠಿಣಾತಿ ಕಠಿಣ ಪರಿಸ್ಥಿತಿಯನ್ನು ವ್ಯಕ್ತಿಯು ಎದುರಿಸಬೇಕಾಗುವುದು. ಈ ಪರಿಸ್ಥಿತಿಯ ಕಠಿಣತೆ ಎಷ್ಟು ತೀವ್ರ ತರದ್ದಾಗಿರುವುದೆಂದು ಅರ್ಥೈಸಿಕೊಳ್ಳಲು ನಾವದನ್ನು ಭೂಕಂಪಕ್ಕೆ ಹೋಲಿಸಬಹುದು. ಭೂಕಂಪದಷ್ಟು ತೀವ್ರತರವಾದ ಕಂಪನ ಎದುರಿಸಿ, ತನ್ನೊಳಗೆ ನೈತಿಕ ಕ್ರಾಂತಿಯ ಬದಲಾವಣೆಯನ್ನು ತರಬಲ್ಲ ಧೈರ್ಯಶಾಲಿಗಳ ಪಾಲಿಗಷ್ಟೇ ಆ ಸ್ವರ್ಗವನ್ನು ಪಡೆಯುವ ಮಹಾಸೌಭಾಗ್ಯ ದೊರೆಯುವುದು.

ಯಾರು ಶಾಶ್ವತ ಸ್ವರ್ಗವಾಸಿಗಳಾಗ ಬಯಸುವರೋ ಮೇಲೆ ಹೇಳಿದಂತೆ ಅವರು ಮೊತ್ತಮೊದಲು ತಮ್ಮನ್ನು ಭೂಕಂಪದಂತಹ ಕಂಪನಕ್ಕೊಡ್ಡಿಕೊಂಡು ತಮ್ಮೊಳಗೆ ನೈತಿಕ ಕ್ರಾಂತಿಯನ್ನು, ಚಾರಿತ್ರಿಕ ಬದಲಾವಣೆಯನ್ನು ತರಬೇಕಾಗುವುದು. ಪರಮಾಣು ಸಂಯೋಜನೆಯಲ್ಲಿ ಅಗಾಧವಾದ ಶಕ್ತಿ ಅಡಗಿರುತ್ತದೆ. ಆ ಸಂಯೋಜನೆಯನ್ನು ಕಾರ್ಯರೂಪಕ್ಕೆ ತಂದಾಗಷ್ಟೇ ಆ ಅಡಗಿದ ಶಕ್ತಿಯ ಪರಿಚಯ ನಮಗಾಗುವುದು. ಇದೇ ರೀತಿಯ ಪರಿಸ್ಥಿತಿ ಮನುಷ್ಯನದ್ದಾಗಿದೆ. ಪ್ರತಿಯೋರ್ವ ಮನುಷ್ಯನಲ್ಲಿಯೂ ಅದ್ಭುತ ದೈವಿಕ ವ್ಯಕ್ತಿತ್ವವು ಅಡಗಿರುವುದು. ಅವನಲ್ಲಿರುವ ಈ ದೈವಿಕ ವ್ಯಕ್ತಿತ್ವ ಹೊರಬರುವಂತಾಗಲು ಮನುಷ್ಯನು ತನ್ನೊಳಗೆ ಕಂಪನದ ಮೂಲಕ ನೈತಿಕ ಕ್ರಾಂತಿಯನ್ನು ತಂದುಕೊಳ್ಳುವುದು ಅತ್ಯಂತ ಅವಶ್ಯವಾಗಿದೆ.

ಪ್ರತಿಯೋರ್ವ ವ್ಯಕ್ತಿಯೂ ಹುಟ್ಟುವಾಗ ಪ್ರಕೃತಿದತ್ತವಾಗಿ ದೈವಿಕ ಸ್ವಭಾವವನ್ನೇ ಹೊಂದಿರುತ್ತಾನೆ. ಆದರೆ, ತಾನು ಬದುಕುತ್ತಿರುವ ಸಮಾಜದಲ್ಲಿನ ವಾತಾವರಣ, ಸಂಪ್ರದಾಯ ಮತ್ತು ಆಸೆ–ಆಕಾಂಕ್ಷೆಗಳು ಮತ್ತಿತರ ವಿಷಯಗಳ ಒತ್ತಡ

ಮತ್ತು ಅವುಗಳ ಪ್ರಭಾವಗಳು ಅವನೊಳಗಿನ ದೈವಿಕ ಸ್ವಭಾವದ ಮೇಲೆ ಮುಸುಕನ್ನೆಳೆದುಬಿಡುತ್ತವೆ. ಆಗ ಅವನೊಂದು ತೆರನಾದ ಕೃತಕ ಪರಿಧಿಯೊಳಗೆ ಬಂಧಿಯಾಗಿ ಬಿಡುತ್ತಾನೆ. ಈ ರೀತಿ ಅವನು ತಾನು ಬಂಧಿಯಾದ ಆ ಕೃತಕ ಪರಿಧಿಯೊಳಗೆ ಸೀಮಿತವಾಗಿ ಬದುಕತೊಡಗುತ್ತಾನೆ. ಅವನ ಆಲೋಚನೆ, ಚಿಂತನೆ ಎಲ್ಲವೂ ಆ ಬಂಧಿಖಾನೆಗಷ್ಟೇ ಸೀಮಿತವಾಗಿಬಿಡುತ್ತದೆ. ಆದುದರಿಂದ, ಈ ಕೃತಕ ಪರದೆಯನ್ನು ಹರಿದು ಹೊರಗೆ ಬರುವುದರಲ್ಲೇ ಮನುಷ್ಯನ ಯಶಸ್ಸಿನ ರಹಸ್ಯ ಅಡಗಿದೆ. ತಾನು ಬದುಕುತ್ತಿರುವ ಭ್ರಮಾಲೋಕದ ಗಾಜಿನ ಗೂಡನ್ನು ಒಡೆದು ಹೊರಬರುವುದು ಈ ಜಗತ್ತಿನ ಅತ್ಯಂತ ಸವಾಲಿನ ಕಾರ್ಯಗಳಲ್ಲಿ ಒಂದಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಸವಾಲನ್ನು ಸ್ವೀಕರಿಸಿ ಅದರಲ್ಲಿ ಯಶಸ್ಸು ಸಾಧಿಸುವುದರಲ್ಲೇ ಸಕಲ ಮಾನವರ ಏಳಿಗೆಯನ್ನು ದೇವನು ಮರೆಮಾಡಿಟ್ಟಿರುವುದಂತೂ ಸತ್ಯ.

ಕುರ್ ಆನ್ ನ ಭಾಷೆಯಲ್ಲಿ ಹೇಳುವುದಾದರೆ, ಮನುಷ್ಯನು ತನ್ನ ಆಲೋಚನಾ ಧಾಟಿಯನ್ನು ಬದಲಾಯಿಸಿ ತನ್ನ ಭ್ರಮಾಲೋಕದಿಂದ ಹೊರಬಂದಾಗ ದೇವೆಚ್ಛೆಗೆ ಅನುಗುಣವಾಗಿ ಬದುಕುವ ಕಲೆಯನ್ನು ರೂಢಿಸಿಕೊಳ್ಳತೊಡಗುತ್ತಾನೆ. ಆಗ ಅವನೊಳಗಿನ ದೈವಿಕ ವ್ಯಕ್ತಿತ್ವ ಜಾಗೃತವಾಗತೊಡಗುತ್ತದೆ. ಹೀಗೆ ನೇರವಾಗಿ ದೇವಕೃಪೆಗೆ ಪಾತ್ರವಾಗುವ ಸೌಭಾಗ್ಯವನ್ನು ಆತ ಪಡೆಯುವನು. ಈ ಮೂಲಕ ಅವನು ನಶ್ವರ ಜಗತ್ತಿನ ಭ್ರಮಾಲೋಕದಿಂದ ಶಾಶ್ವತಲೋಕದ ವಾಸ್ತವದೆಡೆಗವನು ಮರಳತೊಡಗುವನು. ಅವನ ಚಿಂತನೆಯು ದೈವಿಕ ಚಿಂತನೆಯಾಗಿ ಬದಲಾಗುವುದು. ಅವನೊಳಗಿನ ನೈತಿಕತೆಯು ದೇವನೀತಿಗನುಗುಣವಾಗಿ ಮಾರ್ಪಾಟಾಗುವುದು.

ಪ್ರತಿಯೊಂದು ಬೀಜದೊಳಗೂ ವಿಶಾಲವಾದ ಹಸಿರು ವೃಕ್ಷವೊಂದು ಅಡಗಿರುವುದು. ಆ ಬೀಜದೊಳಗಿನ ಹಸಿರು ವೃಕ್ಷವು ಪ್ರತ್ಯಕ್ಷವಾಗಬೇಕಾದರೆ ಬೀಜ

ತನ್ನನ್ನು ತಾನು ಛಿದ್ರ–ವಿಚ್ಛಿದ್ರ ಮಾಡಿಕೊಳ್ಳದೇ ಬೇರೆ ವಿಧಿಯಿಲ್ಲ. ಇದೇ ರೀತಿ ಪ್ರತಿಯೋರ್ವ ವ್ಯಕ್ತಿಯೊಳಗೂ ಸುಂದರ ಶಾಶ್ವತ ಸ್ವರ್ಗದ ವಾಸಿಯಾಗಲು ಬೇಕಾದ ದೈವಿಕ ವ್ಯಕ್ತಿತ್ವ ಅಡಗಿರುವುದು. ಆದರೆ, ಅವನು ತನ್ನೊಳಗೊಂದು ಮಹಾ ಕಂಪನದ ಉಂಟುಮಾಡಿಕೊಂಡು, ಆಂತರಿಕ ಕ್ರಾಂತಿಗೆ ಸಿದ್ಧನಾದಾಗ ಮಾತ್ರ ಅವನೊಳಗಿನ ಈ ದೈವಿಕ ವ್ಯಕ್ತಿತ್ವ ಹೊರಹೊಮ್ಮಲು ಸಾಧ್ಯ. ಮನುಷ್ಯನು ತನ್ನ ಲೌಕಿಕ ಆಸೆ–ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಸಲುವಾಗಿ ತನ್ನೆಲ್ಲವನ್ನೂ ಅಡವಿಡಲು ಸಿದ್ಧನಾಗುತ್ತಾನೆ. ವಾಸ್ತವದಲ್ಲಿ ಈ ಲೌಕಿಕ ಆಸೆ–ಆಕಾಂಕ್ಷೆಗಳ ಬಂಧನದಿಂದ ಯಾರು ವಿಮುಕ್ತಿ ಹೊಂದುವರೋ ಅವರ ಪಾಲಿಗೆ ಸ್ವರ್ಗದ ಬಾಗಿಲು ತೆರೆಯಲ್ಪಡುವುದು. ದುರದೃಷ್ಟವಶಾತ್ ಅನೇಕರಿಗೆ ಈ ವಾಸ್ತವದ ಕುರಿತು ಅರಿವಿಲ್ಲ. ತನ್ನೊಳಗಿನ ಪ್ರಾಪಂಚಿಕ ಆಸೆ–ಆಕಾಂಕ್ಷೆಗಳನ್ನು ಹದ್ದುಬಸ್ತಿನಲ್ಲಿಡುವ ನಿಟ್ಟಿನಲ್ಲಿ ವ್ಯಕ್ತಿಯೊಳಗೆ ಕಂಪನದಂತಹ ತೀವ್ರತೆಯುಳ್ಳ ನೈತಿಕಕ್ರಾಂತಿ ಸಂಭವಿಸಬೇಕು. ವಾಸ್ತವದಲ್ಲಿ ಈ ದೈವಿಕ ಪರಿಷ್ಕರಣೆಯೇ ಸ್ವರ್ಗದ ಸರಿಯಾದ ಮೌಲ್ಯವಾಗಿದೆ.

# ದೇವಸಾಕ್ಷಾತ್ಕಾರ

ನಿಜವಾಗಿ ಅವರು ದೇವನನ್ನು ಅರಿಯಬೇಕಾದ ರೀತಿಯಲ್ಲಿ ಅರಿಯಲೇ ಇಲ್ಲ. ಪುನರುತ್ಥಾನದ ದಿನ ಸಂಪೂರ್ಣ ಭೂಮಿಯ ಅವನ ಮುಷ್ಟಿಯೊಳಗಿರುವುದು ಮತ್ತು ಆಕಾಶಗಳೆಲ್ಲ ಅವನ ಬಲಗೈಯಲ್ಲಿ ಸುತ್ತಿಕೊಂಡಿರುವ ಸ್ಥಿತಿಯಲ್ಲಿರುವವು. ಅವನು ಪರಿಶುದ್ಧ ಅಸ್ತಿತ್ವದೊಡೆಯನು ಮತ್ತು ಇವರು ಅವನೊಂದಿಗೆ ಸೇರಿಸುವ ಪಾಲುದಾರರಿಗಿಂತ ಎಷ್ಟೋ ಪಾಲು ಉನ್ನತನು. (39:67)

ಮೇಲಿನ ಸೂಕ್ತದ ತಾತ್ಪರ್ಯವನ್ನು ವಿವರಿಸುವ ಪ್ರವಾದಿ ವಚನ ಕೂಡ ಇದೆ. ಇಮಾಮ್ ಅಹ್ಮದ್ ಹಝ್ರತ್ ಅಬ್ದುಲ್ಲಾ ಇಬ್ನೆ ಉಮರ್ ರಿಂದ ಉಲ್ಲೇಖಿಸಿದ ವರದಿ ಹೀಗಿದೆ:

ಪ್ರವಾದಿ ಮುಹಮ್ಮದ್ (ಸ.ಅ.) ಒಂದು ದಿನ ಮಸೀದಿಯಲ್ಲಿರುವ ಪ್ರವಚನ ಪೀಠದ ಮೇಲೆರಿ, ಅಝ್ಝುಮರ್ ಅಧ್ಯಾಯದ ಪ್ರಸ್ತಾಪಿತ ಸೂಕ್ತವನ್ನು ಪಠಿಸಿದರು: ಪ್ರವಾದಿವರ್ಯರು ಸನ್ನೆಯ ಮೂಲಕ ಈ ಸೂಕ್ತದ ವಿವರಣೆಯನ್ನು ನೀಡುತ್ತಾ, ಆ ದಿನ ದೇವನು ಖುದ್ದು ತನ್ನ ಮಹಾನತೆಯನ್ನು ವಿವರಿಸುತ್ತಾ ಹೇಳುವನು: "ನಾನು ಸರ್ವಶಕ್ತನಾಗಿರುವೆ. ನಾನು ಸಾರ್ವಭೌಮನಾಗಿರುವೆ. ನಾನು ಚಕ್ರವರ್ತಿ ಆಗಿರುವೆ. ನಾನು ಅತ್ಯಂತ ಪ್ರಬಲನೂ ಅತ್ಯಂತ ದಯಾಮಯನೂ ಆಗಿರುವೆ. ಎಲ್ಲಿರುವರೀಗ ಭೂಮಿಯ ರಾಜರುಗಳು? ಇದನ್ನು ಹೇಳುತ್ತಿದ್ದಂತೆ ಪ್ರವಾದಿವರ್ಯರು ತೀವ್ರವಾಗಿ ನಡುಗತೊಡಗಿದರು. ಎಲ್ಲಿಯ ತನಕವೆಂದರೆ ಪ್ರವಾದಿವರ್ಯರು ಪ್ರವಚನ ಪೀಠದ ಜೊತೆಗೆ ಕೆಳಗೆ ಬೀಳುವರೀಗ ಎಂದು ನಾವು ಪರಸ್ಪರ ಮಾತನಾಡಿಕೊಳ್ಳತೊಡಗಿದೆವು.

ವ್ಯಕ್ತಿಯೋರ್ವನು ದೇವನನ್ನು ಅರಿಬೇಕಾದ ರೀತಿಯಲ್ಲಿ ಅರಿತಾಗ, ಮೇಲಿನ ಉದಾಹರಣೆಯಲ್ಲಿ ಪ್ರವಾದಿವರ್ಯರ ಮೇಲೆ ಯಾವ ಸ್ಥಿತಿ ಉಂಟಾಯಿತೋ ಅದೇ

ತೆರನಾದ ಸ್ಥಿತಿ ಅವನೊಳಗೂ ಉಂಟಾಗುವುದು. ಪ್ರವಾದಿವರ್ಯರು ದೇವನನ್ನು ಆ ಸಂದರ್ಭದಲ್ಲಿ ಬಾಹ್ಯರೂಪದಲ್ಲಿ ನೇರವಾಗಿ ನೋಡುತ್ತಿರಲಿಲ್ಲ. ಬದಲಿಗೆ, ಆ ಸಂದರ್ಭದಲ್ಲಿ ದೇವನ ಮಹಿಮೆ ಹೇಗಿರಬಹುದೆಂದು ಅವರು ಮನಸ್ಸಿನಲ್ಲಿ ರೂಪಗೊಂಡ ದೇವನ ಚಿತ್ರಣವು ಅವರೊಳಗೆ ಈ ರೀತಿಯ ವಿಚಿತ್ರ ತಲ್ಲಣವನ್ನು ಮೂಡಿಸಿತು. ಹಾಗಾಗಿ ದೇವನ ಮಹಿಮೆಯನ್ನು ವಿವರಿಸುವ ಆ ಸಂದರ್ಭದಲ್ಲಿ ಅವರ ದೇಹವೆಲ್ಲಾ ನಡುಗತೊಡಗಿ, ಅವರು ಪ್ರಜ್ಞಾಹೀನರಾಗಿ ನೆಲದ ಮೇಲೆ ಬೀಳುವರೇನೋ ಎಂದು ಜನರು ಮಾತನಾಡಿಕೊಳ್ಳುವಂತಾಯಿತು.

ಇದರ ಹೆಸರೇ ದೇವನ ಸಾಕ್ಷಾತ್ಕಾರವಾಗಿದೆ. ದೇವನ ಕುರಿತ ನೈಜ ಅರಿವು ಯಾವ ವ್ಯಕ್ತಿಯೊಳಗೆ ಮೂಡುವುದೋ ಅವನ ಆಂತರಿಕ ಸ್ಥಿತಿಯು ಇದೇ ತೆರನಾಗಿರುವುದು. ದೇವನ ಕುರಿತ ಸಾಕ್ಷಾತ್ಕಾರ ಈ ಅತ್ಯಂತ ಪ್ರಬಲನೂ, ಜಗತ್ತಿನೊಡೆಯನೂ ಆದವನ ಕುರಿತಾದ ಸಾಕ್ಷಾತ್ಕಾರವಾಗಿದೆ. ಜಗತ್ತಿನೊಡೆಯನ ಕುರಿತಾದ ಸಾಕ್ಷಾತ್ಕಾರವು ಸಾಮಾನ್ಯ ಸಾಕ್ಷಾತ್ಕಾರವೇನಲ್ಲ ಬದಲಿಗದು ಜೀವನದ ಅತ್ಯಂತ ದೊಡ್ಡ ಸಾಕ್ಷಾತ್ಕಾರವಾಗಿದೆ. ಆ ಮಹಾನ್ ಅಸ್ತಿತ್ವದ ಕುರಿತ ಸಾಕ್ಷಾತ್ಕಾರವು ಮನುಷ್ಯನೊಳಗೆ ಬಿರುಗಾಳಿಯಂತಹ ತೀವ್ರ ತರದ ನೈತಿಕ ಕ್ರಾಂತಿಯ ತರುವ ಮುನ್ನುಡಿಯಾಗಿರುವುದು. ದೇವನ ಸಾಕ್ಷಾತ್ಕಾರದ ತಾತ್ಪರ್ಯವು, ದೇವನನ್ನು ನೋಡದ ಹೊರತಾಗಿಯೂ ಸದಾ ದೇವನುಪಸ್ಥಿತಿಯನ್ನು ಅನುಭವಿಸುವ ಅಭೂತಪೂರ್ವ ಅನುಭವವದು. ದೇವನು ಆಗಸದ ಪರದೆಯನ್ನು ಹರಿದು ಮನುಷ್ಯರ ಮುಂದೆ ಪ್ರತ್ಯಕ್ಷನಾಗುವ ಮೊದಲೇ, ದೇವನ ಚಿತ್ರಣವು ಅಂತರಂಗದಲ್ಲಿ ಮೂಡಿ ಅವನ ಮಹಿಮೆಯನ್ನು ಕಂಡು ಪ್ರಜ್ಞಾಹೀನನಾಗಿ ಬಿಡುವ ಸ್ಥಿತಿಯೇ ವಾಸ್ತವದಲ್ಲಿ ನೈಜ ದೇವಸಾಕ್ಷಾತ್ಕಾರವಾಗಿರುವುದು.

# ದೇವಾನ್ವೇಷಣೆ

ಭಾರತದ ಸುಪ್ರಸಿದ್ಧ ವಿಜ್ಞಾನಿ ಸಿ.ವಿ. ರಾಮನ್ ರೊಂದಿಗೆ ಒಬ್ಬರು ಒಮ್ಮೆ ಹೀಗೆ ತಮ್ಮ ಅನಿಸಿಕೆಯನ್ನು ಹೇಳಿದರು: ವಿಜ್ಞಾನಿಗಳ ಅನ್ವೇಷಣೆಗಳೆಲ್ಲವೂ ಹೆಚ್ಚಿನ ವೇಳೆ ಆಕಸ್ಮಿಕ ಘಟನೆಗಳೇ ಫಲಿತಾಂಶಗಳೇ ವಿನಃ ಅದರಲ್ಲಿ ವಿಜ್ಞಾನಿಗಳ ಅಂತಹ ದೊಡ್ಡ ಕೊಡುಗೆಯೇನೂ ಕಾಣಿಸುತ್ತಿಲ್ಲ. ಡಾಕ್ಟರ್ ರಾಮನ್ ಅದಕ್ಕೆ ಪ್ರತಿಯಾಗಿ "ಹೌದು. ಆದರೆ ಇಂತಹ ಆಕಸ್ಮಿಕಗಳು ಕೇವಲ ವಿಜ್ಞಾನಿಗಳೊಂದಿಗೆ ಮಾತ್ರ ಸಂಭವಿಸುವುದು ವಿಪರ್ಯಾಸವೇ ಸರಿ!" ಎಂದುತ್ತರಿಸಿದರು.

ಆವಿಷ್ಕಾರವೆಂಬುದು (Concentration of Mind) ಮಾನಸಿಕ ಏಕಾಗ್ರತೆಯ ಫಲಿತಾಂಶವಾಗಿದೆ. ವ್ಯಕ್ತಿಯೋರ್ವ ವಿಶಿಷ್ಟ ವಸ್ತುವಿನ ಮೇಲೆ ತನ್ನ ಸಂಪೂರ್ಣ ಗಮನವನ್ನು ಕೇಂದ್ರಿಕರಿಸಿದಾಗ, ಆ ವಿಷಯದ ಕುರಿತು ಆತನಿಗೆ ವಿಶೇಷ ಜ್ಞಾನ ಲಭ್ಯವಾಗುವುದು. ಅವನ ಮನಸ್ಸು ಮಲಗುವಾಗಲೂ ಏಳುವಾಗಲೂ ಆ ವಿಷಯದ ಸುತ್ತಲೇ ಗಿರಕಿ ಹೊಡೆಯುತ್ತಿರುವುದು. ಎಲ್ಲಿಯತನಕವೆಂದರೆ ಅದರ ಕುರಿತು ಆತನಲ್ಲಿ ಅತ್ಯಂತ ನಿಕಟ ಬೌದ್ಧಿಕ ಬಾಂಧವ್ಯವೇರ್ಪಡುವುದು ಮತ್ತು ಅದೇ ಅವನ ಪಾಲಿನ ಪುಟ್ಟ ಜಗತ್ತಾಗಿ ಮಾರ್ಪಡುವುದು.

ಹೆಚ್ಚಿನ ವೈಜ್ಞಾನಿಕ ಆವಿಷ್ಕಾರಗಳೆಲ್ಲವೂ ಇದೇ ತೆರನಾದ ಬೌದ್ಧಿಕ ಏಕಾಗ್ರತೆಯ ಫಲಿತಾಂಶವಾಗಿರುವುದು. ಒಬ್ಬ ವ್ಯಕ್ತಿಯು ಒಂದು ನಿರ್ದಿಷ್ಟ ವಿಷಯದ ಕುರಿತು ಸಂಪೂರ್ಣ ಏಕಾಗ್ರತೆಯೊಂದಿಗೆ ಸಂಶೋಧನೆಯಲ್ಲಿ ತೊಡಗಿದಾಗ ಆ ವಿಷಯದ ಕುರಿತು ಸಂಪೂರ್ಣ ಆಳವಾದ ಜ್ಞಾನವನ್ನಾತ ಪಡೆಯುವನು. ಅದರ ಒಂದಿಂಚು ಅಂಶ ದೊರಕಿದರೂ ಅದರ ಸಂಪೂರ್ಣ ಮಾಹಿತಿಯನ್ನಾತ ತಿಳಿಯಲು ಸಮರ್ಥನಾಗುವನು. ಅನ್ವೇಷಣೆಯೆಂಬುದು ಯಾವಾಗಲೂ ಒಂದಂಶದ ಜಾಡು

ಹಿಡಿದು ಅದರ ಮೂಲವನ್ನು ತಲುಪುವುದರ ಹೆಸರಾಗಿದೆ. ಇದರಲ್ಲಿ ಸಂಪೂರ್ಣ ಯಶಸ್ವಿ ಹೊಂದಲು ಕೇವಲ ಒಬ್ಬ ನಿಷ್ಣಾತ ಅನ್ವೇಷಕನಿಗೆ ಮಾತ್ರ ಸಾಧ್ಯ.

ವೈಜ್ಞಾನಿಕ ರಂಗದ ಅನ್ವೇಷಣೆಗೆ ಯಾವೆಲ್ಲಾ ಪ್ರಕ್ರಿಯೆಗಳ ಮೂಲಕ ಸಾಗಬೇಕಾಗುವುದೋ ಅದೇ ತೆರನಾದ ಪ್ರಕ್ರಿಯೆಯು ಆಧ್ಯಾತ್ಮಿಕ ರಂಗಕ್ಕೂ ಅನ್ವಯಿಸುವುದು. ದೇವಾಸ್ತಿತ್ವವೂ ಮಾನವನ ಪಾಲಿಗೆ ಒಂದು ತೆರನಾದ ಅನ್ವೇಷಣೆಯೇ ಆಗಿದೆ. ಈ ಅನ್ವೇಷಣೆಯಲ್ಲಿ ಯಶಸ್ಸು ಸಾಧಿಸಲು ದೇವಾಸ್ತಿತ್ವದ ವಿಷಯದಲ್ಲಿ ಆಳವಾದ ಆಸಕ್ತಿ ಹೊಂದಿರುವ ವ್ಯಕ್ತಿಯಿಂದ ಮಾತ್ರ ಸಾಧ್ಯ.

ವ್ಯಕ್ತಿಯೋರ್ವನು ತನ್ನೆಲ್ಲಾ ಆಸಕ್ತಿಯನ್ನು ದೇವನಲ್ಲಿ ಕೇಂದ್ರಿಕರಿಸಿದಾಗ, ಅವನು ನೋಡುವ ನೋಟ ದೈವಿಕ ನೋಟವಾಗಿ ಬದಲಾಗುವುದು. ಅವನ ಆಲಿಸುವಿಕೆ ದೈವಿಕ ಆಲಿಸುವಿಕೆಯಾಗತೊಡಗುವುದು. ಹೀಗೆ ವ್ಯಕ್ತಿಯೋರ್ವನು ಬೇರೆಲ್ಲಾ ವಿಷಯಗಳಿಂದ ತನ್ನನ್ನು ಬೇರ್ಪಡಿಸಿಕೊಂಡು, ತನ್ನ ಗಮನವನ್ನು ದೇವನೆಡೆಗಷ್ಟೇ ಕೇಂದ್ರಿಕರಿಸಿಕೊಂಡು ಬದುಕತೊಡಗಿದಾಗ, ಅವನ ಬದುಕಿನಲ್ಲಿ ದೇವಾಸ್ತಿತ್ವವನ್ನು ಪರಿಚಯಮಾಡಿಕೊಡುವ ಘಟನೆಗಳು ಪದೇ ಪದೇ ಸಂಭವಿಸುತ್ತಲೇ ಇರುವವು. ವಿಸ್ಮಯಕಾರಿ ನೈಸರ್ಗಿಕ ದೃಶ್ಯಗಳು, ಮಾನವನ ಇತಿಹಾಸದ ಅಧ್ಯಯನ, ತನ್ನ ಸ್ವಂತ ಅಸ್ತಿತ್ವದ ಕುರಿತು ಚಿಂತನೆ ಇವೆಲ್ಲವೂ ಅವನ ಪಾಲಿಗೆ ಪರಮ ಸತ್ಯದ ಪರಿಚಯ ಮಾಡಿಸಿಕೊಡುವ ಸಾಧನಗಳಾಗಿ ಬದಲಾಗುವವು ಮತ್ತು ಅವನಿಗೆ ಪದೇ ಪದೇ ದೇವಮಹಿಮೆಯ ಅರಿವನ್ನು ಮೂಡಿಸುತ್ತಲೇ ಇರುವವು. ದೇವನ ಕುರಿತಾದ ನೈಜ ಜ್ಞಾನವೇ ದೈವಿಕ ಜೀವನ ನಡೆಸಲು ಬೇಕಾದ ಮೌಲ್ಯವಾಗಿದೆ. ಈ ಮೌಲ್ಯವನ್ನು ತೆರಲು ದೈವಿಕ ಜೀವನ ನಡೆಸಲಿಚ್ಛಿಸುವ ವ್ಯಕ್ತಿಯಿಂದಷ್ಟೇ ಸಾಧ್ಯವೂ ಕೂಡ. ದೇವೇತರ ವಿಷಯಗಳ ಕುರಿತು ಅತಿಯಾದ ಮೋಹ ಬೆಳೆಸಿಕೊಂಡ ವ್ಯಕ್ತಿಗೆಂದೂ ದೈವಿಕ ಜ್ಞಾನದ ಕೀಲಿಕೈ ದೊರೆಯಲಾರದು.

# ಏಕದೇವತ್ವ ಮತ್ತು ಬಹುದೇವವಿಶ್ವಾಸ

ಪ್ರಸಕ್ತ ಜಗತ್ತಿನಲ್ಲಿ ಅವಲಂಬನೆಯ ಬದುಕನ್ನು ಬದುಕುವುದು ಮನುಷ್ಯನ ಪಾಲಿನ ಅನಿವಾರ್ಯತೆಯಾಗಿದೆ. ಇದು ಅವನ ಪ್ರಾಕೃತಿಕ ಸ್ವಭಾವಗಳಲ್ಲೊಂದು ಎನ್ನಲಡ್ಡಿಯಿಲ್ಲ. ತನ್ನ ಈ ಪ್ರಾಕೃತಿಕ ಸ್ವಭಾವದಿಂದಾಗಿ ಪ್ರತಿಯೋರ್ವ ವ್ಯಕ್ತಿಯೂ ಯಾರಾದಾದರೂ ಹಿರಿಮೆಯ ನೆರಳಿನಲ್ಲಿ ಬದುಕುವುದನ್ನು ರೂಢಿಸಿಕೊಂಡಿದ್ದಾನೆ. ಸತ್ಯವಿಶ್ವಾಸಿಯು ದೇವನ ಹಿರಿಮೆಯ ನೆರಳಿನಲ್ಲಿ ಬದುಕುತ್ತಿದ್ದರೆ, ಅವಿಶ್ವಾಸಿಯು ದೇವೇತರರ ಹಿರಿಮೆಯ ನೆರಳಿನಲ್ಲಿ ಬದುಕುತ್ತಿದ್ದಾನೆ.

ಪ್ರಾಚೀನ ಕಾಲದ ಜನರ ಬದುಕಿನಲ್ಲಿ ಸೂರ್ಯ–ಚಂದ್ರರಂತಹ ನೈಸರ್ಗಿಕ ವಿದ್ಯಮಾನಗಳು ಪ್ರಭಾವ ಬೀರುತ್ತಿದ್ದವು. ಆದುದರಿಂದ ಆಗಿನ ಕಾಲದವರು ಸೂರ್ಯ–ಚಂದ್ರರ ಹಿರಿಮೆಯ ನೆರಳಿನಲ್ಲಿ ಬದುಕುತ್ತಿದ್ದರು. ಪ್ರಸಕ್ತಕಾಲದ ಭೌತಿಕವಾದಿ ಜನರ ಬದುಕಿನ ಮೇಲೆ ಭೌತಿಕ ವಸ್ತುಗಳು ತಮ್ಮ ಪ್ರಭಾವ ಬೀರುತ್ತಿವೆ. ಹೀಗಾಗಿಯೇ ಭೌತಿಕವಾದಿಗಳು ಭೌತಿಕ ವಸ್ತುಗಳ ಹಿರಿಮೆಯ ನೆರಳಿನಡಿಯಲ್ಲಿ ಬದುಕುತ್ತಿರುವರು. ಈ ಪೈಕಿ ಕೆಲವರು ತಮ್ಮ ಸಂಪತ್ತಿನ ಹಿರಿಮೆಯ ಆಧಾರದಲ್ಲಿ ಬದುಕುತ್ತಿದ್ದರೆ, ಇನ್ನು ಕೆಲವರು ತಮ್ಮ ಹಿರಿಯರ ಹಿರಿಮೆಯ ಭ್ರಮೆಯಲ್ಲಿ ಬದುಕುತ್ತಿದ್ದಾರೆ. ಈ ರೀತಿ ನೈಸರ್ಗಿಕವಾಗಿ ಅವಲಂಬನೆಯ ಬದುಕನ್ನು ಬದುಕುವ ಅನಿವಾರ್ಯತೆ ಹೊಂದಿರುವ ಮನುಷ್ಯನು ತನ್ನ ನೈಸರ್ಗಿಕ ಹಸಿವನ್ನು ಅನೈಸರ್ಗಿಕ ಮಾರ್ಗದಲ್ಲಿ ತಣಿಸಿಕೊಳ್ಳುತ್ತಿರುವನು.

ಇವೆಲ್ಲವೂ ಬಹುದೇವವಿಶ್ವಾಸದ ಸ್ವರೂಪಗಳಾಗಿವೆ. ಬಹುದೇವ–ವಿಶ್ವಾಸವೆಂಬುದು ನೈಸರ್ಗಿಕ ಹುಡುಕಾಟಕ್ಕಿರುವ ಕೃತಕ ಉತ್ತರ. ನೈಸರ್ಗಿಕ ಹುಡುಕಾಟಕ್ಕೆ ವಾಸ್ತವಿಕ ಉತ್ತರವನ್ನು ಪಡೆಯುವವನು ಮಾತ್ರ ಸತ್ಯವಿಶ್ವಾಸಿ–

ಯಾಗಿರುವನು. ಅವನು ಬಾಹ್ಯ ವಸ್ತುಗಳ ಬಲೆಗೆ ಸಿಲುಕುವ ಬದಲು, ಅವುಗಳನ್ನು ವಾಸ್ತವಿಕತೆಗೆ ತಲುಪುವ ಸಾಧನವನ್ನಾಗಿ ಮಾಡಿಕೊಳ್ಳುವನು.

ಬಾಹ್ಯವಸ್ತುಗಳ ಕೃತಕ ಹೊಳಪಿಗಾತ ಮಾರುಹೋಗಲಾರ. ಇವೆಲ್ಲವೂ ಅವನ ದೃಷ್ಟಿಯಲ್ಲಿ ಕೇವಲ ಸೃಷ್ಟಿಗಳಷ್ಟೇ!. ಅವುಗಳೆಲ್ಲವೂ ಅವನಿಗೆ ತನ್ನಂತೆಯೇ ಇರುವ ಅಸಹಾಯಕ ಜೀವಿಗಳಾಗಿ ಗೋಚರಿಸುವವು. ಅವನು ಅವುಗಳ ಬಾಹ್ಯ ವೈಭವದ ಮೋಡಿಗೊಳಗಾಗಿ ನಿಂತಲ್ಲೇ ನಿಲ್ಲುವ ಬದಲು, ನೈಸರ್ಗಿಕವಾಗಿ ಹರಿಯುವ ನೀರಿನಂತೆ ತನ್ನ ದೈವಿಕ ಪಯಣವನ್ನು ಮುಂದುವರಿಸಿಕೊಂಡು ಹೋಗುತ್ತಾ ಕೊನೆಗೆ ಆ ಏಕದೇವನೆಡೆಗೆ ತಲುಪಿಬಿಡುವನು. ಈ ರೀತಿ ಅವನು ಸೃಷ್ಟಿಗಳ ಮೂಲಕ ಹಾದುಹೋಗುತ್ತಾ ತನ್ನ ನೈಜ ಸೃಷ್ಟಿಕರ್ತನನ್ನು ಪಡೆಯುವ ಸೌಭಾಗ್ಯವನ್ನು ಪಡೆಯುವವನಾಗುವನು.

ತನಗೆ ದೊರೆತ ಸಂಪತ್ತು ಸೌಕರ್ಯಗಳೆಲ್ಲವೂ ಆ ದೇವನಿಂದಲೇ ದೊರೆತ ಕೊಡುಗೆ ಎಂದು ಭಾವಿಸುವವನೇ ನೈಜ ಸತ್ಯವಿಶ್ವಾಸಿಯಾಗಿರುವನು. ತನ್ನ ಅಸಹಾಯಕತೆಯ ನೆರವಿಗೆ ಅವನು ಆ ದೇವನದೇ ಮೊರೆ ಹೋಗುವನು. ಈ ಪ್ರಥ್ವಿಯ ಸೌಂದರ್ಯದಲ್ಲಿ ಅವನಿಗೆ ಆ ದೇವನ ಸೌಂದರ್ಯದ ಪ್ರತಿಬಿಂಬ ಕಾಣಿಸತೊಡಗುವುದು. ನೈಸರ್ಗಿಕ ವಿಸ್ಮಯಕಾರಿ ವಿದ್ಯಮಾನಗಳೆಲ್ಲದರಲ್ಲಿಯೂ ಆತನಿಗೆ ದೇವನ ಮಹಿಮೆಯೇ ಎದ್ದು ತೋರುವುದು. ಈ ಜಗತ್ತಿನ ಎಲ್ಲಾ ಮಹತ್ತರ ವಿಷಯಗಳಲ್ಲಿ ದೇವನ ಮಹಾನತೆಯು ಪ್ರತಿಫಲಿಸುತ್ತಿರುವುದನ್ನು ಆತನು ನೋಡಬಲ್ಲವನಾಗುವನು. ದೇವತೇಜಸ್ಸಿನ ಪ್ರಕಾಶವನ್ನವನು ಯಾವ ಪರಿ ಅನುಭವಿಸುವನೆಂದರೆ, ದೇವಸ್ತುತಿಗಿಂತ ಹೆಚ್ಚು ಆನಂದದಾಯಕವಾದ ವಿಷಯ ಅವನ ಪಾಲಿಗೆ ಬೇರೊಂದಿರಲಾರದು.

ಪ್ರತ್ಯಕ್ಷದಲ್ಲಿ ಪರೋಕ್ಷವನ್ನು ಅರಸುವುದೇ ವಾಸ್ತವದಲ್ಲಿ ದೇವಾಸ್ತಿತ್ವದ ಕುರಿತು ವಿಶ್ವಾಸ ತಾಳುವುದರ ನೈಜ ತಾತ್ಪರ್ಯವಾಗಿದೆ. ಅರ್ಥಾತ್ ನಮ್ಮ ಮುಂದೆ ಯಾವೆಲ್ಲಾ ದೇವನಿರ್ಮಿತ ವಸ್ತುಗಳಿವೆಯೋ ಅವುಗಳಲ್ಲಿ ಅಡಗಿರುವ, ಬರಿಗಣ್ಣಿಗೆ ಕಾಣಿಸದಿರುವ ದೇವಮಹಿಮೆಯ ಹುಡುಕಾಟದ ಹೆಸರೇ ಈಮಾನ್. ಯಾರೊಳಗೆ ಇಂತಹ ಈಮಾನ್ (ದೇವವಿಶ್ವಾಸ) ಪ್ರವೇಶಿಸಿತೋ, ಆತನಿಗೆ ತನ್ನ ಸುತ್ತಲಿರುವ ನಾಲ್ಕು ದಿಕ್ಕಿನಲ್ಲೂ ಕೇವಲ ದೇವಮಹಿಮೆಯೇ ಗೋಚರಿಸತೊಡಗುವುದು. ಅಂತಹ ವ್ಯಕ್ತಿಯು ತನ್ನ ಪಾಲಿನ ಸರ್ವಸ್ವವೂ ದೇವನೊಬ್ಬನೇ ಎಂದು ಬಗೆಯುವನು. ಅವನು ದೇವಮಹಿಮೆಯ ಚಿಲುಮೆಯೊಳಗೆ ಎಷ್ಟೊಂದು ಬಾರಿ ಮಿಂದೇಳುತ್ತಾನೆಂದರೆ, ದೇವಾಸ್ತಿತ್ವದೆದುರು ಖುದ್ದು ತನ್ನದಾಗಲೀ, ಅನ್ಯರದ್ದಾಗಲೀ ಶ್ರೇಷ್ಠತೆಯು ಆತನಿಗೆ ಕಾಣಿಸುವುದೂ ಇಲ್ಲ, ಕಾಡಿಸುವುದೂ ಇಲ್ಲ.

# ಅನ್ವೇಷಣೆ

ಲಂಡನ್ ನಿಂದ ಮುದ್ರಿತವಾದ ಪುಸ್ತಕದೊಂದರ ಹೆಸರು 'ಅನ್ವೇಷಕರು':
The Discoverers: A History of Man's Search to know His World and Himself by Daniel Boorstin, Randon House, p.745

ಇದರ ಲೇಖಕರು ಅನ್ವೇಷಕರ ಕುರಿತ ಇತಿಹಾಸವನ್ನು ಅಧ್ಯಯನ ಮಾಡಿರುವರು. ವಿವಿಧ ಕ್ಷೇತ್ರಗಳಲ್ಲಿ ಹೊಸ ಅನ್ವೇಷಣೆ, ಹೊಸ ದೃಷ್ಟಿಕೋನಗಳನ್ನು ಜನರ ಮುಂದಿರಿಸಿದ ಅನ್ವೇಷಕರ ಕುರಿತ ವಿವರಣೆ ಈ ಪುಸ್ತಕದ ಲೇಖಕರು ಆಯ್ದುಕೊಂಡ ಮುಖ್ಯ ವಿಷಯ. ಇಂತಹ ಅನ್ವೇಷಕರ ಕುರಿತು ಲೇಖಕರು ಅದೆಷ್ಟು ಆಳವಾಗಿ ಪ್ರಭಾವಿತರಾಗಿರುವರೆಂದರೆ, "ಅನ್ವೇಷಕರೇ ನನ್ನ ಪಾಲಿನ ನಿಜವಾದ ಹೀರೋಗಳು" ಎಂದವರು ಉದ್ಧರಿಸುತ್ತಾರೆ. "My hero is Man the Discoverer"

ಇದು ಕೇವಲ ಈ ಪುಸ್ತಕದ ಲೇಖಕರೊಬ್ಬರದೇ ಅಭಿಪ್ರಾಯವಲ್ಲ. ಬದಲಿಗಿದು ಪ್ರತಿಯೋರ್ವರ ಮನದಾಳದ ಮಾತೂ ಹೌದು. 'ಅನ್ವೇಷಣೆ' ಎಂಬುದು ಪ್ರತಿಯೋರ್ವರಿಗೂ ಇಷ್ಟವಾಗುವ ವಿಷಯ. ಯಾವುದಾದರೂ ವ್ಯಕ್ತಿ ಏನಾದರೊಂದು ಹೊಸ ವಸ್ತುವನ್ನು ಕಂಡು ಹಿಡಿದಾಗ ಆ ವ್ಯಕ್ತಿ ಬೇರೆಯವರ ದೃಷ್ಟಿಯಲ್ಲಿ ಮಹಾನ್ ಹೀರೋ ಎನಿಸಿಕೊಳ್ಳುವನು.

ಸತ್ಯದೆಡೆಗೆ ಜನರನ್ನು ಆಹ್ವಾನಿಸುವ ವ್ಯಕ್ತಿಯೂ ಒಂದು ತೆರನಾದ ಅನ್ವೇಷಕನೇ (Discoverer) ಆಗಿರುವನು. ಅವನು ಸುಳ್ಳಿಗೆದುರಾಗಿ ಸತ್ಯವನ್ನು ಅನ್ವೇಷಿಸುತ್ತಾನೆ. ಯಾವ ವಿಷಯ ಜನರ ಅರಿವಿಗೆ ಆ ತನಕ ಬಂದಿಲ್ಲವೋ ಅದನ್ನು ಖುದ್ದು ಅರಿತು ಜನರ ಮುಂದಿಡುತ್ತಾನೆ.

("ಅಲ್ಲಮಲ್ ಇನ್ಸಾನ ಮಾಲಮ್ ಯಅಲಮ್" ಅವನು ಮನುಷ್ಯರಿಗೆ ತಿಳಿಯದಿರುವುದನ್ನು ಕಲಿಸಿಕೊಟ್ಟನು.) ವಾಸ್ತವದಲ್ಲಿ ಮನದಾಳದಲ್ಲಿ ಅಡಗಿರುವ

ಹುಡುಕಾಟಕ್ಕೆ ದೊರೆಯುವ ಉತ್ತರದ ಎರಡನೆಯ ಹೆಸರೇ "ಅನ್ವೇಷಣೆ". ದೂರದ ಪಯಣಕ್ಕೆ (Communications) ಅತಿವೇಗದ ಸಾಧನ ಹೊಂದುವುದು ಬಹುಕಾಲದಿಂದ ಮನುಷ್ಯರ ಮನದಾಳದ ಬಯಕೆಯಾಗಿತ್ತು. ವ್ಯಕ್ತಿಯೋರ್ವ ದೂರ ಪ್ರಯಾಣಕ್ಕೆ ಬೇಕಾದ ಅತಿವೇಗದ ಸಾಧನವಾದ ಮೋಟಾರು ವಾಹನವನ್ನು ಕಂಡುಹಿಡಿದದ್ದು; ಸಾವಿರಾರು ವರ್ಷಗಳಿಂದ ಜನರ ಮನದಾಳದಲ್ಲಡಗಿದ್ದ ಬಯಕೆಯನ್ನು ಪೂರ್ತಿಗೊಳಿಸಿದಂತಾಗಿತ್ತು. ಈ ನಿಟ್ಟಿನಲ್ಲಿ ಆ ಅನ್ವೇಷಕ ಜನರ ಪ್ರೀತಿಪಾತ್ರನೆನಿಸಿದ.

ಸತ್ಯದ ಅನ್ವೇಷಣೆಗೂ ಇದೇ ರೀತಿಯ ಉದಾಹರಣೆ ಅನ್ವಯಿಸುವುದು. ಪ್ರತಿಯೊಂದು ಕಾಲದಲ್ಲೂ ಹೆಚ್ಚಿನವರು 'ಸತ್ಯ' ಯಾವುದು? 'ಸುಳ್ಳು' ಯಾವುದು?, 'ಸರಿ' ಯಾವುದು? 'ತಪ್ಪು' ಯಾವುದು? ಎಂಬ ದ್ವಂದ್ವದಲ್ಲೇ ಬದುಕುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ, ಇದೇ ರೀತಿ ಹುಡುಕಾಟದಲ್ಲಿರುವ ವ್ಯಕ್ತಿಯೋರ್ವ ಸತ್ಯವನ್ನು ಅದರ ಪರಿಪೂರ್ಣ ರೂಪದಲ್ಲಿ ಅನ್ವೇಷಿಸಿ, ಅದನ್ನು ಜನರ ಬಹುಕಾಲದ ಹುಡುಕಾಟದ ಉತ್ತರದ ರೂಪದಲ್ಲಿ ಅವರ ಮುಂದಿಡುತ್ತಾನೆ. ಈ ರೀತಿ ವ್ಯಕ್ತಿಯೋರ್ವ ಸತ್ಯದೊಂದಿಗೆ ಮುನ್ನೆಲೆಗೆ ಬಂದಾಗ, ತಮ್ಮನ್ನು ಇಕ್ಕಟ್ಟಿನ ಪರಿಸ್ಥಿತಿಯಿಂದ ಹೊರತಂದುದಕ್ಕಾಗಿ ಸ್ವಾಭಾವಿಕವಾಗಿಯೇ ಜನರು ಅವನನ್ನು 'ಹೀರೋ'ವಿನ ರೂಪದಲ್ಲಿ ನೋಡತೊಡಗುತ್ತಾರೆ. ಯಾವ ರೀತಿ ಹೊಸ ವಿಷಯವೊಂದನ್ನು ಅನ್ವೇಷಿಸಿದ ಕಾರಣಕ್ಕಾಗಿ ಆ ಅನ್ವೇಷಕನು ಜನರ ದೃಷ್ಟಿಯಲ್ಲಿ ಹೀರೋ ಆಗುವನೋ, ಅದೇ ರೀತಿ ಸತ್ಯದ ಅನ್ವೇಷಕನೂ ಜನರ ದೃಷ್ಟಿಯಲ್ಲಿ ಹೀರೋ ಆಗುವನು.

# ಇಲ್ಲಿ ಎಲ್ಲವೂ ಅದ್ಭುತವೇ ಸರಿ!

1957ರಲ್ಲಿ ರಷ್ಯಾವು ತನ್ನ ಮೊದಲ ಉಪಗ್ರಹವಾದ ಸ್ಪುಟ್ನಿಕ್ ಅನ್ನು ಬಾಹ್ಯಾಕಾಶಕ್ಕೆ ಕಳುಹಿಸಿತು. ಆ ಬಳಿಕ, 1981ರಲ್ಲಿ ಅಮೆರಿಕ ತನ್ನ ಮೊದಲ ಬಾಹ್ಯಾಕಾಶ ನೌಕೆಯಾದ ಕೊಲಂಬಿಯಾವನ್ನು ಇಬ್ಬರು ವ್ಯಕ್ತಿಗಳೊಂದಿಗೆ ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿತು. ಕೊಲಂಬಿಯಾವನ್ನು ಎಷ್ಟು ಬಲಿಷ್ಠ ರೀತಿಯಲ್ಲಿ ತಯಾರಿಸಲಾಗಿತ್ತೆಂದರೆ ಅದರಲ್ಲಿ ಕುಳಿತು ಹೆಚ್ಚು-ಕಮ್ಮಿ ನೂರು ಬಾರಿ ಬಾಹ್ಯಾಕಾಶದ ಪಯಣ ಮಾಡಬಹುದಿತ್ತು.

ಕೊಲಂಬಿಯಾವು 75 ಟನ್ ನಷ್ಟು ತೂಕವನ್ನು ಹೊಂದಿತ್ತು. ಇದನ್ನು ತಯಾರಿಸಲು ಸಾವಿರಾರು ಕೋಟಿ ರೂ. ವೆಚ್ಚ ಮಾಡಲಾಯಿತು. ಇದು ಸಂಪೂರ್ಣ ತಯಾರಾಗಿ ಹೊರಗೆ ಬರಲು 9 ವರ್ಷಗಳೇ ಬೇಕಾಯಿತು. ಕೊಲಂಬಿಯಾ ತನ್ನೊಳಗೆ ಇಬ್ಬರು ಆಕಾಶಯಾನಿಗಳನ್ನು ಹೊತ್ತು ಗಂಟೆಗೆ 26,000 ಮೈಲು ವೇಗದಲ್ಲಿ ಹಾರಿತು. ಅದು ಸುಮಾರು 54 ಗಂಟೆಗಳಷ್ಟು ಕಾಲ ಬಾಹ್ಯಾಕಾಶದಲ್ಲಿ ಹಾರುತ್ತಾ, ಭೂಮಿಗೆ 36 ಸುತ್ತು ಬಂತು. ಒಟ್ಟು 10 ಲಕ್ಷ ಮೈಲುಗಳಷ್ಟು ದೀರ್ಘ ಪ್ರಯಾಣ ಮಾಡಿ, 14ನೆಯ ಏಪ್ರಿಲ್ ನಂದು ಅದು ಭೂಮಿಗೆ ವಾಪಾಸ್ಸಾಯಿತು. ಅದು ವಾಪಾಸ್ಸಾಗುವ ಸಮಯದಲ್ಲಿ ವಿಶಿಷ್ಟ ರಾಡಾರ್ ಹಾಗೂ ರಾಕೆಟ್ ಗಳ ಮೂಲಕ ಅದರ ವೇಗವನ್ನು ಗಂಟೆಗೆ 346 ಮೈಲಿಗೆ ತಗ್ಗಿಸಲಾಯಿತು. ಅದು ತನ್ನ ನಿಲ್ದಾಣದಲ್ಲಿ ಬಂದಿಳಿದಾಗ ಭೂಮಿಯ ವಾತಾವರಣದಿಂದಾಗಿ ಒಮ್ಮೆಲೆ ಅದರ ಹೊರಮೈ ಕೆಂಪು ಇಟ್ಟಿಗೆಯೇನೋ ಎಂಬಂತೆ ಕೆಂಬಣ್ಣಕ್ಕೆ ತಿರುಗಿತು. ಆ ಅದರ ಹೊರಮೈಯಲ್ಲಿ 11,500 ಡಿಗ್ರಿ ಸೆಲ್ಸಿಯಸ್ ನಷ್ಟು ತೀವ್ರ ಶಾಖವಿತ್ತು. ಈ ತೀವ್ರ ಶಾಖದಿಂದ ಕಾಪಡಲೆಂದೇ ಕೊಲಂಬಿಯಾದ ಒಳಗಡೆ 31,000 ದಷ್ಟು ಶಾಖವನ್ನು

ತಡೆಹಿಡಿಯುವ ಅಂಚುಗಳನ್ನು ಅಳವಡಿಸಿದ್ದ ಕಾರಣ ಅದರ ಒಳಗಿದ್ದ ಯಾನಿಗಳಿಬ್ಬರೂ ಸಂಪೂರ್ಣ ಸುರಕ್ಷಿತರಾಗಿದ್ದರು.

ಕೊಲಂಬಿಯಾವನ್ನು ಅಮೆರಿಕದ ಕ್ಯಾಲಿಫೋರ್ನಿಯಾದ ಮರಳುಗಾಡಿನಲ್ಲಿರುವ ವಿಮಾನ ನಿಲ್ದಾಣವೊಂದರಲ್ಲಿ ಇಳಿಸಲಾಯಿತು. ಮೊದಲೇ ನಿಗದಿಪಡಿಸಿದ್ದಕ್ಕಿಂತ ಕೇವಲ 10 ಸೆಕೆಂಡುಗಳ ಅಂತರದಲ್ಲಿ ಕೊಲಂಬಿಯಾವು ತನ್ನ ನಿಲ್ದಾಣದಲ್ಲಿ ಇಳಿದು ನಿಂತಿತು. ಅಲ್ಲಿನ ಸುತ್ತ ಮುತ್ತ ಎರಡು ಲಕ್ಷಕ್ಕೂ ಅಧಿಕ ಮಂದಿ ಕೊಲಂಬಿಯಾದ ಇಳಿಯುವಿಕೆಯನ್ನು ವೀಕ್ಷಿಸಲು ಕಾತರದೊಂದಿಗೆ ಕಾದುನಿಂತಿದ್ದರು. ಇದರ ಹೊರತಾಗಿ ವಿವಿಧ ದೇಶಗಳ ಕೋಟಿಗಟ್ಟಲೆ ಮಂದಿ ಟಿವಿಯ ಮುಖಾಂತರ ಈ ಅಭೂತಪೂರ್ವ ದೃಶ್ಯವನ್ನು ವೀಕ್ಷಿಸಿದರು.  ಕೊಲಂಬಿಯಾ ಇಳಿಯುವ ಆ ವೇಳೆ ಅದರ ಪ್ರತಿಯೊಂದು ಅಗತ್ಯಗಳನ್ನು ಪೂರೈಸುವ ಸಲುವಾಗಿ 20ಕ್ಕೂ ಅಧಿಕ ಟ್ರಕ್ ಗಳು ಹಾಗೂ ಅನೇಕ ವಿಮಾನಗಳು ಅಲ್ಲಿ ನಿಂತಿದ್ದವು. ಇತರ ಸಾಮಾನು-ಸರಂಜಾಮುಗಳನ್ನೂ ಅಲ್ಲಿ ಜಮೆ ಮಾಡಲಾಗಿತ್ತು. ಕೊಲಂಬಿಯಾ ರಾಕೆಟ್ ಶರವೇಗದಲ್ಲಿ ಬಾಹ್ಯಾಕಾಶಕ್ಕೆ ಹಾರಿತು. ಒಂದು ವಿಧೇಯ ಉಪಗ್ರಹದಂತೆ ಭೂಮಿಯ ಸುತ್ತು ಸುತ್ತುಬಂದು, ಗ್ಲೈಡರ್ (ವಿಮಾನ)ನ ಹಾಗೆ ಭೂಮಿಯ ಮೇಲೆ ಇಳಿಯಿತು.

ಕೊಲಂಬಿಯಾದಲ್ಲಿದ್ದ ಇಬ್ಬರು ಗಗನಯಾನಿಗಳ ಪೈಕಿ ಮಿ. ಜಾನ್ ಯಂಗ್ (Jhon Young) ಓರ್ವರಾಗಿದ್ದರು. ಅವರಿಗಾಗ 50 ವರ್ಷ ವಯಸ್ಸಾಗಿತ್ತು. ನಿರಂತರ 54 ಗಂಟೆಗಳ ತೂಕರಹಿತ ಸ್ಥಿತಿಯಲ್ಲಿ ಪ್ರಯಾಣ ಮಾಡಿದ ಬಳಿಕ ದಿಗ್ಭ್ರಮೆಗೊಳ್ಳುತ್ತಾ ಅವರು ಹೇಳಿದ ಮಾತು ಹೀಗಿತ್ತು: “What a way to come to California” “ಕ್ಯಾಲಿಫೋರ್ನಿಯಾಗೆ ಈ ರೀತಿ ವಾಪಾಸ್ಸಾಗುವುದು ಎಷ್ಟೊಂದು ಅದ್ಭುತ ಅನುಭವ”

ಮಿ. ಯಂಗ್ ಗೆ ಕೊಲಂಬಿಯಾದಲ್ಲಿ ಕೂತು ಕ್ಯಾಲಿಫೋರ್ನಿಯಾಕ್ಕೆ ಹೀಗೆ ಪಯಣಿಸಿದ್ದು ಬಹಳ ಅದ್ಭುತ ಪಯಣವಾಗಿ ಕಂಡಿತು. ಹಾಗೆ ನೋಡಲು ಹೋದರೆ, ಈ ಜಗತ್ತಿನ ಪ್ರತಿಯೊಂದು ವಸ್ತುವೂ ಬಹಳ ಅದ್ಭುತದಿಂದ ಕೂಡಿದೆ. ಸೂಕ್ಷ್ಮವಾಗಿ ಅವಲೋಕಿಸಿದರೆ ಇಲ್ಲಿರುವ ಪ್ರತಿಯೊಂದು ವಿಷಯವೂ ನಮ್ಮನ್ನು ಬೆರಗುಗೊಳಿಸುವುದಂತೂ ಖಚಿತ. ಉದಾ: ನಮ್ಮ ಸಾಮಾನ್ಯ ಪ್ರಯಾಣವನ್ನೇ ತೆಗೆದುಕೊಳ್ಳಿ. ಅದು ಸವಾರಿಯ ಮೂಲಕವಿರಲಿ, ಅಥವಾ ಕಾಲ್ನಡಿಗೆಯ ಮೂಲಕವೇ ಇರಲಿ ನಮ್ಮನ್ನು ಬೆರಗುಗೊಳಿಸದೇ ಇರದು. ಸೂಕ್ಷ್ಮ ಅವಲೋಕನಾತ್ಮಕ ಮನಸ್ಥಿತಿಯುಳ್ಳ ಪ್ರತಿಯೋರ್ವನ ದೃಷ್ಟಿಯಲ್ಲಿ ತನ್ನ ಕಾಲ್ನಡಿಗೆಯ ಪಯಣವೂ ಕೊಲಂಬಿಯಾದ ಬಾಹ್ಯಕಾಶದ ಪಯಣದಷ್ಟೇ ಅದ್ಭುತವಾಗಿ ಕಾಣಿಸುವುದು. ಬಾಹ್ಯಾಕಾಶಯಾನಿ ಮಿ.ಜಾನ್ ಕ್ಯಾಲಿಫೋರ್ನಿಯಾದ ಮರಳುಗಾಡಿನಲ್ಲಿ ಕೊಲಂಬಿಯಾದ ಇಳಿದ ಬಳಿಕದ ದಿಗ್ಭ್ರಮೆಯ ಉದ್ಗಾರದಂತೆ ಅವನ ಉದ್ಗಾರವೂ "ನನ್ನೀ ಈ ಎರಡು ಕಾಲುಗಳ ಮೂಲಕ ಒಂದೆಡೆಯಿಂದ ಇನ್ನೊಂದೆಡೆಗೆ ತಲುಪುವುದು ಎಷ್ಟೊಂದು ಅದ್ಭುತವಲ್ಲವೇ?" ಎಂದೇ ಆಗಿರುವುದು.

ಸಾಮಾನ್ಯ ವ್ಯಕ್ತಿಯೋರ್ವನು ಅಸಾಮಾನ್ಯ ವಿದ್ಯಮಾನಗಳಲ್ಲಷ್ಟೇ ಅದ್ಭುತವನ್ನು ಕಾಣಬಲ್ಲನು. ಆದರೆ, ಒಬ್ಬ ಅಸಾಮಾನ್ಯ ವ್ಯಕ್ತಿಯು ಸಾಮಾನ್ಯ ವಿದ್ಯಮಾನದಲ್ಲೂ ಅದ್ಭುತವನ್ನು ಕಾಣಬಲ್ಲ ಸಾಮರ್ಥ್ಯವುಳ್ಳವನಾಗಿರುವನು.

# ದೇವನೊಂದಿಗಿನ ಸಂಬಂಧ

ವೃದ್ಧ ವ್ಯಕ್ತಿಯೋರ್ವರು ಪ್ರಭಾತದ ನಮಾಝ್ನ ವೇಳೆ ತನ್ನ ಮನೆಯಿಂದ ಬಹಳ ಆತುರತೆಯೊಂದಿಗೆ ಮಸೀದಿಯ ಕಡೆಗೆ ಹಜ್ಜೆ ಹಾಕತೊಡಗಿದರು. ಮಸೀದಿಯೊಳಗೆ ಪ್ರವೇಶಿಸಿದ ತಕ್ಷಣ ಅವರು ತೀರಾ ಸಾವಧಾನದೊಂದಿಗೆ ಹೆಜ್ಜೆಹಾಕುತ್ತಾ, ಮೊದಲ ಸಾಲಿನಲ್ಲಿ ಬಹಳಷ್ಟು ಜಾಗವಿದ್ದರೂ, ಹಿಂದಿನ ಸಾಲಿನ ಬದಿಯಲ್ಲಿ ಕುಳಿತು ನಮಾಝ್‌–ಗಾಗಿ ಕಾಯತೊಡಗಿದರು. ನಮಾಝ್ ಮುಗಿದ ಬಳಿಕ ಆ ವೃದ್ಧ ವ್ಯಕ್ತಿಯ ಬಳಿ ಇನ್ನೋರ್ವ ವ್ಯಕ್ತಿ, "ಬಹಳ ಅವರಸದೊಂದಿಗೆ ಹೆಜ್ಜೆ ಹಾಕುತ್ತಾ ಮಸೀದಿಯೊಳಗೆ ಬಂದ ನೀವು, ಮೊದಲ ಸಾಲಿನಲ್ಲಿ ಜಾಗವಿದ್ದರೂ ಎರಡನೆಯ ಸಾಲಿನ ಮೂಲೆಯಲ್ಲಿ ಕುಳಿತದ್ದೇಕೆ? ಎಂದು ಕೇಳಿದರು.

ಅದಕ್ಕೆ ಪ್ರತ್ಯುತ್ತರವಾಗಿ ವೃದ್ಧ ವ್ಯಕ್ತಿಯು, "ನಾನು ಮಸೀದಿ ಕಡೆಗೆ ಬರುತ್ತಿರುವಾಗ ನನಗೆ ಅನಿಸಿದ್ದೇನೆಂದರೆ, ನಾನು ದೇವನ ಕಡೆಯಿಂದ ಅಪಾರ ಕ್ಷಮೆ ಮತ್ತು ಕರುಣೆ ಹಂಚಿಕೆಯಾಗುತ್ತಿರುವ ಸ್ಥಳಕ್ಕೆ ಹೋಗುತ್ತಿರುವೆ. ಆದುದರಿಂದ ತಡ ಮಾಡುವುದರ ಬದಲು ತ್ವರೆ ಮಾಡುವುದು ಒಳಿತೆನಿಸಿತು. ಹಾಗಾಗಿಯೇ ಅವಸರವರಸವಾಗಿ ಮಸೀದಿಯೆಡೆಗೆ ಹೆಜ್ಜೆ ಹಾಕಿದೆ. ಆದರೆ, ಮಸೀದಿಯ ಒಳಹೊಕ್ಕಾಗ ನನಗೆ, ಅಪಾರ ಮಹಿಮೆಯುಳ್ಳ ದೇವನ ಪ್ರತಾಪದೆದುರು ಒಬ್ಬ ಅಸಹಾಯಕ ಬಲಹೀನ ಸೃಷ್ಟಿಯಾದ ನಾನು ಹೇಗೆ ನಿಲ್ಲಲಿ? ಎಂಬ ಭಾವನೆ ನನ್ನೊಳಗೆ ಮೂಡತೊಡಗಿತು. ಹಾಗಾಗಿಯೇ ಮಸೀದಿ ಒಳಗೆ ಬರುತ್ತಿದ್ದಂತೆಯೇ ನನ್ನ ಹೆಜ್ಜೆಯು ಹಿಂದೆ ಸರಿದುದು" ಎಂದು ನುಡಿದರು.

"ಆದರೂ ತಾವು ಮೊದಲಿನ ಸಾಲಿನಲ್ಲಿ ಕುಳಿತುಕೊಳ್ಳಬಹುದಿತ್ತು.?" ಎಂದು ಆ ವ್ಯಕ್ತಿ ಮತ್ತೊಮ್ಮೆ ಕೇಳಿದ. ಅದಕ್ಕೆ ಪ್ರತ್ಯುತ್ತರವಾಗಿ ಆ ವೃದ್ಧರು, "ತಾವು ಹೇಳುವುದೇನೋ ಸರಿ. ಆದರೆ, ದೇವನ ಕ್ಷಮೆ ಮತ್ತು ಕರುಣೆಯು

ಮಿತಿಯಿಲ್ಲದ್ದಾಗಿದೆ. ನಾನು ಹಿಂದಿನ ಸಾಲಿನಲ್ಲಿ ಕುಳಿತಿದ್ದರೂ ಅದರ ವಿತರಣಾ ಸರಣಿ ಇಲ್ಲಿಯ ತನಕ ತಲುಪುವುದರಲ್ಲೇನೂ ಸಂದೇಹವಿಲ್ಲ ಎಂದು ನಾನು ಭಾವಿಸಿದೆ."

ತನ್ನ ಮಾತನ್ನು ಮುಂದುವರಿಸುತ್ತಾ ಆ ವೃದ್ಧರು ಹೇಳಿದರು: ದೇವನ ಗುಣವೈಶಿಷ್ಟ್ಯಗಳನ್ನು ಸರಿಯಾಗಿ ಅರ್ಥೈಸಿಕೊಳ್ಳುವುದರಲ್ಲೇ ಮೋಕ್ಷ ಅಡಗಿದೆ ಎಂಬ ನಂಬಿಕೆ ನನ್ನದು. ದೇವನ ಗುಣವೈಶಿಷ್ಟ್ಯಗಳನ್ನು ಸರಿಯಾಗಿ ಅರ್ಥೈಸಿಕೊಂಡಲ್ಲಿ ಮಾತ್ರ ದೇವ ಮತ್ತು ಅವನ ದಾಸರ ನಡುವೆ ಉತ್ತಮ ಸಂಬಂಧವೇರ್ಪಡಲು ಸಾಧ್ಯ. ವ್ಯಕ್ತಿಯೋರ್ವ ದೇವನ ಗುಣವೈಶಿಷ್ಟ್ಯಗಳ ಪೈಕಿ ಗುಣವೈಶಿಷ್ಟ್ಯವೊಂದನ್ನು ಸರಿಯಾಗಿ ಅರಿತನೆಂದರೆ, ಆತನು ತನ್ನನ್ನು ತಾನು ದೇವನ ಸುಪರ್ದಿಗೆ ಒಪ್ಪಿಸಿಕೊಂಡಂತೆ. ಯಾವ ರೀತಿ ಸೂರ್ಯನ ಮುಂದೆ ತನ್ನನ್ನು ತಾನು ತಂದುಕೊಂಡವನಷ್ಟೇ ಸೂರ್ಯನ ಕಿರಣಗಳನ್ನು ಅನುಭವಿಸಬಲ್ಲನೋ, ಅದೇ ರೀತಿ ದೇವನ ಗುಣವೈಶಿಷ್ಟ್ಯಗಳ ಕುರಿತು ಸರಿಯಾದ ಅರಿವನ್ನು ಪಡೆದವನಷ್ಟೇ ದೇವನ ಮಹಿಮೆಯನ್ನು ಅನುಭವಿಸಬಲ್ಲನು.

ಆ ವೃದ್ಧ ವ್ಯಕ್ತಿಯು ಮಸೀದಿಗೆ ಹೊರಡುವಾಗ 'ದೇವನು ಮಹಾದಾನಿ' ಎಂದು ಲಗುಬಗೆಯಿಂದ ಹೊರಟರು. ಮಸೀದಿಯ ಒಳಗೆ ತಲುಪಿದ ಬಳಿಕ ಅವರಿಗೆ 'ದೇವನ ಮಹಾನತೆ'-ಯ ಚಿತ್ರಣ ಕಣ್ಣಮುಂದೆ ತೇಲಿ ಬಂತು. ದೇವನ ಮಹಾನ್ ಶ್ರೇಷ್ಠತೆಯ ಮುಂದೆ ತನ್ನ ಅತ್ಯಲ್ಪ ಅಸ್ತಿತ್ವದ ಅರಿವು ಆಗವರಿಗೆ ಮೂಡಿತು. ಮೊದಲ ಹಂತದಲ್ಲಿ ಆ ಹಿರಿಯ ವ್ಯಕ್ತಿ ದೇವನು 'ಮಹಾದಾನಿ' ಎಂಬ ಸತ್ಯವನ್ನು ಕಂಡುಕೊಂಡರು. ಎರಡನೆಯ ಹಂತದಲ್ಲಿ 'ದೇವಾಸ್ತಿತ್ವವು ಮಹಾನ್ ಶ್ರೇಷ್ಠತೆಯುಳ್ಳ ಅಸ್ತಿತ್ವ' ಎಂಬುದನ್ನವರು ಅರಿತರು.

# ಸತ್ಯದ ಅರಿವು

ದೆಹಲಿಯ ರೆಫ್ರಿಜರೇಟರ್ ವ್ಯಾಪಾರಿ ಶ್ರೀ ರಾಮ್ ರತನ್ ಕಪಿಲಾ ಹಾಗೂ ದೆಹಲಿಯಲ್ಲಿ ಚಿನ್ನಾಭರಣದ ಅಂಗಡಿಯನ್ನು ಹೊಂದಿದ್ದ ಮೋತಿ ರಾಮ್ ಸರ್‍ರಾಫ್ ಇವರಿಬ್ಬರೂ ತುಂಬಾ ಆಪ್ತ ಸ್ನೇಹಿತರು. ಮುಂಜಾನೆಯ ಲಘು ವ್ಯಾಯಾಮ ಮತ್ತು ನಡಿಗೆಗಾಗಿ ಜೊತೆಯಲ್ಲೇ ತೆರಳುವುದು ಇವರಿಬ್ಬರ ದೈನಂದಿನ ಹವ್ಯಾಸವಾಗಿತ್ತು.

ಒಮ್ಮೆ ಇವರಿಬ್ಬರು ವಾಕಿಂಗ್ ಮಾಡುತ್ತಾ ಜೊತೆಗೆ ಸಾಗುತ್ತಿದ್ದ ಸಂದರ್ಭದಲ್ಲಿ ಶ್ರೀ ರಾಮ್ ರತನ್ ಕಪಿಲಾರಿಗೆ ರಸ್ತೆಬದಿಯಲ್ಲಿ ಹೊಳೆಯುವ ವಸ್ತುವೊಂದು ಕಂಡು ಬಂತು. ಅವರದನ್ನು ಗಾಜಿನ ತುಂಡೆಂದು ಭಾವಿಸಿ, ತಮಾಷೆಗಾಗಿ ಅದನ್ನು ಕೈಗೆತ್ತಿಕೊಂಡು ಹೊರಟರು. ವಾಕಿಂಗ್ ನ ಬಳಿಕ ಇಬ್ಬರೂ ಮನೆಗೆ ವಾಪಾಸ್ಸಾದರು. ರಾಮ್ ರತನ್ ಮುಖ ತೊಳೆಯಲೆಂದು ವಾಶ್ ಬೆಸಿನ್ ಬಳಿ ಹೋದಾಗ ಅವರಿಗೆ ಸಿಕ್ಕಿದ್ದ ಆ ತುಂಡನ್ನು ಅಜಾಗರೂಕತೆಯಿಂದ ಒಂದು ಮೂಲೆಯಲ್ಲಿಟ್ಟರು.

ಆ ಬಳಿಕ ಮೋತಿ ರಾಮ್ ಸರ್‍ರಾಫ್ ಮುಖ ತೊಳೆಯಲೆಂದು ವಾಶ್ ಬೆಸಿನ್ ಬಳಿ ಹೋದರು. ಆಗ, ರಾಮ್ ರತನ್ ಮೂಲೆಯಲ್ಲಿಟ್ಟಿದ್ದ ಆ ತುಂಡು ಅವರ ಕಣ್ಣಿಗೆ ಬಿತ್ತು. ಅದರ ಹೊಳಪನ್ನು ನೋಡುತ್ತಲೇ ಇದೊಂದು ಅಮೂಲ್ಯ ವಜ್ರದ ತುಂಡೆಂಬುದನ್ನು ಅವರು ಗುರುತಿಸಿದರು. ಅವರದನ್ನು ನೀರಿನಲ್ಲಿ ತೊಳೆದು ಶ್ರೀ ರಾಮ್ ರತನ್ ರ ಬಳಿ ತೆಗೆದುಕೊಂಡು ಹೋಗಿ, ಇದೊಂದು ವಜ್ರದ ತುಂಡೆಂಬುದನ್ನು ತಿಳಿಸಿದರು. ಇದನ್ನು ಕೇಳಿ ರಾಮ್ ರತನ್ ಒಂದೆರೆಕ್ಷಣದ ಮಟ್ಟಿಗೆ ದಿಗ್ಭ್ರಾಂತರಾದರು. ನಂತರ ಸಾವರಿಸಿಕೊಂಡು, "ನಾನಂತೂ ಇದೊಂದು ತೀರಾ ಸಾಮಾನ್ಯ ಗಾಜಿನ ತುಂಡೆಂದೇ ಭಾವಿಸಿದ್ದೆ. ನಾನಿದನ್ನು ಅಲ್ಲಿಯೇ ಎಸೆಯುವ ಬದಲು, ಇಲ್ಲಿಯ ತನಕ ತೆಗೆದುಕೊಂಡು ಬಂದಿದ್ದು ಬಹಳ ಒಳ್ಳೆಯದಾಯಿತು ನೋಡಿ" ಎಂದರು.

ಶ್ರೀ ರಾಮ್ ರತನ್ ಕಪಿಲಾ ಅವರು ವಜ್ರದ ಕುರಿತು ತಿಳಿದವರಲ್ಲ. ಅವರ ಮನೆಯಲ್ಲಿದ್ದ ವಜ್ರದ ನೆಕ್ಲೆಸ್ ಅನ್ನು ಕೋಣೆಯೊಳಗಿನ ಲಾಕರ್ ನೊಳಗೆ ಭದ್ರವಾಗಿಟ್ಟಿದ್ದರು. ಆದರೆ ರಸ್ತೆಯ ಮೂಲೆಯಲ್ಲಿ ಬಿದ್ದಿದ್ದ ಅಮೂಲ್ಯ ವಜ್ರವನ್ನು ಮಾತ್ರ ಅವರ ಕೈಯಲ್ಲಿ ಗುರುತಿಸಲಾಗಲಿಲ್ಲ. ಹಾಗೆ ನೋಡಲು ಹೋದರೆ, ಮೋತಿ ರಾಮ್ ಸರ್ರಾಫ್ ಮತ್ತು ರಾಮ್ ರತನ್ ಈರ್ವರೂ ವಜ್ರದ ಬೆಲೆಯ ಕುಳಿತು ತಿಳಿದವರೇ ಆಗಿದ್ದರು. ಇವರೀರ್ವರ ನಡುವೆ ಇದ್ದ ಸಣ್ಣ ವ್ಯತ್ಯಾಸವೇನೆಂದರೆ, ಮೋತಿ ರಾಮ್ ಸರ್ರಾಫ್ ರತ್ನ ವ್ಯಾಪಾರಿಯಾಗಿದ್ದರು. ಆದುದರಿಂದಲೇ ವಜ್ರವೂ ಯಾವುದೇ ಮೂಲೆಯಲ್ಲಿ ಬಿದ್ದಿದ್ದರೂ ಅದನ್ನು ಗುರುತಿಸುವ ಸಾಮರ್ಥ್ಯ ಅವರಲ್ಲಿತ್ತು. ಶ್ರೀ ರಾಮ್ ರತನ್ ಅವರಿಗೆ ಆಭರಣದೊಂದಿಗೆ ಜೋಡಿಸಲ್ಪಟ್ಟ ವಜ್ರದ ಕುರಿತು ತಿಳಿದಿತ್ತೇ ವಿನಹ ಅದರ ಹೊರತಾದ ಯಾವುದೇ ವಜ್ರದ ತುಂಡನ್ನು ಗುರುತಿಸುವುದು ಅವರ ಮಟ್ಟಿಗೆ ಸಾಧ್ಯವಾಗದ ಮಾತಾಗಿತ್ತು.

ಕೇವಲ ಆಭರಣದಲ್ಲಿರುವ ವಜ್ರವನ್ನು ಮಾತ್ರ ಗುರುತಿಸಬಲ್ಲ ಸಾಮರ್ಥ್ಯವುಳ್ಳವನು ಅಸಲು ವಜ್ರದ ವ್ಯಾಪಾರಿಯಾಗಲು ಸಾಧ್ಯವಿಲ್ಲ. ವಜ್ರ ಎಲ್ಲೇ ಬಿದ್ದಿದ್ದರೂ ಅದನ್ನು ಗುರುತಿಸಬಲ್ಲವನು ಮಾತ್ರ ನಿಜವಾದ ವಜ್ರದ ವ್ಯಾಪಾರಿಯಾಗಲು ಸಾಧ್ಯ. ಇದೇ ರೀತಿ ಸತ್ಯದ ವಿಷಯ ಕೂಡ ವಜ್ರದ ತೆರನಾಗಿಯೇ ಇದೆ. ಸತ್ಯ, ಅದು ತಾನು ಪ್ರತಿನಿಧಿಸುವ ಸಮಾಜದಲ್ಲಿರಲಿ ಅಥವಾ ಹೊರಗಿನ ಸಮಾಜದಲ್ಲೇ ಇರಲಿ ಅದನ್ನು ಸಂಪೂರ್ಣ ಮನಸ್ಸಿನೊಂದಿಗೆ ಸ್ವೀಕರಿಸಬಲ್ಲ ವ್ಯಕ್ತಿ ಮಾತ್ರ ನೈಜ ಸತ್ಯವಾಹಕನಾಗಲು ಸಾಧ್ಯ.

# ಪಡೆಯಲರ್ಹರು

ಕುರ್ ಆನಿನಲ್ಲಿ ಪ್ರಸ್ತಾಪಿಸಲಾದ ವ್ಯಕ್ತಿಗಳ ಪೈಕಿ ಕಾರೂನ್ ಕೂಡ ಒಬ್ಬ. ಅವನು ಇಸ್ರಾಈಲ್ ವಂಶಿಗ ಹಾಗೂ ಮೂಸಾ ಅಲೈಹಿಸ್ಸಲಾಮ್ ರ ಸಮಕಾಲೀನ ವ್ಯಕ್ತಿಯಾಗಿದ್ದ. ಆಗಿನ ಕಾಲದ ಈಜಿಪ್ಟ್ ನ ಖಿಬ್ತೀ ಆಡಳಿತಗಾರರ ಪರವಹಿಸಿಕೊಂಡ ಕಾರಣ ಅವನ ಬಳಿ ಲೆಕ್ಕವಿಲ್ಲದಷ್ಟು ಸಂಪತ್ತು ಸಂಗ್ರಹಣೆಯಾಗಿತ್ತು.

ಅವನೊಮ್ಮೆ ತನ್ನೆಲ್ಲಾ ವೈಭವ–ಆಡಂಬರಗಳೊಂದಿಗೆ ಊರಿನ ಜನರ ಮುಂದಿನಿಂದ ಹಾದು ಹೋದನು. ಆ ಸಂದರ್ಭದಲ್ಲಿ ಕೆಲವು ಇಸ್ರಾಈಲೀ ಜನರು ಅವನ ಈ ವೈಭವ–ಆಡಂಬರದಿಂದ ಬಹಳ ಪ್ರಭಾವಿತರಾಗಿ, "ಕಾರೂನ್ ಎಷ್ಟೊಂದು ದೊಡ್ಡ ಅದೃಷ್ಟಶಾಲಿ!. ನಮ್ಮ ಬಳಿಯೂ ಅವನಂತೆಯೇ ಸಂಪತ್ತು ಸಲಕರಣೆಗಳಿದ್ದರೆ ಎಷ್ಟೊಂದು ಉತ್ತಮವಿತ್ತು!." ಎನ್ನತೊಡಗಿದರು. ಆಗ, ಇಸ್ರಾಈಲ್ ವಂಶಿಗರ ಪೈಕಿ ಸತ್ಯವನ್ನು ಅರಿತಿದ್ದ ಕೆಲವರು, "ಕಾರೂನ್ ನ ಈ ವೈಭವ–ಆಡಂಬರಗಳಿಂದ ಪ್ರಭಾವಿತರಾಗಿ ನೀವು ಪರಲೋಕವನ್ನು ಮರೆಯದಿರಿ. ವಾಸ್ತವದಲ್ಲಿ ಪರಲೋಕದ ಯಶಸ್ಸೇ ನಿಜವಾದ ಯಶಸ್ಸು. ಇಹದ ಜೀವನವಂತೂ ನಶ್ವರ. ಇನ್ನು ಶಾಶ್ವತ ಪರಲೋಕದ ಯಶಸ್ಸು, ಇಹದ ವೈಭವ–ಆಡಂಬರ, ಸಂಪತ್ತಿನಿಂದ ಬರುವಂತದ್ದಲ್ಲ. ಯಾರು ಸತ್ಯವಿಶ್ವಾಸವನ್ನು ಸ್ವೀಕರಿಸಿ, ದೇವಸಂಪ್ರೀತಿಗೆ ಅರ್ಹರಾಗುವರೋ ಅವರೇ ನಿಜವಾದ ಪರಲೋಕದ ಯಶಸ್ಸನ್ನು ಪಡೆಯುವ ನೈಜ ಅದೃಷ್ಟಶಾಲಿಗಳು." ಎಂದರು. ಇಸ್ರಾಈಲೀ ವಿದ್ವಾಂಸರ ಈ ಉತ್ತರವನ್ನು ನಕಲು ಮಾಡಿದ ಬಳಿಕ ಕುರ್ ಆನ್ ಹೇಳುತ್ತದೆ. "ಈ ಯಶಸ್ಸನ್ನು ಕೇವಲ ಸಹನೆಯುಳ್ಳವರಷ್ಟೇ ಪಡೆಯಬಲ್ಲರು" (ಅಲ್ ಕಸಸ್–80)

ವೈಭವೋಪೇತ ಜಗತ್ತಿನ ಈ ಎಲ್ಲಾ ಥಳಕು–ಬಳುಕಿನಿಂದಾಚೆಗಿನ ವಾಸ್ತವಿಕತೆಯನ್ನು ಕಾಣಬಲ್ಲವರು ಮಾತ್ರ ಪರಲೋಕದ ಯಶಸ್ಸನ್ನು ಪಡೆಯಬಲ್ಲರು

ಎಂಬುದು ಈ ಸೂಕ್ತದ ತಾತ್ಪರ್ಯವಾಗಿದೆ. ಆ ಯಶಸ್ಸನ್ನು ಪಡೆಯುವವರೇ ನಿಜವಾದ ಅರ್ಥದಲ್ಲಿ ಅದೃಷ್ಟಶಾಲಿಗಳು. ಪ್ರಾಪಂಚಿಕ ಸುಖ–ವೈಭವಗಳ ಬದಲಿಗೆ ಪರಲೋಕದ ಯಶಸ್ಸಿಗೆ ಆದ್ಯತೆ ಕೊಡುವ ಸಹನಾಶೀಲರಿಗಷ್ಟೇ ಇದು ಸಾಧ್ಯ. ತಮ್ಮ ಆಸಕ್ತಿ–ಆಲೋಚನೆಗಳನ್ನು ಪ್ರಾಪಂಚಿಕ ವೈಭೋಗಗಳಿಗೆ ಸಿಲುಕಿಸಿಕೊಳ್ಳದ, ನಶ್ವರ ಜಗತ್ತಿಗೆ ಆದ್ಯತೆ ನೀಡುವ ಬದಲು ಶಾಶ್ವತ ಪರಲೋಕಕ್ಕೆ ಆದ್ಯತೆ ನೀಡುವ, ಇಹಲೋಕದಲ್ಲಿ ಜೀವಿಸುತ್ತಿದ್ದರೂ ಪರಲೋಕವನ್ನು ಮರೆಯದ ಸತ್ಯವಿಶ್ವಾಸಿಗರಿಗೆ ಮಾತ್ರ ಇಂತಹ ಉನ್ನತ ಯಶಸ್ಸನ್ನು ತಮ್ಮದಾಗಿಸಿಕೊಳ್ಳಲು ಸಾಧ್ಯ. ಇದು ಅತ್ಯಂತ ಕ್ಲಿಷ್ಟತೆಯ ಕಾರ್ಯ.

ಪ್ರಾಪಂಚಿಕ ಜಗತ್ತಿನಲ್ಲಿ ಬದುಕುತ್ತಿದ್ದರೂ, ಇಲ್ಲಿನ ಅತಿ ವ್ಯಾಮೋಹಕ್ಕೊಳಗಾಗದೆ ಬದುಕುವ ಕಲೆಯನ್ನು ಕರಗತಗೊಳಿಸಿಕೊಂಡವರಿಗಷ್ಟೇ ಈ ಉನ್ನತ ರಹಸ್ಯದ ಅರಿವಾಗಲು ಸಾಧ್ಯ. ಈ ಜಗತ್ತಿನ ಥಳಕು–ಬಳುಕಿನಲ್ಲೇ ಸಿಕ್ಕಿಕೊಂಡ ವ್ಯಕ್ತಿಯ ಪಾಲಿಗೆಂದೂ ಪಾರಲೌಕಿಕ ಯಶಸ್ಸಿನ ರಹಸ್ಯವು ಬಹಿರಂಗಗೊಳ್ಳದು. ಪ್ರಾಪಂಚಿಕ ಬದುಕಿಗೆ ಆದ್ಯತೆ ನೀಡಿದವನಿಗೆ ಇಲ್ಲಿನ ಯಶಸ್ಸು ಕೀರ್ತಿ ಎಲ್ಲವೂ ದೊರೆತರೂ, ಇದೇ ಅವನ ಪಾಲಿನ ಪಾರಲೌಕಿಕ ಯಶಸ್ಸನ್ನು ಕಸಿದುಕೊಳ್ಳುವ ಮಾರಕ ಸಾಧನವಾಗಿ ಪರಿಣಮಿಸಬಹುದು.

ಲೌಕಿಕ ಹಿತಾಸಕ್ತಿಗಳನ್ನು ಪಾರಲೌಕಿಕ ಯಶಸ್ಸಿಗಾಗಿ ತೊರೆಯಲು ಸಿದ್ಧನಿರುವವನಿಗೆ, ಕೀರ್ತಿ–ಪ್ರಸಿದ್ಧಿಯ ಬದಲಿಗೆ ಅನಾಮಧೇಯ ಜೀವನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಬಲ್ಲವನಿಗೆ, ಜನಪ್ರಿಯತೆಯ ಬದಲು ತೆರೆಮರೆಯ ಜೀವನಕ್ಕೇ ಹೆಚ್ಚು ಆದ್ಯತೆ ನೀಡಬಲ್ಲವನಿಗೆ, ಪರಸ್ಪರರ ಹಿತಾಸಕ್ತಿಯ ಸಲುವಾಗಿ ವೈಯಕ್ತಿಕ ನಷ್ಟವನ್ನು ಅನುಭವಿಸಲು ಸಿದ್ಧನಿರುವವನಿಗೆ, ಐಷಾರಾಮಿ ಜೀವನದ ಬದಲು ಸಂಘರ್ಷದ ಜೀವನವನ್ನು ನಡೆಸಲು ತಯಾರಿರುವವನಿಗೆ, ಸ್ವಾರ್ಥವನ್ನು ತ್ಯಾಗ ಮಾಡಿ

ನಿಸ್ವಾರ್ಥತೆಯನ್ನು ತನ್ನದಾಗಿಸಿಕೊಂಡವನಿಗೆ ಮಾತ್ರ ಈ ಪಾರಲೌಕಿಕ ಯಶಸ್ಸನ್ನು ತನ್ನದಾಗಿಸಿಕೊಳ್ಳುವ ವಿವೇಕ ಪ್ರಾಪ್ತಿಯಾಗಬಲ್ಲದು.

ಈ ಪ್ರಾಪಂಚಿಕ ಮೋಹಕ್ಕೊಳಗಾಗದೆ ಜೀವಿಸುವ ಆತ್ಮ ನಿಯಂತ್ರಣದ ಬದುಕು ಬಲು ಕಷ್ಟಕರವಾದುದಂತೂ ಹೌದು. ಆದರೆ ಈ ಪ್ರಕ್ರಿಯೆಯಲ್ಲಿ ಕಷ್ಟವನ್ನು ಸೈರಿಸಬಲ್ಲ ತಾಳ್ಮೆಯಿರುವ ವ್ಯಕ್ತಿಗಷ್ಟೇ ಸತ್ಯದ ಅರಿವನ್ನು ತನ್ನದಾಗಿಸಿಕೊಳ್ಳಲು ಸಾಧ್ಯ. ಏಕೆಂದರೆ ಪ್ರಾಪಂಚಿಕ ಸುಖವನ್ನು ತ್ಯಾಗ ಮಾಡಲು ಬಹಳ ದೊಡ್ಡ ಮಟ್ಟದ ತಾಳ್ಮೆ ಅಗತ್ಯ. ಇಂತಹ ತಾಳ್ಮೆ ವಹಿಸಲು ಸಾಧ್ಯವಿರುವ ವ್ಯಕ್ತಿಯ ಮಡಿಲಿಗೆ ಮಾತ್ರ ಪಾರಲೌಕಿಕ ಯಶಸ್ಸನ್ನು ದೊರಕಿಸಿಕೊಡುವ ವಿವೇಕದ ಮುತ್ತುಗಳು ಬೀಳಲು ಸಾಧ್ಯ.

# ಅನ್ವೇಷಣೆಯಲ್ಲಿರುವ ಸಂತೋಷ

ಸೂರ್ಯನು ನಾವು ವಾಸಿಸುತ್ತಿರುವ ಭೂಮಿಗಿಂತ 12 ಲಕ್ಷ ಪಟ್ಟು ದೊಡ್ಡದು. ಅದರ ಮತ್ತು ಪೃಥ್ವಿಯ ನಡುವಿನ ಅಂತರ ಒಂಬತ್ತೂವರೆ ಕೋಟಿ ಮೈಲು ದೂರ. ಇಷ್ಟಾಗಿಯೂ ಸೂರ್ಯನ ಬೆಳಕು ಮತ್ತು ಶಾಖ ನಮಗೆ ಸಾಕಾಗುವಷ್ಟು ದೊರೆಯುತ್ತದೆ. ಸೂರ್ಯನು ದೇವನು ನಿರ್ಮಿಸಿದ ಈ ಮಹಾನ್ ಬ್ರಹ್ಮಾಂಡದ ಒಂದು ಸಣ್ಣ ನಕ್ಷತ್ರ ಮಾತ್ರ. ಇತರೆ ನಕ್ಷತ್ರಗಳಿಗಿಂತ ಸೂರ್ಯನು ಭೂಮಿಗೆ ಹೆಚ್ಚು ಸಮೀಪವಿರುವುದರಿಂದ ನಮ್ಮ ಬಾಹ್ಯಗಣ್ಣಿಗೆ ದೊಡ್ಡದಾಗಿ ಗೋಚರಿಸುತ್ತದೆ. ಹೆಚ್ಚಿನ ನಕ್ಷತ್ರಗಳು ಸೂರ್ಯನಿಗಿಂತಲೂ ಬೃಹತ್ ಆಗಿಯೂ, ಅದಕ್ಕಿಂತಲೂ ಮಿಗಿಲಾದ ಪ್ರಕಾಶವನ್ನು ಸೂಸಬಲ್ಲವೂ ಆಗಿವೆ.

'ನಕ್ಷತ್ರಗಳಲ್ಲಿ ಇಂತಹ ಅದ್ಭುತವಾದ ಶಕ್ತಿ ಉದ್ಭವವಾಗುವುದಾದರೂ ಹೇಗೆ?.' ಪ್ರಖ್ಯಾತ ನೋಬಲ್ ಪ್ರಶಸ್ತಿ ವಿಜೇತ ಖಗೋಳ ಭೌತಶಾಸ್ತ್ರಜ್ಞ ಹ್ಯಾನ್ಸ್ ಬೆಥೆ (Hans Bath, 1906–2005) ಈ ವಿಷಯದ ಕುರಿತು ವರ್ಷಾನುಗಟ್ಟಲೆ ಸಂಶೋಧನೆ ಮಾಡಿದ ಬಳಿಕ, "ನಕ್ಷತ್ರಗಳು ಪ್ರಕಾಶಮಯವಾಗಿ ಹೊಳೆಯುವ ಹಿಂದಿರುವ ರಹಸ್ಯ ಕಾರ್ಬನ್ ಸೈಕಲ್ (Carbon Cycle) ಆಗಿದೆ ಎಂದು ಉತ್ತರವಿತ್ತರು.

ಡಾಕ್ಟರ್ ಬೆಥೆ ಈ ವೈಜ್ಞಾನಿಕ ಅನ್ವೇಷಣೆಯಲ್ಲಿ ಯಶಸ್ಸು ಸಂದರ್ಭ, ಅವರ ಪಾಲಿಗೆ ಅವರ್ಣನೀಯ ಹರ್ಷದಾಯಕ ಕ್ಷಣವಾಗಿತ್ತು. ಅವರ ಪತ್ನಿ ರೋಸ್ ಬೆಥೆ ಹೇಳುತ್ತಾರೆ: ಅದು ರಾತ್ರಿಯ ಹೊತ್ತಾಗಿತ್ತು. ನಾವು ಕುಟುಂಬ ಸಮೇತ ನ್ಯೂ ಮೆಕ್ಸಿಕೋದ ಮರುಭೂಮಿಯಲ್ಲಿದ್ದೆವು. ಮರುಭೂಮಿಯ ಆ ಇರುಳಿನಲ್ಲಿ ನಕ್ಷತ್ರಗಳು ಅದ್ಭುತವೆಂಬಂತೆ ಹೊಳೆಯುತ್ತಿದ್ದವು. ರೋಸ್ ಬೆಥೆ ಆಗಸದೆಡೆಗೆ ನೋಡುತ್ತಾ, "ಆಗಸದೀ ನಕ್ಷತ್ರಗಳು ಎಷ್ಟೊಂದು ಅದ್ಭುತವಾಗಿ ಹೊಳೆಯುತ್ತಿವೆ ಅಲ್ಲವೇ?" ಎಂದು

ಉದ್ಗರಿಸಿದರು. ಅದಕ್ಕುತ್ತರವಾಗಿ ಡಾಕ್ಟರ್ ಬೆಥೆ, "ಈ ನಕ್ಷತ್ರಗಳು ಹೊಳೆಯುವ ಹಿಂದಿರುವ ರಹಸ್ಯವೇನು?" ಎಂದು ತಿಳಿದಿರುವ ಏಕೈಕ ಮನುಷ್ಯನ ಪಕ್ಕದಲ್ಲೇ ನೀ ನಿಂತಿರುವೆ ಎಂಬ ಅರಿವಿದೆಯೇ ನಿನಗೆ?" ಎಂದು ಹೇಳಿದರು.

"Do you realize, just now you are standing next to the only human who knows why they shine at all."

ಡಾ. ಹೆನ್ಸ್ ಬೆಥೆಯ ಈ ಅನ್ವೇಷಣೆಯು ಸಂಪೂರ್ಣ ವಾಸ್ತವಿಕತೆಯ ಚಿಕ್ಕದೊಂದು ಅಂಶವಷ್ಟೇ ಆಗಿತ್ತು. ಅವರು ನಕ್ಷತ್ರಗಳ ಹೊಳಪಿಗೆ ಕಾರ್ಬನ್ ಸೈಕಲ್ ಪ್ರಮುಖ ಕಾರಣವೆಂಬುದನ್ನು ಕಂಡುಹಿಡಿದದ್ದರು. ಆದರೆ, ಕಾರ್ಬನ್ ಸುತ್ತುವ ಈ ಪ್ರಕ್ರಿಯೆಯನ್ನು ನಕ್ಷತ್ರಗಳಲ್ಲಿ ಇರಿಸಿದವರು ಯಾರು? ಎಂಬ ಪ್ರಶ್ನೆ ಈಗ ಎದುರಾಗುತ್ತದೆ. ಈ ಮಹಾ ಪ್ರಕ್ರಿಯೆಯ ಹಿಂದಿರುವ ಶಕ್ತಿ ನಿಸ್ಸಂದೇಹವಾಗಿಯೂ ದೇವನದು ಎಂಬುದನ್ನು ಸತ್ಯವಿಶ್ವಾಸಿಯಾದವನು ಅನ್ವೇಷಿಸಿಕೊಳ್ಳುತ್ತಾನೆ. ದೇವವಿಶ್ವಾಸವೂ ಒಂದು ತೆರನಾದ ಅನ್ವೇಷಣೆಯೇ ಆಗಿದೆ. ನಿಜವಾಗಿಯೂ ಇದು ಉಳಿದೆಲ್ಲಾ ಅನ್ವೇಷಣೆಗಳಿಗಿಂತ ಬಹುದೊಡ್ಡ ಅನ್ವೇಷಣೆ. ವಿಜ್ಞಾನಿಯೋರ್ವ ಜಗತ್ತಿನ ಪ್ರಕ್ರಿಯೆಯ ಹಿಂದಿರುವ ವಾಸ್ತವಿಕತೆಯ ಒಂದಂಶವನ್ನು ಕಂಡುಹಿಡಿದಾಗ ಭಾವಪರವಶತೆಗೊಳಗಾಗಿ ಹರ್ಷದಿಂದ ಕುಣಿದಾಡತೊಡಗುತ್ತಾನೆ. ಸತ್ಯವಿಶ್ವಾಸಿಗರು, ಜಗತ್ತಿನ ಅತಿದೊಡ್ಡ ಸತ್ಯವಾದ ಏಕದೇವತ್ವವನ್ನು ಅನ್ವೇಷಿಸುತ್ತಾರೆ. ಆದರೆ ಈ ಕುರಿತು ಅವರೊಳಗೆ ಯಾವುದೇ ತೆರನಾದ ವಿಶೇಷ ಭಾವನೆಯೂ ಉದ್ಭವಿಸುವುದಿಲ್ಲ. ಇದನ್ನೆಲ್ಲಾ ನೋಡುವಾಗ ಕೆಲವೊಮ್ಮೆ, ತಮ್ಮನ್ನು ತಾವು ಸತ್ಯವಿಶ್ವಾಸಿಗರು ಎಂದು ಹೇಳಿಕೊಳ್ಳುವವರು ನಿಜವಾದ ಅರ್ಥದಲ್ಲಿ ದೇವನನ್ನು ಅನ್ವೇಷಿಸಿಯೇ ಇಲ್ಲವೇನೋ ಎನಿಸುವುದಿದೆ.

# ಸತ್ಯಶೋಧಕ

ನಾವು ವಾಸಿಸುತ್ತಿರುವ ಜಗತ್ತು ದೇವನ ಮಹಿಮೆಯ ಆಗರದ ಪ್ರತಿಬಿಂಬವಾಗಿದೆ. ದೇವನ ಈ ಮಹಿಮೆಯ ಆಗರವನ್ನು ಮಾನವ ಭಾಷೆಯಲ್ಲಿ ಅರ್ಥೈಸಬಹುದಾದ ವ್ಯಕ್ತಿ ಯಾರಿರುವರು?. ಮಾನವನ ಬತ್ತಳಿಕೆಯಲ್ಲಿರುವ ಪದಪುಂಜಗಳೆಲ್ಲಾ ಎಲ್ಲಿ ಕೊನೆಗೊಳ್ಳುವುದೋ, ಅಲ್ಲಿಂದಲೇ ದೇವನ ಮಹಿಮೆಯ ವಿವರಣೆಯು ಆರಂಭಗೊಳ್ಳತೊಡಗುವುದು. ನಾವು ಯಾವುದಾದರೂ ವಿಷಯವನ್ನು ಅರ್ಥೈಸಿಕೊಡುವಾಗ ಅದನ್ನು ವಿವರಿಸುವ ಬದಲು ಅದರ ಮೇಲೆ ಪದಬಂಧವನ್ನು ಹೇರುವ ಮೂಲಕ ಅದರಲ್ಲಿ ಇನ್ನಷ್ಟು ಕ್ಲಿಷ್ಟತೆಗೊಳಪಡಿಸುತ್ತೇವೆ.

ಯಾವುದೇ ಅರ್ಥಗರ್ಭಿತ ವಾಸ್ತವವನ್ನು ಮನುಷ್ಯನೋರ್ವನು ಕೇವಲ ಪದಗಳ ಮೂಲಕ ಅರ್ಥೈಸಿಕೊಳ್ಳುವುದು ಸಾಧ್ಯವಿರದ ಮಾತು. ಕುರುಡನೋರ್ವನಿಗೆ ನೀವು ಹೂವೆಂದರೆ ಏನೆಂಬುದನ್ನು ವಿವರಿಸಲು ಸಕಲ ಶಬ್ದಭಂಡಾರಗಳನ್ನು ಬಳಸಿದರೂ, 'ಹೂವು ಎಂದರೇನು?' ಎಂಬುದನ್ನು ಕುರುಡನಿಗೆ ಸರಿಯಾದ ರೀತಿಯಲ್ಲಿ ವಿವರಿಲಸಾಧ್ಯ. ಇದೇ ರೀತಿ ಈ ಜಗತ್ತಿನಲ್ಲಿ ಕಾಣಸಿಗುವ ದೇವಮಹಿಮೆಯ ತಾತ್ಪರ್ಯವನ್ನು ಸಾಮಾನ್ಯ ವ್ಯಕ್ತಿಯೋರ್ವನ ಮುಂದೆ ಬಿಡಿಸಿ ಹೇಳಲು ನಿಘಂಟುಗಳ ಕಟ್ಟುಗಳನ್ನೇ ತಂದಿರಿಸಿದರೂ ಆತನಿಗೆ ಅರ್ಥೈಸಲಸಾಧ್ಯ.

ಸನ್ಮಾರ್ಗವೆಂಬುದು ಪ್ರತಿಯೋರ್ವ ವ್ಯಕ್ತಿಯ ಅಂತರಂಗದ ಕೂಗಾಗಿದೆ. ಆದರೆ, ಸನ್ಮಾರ್ಗ ದೊರೆಯುವುದು ಅದನ್ನು ಪಡೆಯಲು ಹಾತೊರೆಯುವವನಿಗೆ ಮಾತ್ರ. ಸತ್ಯವೇ ವ್ಯಕ್ತಿಯೋರ್ವನ ಅಂತರಂಗದ ಕೂಗಾದಾಗ, ಮರುಭೂಮಿಯ ಓಯಸಿಸ್ ನ ನೀರಿನಂತೆ ಸತ್ಯವು ಆತನ ಪಾಲಿನ ತೀವ್ರ ಆವಶ್ಯಕತೆಯ ವಸ್ತುವಾದಾಗ, ಹೀಗೆ ಹಗುಲಿರುಳು ಸತ್ಯದ ಅನ್ವೇಷಣೆಯಲ್ಲಿ ಅಲೆದಾಡುವ ವ್ಯಕ್ತಿ ಆತನಾದಾಗ ಮಾತ್ರ ಸತ್ಯದ ದರ್ಶನ ಪಡೆಯುವ ಸೌಭಾಗ್ಯ ಅಂತಹವರಿಗೆ ಲಭಿಸುವುದು.

ಮೇಲಿನ ಪ್ರಸ್ತಾಪಿತ ವ್ಯಕ್ತಿಯ ಗುಣವನ್ನು ತನ್ನದಾಗಿಸಿಕೊಂಡವನು ಸನ್ಮಾರ್ಗದ ಅರ್ಥ ಹಾದಿಯನ್ನು ಕ್ರಯಿಸಿದಂತೆಯೇ ಸರಿ. ಅವನು ತನ್ನೊಳಗೆ ಅಡಗಿರುವ ಅಂತರಾತ್ಮದ ಧ್ವನಿಯನ್ನು ಆಲಿಸಿ, ದೈವಿಕ ಮಾರ್ಗದರ್ಶನ ಮೂಲಕ ಮುನ್ನಡೆಯುವನಾಗುವನು. ಅವನು ತನ್ನೊಳಗಿನ ನಿಸರ್ಗದ ಕರೆಗೆ ಓಗಟ್ಟು ದೇವಮಹಿಮೆಯ ತಾತ್ಪರ್ಯವನ್ನು ಅರಿಯುವ ಅದ್ಭುತ ಸಾಮರ್ಥ್ಯವನ್ನು ತನ್ನದಾಗಿಸಿಕೊಳ್ಳುವನು. ಇಂತಹ ವ್ಯಕ್ತಿಯು ನಶ್ವರ ಜಗತ್ತಿನಿಂದಾಚೆಯ ವಾಸ್ತವಿಕತೆಯನ್ನು ತಲುಪುವ ಪ್ರಯತ್ನ ಮಾಡುತ್ತಾನೆ. ಎಲ್ಲಿಯ ತನಕವೆಂದರೆ ದೇವಚರರ ಪಿಸುಮಾತುಗಳನ್ನಾತ ಆಲಿಸತೊಡಗುತ್ತಾನೆ.

ಪ್ರವಾದಿಗಳು ಸತ್ಯದ ಈ ಅನ್ವೇಷಣೆಯಲ್ಲಿ ಮನುಷ್ಯನ ಸಹಾಯಕರಾಗಿದ್ದರು. ಪ್ರವಾದಿಗಳ ಮುಖಾಂತರ ವಾಸ್ತವಿಕ ಸತ್ಯವು ಜನರಿಗೆ ತಲುಪುವ ಮೊದಲೇ ಅದರ ಅಸ್ಪಷ್ಟ ಚಿತ್ರಣ ಅವರ ಅಂತರಾತ್ಮದೊಳಗೆ ಹುದುಗಿರುತ್ತದೆ. ಆ ಬಳಿಕ ಅವರಿಗೆ ಪ್ರವಾದಿಗಳ ಕರೆಯು ತಲುಪಿದಾಗ, ಆ ಅಸ್ಪಷ್ಟ ಚಿತ್ರಣಕ್ಕೆ ಸರಿಯಾದ ವ್ಯಾಖ್ಯಾನ ದೊರೆಯುತ್ತದೆ. ಅವನು ತನ್ನೊಳಗೆ ಹುದುಗಿರುವ ಅಘೋಷಿತ ವಾಕ್ಯಗಳನ್ನು ಘೋಷಿತ ರೂಪದಲ್ಲಿ ಪ್ರವಾದಿಗಳ ಮುಖಾಂತರ ಪಡೆಯುತ್ತಾನೆ. ಎಲ್ಲಿಯ ತನಕವೆಂದರೆ ಕುರ್ ಆನ್ ಮತ್ತು ಕುರ್ ಆನ್ ಪಠಣಕಾರ ಇಬ್ಬರೂ ಪರಸ್ಪರ ಪ್ರತಿಬಿಂಬದಂತಾಗುತ್ತಾರೆ. ಪಠಣಕಾರ ತನ್ನ ವ್ಯಕ್ತಿತ್ವದಲ್ಲಿ ಕುರ್ ಆನ್ ನ ಸ್ವರೂಪವನ್ನು ಪಡೆದರೆ, ಕುರ್ ಆನ್ ಪಠಣಕಾರನ ತದ್ರೂಪಿನಂತೆ ಗೋಚರಿಸತೊಡಗುತ್ತದೆ.

# ಸಮೂಹ ಸಮ್ಮತಿ

ತೌರೇತ್ ದೇವಗ್ರಂಥವೆಂಬುದು ಯಹೂದಿಗಳದೂ ನಂಬಿಕೆಯಾಗಿತ್ತು. ಇದೇ ರೀತಿ ಕ್ರೈಸ್ತರು ಕೂಡ ಬೈಬಲ್ ಅನ್ನು ದೇವಗ್ರಂಥವೆಂದು ಒಪ್ಪಿಕೊಂಡವರು. ಆದರೆ ಕುರ್ ಆನ್ ಅವರ ಮುಂದೆ ಇಡಲಾದಾಗ ಅದನ್ನು ದೇವಗ್ರಂಥವೆಂದು ಒಪ್ಪಲು ಅವರು ತಯ್ಯಾರಾಗಲಿಲ್ಲ. ಇದಕ್ಕೆ ಕಾರಣ, ಅವರ ನಂಬಿಕೆಯು ಸಾಮೂಹಿಕ ನಂಬಿಕೆಯಾಗಿತ್ತೇ ವಿನಃ ನೈಜ ನಂಬಿಕೆಯಾಗಿರಲಿಲ್ಲ. ಅರ್ಥಾತ್; ತೌರೇತನ್ನಾಗಲಿ, ಬೈಬಲನ್ನಾಗಲಿ ಅವರು ನಂಬಿದ್ದು ಗುಂಪಿನ ಆಧಾರದಲ್ಲಾಗಿತ್ತೇ ವಿನಃ ಅದೊಂದು ಅಮೂಲ್ಯ ಸತ್ಯ ಎಂಬ ಆಧಾರದಲ್ಲಾಗಿರಲಿಲ್ಲ. ಅವರು ಸತ್ಯಕ್ಕಿಂತ ತಮ್ಮ ಗುಂಪಿಗೇ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ಅವರ ಈ ಮನಸ್ಥಿತಿಯನ್ನು ಕುರ್ ಆನ್ ಈ ಕೆಳಗಿನ ಪದಗಳಲ್ಲಿ ಅನುವಾದಿಸಿದೆ:

"ದೇವನು ಇಳಿಸಿಕೊಟ್ಟಿರುವ ಸಂದೇಶವನ್ನು ನಂಬಿರಿ" ಎಂದು ಅವರೊಡನೆ ಹೇಳಿದಾಗ ಅವರು "ದೇವನು ನಮಗೆ ಇಳಿಸಿಕೊಟ್ಟಿರುವುದನ್ನು ನಾವು ನಂಬಿದ್ದೇವೆ" ಎನ್ನುತ್ತಾರೆ ಮತ್ತು ಅದರಾಚೆಗಿರುವ ಎಲ್ಲವನ್ನೂ ಅವರು ಧಿಕ್ಕರಿಸುತ್ತಾರೆ. (ಬಕರಃ: 91)

ಯಹೂದಿ ಮತ್ತು ಕ್ರೈಸ್ತರ ಈ ಸಾಮೂಹಿಕ ಮನಃಸ್ಥಿತಿ ಇಂದು ಮುಸ್ಲಿಮರಲ್ಲೂ ಮನೆಮಾಡಿದೆ. ಮುಸ್ಲಿಮರೂ ಕೂಡ ಇಂದು ಅವರ ಗುಂಪು ಒಪ್ಪಿದ ವಿಷಯವನ್ನು ಮಾತ್ರ ಒಪ್ಪುತ್ತಾರೆ ಇಲ್ಲವಾದಲ್ಲಿ ಅದನ್ನು ಸಾರಸಗಟಾಗಿ ತಿರಸ್ಕರಿಸಿಬಿಡುತ್ತಾರೆ. ತಮ್ಮ ಗುಂಪಿನ ಹೊರತಾಗಿ ಹೊರಗೆಲ್ಲಾದರೂ ಏನಾದರೂ ಒಳಿತು ಅವರಿಗೆ ಕಂಡುಬಂದರೂ, ಅದರ ಕುರಿತು ತಮಗೆ ಏನೇನೂ ತಿಳಿದಿಲ್ಲ ಎಂಬಂತೆ ಅವರು ಇದ್ದು ಬಿಡುತ್ತಾರೆ.

ಮುಸ್ಲಿಮರಿಂದು ಹಲವಾರು ಗುಂಪುಗಳಲ್ಲಿ ವಿಭಜಿಸಲ್ಪಟ್ಟಿದ್ದಾರೆ. ಅವರ ಪೈಕಿ ಪ್ರತಿಯೊಂದು ಗುಂಪೂ ತನ್ನ ಗುಂಪಿಗೆ ಸೇರಿದ ವಿದ್ವಾಂಸರನ್ನು ಮಾತ್ರ

ವಿದ್ವಾಂಸರೆಂದು ಒಪ್ಪುತ್ತದೆ. ತನ್ನ ಗುಂಪಿನ ಹೊರತಾದ ಬೇರಾವ ವಿದ್ವಾಂಸನನ್ನೂ (ಎಷ್ಟೇ ಆಳವಾದ ಜ್ಞಾನವನ್ನು ಆ ವಿದ್ವಾಂಸ ಹೊಂದಿದ್ದರೂ) ಅವರು ಒಪ್ಪಲಾರರು. ಇದೇ ರೀತಿ ಪ್ರತಿಯೊಂದು ಗುಂಪೂ ತನ್ನ ಗುಂಪಿಗೆ ಸೇರಿದ ಧರ್ಮನಿಷ್ಠ ವ್ಯಕ್ತಿಯನ್ನು ಮಾತ್ರ ಧರ್ಮನಿಷ್ಠ ಎಂದು ಒಪ್ಪುತ್ತದೆಯೇ ವಿನಃ ತನ್ನ ಗುಂಪಿನ ಹೊರತಾದ ಬೇರಾವುದೇ ವ್ಯಕ್ತಿಯನ್ನು, ಆತ ಅದೆಷ್ಟೇ ಧರ್ಮನಿಷ್ಠನಾಗಿದ್ದರೂ ಆತನನ್ನು ಧರ್ಮನಿಷ್ಠ ಎಂದದು ಸ್ವೀಕರಿಸದು. ತನ್ನ ಗುಂಪಿನ ಹೊರತಾದ ಧರ್ಮನಿಷ್ಠ ವ್ಯಕ್ತಿಗಳು ಆಯಾ ಗುಂಪಿನ ದೃಷ್ಟಿಯಲ್ಲಿ ಯಾವುದೇ ಮೌಲ್ಯವಿಲ್ಲದ ಜನರು ಎನಿಸಿಕೊಳ್ಳುವರು. ತನ್ನ ಸಮೂಹಕ್ಕೆ ಸೇರಿದ ಲೇಖಕನಷ್ಟೇ ಅದರ ದೃಷ್ಟಿಯಲ್ಲಿ ನಿಜವಾದ ಲೇಖಕ. ತಾನೆಳೆದುಕೊಂಡ ತನ್ನ ವೃತ್ತದ ಹೊರಗಿನ ಜನರಲ್ಲಿ ಅದೆಷ್ಟೇ ಒಳಿತಿದ್ದರೂ, ತನ್ನ ಕಣ್ಣಿಗೇನೂ ಕಾಣಿಸತ್ತಲೇ ಇಲ್ಲ ಎಂಬಂತೆ ಅಂತಹವರನ್ನದು ನಿರ್ಲಕ್ಷಿಸಿಬಿಡುತ್ತದೆ.

ಸತ್ಯವನ್ನು ಅದರ ಅಸಲು ಮೌಲ್ಯದೊಂದಿಗೆ ಸ್ವೀಕರಿಸದ ವ್ಯಕ್ತಿಯಷ್ಟೇ ದೇವನ ಬಳಿ ಪ್ರತಿಫಲಾರ್ಹನು. "ತನ್ನ ಗುಂಪಿನ ದೃಷ್ಟಿಯಲ್ಲಿ ಇದು ಸತ್ಯವಾದರೆ ಮಾತ್ರ ಸತ್ಯವೆಂದು ಒಪ್ಪುವೆ" ಎಂದು ಷರತ್ತಿಡುವ ವ್ಯಕ್ತಿಗೆ ದೇವನ ಬಳಿ ಯಾವುದೇ ಮೌಲ್ಯವಿಲ್ಲ. ಅಂತಹವರು ದೇವನ ಬಳಿ ಪ್ರತಿಫಲ ಪಡೆಯಲೂ ಅರ್ಹರೂ ಅಲ್ಲ.

# ಸತ್ಯದ ಸಾಕ್ಷಾತ್ಕಾರ

ಮನುಷ್ಯನ ಅಂತರಾತ್ಮ ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕನ್ನಡಿಯ ಕಾರ್ಯಚಟುವಟಿಕೆಯ ಕುರಿತಂತೂ ಎಲ್ಲರಿಗೆ ತಿಳಿದೇ ಇದೆ. ಅದು ತನ್ನ ಮುಂದೆ ಯಾವುದೇ ವಸ್ತುವನ್ನು ತಂದರೂ ಅದು ಅದರ ಸ್ವರೂಪದ ಪ್ರತಿಬಿಂಬದ ಅಚ್ಚನ್ನು ಯಥಾ ರೂಪದಲ್ಲಿ ತೋರಿಸುತ್ತದೆ. ಕನ್ನಡಿಯು ಪ್ರತಿಬಿಂಬಿಸುವ ವಸ್ತುವಿನ ಸ್ವರೂಪವು ಅದರದೇ ನಿಖರವಾದ ತದ್ರೂಪಾಗಿದೆ. ಕನ್ನಡಿಯು ತನ್ನ ಮುಂದಿರುವ ವಸ್ತುವನ್ನು ಪ್ರತಿಬಿಂಬಿಸುವಾಗ ಅದಕ್ಕೇನಾದರೂ ಸೇರಿಸುವುದಾಗಲೀ, ಅಥವಾ ಅದರಿಂದೇನಾದರೂ ಕಮ್ಮಿಗೊಳಿಸುವುದಾಗಲೀ ಮಾಡುವುದಿಲ್ಲ. ಮನುಷ್ಯನ ಅಂತರಾತ್ಮದ ಸ್ಥಿತಿಯೂ ಇದೇ ತೆರನದ್ದಾಗಿದೆ. ಅದು ಸತ್ಯವನ್ನು ವೀಕ್ಷಿಸುವುದರಲ್ಲಾಗಲೀ, ಗುರುತಿಸುವುದಿ-ರಲ್ಲಾಗಲೀ ದೋಷವೆಸಗಲಾರದು.

ಇದರ ಹೊರತಾಗಿಯೂ ಸತ್ಯವು ಕಣ್ಣ ಮುಂದಿದ್ದರೂ ಜನರದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಲು ಹಿಂದೇಟು ಹಾಕುವುದೇಕೆ? ಎಂಬ ಪ್ರಶ್ನೆ ಈಗ ಎದುರಾಗುವುದು ಸಹಜ. ಸತ್ಯವನ್ನು ಸ್ವೀಕರಿಸಲು ಜನರು ಹಿಂದೇಟು ಹಾಕಲು ಇರುವ ಪ್ರಮುಖ ಕಾರಣ ಮಾನಸಿಕ ದ್ವಂದ್ವತೆಯಾಗಿದೆ. ನೀವು ಅಂತಹ ವ್ಯಕ್ತಿಗಳನ್ನು ಅವಲೋಕಿಸಿದಲ್ಲಿ ಅವರ ಸತ್ಯ ನಿರಾಕರಣೆಯ ಹಿಂದೆ ಯಾವುದೇ ಸ್ಪಷ್ಟ ಕಾರಣಗಳು ನಿಮಗೆ ಗೋಚರಿಸುವ ಬದಲು, ಅಂತಹವರಲ್ಲಿ ಯಾವುದೋ ರೀತಿಯ ಮಾನಸಿಕ ದ್ವಂದ್ವತೆ ಮನೆಮಾಡಿರುವುದನ್ನು ನೀವು ಕಂಡುಕೊಳ್ಳಬಲ್ಲಿರಿ.

ಸತ್ಯವನ್ನು ಪಡೆಯಬೇಕಾದರೆ ಇರುವುದೊಂದೇ ಷರತ್ತು. ಅದೇನೆಂದರೆ ಸತ್ಯದ ಅರಿವಾದ ಬಳಿಕ ಅದನ್ನು ಸ್ವೀಕರಿಸಲು ಯಾವುದೇ ವಿಷಯವು ಅಡ್ಡಿಯಾಗಕೂಡದು. ಆದರೆ ಅನೇಕ ಸಂದರ್ಭಗಳಲ್ಲಿ ಮನುಷ್ಯನಿಗೆ ಈ

ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುವುದೇ ಇಲ್ಲ. ಅವನ ಬಾಳಿನಲ್ಲಿ ಪದೇ ಪದೇ ಅಡ್ಡಿ–ಆತಂಕಗಳು ಎದುರಾಗುತ್ತಲೇ ಇರುವವು.

ಕೆಲವೊಮ್ಮೆ ಯಾರಾದಾದರೂ ವ್ಯಕ್ತಿತ್ವವು ಸತ್ಯವನ್ನು ಸ್ವೀಕರಿಸುವುದರಿಂದ ಕೆಲವರನ್ನು ತಡೆಹಿಡಿದರೆ, ಇನ್ನು ಕೆಲವರಿಗೆ ಅವರ ಸ್ವ–ಹಿತಾಸಕ್ತಿಯು ಸತ್ಯದ ದಾರಿಯಲ್ಲಿ ಹೋಗದಂತೆ ಅವರನ್ನು ತಡೆಹಿಡಿಯುವುದು. ಇಂತಹ ದೌರ್ಬಲ್ಯಗಳೇ ಹೆಚ್ಚಿನ ಜನರನ್ನು ಸನ್ಮಾರ್ಗವನ್ನು ಸ್ವೀಕರಿಸದಂತೆ ತಡೆಹಿಡಿದಿವೆ. ಜನರ ಪಾಲಿಗೆ ಸನ್ಮಾರ್ಗದ ಬಾಗಿಲು ತೆರೆದಿದ್ದರೂ ಅದರೊಳಗೆ ಪ್ರವೇಶಿಸಿದಂತೆ ಅವರು ತಮ್ಮನ್ನು ತಾವು ವಂಚಿತಗೊಳಿಸಿಕೊಂಡಿರುವರು.

ಅಬೂಜಹಲ್ ನಿಗೆ, 'ಸತ್ಯ ಸ್ವೀಕಾರ ಮಾಡುವುದರಿಂದ ಎಲ್ಲಿ ತನ್ನ ನಾಯಕತ್ವಕ್ಕೆ ಧಕ್ಕೆ ಉಂಟಾಗುವುದೇನೋ' ಎಂಬ ಅವನ ಸ್ವ–ಹಿತಾಸಕ್ತಿಯೇ ಆತನನ್ನು ಸನ್ಮಾರ್ಗವನ್ನು ಸ್ವೀಕರಿಸದಂತೆ ತಡೆಹಿಡಿಯಿತು. ತಾಯಿಫ್ನ ಜನರಿಗೆ, 'ಪ್ರವಾದಿವರ್ಯರು ಅವರ ಇತರ ಸಮಕಾಲೀನ ನಾಯಕರಿಗೆ ಆಸ್ತಿ–ಅಂತಸ್ತಿನಲ್ಲಿ ಸರಿಸಮಾನರಾಗಿಲ್ಲ' ಎಂಬ ಭಾವನೆಯು ಅವರನ್ನು ಸತ್ಯವನ್ನು ಸ್ವೀಕರಿಸುವುದರಿಂದ ತಡೆಹಿಡಿಯಿತು. 'ಮುಹಮ್ಮದರನ್ನು ಒಬ್ಬ ಪ್ರವಾದಿ ಎಂಬ ನೆಲೆಯಲ್ಲಿ ಸ್ವೀಕರಿಸುವುದರಿಂದ ತಮ್ಮ ಶ್ರೇಷ್ಠತೆಗೆ ಅಡ್ಡಿಯಾಗುವುದು' ಎಂಬ ಭಾವವು ಯಹೂದಿಗಳನ್ನು ಸತ್ಯದ ದಾರಿಯಲ್ಲಿ ಮುನ್ನೆಡೆಯದಂತೆ ಮಾಡಿತು. ರೋಮಿನ ರಾಜ ಹರ್ಕ್ಯುಲೆಸ್ (Heraclius) ನಿಗೆ ಇಸ್ಲಾಂ ಎಂಬುದು ದೇವನಿಂದಲೇ ಬಂದ ನೈಜ ಧರ್ಮವೆಂಬುದು ಮನದಟ್ಟಾದರೂ, ತನ್ನ ಜನಾಂಗ ನನ್ನೊಂದಿಗಿನ ಸಂಬಂಧವನ್ನು ಕಡಿದು ತನಗೆ ಬಹಿಷ್ಕಾರ ಹಾಕಬಹುದೆಂಬ ಭೀತಿಯು ಆತನನ್ನು ಇಸ್ಲಾಮ್ ಸ್ವೀಕರಿಸಿದಂತೆ ತಡೆಯಿತು. ಈ ಪೈಕಿ ಪ್ರತಿಯೊಬ್ಬರಿಗೂ ಪ್ರವಾದಿವರ್ಯರು ತಂದ ಸಂದೇಶವು ಪರಮಸತ್ಯವೆಂದು ಗೊತ್ತಿದ್ದರೂ, ಮೇಲೆ ಪ್ರಸ್ತಾಪಿಸಿದಂತೆ ಯಾವುದಾದರೊಂದು ವಿಷಯವು ಅವರು ಸತ್ಯವನ್ನು ಸ್ವೀಕರಿಸಿದಂತೆ ತಡೆಹಿಡಿಯಿತು.

ಸತ್ಯವನ್ನು ಸ್ವೀಕರಿಸ ಬಯಸುವವರು ಮೊತ್ತ ಮೊದಲಿಗೆ ತ್ಯಾಗ-ಮನೋಭಾವದವರಾಗಿರಬೇಕು. ಅವರು ತಮ್ಮ ಸ್ವ-ಹಿತಾಸಕ್ತಿಯನ್ನು ಬದಿಗೊತ್ತಿ ಸತ್ಯವನ್ನು ಎದೆಗಪ್ಪಿಕೊಳ್ಳುವವರಾಗಿರಬೇಕು. ಸತ್ಯವು ಸತ್ಯವೆಂದು ಅರಿವಾದ ಬಳಿಕವೂ ಸ್ವ-ಹಿತಾಸಕ್ತಿಗಂಟಿಕೊಂಡು ಜೀವಿಸುವವರಲ್ಲಿ ತ್ಯಾಗ ಮನೋಭಾವ ಉಂಟಾಗಲೆಂದೂ ಸಾಧ್ಯವಿಲ್ಲ.

# ದೇವನ ಸಾಮೀಪ್ಯವನ್ನು ಪಡೆದವರು

ದೇವನ ಸಾಮೀಪ್ಯವನ್ನು ಅವನ ನೈಜ ಮಹಿಮೆಯೊಂದಿಗೆ ಅನುಭವಿಸಿದ–ವರು ಬಹುಶಃ ಈ ಭೂಮಿಯಲ್ಲಿ ಬಹಳ ವಿರಳವಿರಬಹುದು. ನಿಜವಾದ ಅರ್ಥದಲ್ಲಿ ದೇವಸ್ಮರಣೆಯೆಂಬುದು ದೇವನ ಸಾಮೀಪ್ಯವನ್ನು ಅನುಭವಿಸುವುದಾಗಿದೆ. ಈಗಂತೂ ನಾವೆಲ್ಲಿ ನೋಡಿದರೂ ಆರಾಧನೆಯ ಹೆಸರಿನಲ್ಲಿ ಆಚಾರಗಳಷ್ಟೇ ಕಣ್ಣಿಗೆ ಕಾಣುತ್ತವೆ. ನೈಜ ದೇವಾರಾಧನೆಯೆಂಬುದು ಎಷ್ಟು ಅಪರೂಪವಾಗಿದೆಯೆಂದರೆ, ಅದೆಲ್ಲೋ ಅಸ್ತಿತ್ವದಲ್ಲಿದೆ ಎಂದಷ್ಟೇ ನಮಗೀಗ ಹೇಳಲು ಸಾಧ್ಯ.

ಇಂದು ಇಡೀ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಇಸ್ಲಾಮ್ ಕಾಣಿಸುತ್ತಿದೆ. ಆದರೆ, ದೇವನ ನಾಮ ಉಚ್ಚರಿಸುತ್ತಲೇ ರೋಮಾಂಚನಗೊಳ್ಳುವ, ದೇವಭಯದಿಂದ ಕಂಪಿಸುತ್ತಲಿರುವ ಆ ನೈಜ ಮುಸ್ಲಿಮರು ಮಾತ್ರ ದೇವನ ಈ ಭೂಮಿಯಲ್ಲೆಲ್ಲೂ ಕಾಣಸಿಗುತ್ತಿಲ್ಲ. ಆ ನೈಜ ಮುಸ್ಲಿಮನಾರೆಂದರೆ, ಆತ ಕುರ್ ಆನ್ ಓದುತ್ತಲೇ, "ದೇವಾ!, ನನ್ನ ಮೇಲೆ ನಿನ್ನ ಅನುಗ್ರಹ ಅದೆಷ್ಟು ದೊಡ್ಡದು!, ನೀನೇದಾರೂ ನನ್ನ ಮಾರ್ಗದರ್ಶನಕ್ಕೆ ಕುರ್ ಆನ್ ಮೂಲಕ ವ್ಯವಸ್ಥೆ ಮಾಡದಿರುತ್ತಿದ್ದರೆ, ನಾನಂತೂ ಅಜ್ಞಾನದಲ್ಲೇ ಅಲೆದಾಡುತ್ತಿದ್ದೆ." ಆತ ಎಂತಹವನೆಂದರೆ, ಪ್ರವಾದಿವರ್ಯರ ಜೀವನ ಶೈಲಿಯ ಮಾದರಿಯನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡು, ಆ ಮೂಲಕ ಆವಿಷ್ಕಾರದ ಖುಷಿಯನ್ನು ಅನುಭವಿಸುತ್ತಾ, "ದೇವನು ತನ್ನ ಪ್ರವಾದಿಯ ಮೂಲಕ ನಮಗೆ ಬದುಕುವ ಎಷ್ಟೊಂದು ಉತ್ತಮ ಶೈಲಿಯನ್ನು ಕಲಿಸಿಕೊಟ್ಟನು." ಎಂದು ಕೃತಜ್ಞಭಾವವನ್ನು ತನ್ನೊಳಗೆ ತಂದುಕೊಳ್ಳುವನು.

ಪ್ರವಾದಿವರ್ಯರ ಜೀವನಶೈಲಿಯನ್ನು ಶಾಶ್ವತ ಪ್ರಕಾಶವನ್ನು ಸೂಸುವ ದೀವಟಿಗೆಯಂತೆ ನಮಗಾಗಿಯೇ ದೇವನು ಇತಿಹಾಸದ ಪುಟದಲ್ಲಿ ಸುರಕ್ಷಿತವಾಗಿಟ್ಟನು." ಅವನು ಎಂತಹವನೆಂದರೆ, ಅವನು ತನ್ನ ಶಿರವನ್ನು

ಸಾಷ್ಟಾಂಗದಲ್ಲಿಟ್ಟಾಗ ದೇವನ ಕರುಣೆಯ ಸಾಗರದಲ್ಲಿ ತೇಲುತ್ತಿರುವ ಅದ್ಭುತ ಅನುಭವವನ್ನು ತನ್ನದಾಗಿಸಿಕೊಳ್ಳುವನು. ಅವನು ಆಹಾರವನ್ನು ಸೇವಿಸುವಾಗ, 'ತನ್ನ ಪಾಲಿನ ಆಹಾರವನ್ನು ದೇವನು ಅದೆಷ್ಟು ಕ್ರಮಬದ್ಧವಾಗಿ ತಲುಪಿಸುತ್ತಿರುವನು' ಎಂಬ ಕೃತಜ್ಞಾಭಾವದಿಂದ ಅವನ ಇಡೀ ಅಸ್ತಿತ್ವವು ತಲೆದೂಗುವುದು. ಆತ ನೀರನ್ನು ಕುಡಿಯುವಾಗಲೂ, 'ದೇವಾ!, ನೀನು ನನಗೆ ಈ ಜೀವಜಲವನ್ನು ಕುಡಿಸದೇ ಹೋದರೆ ನನಗೆ ಇದನ್ನು ಕುಡಿಯಲು ಸಾಧ್ಯವಿರುತ್ತಿರಲಿಲ್ಲ. ನೀನೇದಾರೂ ಭೂಮಿಯಲ್ಲಿರುವ ಜೀವಜಲವನ್ನು ಇಂಗಿಸಿ ಬಿಟ್ಟರೆ ನಿನ್ನ ಹೊರತು ಬೇರಾರು ತಾನೇ ಅದನ್ನು ವಾಪಾಸ್ಸು ಕೊಡಿಸಬಲ್ಲರು?' ಎಂದೆಣಿಸುತ್ತಾ ಅವನು ಭಾವುಕನಾಗಿ ಅಶ್ರುಧಾರೆ ಹರಿಸುವನು.

ಅಕಟಾ!, ಜನರು ತಾವು ದೇವನಿಗೆ ಬಹಳ ಸಮೀಪವಿದ್ದೇವೆಂದು ಭಾವಿಸುತ್ತಾರೆ. ಆದರೆ, ವಾಸ್ತವದಲ್ಲಿ ದೇವನಿಂದ ಬಹುದೂರ ಹೋಗಿರುವರೆಂಬುದು ಅವರು ತಿಳಿದಿಲ್ಲ. ಅವರು ದೇವನ ನಾಮವನ್ನುಚ್ಚರಿಸಿದಾಗಲೂ, ಅವರಲ್ಲಿ ದೇವನ ಕುರಿತ ಯಾವುದೇ ಕೃತಜ್ಞಾಭಾವವಾಗಲೀ, ಅವರ ತುಟಿಗಳಲ್ಲಿ ದೈವಿಕ ಮಾಧುರ್ಯದ ಸಿಹಿಯಾಗಲಿ ಒಂದಿನಿತೂ ಕಾಣಿಸುವುದಿಲ್ಲ. ಅವರು, 'ತಾವು ದೇವನನ್ನು ಪಡೆದ ಸೌಭಾಗ್ಯವಂತರು' ಎಂದು ಹೇಳುತ್ತಿರುತ್ತಾರೆ, ಆದರೆ ದೇವನ ತೋಟದ ಸುಗಂಧವನ್ನು ಅವರು ಅನುಭವಿಸುತ್ತಿಲ್ಲ. ಅವರು ಬೆಳಗು ಬೈಗುಗಳಲ್ಲಿ ದೇವನ ಹೆಸರಿನ ಜಪವನ್ನು ಮಾಡುತ್ತಿದ್ದರೂ, ದೇವಪ್ರಕಾಶದ ಸಾಗರದಲ್ಲಿ ಮಿಂದೆದ್ದ ಯಾವ ಕುರುಹೂ ಅವರ ದೇಹದಲ್ಲಿ ತೋರುವುದಿಲ್ಲ. ಅವರು, 'ದೇವನ ಸ್ವರ್ಗವು ಕೇವಲ ತಮಗಾಗಿ ಮೀಸಲು' ಎಂದೇ ಭಾವಿಸುತ್ತಾರೆ. ಆದರೆ, ದೇವನ ಸ್ವರ್ಗೋದ್ಯಾನದ ತಂಗಾಳಿಯ ತಂಪನ್ನು ಪಡೆದ, ಅದರ ಕಂಪನ್ನು ಆಸ್ವಾದಿಸಿದ ಯಾವ ಚಿಹ್ನೆಯೂ ಅವರಲ್ಲಿ ಗೋಚರಿಸುವುದಿಲ್ಲ.

ದೇವನ ಸಾಮೀಪ್ಯ ದೊರೆತ ಸೌಭಾಗ್ಯವಂತರು ನಾವು ಎನ್ನುವ ಮಂದಿಯ ತನು–ಮನದಲ್ಲಿ ದೇವಸ್ಮರಣೆಯಿಂದ ರೋಮಾಂಚನವುಂಟು (Thrill) ಮಾಡಲಸಾಧ್ಯವಾದ ಅವರೊಳಗಿನ ದೇವವಿಶ್ವಾಸವೆಷ್ಟು ವಿಚಿತ್ರವಲ್ಲವೇ?. ತನ್ನ ಜೇಬಿನೊಳಗೆ ಸ್ವರ್ಗದ ಟಿಕೆಟನ್ನಿಟ್ಟುಕೊಂಡು ತಿರುಗುವ ವ್ಯಕ್ತಿಯ ಮಾತು–ವರ್ತನೆಯಲ್ಲಿ ಸ್ವರ್ಗದ ನಿವಾಸಿಯಾಗುವ ಯಾವುದೇ ಗುಣ–ಲಕ್ಷಣಗಳು ಗೋಚರಿಸದಿರುವುದು ಎಷ್ಟೊಂದು ದೊಡ್ಡ ವಿಪರ್ಯಾಸವಲ್ಲವೇ?. ಪರಲೋಕದ ಶಾಶ್ವತ ಸ್ವರ್ಗದ ವಾರೀಸುದಾರರಾಗುವ ಜನರು ನಶ್ವರ ಜಗತ್ತಿನ ಬೆಡಗು–ಬಿನ್ನಾಣಗಳಿಗೆ ಮನಸೋತು ತಮ್ಮ ಆಸಕ್ತಿ, ಶ್ರಮವನ್ನೆಲ್ಲಾ ಈ ಜಗತ್ತಿಗಾಗಿಯೇ ವ್ಯಯಿಸುತ್ತಿರುವುದು ಅದೆಷ್ಟು ದೊಡ್ಡ ಸೋಜಿಗದ ಸಂಗತಿಯಲ್ಲವೇ?.

# ದೇವನಾವಿಷ್ಕಾರ

"ನಮ್ಮ ರಾಕೆಟ್ ಚಂದ್ರದಂಗಳಕ್ಕೆ ಹೋದರೂ ಅದಕ್ಕೆ ದೇವನ ದರ್ಶನವಾಗಲಿಲ್ಲ" ಎಂದು ರಷ್ಯಾದ ಮಾಜಿ ಅಧ್ಯಕ್ಷ ಹಾಗೂ ಕಮ್ಯೂನಿಷ್ಟ್ ವಾದಿ ನಿಕಿತಾ ಕ್ರುಶ್ಚೇವ್ (Nikita Khrushchev) ಒಮ್ಮೆ ವ್ಯಂಗ್ಯವಾಗಿ ಹೇಳಿದ್ದರು. ಆದಾಗ್ಯೂ, ಇಂದಿನ ಜಾತ್ಯಾತೀತರೆಂದು ಹೇಳಿಕೊಳ್ಳುವ ಎಲ್ಲರಲ್ಲಿಯೂ ಇದೇ ತೆರನಾದ ಮನಸ್ಥಿತಿ ಮನೆಮಾಡಿದೆ.

ಪ್ರಸ್ತುತ ಆಧುನಿಕ ಯುಗದಲ್ಲಿ ನಿಸರ್ಗದ ಕುರಿತಾದ ಅನೇಕ ದೊಡ್ಡ ಮಟ್ಟದ ಸಂಶೋಧನೆಗಳನ್ನು ಮಾಡಲಾಗಿದೆ. ಅನೇಕ ಮಂದಿ ವಿಜ್ಞಾನಿಗಳು ಖಗೋಳ ಶಾಸ್ತ್ರದಿಂದ ಹಿಡಿದು ಭೂ–ವಿಜ್ಞಾನದ ತನಕ ಸಂಶೋಧನೆಯಲ್ಲಿ ತಮ್ಮ ಇಡೀ ಆಯಸ್ಸನ್ನು ವ್ಯಯಿಸಿದ್ದಾರೆ. ಇದರ ಹೊರತಾಗಿಯೂ ಅವರು ಬರೆದ ಪುಸ್ತಕಗಳನ್ನು ಓದಿದಾಗ, ಅವರ ಪೈಕಿ ಯಾರಿಗೂ ದೇವಾಸ್ತಿತ್ವದ ಕುರಿತು ಎಳ್ಳಷ್ಟೂ ಅನುಭವವಾಗಿಲ್ಲ ಎಂಬುದು ಸೋಜಿಗ. ಅವರೆಲ್ಲರೂ ಭೂಮಿಯಿಂದ ಹೊರಟು ಆಗಸಲೋಕಕ್ಕೂ ಪಯಣಿಸಿದರೂ ದೇವನ ಕುರಿತು ಏನನ್ನೂ ಅವರಿಗೆ ಅರಿಯಲು ಸಾಧ್ಯವಾಗಲಿಲ್ಲ. ಅವರು ಮೌನದಲೆಗಳಲ್ಲೂ ಶಬ್ದ ತರಂಗಗಳನ್ನು ಕಂಡುಕೊಂಡರು. ಆದರೂ, ದೇವನ ಧ್ವನಿಯನ್ನು ಅವರ ಕಿವಿಗಳು ಆಲಿಸದಾದವು. ಅವರು ಕಂಡುಹಿಡಿದ ಟೆಲಿಸ್ಕೋಪುಗಳು ಮತ್ತು ಸೂಕ್ಷ್ಮ ದರ್ಶಕಗಳು ಮಾನವನು ಇತಿಹಾಸದಲ್ಲೆಂದೂ ನೋಡಿರದ ಸೂಕ್ಷಾತಿಸೂಕ್ಷ್ಮ ವಸ್ತುಗಳನ್ನು ಅವರ ಕಣ್ಣಮುಂದೆ ತಂದವು. ಆದರೆ ದೇವನ ಈ ಭೂಮಿಯಲ್ಲಿ ಎಲ್ಲೆಂದರಲ್ಲಿ ತಿರುಗಾಡುವ ದೇವಚರರೊಡನೆ ಕೈಕುಲುಕುವ ಸೌಭಾಗ್ಯ ಅವರದಾಗಲಿಲ್ಲ.

ಇದಕ್ಕಿಂತಲೂ ಸೋಜಿಗದ ಸಂಗತಿಯೇನೆಂದರೆ ಮುಸ್ಲಿಮ್ ಮುಖಂಡರು ಹಾಗೂ ಚಿಂತಕರದೂ ಹೆಚ್ಚುಕಮ್ಮಿ ಇದೇ ಸ್ಥಿತಿಯಾಗಿದೆ. ಯಾವ ರೀತಿ ಜಾತ್ಯಾತೀತ

ಚಿಂತಕರು ಜಗತ್ತಿನ ಬಾಹ್ಯರೂಪವನ್ನಷ್ಟೇ ಕಂಡುಕೊಂಡು, ಆಂತರಿಕ ವಾಸ್ತವಿಕತೆಯಿಂದ ವಂಚಿತರಾದರೋ, ಇದೇ ರೀತಿ ಮುಸ್ಲಿಮ್ ಚಿಂತಕರೂ ಇಸ್ಲಾಮಿನ ಬಾಹ್ಯ ಆಚರಣೆಯಲ್ಲೇ ತೃಪ್ತರಾದರೇ ವಿನಃ ಧರ್ಮದ ನೈಜ ಆಂತರಿಕ ಸಂದೇಶಗಳನ್ನು ಅರಿಯವುದರಲ್ಲಿ ಅವರೆಲ್ಲರೂ ವಿಫಲರಾದರು.

ನೀವು ಇಸ್ಲಾಮೀ ಚಿಂತಕರು ಬರೆದ ಪುಸ್ತಕಗಳನ್ನು, ಅವರ ಜೀವನ ಚರಿತ್ರೆಗಳನ್ನು ಓದಿದಲ್ಲಿ ಅಲ್ಲಿ ನಿಮಗೆ ಇಸ್ಲಾಮಿನ ನೈಜ ಸಂದೇಶದ ಹೊರತಾಗಿ ಬೇರೆಲ್ಲವೂ ದೊರೆಯುವುದು. ಆ ಪುಸ್ತಕಗಳಲ್ಲಿ ವ್ಯಕ್ತಿಗಳೊಂದಿಗಿನ ಒಡನಾಟದ, ಅವರೊಂದಿಗಿನ ಭೇಟಿಯ, ಅವರೊಂದಿಗಿನ ಸಂಬಂಧ ಪ್ರಸ್ತಾಪವಿರುತ್ತದೆ. ಆದರೆ, ದೇವನ ಜೊತೆಗೆ ಸಂಬಂಧ ಸ್ಥಾಪಿಸುವ, ದೇವನೊಂದಿಗಿನ ಭೇಟಿಯ ಹಾಗೂ ದೇವಮಹಿಮೆಯ ಕುರಿತು ಯಾವುದೇ ಪ್ರಸ್ತಾಪ ನಿಮಗೆ ದೊರಕುವುದಿಲ್ಲ. ಅಲ್ಲಿ ಅವರು ನಿಮಗೆ ಮಾನವ ಸಾಮರ್ಥ್ಯ, ಅವನ ಕೌಶಲ್ಯಗಳನ್ನು ಮಹಾದ್ಭುತದಂತೆ ತೋರಿಸುತ್ತಾರೆ. ಲೌಕಿಕ ಘಟನೆಗಳನ್ನು ಲೀಲಾಜಾಲವಾಗಿ ತೋರಿಸುವ ಮೂಲಕ ನಿಮ್ಮನ್ನವರು ರೋಮಾಂಚಿತಗೊಳಿಸುತ್ತಾರೆ. ಆದರೆ ಈ ಚಿಂತಕರಿಗೆ ಪಾರಲೌಕಿಕ ಘಟನೆಗಳು, ಬೆಳಗು-ಬೈಗುಗಳಲ್ಲಿ ಕಾಣಬರುವ ದೇಮಮಹಿಮೆಯ ಅತ್ಯದ್ಭುತಗಳು ಕಣ್ಣಿಗೆ ಕಾಣಿಸದಿರುವುದು, ಅದರಿಂದ ಅವರ ಮೈ ನವಿರಳೇದಿರುವುದು ಮಹಾಸೋಜಿಗವೇ ಸರಿ.

ಈ ಚಿಂತಕರು ಸಮುದಾಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಗಂಟೆಗಟ್ಟಲೆ ನಿರ್ಗರಳ ಭಾಷಣವನ್ನು ಬಿಗಿಯಬಲ್ಲರು. ಆದರೆ ಸೃಷ್ಟಿಕರ್ತನ ಮಹಿಮೆಯ ಕುರಿತಾಗಲೀ, ಮನುಕುಲದ ಮೇಲೆ ಅವನ ಅದ್ಭುತ ಕೊಡುಗೆಗಳ ಕುರಿತಾಗಲೀ ಇವರ ಲೇಖನಿಗಳು ಬರೆಯುವುದಿಲ್ಲ, ಇದರ ಕುರಿತು ಇವರ ಬಾಯಿಂದ ಮಾತುಗಳೂ ಹೊರಡುವುದಿಲ್ಲ. ಮಾನವರ ಆವಿಷ್ಕಾರಗಳಲ್ಲಿ

ಮಹಾಪವಾಡಗಳನ್ನು ಅರಸುವ ಇವರು, ದೇವನಾವಿಷ್ಕಾರದ ಕುರಿತು ಯಾವುದೇ ಗಂಧಗಾಳಿಯಿಲ್ಲದ ಅಜ್ಞಾನಿಗಳಂತೆ ವರ್ತಿಸುತ್ತಾರೆ. ದೇವನಾವಿಷ್ಕಾರದ ಅತ್ಯದ್ಭುತಗಳನ್ನು ನೋಡಿಯೂ ಇವರ ಹೃದಯಗಳನ್ನು ಕಂಪಿಸುವುದಿಲ್ಲ. ಇವರು ರೋಮಾಂಚಿತಗೊಳ್ಳುವುದಿಲ್ಲ. ಇವರ ಮೈ ನವಿರೇಳುವುದಿಲ್ಲ. ಇದೆಂತಹ ವಿಚಿತ್ರ!.

# ವಿಶ್ವಾಸ ವರ್ಧನೆ

ವಿಜ್ಞಾನಿಯೋರ್ವ "ಪ್ರಕೃತಿಯ ಅಧ್ಯಯನವೇ ನನ್ನ ಪಾಲಿನ ಮಹಾಧರ್ಮ. ನಾನು ಯಾವ ದಿನ ಸಂಶೋಧನೆಯಲ್ಲಿ ನನ್ನನ್ನು ನಾನು ತೊಡಗಿಸಿಕೊಳ್ಳುವುದಿಲ್ಲವೋ ಆ ದಿನ ಸಂಪೂರ್ಣ ವ್ಯರ್ಥವಾಯಿತೆಂದೇ ಭಾವಿಸುತ್ತೇನೆ." ಎಂದಿರುವರು. ಸೃಷ್ಟಿಗಳಲ್ಲಿ ತಲ್ಲೀನನಾದ ವ್ಯಕ್ತಿಯ ಸ್ಥಿತಿಯೇ ಹೀಗಾದರೇ ಖುದ್ದು ಸೃಷ್ಟಿಕರ್ತನಲ್ಲಿ ತಲ್ಲೀನನಾಗಿ ಜೀವಿಸುತ್ತಿರುವ ವ್ಯಕ್ತಿಯ ಆಂತರಿಕ ಸ್ಥಿತಿ ಹೇಗಿರಬಹುದು?. ಯಾವ ರೀತಿ ದೇವನ ಸೃಷ್ಟಿಗಳ ವಿಷಯದಲ್ಲಿ ತಲ್ಲೀನನಾಗಿರುವ ವ್ಯಕ್ತಿಯೋರ್ವ ದಿನಂಪ್ರತಿ ಒಂದಿಲ್ಲೊಂದು ವಿಷಯವನ್ನು ಆವಿಷ್ಕರಿಸುತ್ತಾನೋ, ಅದೇ ರೀತಿ ಸತ್ಯವಿಶ್ವಾಸಿಯು ತನ್ನ ವಿಶ್ವಾಸವೃದ್ಧಿಗೆ ಹೇತುವಾಗುವ ದೇವನ ಬಗ್ಗೆ ಒಂದಿಲ್ಲೊಂದು ವಿಷಯವನ್ನು ತಿಳಿಯುತ್ತಲೇ ಹೋಗುತ್ತಾನೆ.

ಸತ್ಯವಿಶ್ವಾಸವು ದೇವಾನ್ವೇಷಣೆಗಿರುವ ಮತ್ತೊಂದು ಹೆಸರಾಗಿದೆ. ದೇವನು ನಿರಂತರ. ಅವನೊಂದು ಅಂತ್ಯವಿಲ್ಲದ ವಾಸ್ತವ. ಹಾಗಾಗಿಯೇ ಅವನ ಕುರಿತ ಅನ್ವೇಷಣೆಯೂ ನಿರಂತರ. ಅವನ ಕುರಿತ ಅನ್ವೇಷಣೆಗೂ ಮಿತಿಯೆಂಬುದಿಲ್ಲ. ವ್ಯಕ್ತಿಯೊಬ್ಬನ ವಿಶ್ವಾಸದಲ್ಲಿ ವೃದ್ಧಿಯಾಗದೇ ಹೋದಲ್ಲಿ, ಅದು ಆ ವ್ಯಕ್ತಿಯಲ್ಲಿ ಮನೆಮಾಡಿರುವ ನಿರ್ಲಕ್ಷ್ಯದ ಪರಿಣಾಮವಾಗಿದೆ. ಅಂತಹ ನಿರ್ಲಕ್ಷ್ಯ ಮನೋಭಾವವುಳ್ಳ ವ್ಯಕ್ತಿಯೊಳಗಿರುವ ವಿಶ್ವಾಸವನ್ನು ನಿಜವಾದ ಅರ್ಥದಲ್ಲಿ ಸತ್ಯವಿಶ್ವಾಸ (ಈಮಾನ್) ಎಂದು ಕರೆಯಲಾಗದು.

ಯಾರ ಮನಸ್ಸು ದೇವನ ಕಡೆಗೆ ಕೇಂದ್ರಿಕೃತವಾಗಿದೆಯೋ, ಯಾರ ಹೃದಯವು ದೇವನ ಧ್ಯಾನದಲ್ಲಿ ನಿರತವಾಗಿದೆಯೋ, ಯಾರಿಗೆ ದೇವನ ಹೊಸ ಮಹಿಮೆಗಳ ನಿದರ್ಶನಗಳು ಕಣ್ಣೆದುರು ಗೋಚರಿಸುತ್ತವೆಯೋ, ಅಂತಹ ವ್ಯಕ್ತಿಯ ವಿಶ್ವಾಸವು ವೃದ್ಧಿಯಾಗುತ್ತಲೇ ಇರುವುದು. ದೇವನ ನಿದರ್ಶನಗಳಿಗೆ, ಅವನ

ಮಹಿಮೆಗಳಿಗೆ ಹೇಗೆ ಕೊನೆಯಿಲ್ಲವೋ, ಅದೇ ತೆರನಾಗಿ ದೇವನನ್ನು ಅರಿಯುವ ಸಲುವಾಗಿ ಆಧ್ಯಾತ್ಮಿಕ ಪಯಣವನ್ನು ಕೈಗೊಂಡ ಸತ್ಯವಿಶ್ವಾಸಿಯ ಪಯಣಕ್ಕೂ ಮಿತಿಯೆಂಬುದಾಗಲೀ, ಕೊನೆಯೆಂಬುದಾಗಲೀ ಇರಲಾರದು.

ವ್ಯಕ್ತಿಯೋರ್ವನ ಆಧ್ಯಾತ್ಮಿಕ ಪಯಣದಲ್ಲಿ ಸಿಗುವ ಪ್ರತಿಯೊಂದು ಹೊಸ ಜ್ಞಾನ, ಹೊಸ ಅರಿವು ಎಂತಹ ಅದ್ಭುತ ದೈವಿಕ ಅನುಭೂತಿಯಾಗಿರುತ್ತೆಂದರೆ ಆ ವ್ಯಕ್ತಿಯು ಇದಕ್ಕಿಂತ ಮುಂಚೆ ಇಂತಹ ಅದ್ಭುತ ಅನುಭೂತಿಯನ್ನು ಪಡೆದಿರಲಾರನು. ಇಂತಹ ಅದ್ಭುತ ದೇವಾನುಭೂತಿ ಪಡೆದ ವ್ಯಕ್ತಿಯ ಬಾಯಿಯಲ್ಲಿ ಅವನೆಂದೂ ಯೋಚಿಸಿರದ ಪ್ರಾರ್ಥನೆಯ ವಾಕ್ಯಗಳು ತನ್ನಿಂತಾನೆ ಹೊರಡುವುದು. ಅವನ ಮನದಲ್ಲಿ ಹಿಂದೆದೂ ಸುಳಿಯದ ಯುಕ್ತಿಯ ರಹಸ್ಯವನ್ನಾತ ಅರಿಯತೊಡಗುವನು. ಕೆಲವೊಮ್ಮೆ ಆತ ಹಿಂದೆಂದೂ ಪಡೆದಿರದ ದೇವಸಾಮೀಪ್ಯದ ಅತ್ಯದ್ಭುತ ಅನುಭೂತಿಯನ್ನಾತ ಪಡೆಯುತ್ತಾನೆ. ಅವನಿಗಾಗುವ ಈ ಅತ್ಯದ್ಭುತ ಅನುಭೂತಿಯನ್ನು, ಆತ ಎಷ್ಟೇ ಹರಸಾಹಸ ಪಟ್ಟರೂ ಪದಗಳಲ್ಲಿ ವಿವರಿಸಲು ಮಾತ್ರ ಅಸಾಧ್ಯವಾದ ಮಾತು.

# ಎಲ್ಲವೂ ಅದ್ಭುತ

ಇಂದು ನಾವು ಮಳೆ ಹಾಗೂ ಬೇಸಿಗೆಗಾಲದಲ್ಲಿ ಉಪಯೋಗಿಸುವ ಛತ್ರಿಯನ್ನು (Umbrella) ಮೊತ್ತಮೊದಲು 1749ರಲ್ಲಿ ಲಂಡನ್ ನಲ್ಲಿ ತಯಾರಿಸಲಾಯಿತು. ಆ ವೇಳೆ ಅಲ್ಲಿನ ಪ್ರಜೆಯೋರ್ವ ತನಗಾದ ಅನುಭವವನ್ನು ಈ ಪದಗಳಲ್ಲಿ ವಿವರಿಸಿದ್ದನು: "When opened it was like a small tent, and when shut it was all curiously jointed and would fold up to the length of a man's hand."

"ಇದನ್ನು ತೆರೆದಾಗ ಇದೊಂದು ಸಣ್ಣ ಡೇರೇಯೇನೋ ಎಂಬಂತೆ ಭಾಸವಾಗುತ್ತದೆ. ಮತ್ತದನ್ನು ಮಡಚಿದಾಗ ಮನುಷ್ಯನ ಕೈ ಅಳತೆಗೆ ಸಮನಾಗಿ ಮಡಚಿಕೊಳ್ಳುತ್ತದೆ. ನಿಜಕ್ಕೂ ಇದೊಂದು ಅದ್ಭುತ ವಸ್ತು."

(ಟೈಮ್ಸ್ ಆಫ್ ಇಂಡಿಯಾ, 26 ಮೇ, 1984)

20ನೆಯ ಶತಮಾನದ ಆದಿಯಲ್ಲಿ ಭಾರತದ ಹಳ್ಳಿಯೊಂದರಲ್ಲಿ ಮೊತ್ತಮೊದಲ ಬಾರಿಗೆ ಹ್ಯಾಂಡ್ ಪಂಪ್ ಒಂದನ್ನು ಅಳವಡಿಸಲಾಯಿತು. ಅದಕ್ಕೆ ಚಾಲನೆ ನೀಡಿ, ನೀರು ಹರಿಯುವಂತೆ ಮಾಡಿದಾಗ ಹಳ್ಳಿಯ ಹೆಂಗಸಿನ ಉದ್ಗಾರ ಹೀಗಿತ್ತು: "ಮನುಷ್ಯ ಕೇವಲ ಮರಣವನ್ನಷ್ಟೇ ಗೆಲ್ಲದಾದ"

ಅರ್ಥಾತ್ ಮನುಷ್ಯ ಎಲ್ಲವನ್ನು ಸಾಧಿಸಬಲ್ಲ. ಆದರೆ ಅವನಿಗೊದಗಿಬರುವ ಮರಣವನ್ನು ಮಾತ್ರ ಇಲ್ಲಿಯ ತನಕ ಅವನ ಕೈ ಯಲ್ಲಿ ಗೆಲ್ಲಲಾಗಲಿಲ್ಲ. 200 ವರ್ಷಗಳ ಮುಂಚೆ ಮನುಷ್ಯನ ಪಾಲಿಗೆ ಛತ್ರಿ, ಹ್ಯಾಂಡ್ ಪಂಪ್ ಕೂಡ ಅತ್ಯದ್ಭುತ ವಸ್ತುಗಳಾಗಿದ್ದವು. ಆದರಿಂದು ಮನುಷ್ಯ ಛತ್ರಿ ಹಾಗೂ ಹ್ಯಾಂಡ್ ಪಂಪ್ ಗಳನ್ನು ನೋಡುವಾಗ ಮೊದಲಿನಂತೆ ಅವನೊಳಗಿಂದ ಆಶ್ಚರ್ಯಕರ ಉದ್ಗಾರ ಹೊರಹೊಮ್ಮುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಶತಮಾನದಿಂದಲೂ ಅದನ್ನು ನೋಡುತ್ತಾ ಬರುತ್ತಿರುವ ಅವನ ಪಾಲಿಗೆ ಅದರಲ್ಲೇನೂ ಸೋಜಿಗ ಉಳಿದಿಲ್ಲ. ವಸ್ತುವೊಂದು ಪದೇ ಪದೇ

ಮನುಷ್ಯನೆದುರಿಗೆ ಬಂದಾಗ ಅದು ಅವನ ದೃಷ್ಟಿಯಲ್ಲಿ ತನ್ನ ಅದ್ಭುತತೆಯನ್ನು, ಅನನ್ಯತೆಯನ್ನು ಕಳೆದುಕೊಂಡುಬಿಡುತ್ತದೆ. ಆ ಬಳಿಕ ಆ ವಸ್ತುವು ಅದೆಷ್ಟೇ ಅದ್ಭುತತೆಯಿಂದ ಕೂಡಿದ್ದರೂ ತನ್ನ ವೈಶಿಷ್ಟ್ಯವನ್ನದು ಕಳೆದುಕೊಂಡು ಬಿಡುವುದು.

ದೇವ ನಿರ್ಮಿತ ಜಗತ್ತು ಮತ್ತವನ ಸೃಷ್ಟಿಯ ವಿಷಯದಲ್ಲೂ ಇದೇ ನಿಯಮ ಅನ್ವಯಿಸುತ್ತದೆ. ದೇವನ ಪ್ರತಿಯೊಂದು ಸೃಷ್ಟಿಯೂ ವಾಸ್ತವದಲ್ಲೊಂದು ಮಹಾದ್ಭುತವೇ ಆಗಿದೆ. ಅದೊಂದು ಚಿಕ್ಕ ಮರದ ಎಲೆಯೇ ಆಗಿರಲಿ, ವಿಶಾಲ ಸಮುದ್ರವೇ ಆಗಿರಲೀ, ಪ್ರಕಾಶ ರಹಿತ ಮರಳಿನ ಕಣವೇ ಆಗಿರಲೀ, ಜಗತ್ತಿಗೆಲ್ಲಾ ಬೆಳಕನ್ನು ಕೊಡುವ ಸೂರ್ಯನೇ ಆಗಿರಲೀ, ಇವೆಲ್ಲವನ್ನೂ ವ್ಯಕ್ತಿಯೋರ್ವನು ಹುಟ್ಟಿನಿಂದಲೇ ತಾನು ಬದುಕಿರುವ ಪ್ರತಿನಿತ್ಯವೂ ನೋಡುತ್ತಲೇ ಬರುತ್ತಾನೆ. ಹೀಗೆ ಆತನದನ್ನೆಲ್ಲವನ್ನೂ ದಿನಂಪ್ರತಿ ನಿರಂತರ ನೋಡುತ್ತಲೇ ಬೆಳೆಯುವುದರಿಂದ, ಅವನ ದೃಷ್ಟಿಯಲ್ಲಿ ಅವುಗಳು ತಮ್ಮ ಅನನ್ಯತೆ ಹಾಗೂ ವೈಶಿಷ್ಟ್ಯಗಳನ್ನು ಕಳೆದುಕೊಂಡು ಬಿಡುವವು. ಹಾಗಾಗಿ ಇವುಗಳನ್ನು ನೋಡಿ ಅವನಲ್ಲಿ ಯಾವುದೇ ಆಶ್ಚರ್ಯವಾಗಲೀ, ದಿಗ್ಭ್ರಾಂತಿಯಾಗಲೀ ಮೂಡುವುದಿಲ್ಲ.

ಪ್ರಸ್ತುತ ಜಗತ್ತಿನಲ್ಲಿ ಇದೇ ಮನುಷ್ಯನ ಪಾಲಿನ ಪರೀಕ್ಷೆಯಾಗಿದೆ. ದೇವ ನಿರ್ಮಿತ ವೃಕ್ಷವನ್ನೂ ಮೊದಲ ಬಾರಿ ತನ್ನೆದುರು ಬಂದು ನಿಂತ ಮಹಾದ್ಭುತವೆಂಬಂತೆಯೇ ವೀಕ್ಷಿಸಬೇಕು. ಸೂರ್ಯನನ್ನು ಅವನು ತನ್ನೆದುರು ಮೊದಲ ಬಾರಿ ಪ್ರಜ್ವಲಿಸುತ್ತಿರುವನೋ ಎಂಬಂತೆ ಕುತೂಹಲದೊಂದಿಗೆ ನೋಡಬೇಕು. ಗುಬ್ಬಚ್ಚಿಗಳ ಚಿಲಿ-ಪಿಲಿ ನಾದವನ್ನೂ ಅವನು ಪ್ರಥಮ ಬಾರಿಗೆ ಆಲಿಸುತ್ತಿರುವೆನೋ ಎಂಬಂತೆ ಕುತೂಹಲದೊಂದಿಗೆ ಅದರೆಡೆಗೆ ಕಿವಿಗೊಡಬೇಕು. ಆಗ ಮಾತ್ರ ನಮಗೆ ನಿಜವಾದ ಅರ್ಥದಲ್ಲಿ ದೇವಮಹಿಮೆಯ ದರ್ಶನವಾದೀತು.

# ಸ್ವ-ತ್ಯಾಗ

ಹಝ್ರತ್ ಯೂಸುಫ್ (ಅ) ರ ವತ್ತಾಂತವನ್ನು ಕುರ್-ಆನಿನಲ್ಲಿ ಅತ್ಯುತ್ತಮ ವೃತ್ತಾಂತ ಎಂದು ಬಣ್ಣಿಸಲಾಗಿದೆ. ನಮ್ಮ ಜೀವನದಲ್ಲಿ ದೈವಿಕ ಘಟನೆಗಳು ಹೇಗೆ ತಿರುವನ್ನು ನೀಡುತ್ತವೆ ಎಂಬುದಕ್ಕೊಂದು ಐತಿಹಾಸಿಕ ಉದಾಹರಣೆಯದು. ದೈವಿಕ ಸಹಾಯವಿದ್ದರೆ ದುರಂತ ಘಟನೆಗಳೂ ಯಾವ ರೀತಿ ಒಂದು ಮಾದರಿಯುತ ವೃತ್ತಾಂತವಾಗಿ ಮಾರ್ಪಾಡುಗುವುದೆಂಬುದರ ಅರಿವು ಇದರಿಂದ ನಮಗಾಗುವುದು.

ಸನ್ಮಾನ್ಯ ಪ್ರವಾದಿ ಯೂಸುಫ್ರನ್ನು ಅವರ ಶತ್ರುಗಳು ಆಳವಾದ ಬಾವಿಗೆ ತಳ್ಳಿಬಿಟ್ಟಿದ್ದರು. ಆದರೆ ದೇವನವರನ್ನು ಬಾವಿಯಿಂದ ಮೇಲೆತ್ತಿ ಈಜಿಪ್ಟ್ ನ ಸಿಂಹಾಸನದ ಮೇಲೆ ಕೂರಿಸಿಬಿಟ್ಟನು. ಶತ್ರುಗಳು ಪ್ರವಾದಿ ಯೂಸುಫರನ್ನು ಅವರನ್ನು ಬಾವಿಗೆ ತಳ್ಳಿದ್ದು ಅವರ ಜೀವನದ ಅಂತ್ಯ ಕಾಣಿಸಲೆಂದು, ಆದರೆ ಆ ಬಾವಿಯನ್ನೇ ದೇವನವರ ಬದುಕಿನ ಸುವರ್ಣ ಪುಟಗಳ ಆದಿಯನ್ನಾಗಿಸಿದನು.

ಹಝ್ರತ್ ಯೂಸುಫ್ (ಅ) ರ ಜೀವನ ವೃತ್ತಾಂತವನ್ನು ವಿವರಿಸಿದ ಬಳಿಕ ಕುರ್-ಆನ್ ನಲ್ಲಿ ಹೀಗೆ ಹೇಳಲಾಗಿದೆ: "ಕೊನೆಗೆ ನಾವು ಕಳಿಸಿದ ನಮ್ಮ ದೂತರು ನಿರಾಶರಾಗಿ, "ತಮ್ಮೊಡನೆ ಸುಳ್ಳು ಹೇಳಲಾಗಿತ್ತೇ?" ಎಂದು ಸಂಶಯಿಸಲಾ-ರಂಭಿಸುವಾಗಲೇ, ನಮ್ಮ ನೆರವು ಬಂದು ಬಿಟ್ಟಿತು ಮತ್ತು ನಾವಿಚ್ಛಿಸಿದವರನ್ನು ನಾವು ರಕ್ಷಿಸಿದೆವು. ಅಪರಾಧಿಗಳ ಮೇಲೆ ನಮ್ಮ ಶಿಕ್ಷೆ ತಪ್ಪದು". (ಯೂಸುಫ್: 110)

ಹತಾಶೆಯ ಹಂತ ತಲುಪಿದ ಬಳಿಕವಷ್ಟೇ ದೇವನ ಸಹಾಯ ದೊರೆಯುವುದೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇಲ್ಲಿ "ಹತಾಶೆ" ಎಂಬುದರ ತಾತ್ಪರ್ಯವೇನೆಂದರೆ ವ್ಯಕ್ತಿಯೋರ್ವ ದೇವಮಾರ್ಗದಲ್ಲಿ ತನ್ನಲ್ಲಿರುವುದೆಲ್ಲವನ್ನೂ ತ್ಯಾಗ ಮಾಡಿದ ಬಳಿಕ ತಲುಪುವ ಮಾನಸಿಕ ಹಂತವಾಗಿದೆ. ಆ ವ್ಯಕ್ತಿಯ ಬಳಿ ಇದರ

ಬಳಿಕ ಕಳೆದುಕೊಳ್ಳುವುದಕ್ಕೇನೂ ಉಳಿದಿರಲಾರದು. ಆಗ ಅವನಿಗೆ ಮನವರಿಕೆಯಾಗು–ವುದೇನೆಂದರೆ ಇಲ್ಲಿಗೆ ಮಾನವ ಸಾಮರ್ಥ್ಯವೆಲ್ಲವೂ ಮುಗಿಯಿತು. ಇನ್ನೇನಿದ್ದರೂ ದೇವನ ಸಹಾಯ ಮಾತ್ರ ನಮ್ಮನ್ನುಳಿಸಬಲ್ಲದು. ಆ ಕ್ಷಣದಲ್ಲಿಯೇ ದೇವಸಹಾಯ ಧುತ್ತನೇ ಎದುರಾಗುವುದು. ವೈಫಲ್ಯದ ಅಂತ್ಯವೇ ಯಶಸ್ಸಿನ ನಾಂದಿಯಾಗುವುದು.

ಬೀಜವು ತನ್ನ ಅಸ್ತಿತ್ವವನ್ನು ಕಳೆದುಕೊಂಡಾಗ ಮಾತ್ರ ವೃಕ್ಷದ ರೂಪವನ್ನದು ಪಡೆಯಲು ಸಾಧ್ಯ. ದೇವ ಮತ್ತವನ ದಾಸರ ನಡುವಿನ ಸಂಬಂಧವೂ ಇದೇ ತೆರನದ್ದಾಗಿದೆ. ವ್ಯಕ್ತಿಯೋರ್ವನು ತನ್ನನ್ನು ತಾನು ದೇವಮಾರ್ಗದಲ್ಲಿ ತೇದಿಕೊಳ್ಳಲು ಸಿದ್ಧನಾದಾಗ ಮಾತ್ರ ಆತ ದೇವಸಹಾಯಕ್ಕಾಗಿ ಅರ್ಹನೆನಿಸಿಕೊಳ್ಳುವನು. ವ್ಯಕ್ತಿಯೋರ್ವನೊಳಗಿರುವ ಸ್ವ–ನಂಬಿಕೆ ಎಲ್ಲಿ ಕೊನೆಗೊಳ್ಳುವುದೋ ಅಲ್ಲಿಂದಲೇ ದೇವವಿಶ್ವಾಸವು ನಾಂದಿಯಾಗುವುದು.

ನಿಸ್ಸಂದೇಹವಾಗಿಯೂ ದೇವನದು ಮಹಾನ್ ಶಕ್ತಿ. ತನ್ನಲ್ಲಿರುವ "ನಾನು" ಎಂಬುದನ್ನು ಅಳಿಸಿಕೊಂಡವನಿಗಷ್ಟೇ ನಿಜವಾದ ಅರ್ಥದಲ್ಲಿ ದೇವನನ್ನು ಪಡೆಯಲು ಸಾಧ್ಯ. ಆದರೆ, ಹೆಚ್ಚಿನವರಿಗೆ ತನ್ನೊಳಗಿನ "ನಾನು" ಎಂಬುದನ್ನು ಅಳಿಸಲಾಗುವುದಿಲ್ಲ. ಹಾಗಾಗಿಯೇ ಅಂತಹವರಿಗೆ ದೇವನನ್ನು ಪಡೆಯಲೂ ಸಾಧ್ಯವಾಗುವುದಿಲ್ಲ. ದೇವನು ಪ್ರತಿಯೊಂದು ಸಮಸ್ಯೆಗೂ ಪರ್ಯಾಯ ಉತ್ತರವಾಗಿರುವನು. ದೇವನನ್ನು ಯಾರು ಪಡೆದನೋ ಅವನು ಸಕಲವನ್ನೂ ಪಡೆದ ಸೌಭಾಗ್ಯವಂತನೆನಿಸುವನು. ಆದರೆ ಮಾನವನೊಳಗೆ ಮನೆ ಮಾಡಿರುವ ಅಜ್ಞಾನದಿಂದಾಗಿ, ಆತನು ನಶ್ವರಕ್ಕಾಗಿ ಶಾಶ್ವತವನ್ನು ಕಳೆದುಕೊಳ್ಳುವ ಮೂರ್ಖತನವನ್ನು ತೋರಿಸುತ್ತಾನೆ. ಅವನು ತನ್ನೊಳಗಿನ "ನಾನು" ಎಂಬುದನ್ನು ಉಳಿಸಲು ಹೋಗಿ "ಪರಮೋನ್ನತ"–ನಾದ ದೇವನನ್ನೇ ಕಳೆದುಕೊಳ್ಳುವ ಭಾಗ್ಯಹೀನನಾಗುತ್ತಾನೆ.

# ದೇವಸ್ಮರಣೆ

"ದಿಕ್ರ್" ಎಂಬುದು ಅರಬ್ಬಿ ಪದ. ಇದರರ್ಥ ಸ್ಮರಣೆ ಎಂದಾಗಿದೆ. ದೇವನ ದಿಕ್ರ್ ಎಂದರೆ ದೇವನನ್ನು ಸ್ಮರಿಸುವುದು ಎಂದಾಗಿದೆ. ಸ್ಮರಣೆ ಎಂಬುದು ಔಪಚಾರಿಕವಾಗಿರಕೂಡದು. ದೇವನ ಮಹಿಮೆಯನ್ನು ನೆನಪಿಸಿಕೊಂಡು ಮೈ ರೋಮಾಂಚಿತಗೊಳ್ಳುವ, ಪದಗಳಿಗೆ ನಿಲುಕದ ಆಂತರಿಕ ಭಾವನೆ ಅದಾಗಿರಬೇಕು.

ವ್ಯಕ್ತಿಯೋರ್ವ ದೇವನ ಅತ್ಯದ್ಭುತ ಶಕ್ತಿಯನ್ನು ಅರಿತುಕೊಂಡಾಗ, ಪದಗಳಿಗೆ ನಿಲುಕದ ದೇವನ ಮಹಿಮೆಯನ್ನು ಕಂಡುಕೊಂಡಾಗ ಅವನೊಳಗೊಂದು ಅದ್ಭುತ ಆಧ್ಯಾತ್ಮಿಕ ಕ್ರಾಂತಿ ಸಂಭವಿಸುವುದು. ಆ ಬಳಿಕ ಆ ವ್ಯಕ್ತಿಯೊಳ ಹೃದಯದಲ್ಲಿ ಪದೇ ಪದೇ ದೇವಸ್ಮರಣೆಯು ಪುಟಿದೇಳತೊಡುಗುವುದು. ಅದು ಕೆಲವೊಮ್ಮೆ ಹೃದಯದ ಭಾವನೆಗಳ ಮೂಲಕ ಹೊರಹೊಮ್ಮಿದರೆ ಇನ್ನು ಕೆಲವೊಮ್ಮೆ ದೇವನ ಪ್ರಶಂಸೆ ಮತ್ತು ಕೃತಜ್ಞತೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇದನ್ನೇ ನಾವು  ದೇವಸ್ಮರಣೆ ಎಂದು ಕರೆಯುವುದು.

ಕೆಲವೊಮ್ಮೆ ವ್ಯಕ್ತಿಯೋರ್ವ ನಕ್ಷತ್ರಗಳ ಮತ್ತು ಬ್ರಹ್ಮಾಂಡದ ರಚನೆಯ ಕುರಿತು, ಅವುಗಳ ಚಲನೆಯ ಕುರಿತು ಆಲೋಚನಾ ಮಗ್ನನಾಗುತ್ತಾನೆ. ಅವನ ಬಾಯಿಯಿಂದ ಉದ್ಗಾರವೊಂದು ಹೊರಬೀಳುತ್ತದೆ: "ದೇವನೆಷ್ಟು ಮಹಾನ್ ಯುಕ್ತಿವಂತನು!. ಇಷ್ಟು ವಿಶಾಲವಾದ ಬ್ರಹ್ಮಾಂಡದ ಪ್ರತಿಯೊಂದು ವಸ್ತುವೂ ತನ್ನ ಕಕ್ಷೆಗನುಗುಣವಾಗಿ ಚಲಿಸುತ್ತಿರುವುದು ಎಷ್ಟೊಂದು ದೊಡ್ಡ ಅದ್ಭುತವಲ್ಲವೇ?." ಅವನು ಪರ್ವತ, ಸಾಗರ ಮತ್ತು ಇತರೆ ಆಕರ್ಷಕ ನೈಸರ್ಗಿಕ ವಸ್ತು ಅಥವಾ ನಿಸರ್ಗದ ಸೌಂದರ್ಯವುಳ್ಳ ದೃಶ್ಯಗಳನ್ನು ನೋಡಿದಾಗ ದೇವನ ಸ್ಮರಣೆಯಿಂದ ಅವನ ಹೃದಯವು ನಲಿದಾಡತೊಡಗುವುದು. ದೇವನಿರ್ಮಿತ ಪ್ರತಿಯೊಂದು ವಸ್ತುವೂ ಅವನಿಗಿಲ್ಲಿ ದೇವಸ್ಮರಣೆಯನ್ನು ಜಾಗರೂಕಗೊಳಿಸುವ ಸಾಧನವಾಗುವುದು. ಹೀಗೆ

ಅವನು ಸದಾ ದೇವಧ್ಯಾನದಲ್ಲಿ ನಿರತನಾಗುವ ದೇವನ ನೈಜ ದಾಸನಾಗಿ ಮಾರ್ಪಡುವನು.

ಇದೇ ರೀತಿ ಮನುಷ್ಯನು ತನ್ನ ಸ್ಥಿತಿ–ಗತಿಯ ಕುರಿತು ಅವಲೋಕಿಸತೊಡಗಿದಾಗ ಅವನಿಗೆ ತನ್ನೊಳಗಿರುವ ಕುಂದು–ಕೊರತೆಗಳ ಅರಿವಾಗತೊಡಗುವುದು. ಅವನು ತನ್ನ ತಪ್ಪುಗಳ ಕುರಿತು ದೇವನಲ್ಲಿ ಪಶ್ಚಾತ್ತಾಪದ ಮೊರೆ ಹೋಗುತ್ತಾ ಈ ರೀತಿ ಆಲಾಪಿಸತೊಡಗುವನು: "ದೇವಾ!, ಪರಲೋಕದ ಶಿಕ್ಷೆಗೊಳಗಾಗದಂತೆ ನೀ ನನ್ನನ್ನು ರಕ್ಷಿಸು. ನಿನ್ನ ಕರುಣೆಯ ನೆರಳಿನ ವಿನಾ ಬೇರಾವ ಆಶ್ರಯವೂ ದೊರಕದ ಆ ದಿನ, ನನಗೆ ನೀನು ನಿನ್ನ ಕರುಣೆಯ ಆಶ್ರಯದಲ್ಲಿ ಜಾಗ ನೀಡಿ ಕರುಣಿಸು." ಮನುಷ್ಯನಿಗೆ ತನ್ನ ಇತಿ–ಮಿತಿಯ, ತನ್ನ ಅಸಹಾಯಕತೆಯ ಕುರಿತು ಅರಿವುಂಟಾದಾಗ ಅವನು, " ಓ ದೇವನೇ, ನೀನು ಮಾತ್ರ ಸರ್ವಶಕ್ತನು. ಉಳಿದವರೆಲ್ಲರೂ ನಿನ್ನ ಅವಲಂಬಿತರು. ನೀನು ನಿನ್ನ ಅನುಗ್ರಹವನ್ನು ನನ್ನ ಮೇಲೆ ಬೀರುವ ಮೂಲಕ ನನ್ನೀ ಅಸಹಾಯಕತೆಯನ್ನು ದೂರೀಕರಿಸು. (ಆಮೀನ್)" ಎಂದು ಭಿನ್ನವಿಸತೊಡಗುವನು.

ದೇವಾಸ್ತಿತ್ವದ ವಿಶಿಷ್ಟ ಅನುಭೂತಿಯನ್ನು ಹೃದಯದಲ್ಲಿ ಅನುಭವಿಸಿ, ಅದನ್ನು ಪದಗಳ ಮೂಲಕ ಉಚ್ಛರಿಸುವುದೇ ನೈಜ ದೇವಸ್ಮರಣೆ ಅಥವಾ ದಿಕ್ರ್ ಆಗಿದೆ. ದಿಕ್ರ್ ಎಂಬುದು ದೇವನನ್ನು ನೆನಪಿಸಿಕೊಳ್ಳುವುದರ ಸಂಕೇತವಾಗಿದೆ. ದೇವಸ್ಮರಣೆಯು ಅತ್ಯಂತ ದೊಡ್ಡ ವಾಸ್ತವವನ್ನು ಕಂಡುಕೊಳ್ಳುವುದರ ಹೆಸರಾಗಿದೆ. ಯಾರು ಈ ಜಗತ್ತಿನ ಅತ್ಯಂತ ದೊಡ್ಡ ವಾಸ್ತವವನ್ನು ಕಂಡುಕೊಂಡನೋ, ಅವನು ಅತ್ಯಂತ ದೊಡ್ಡ ಅನುಭೂತಿಯನ್ನು ಪಡೆದುಕೊಂಡನು. ಇನ್ನು, ವ್ಯಕ್ತಿಗಾದ ಈ ಅದ್ಭುತ ಅನುಭೂತಿಯನ್ನು ಬರೀ ಪದಗಳಲ್ಲಿ ವಿವರಿಸುವುದು ಅಸಾಧ್ಯವಾದ ಮಾತೇ ಸರಿ.

# ಕಳೆದುಕೊಳ್ಳುವವನಷ್ಟೇ ಪಡೆದುಕೊಳ್ಳಲರ್ಹನು

ನೀವು ಮುಂಬೈ ವಾಸಿಯಾಗಿದ್ದು, ಕೋಲ್ಕತ್ತಾಗೆ ಹೋಗಲು ಬಯಸುವುದಾದರೆ ಮೊದಲು ನೀವು ಮುಂಬೈಯನ್ನು ಬಿಡಲು ತಯಾರಾಗಬೇಕು. ಅದರ ಬಳಿಕವಷ್ಟೇ ನೀವು ಕೋಲ್ಕತ್ತಾವನ್ನು ತಲುಪಲು ಸಾಧ್ಯ. ವ್ಯಕ್ತಿಯೋರ್ವ ದೇವನನ್ನು ಪಡೆಯಲು ಬಯಸುತ್ತಾನೆ ಎಂದಾದರೆ, ಅವನು ದೇವನನ್ನು ಪಡೆಯಲು ಹೊರಟ ಪಯಣಿಗನೆಂದರ್ಥ. ಒಂದು ವೇಳೆ ಅವನು ತನ್ನ ಗಮ್ಯಸ್ಥಾನವನ್ನು ತಲುಪಲು ಬಯಸಿದ್ದೇ ಆದಲ್ಲಿ, ಆತನು ತಾನಿರುವ ಭ್ರಮಾಲೋಕದಿಂದ ಹೊರಬರಲು ತಯಾರಿರಬೇಕು. ಅದರ ಬಳಿಕವಷ್ಟೇ ಆತನಿಗೆ ತನ್ನ ಗಮ್ಯಸ್ಥಾನವನ್ನು ತಲುಪಲು ಸಾಧ್ಯವಾದೀತು.

ಈ ಲೌಕಿಕ ಪ್ರಪಂಚದಲ್ಲಿ ಏನಾದರೂ ಪಡೆಯಬೇಕಿದ್ದರೆ, ಅದಕ್ಕೆ ಪ್ರತಿಯಾಗಿ ನೀವೇನೆದಾರೂ ತೆರಲು ಸಿದ್ಧರಾಗಿರಬೇಕು. ಇಲ್ಲಿ ಕಳೆದುಕೊಳ್ಳಲು ಸಿದ್ಧನಿರುವವನಷ್ಟೇ ಅದಕ್ಕೆ ಪ್ರತಿಯಾಗೇನಾದರೂ ಪಡೆಯಬಲ್ಲನು. ಇಲ್ಲಿನ ವಾಸ್ತವವೇನೆಂದರೆ ಇಲ್ಲಿ ಕಳೆದುಕೊಳ್ಳುವುದರಲ್ಲೇ ಪಡೆಯುವ ರಹಸ್ಯ ಅಡಗಿರುವುದು.

ಇಲ್ಲಿ ನೀವೇನಾದರೂ ಒಬ್ಬ ಯಶಸ್ವಿ ಉದ್ಯಮಿಯೋ, ವ್ಯಾಪಾರಿಯೋ ಆಗ ಬಯಸುವಿರೆಂದಾದರೆ, ಮೊದಲು ನಿಮ್ಮಲ್ಲಿರುವುದನ್ನು ಬಂಡವಾಳದ ರೂಪದಲ್ಲಿ ಹೂಡಲು ಸಿದ್ಧರಾಗಬೇಕು. ಅದೇ ರೀತಿ, ನೀವೇನಾದರೂ ಯಶಸ್ವಿ ಕೃಷಿಕನಾಗಲಿಚ್ಛಿಸಿದಲ್ಲಿ, ನಿಮ್ಮಲ್ಲಿರುವ ಬೀಜಗಳ ಸಂಗ್ರಹವನ್ನೆಲ್ಲಾ ಮೊದಲು ಮಣ್ಣಿನಲ್ಲಿ ಹೂತಲು ಸಿದ್ಧರಾಗಬೇಕು. ನೀವು ದೂರದೃಷ್ಟಿಯೊಂದಿಗೆ ಏನಾದರೊಂದು ಮಹತ್ತರ ಸಾಧನೆ ಮಾಡಲು ಬಯಸಿದರೆ, ನಿಮ್ಮ ಭಾವೋದ್ವೇಗಳನ್ನು ಮೊತ್ತ ಮೊದಲು ನಿಗ್ರಹಿಸಿಕೊಳ್ಳಬೇಕು. ಒಂದು ವೇಳೆ ನೀವೊಂದು ಶ್ರೀಮಂತ ವ್ಯಕ್ತಿಯಾಗಬೇಕೆಂಬ ಆಸೆ

ನಿಮಗಿದ್ದರೆ, ಮೊತ್ತ ಮೊದಲು ನೀವು ದುಂದುವೆಚ್ಚ ಮಾಡುವುದನ್ನು ಬಿಟ್ಟು ಬಿಡಬೇಕು.

ಸ್ಫೋಟಗೊಳ್ಳದ ಕಣವೆಂದೂ ಪರಮಾಣು ಶಕ್ತಿಯಾಗಿ ಹೊರಹೊಮ್ಮದು. ಯಾವ ಧಾನ್ಯವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲು ಸಿದ್ಧವಿಲ್ಲವೋ ಅದೆಂದೂ ಮುಂದೆ ವೃಕ್ಷದ ರೂಪ ತಾಳಲಾರದು. ಯಾರು ತನ್ನ ಸ್ವ–ಹಿತಾಸಕ್ತಿಗಳನ್ನು ತ್ಯಾಗ ಮಾಡಲು ಸಿದ್ಧರಿಲ್ಲವೋ ಅವರು ಯಾವುದೇ ಸಮುದಾಯದ ಉತ್ತಮ ನಾಯಕನಾಗಲಾರರು.

ಇದೇ ನಿರ್ಬಂಧ ದೇವನ ವಿಷಯದಲ್ಲೂ ಅನ್ವಯಿಸುವುದು. ವ್ಯಕ್ತಿಯೋರ್ವ ದೇವಸಂಪ್ರೀತಿಯನ್ನು ಪಡೆಯುವ ಮೊದಲು ತನ್ನ ಅಸ್ತಿತ್ವವನ್ನು ಪಣಕ್ಕಿಡಬೇಕು. ಯಾರು ಸ್ವ–ಪ್ರತಿಷ್ಠೆಯನ್ನು ತ್ಯಾಗ ಮಾಡಲು ಸಿದ್ಧರಿಲ್ಲವೋ, ಅಂತಹವರು ದೇವಸಂಪ್ರೀತಿಯನ್ನು ಪಡೆಯಲನರ್ಹರು.

ದೇವನನ್ನು ಪಡೆಯ ಬಯಸುವವನು ಮೊತ್ತಮೊದಲು ತನ್ನ ಸ್ವ–ಪ್ರತಿಷ್ಠೆಯನ್ನು ತ್ಯಾಗ ಮಾಡಲು ಸಿದ್ಧನಿರಬೇಕು. ಇದೊಂದೇ ಪದದಲ್ಲಿ ದೇವಸಂಪ್ರೀತಿಯನ್ನು ಪಡೆಯುವ ರಹಸ್ಯವಡಗಿದೆ. ಯಾರಿಗೆ ಸ್ವ– ಪ್ರತಿಷ್ಠೆ, ದೇವಸಂಪ್ರೀತಿ ಇವೆರಡೂ ಬೇಕೋ, ಅಂತಹವರು ಕೇವಲ ಸ್ವ–ಪ್ರತಿಷ್ಠೆಯನ್ನಷ್ಟೇ ಉಳಿಸಿಕೊಳ್ಳಬಲ್ಲರು. ಸ್ವ–ಪ್ರತಿಷ್ಠೆ ಬಿಡದ ಹೊರತು ದೇವಸಂಪ್ರೀತಿ ಸಿಗದು.

# ತೀರ್ಪಿನ ದಿನ

ಸೆಪ್ಟೆಂಬರ್, 9, 1983 ರಂದು ದಿ ಇಂಡಿಯನ್ ಎಕ್ಸ್ ಪ್ರೆಸ್ ನ ಬೆಂಗಳೂರು ಆವೃತ್ತಿಯಲ್ಲಿ ಪ್ರಕಟವಾದ ಒಂದು ಸುದ್ದಿಯ ಮೇಲಿನ ಶೀರ್ಷಿಕೆ ಹೀಗಿತ್ತು: "Glitter is not gold"

ಸುದ್ದಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದ (Miss Sybil D'Silva) ರವರ ಕುರಿತಾಗಿತ್ತು. ಅವರ ಮನೆಗೆ ಸುಮಾರು 35 ವರ್ಷ ವಯಸ್ಸಿನ ಹೆಂಗಸೊಬ್ಬರು ತನ್ನ ಕಂಕುಳಿನಲ್ಲಿ 6 ತಿಂಗಳ ಮಗುವೊಂದನ್ನೆತ್ತಿಕೊಂಡು ಬಂದರು. ಆ ಹೆಂಗಸು ಡಿಸಿಲ್ವಾರ ಬಳಿ, "ನನ್ನ ಪತಿಯ ಆರೋಗ್ಯ ತುಂಬಾ ಗಂಭೀರ ಸ್ಥಿತಿಯಲ್ಲಿದೆ. ಅವರ ತುರ್ತು ಚಿಕಿತ್ಸೆಗಾಗಿ ಹಣದ 5,000 ರೂ.ನ ಹಣದ ಆವಶ್ಯಕತೆ ಇದೆ." ಎನ್ನುತ್ತಾ ತನ್ನ ಚೀಲದಿಂದ ಬಂಗಾರ ವರ್ಣದ ಸರವೊಂದನ್ನು ಹೊರಗೆ ತೆಗೆದು ತನ್ನ ಮಾತನ್ನು ಮುಂದುವರಿಸಿದಳು, "ಮಾರುಕಟ್ಟೆಯಲ್ಲಿ ಈ ಚಿನ್ನದ ಸರದ ಮೌಲ್ಯ. 10,000 ರೂ. ನನಗೀಗ ತುರ್ತು ಅಗತ್ಯವಿರುವುದು 5,000 ರೂ. ಈ ಹಾರವನ್ನು 5,000 ರೂ. ಗೆ ಖರೀದಿಸಿ ನನ್ನ ಗಂಡನ ಜೀವ ಉಳಿಸಿ" ಎಂದು ಡಿಸಿಲ್ವಾರ ಬಳಿ ಭಿನ್ನವಿಸತೊಡಗಿದಳು. ಡಿಸಿಲ್ವಾ ತಾನಿದನ್ನು ಕೊಂಡುಕೊಳ್ಳುವ ಯಾವುದೇ ಆಸಕ್ತಿಯನ್ನು ಹೊಂದಿಲ್ಲ ಎಂದು ಹೇಳಿದರೂ ಪಟ್ಟು ಬಿಡದ ಹೆಂಗಸು, "ತನ್ನ ಪರಿಸ್ಥಿತಿಯ ಕುರಿತು ಕರುಣೆ ತೋರಿ" ಎನ್ನುತ್ತಾ ಡಿಸಿಲ್ವಾರನ್ನು ಒಪ್ಪಿಸುವಲ್ಲಿ ಕೊನೆಗೂ ಯಶಸ್ವಿಯಾದಳು. ಡಿಸಿಲ್ವಾ ಆಕೆ ಹೇಳಿದ ಚಿನ್ನದಹಾರವನ್ನು 5,000 ರೂ. ತೆತ್ತು ಖರೀದಿಸಿದರು.

ಮಾರನೆಯ ದಿನ ಡಿಸಿಲ್ವಾ ಕಮರ್ಷಿಯಲ್ ಸ್ಟ್ರೀಟ್ ನ ಚಿನ್ನದಂಗಡಿಗೆ ಹೋಗಿ ಆ ಸರವನ್ನು ಅಕ್ಕಸಾಲಿಗನಿಗೆ ತೋರಿಸಿದರು. ಅದನ್ನು ಪರೀಕ್ಷಿಸಿದ ಅಕ್ಕಸಾಲಿಗನು, "ಇದು ತಾಮ್ರದ ಸರವೇ ಹೊರತು ಚಿನ್ನದ್ದಲ್ಲ" ಎಂದನು. ತಾನು ಮೋಸಕ್ಕೊಳಗಾದದ್ದು ಅರಿವಾದ ತಕ್ಷಣ ಆಕೆ ಪೋಲಿಸ್ ಠಾಣೆಗೆ ತೆರಳಿ, ನಡೆದ ವೃತ್ತಾಂತವನ್ನೆಲ್ಲಾ ದುಃಖಿತರಾಗಿ ಹೇಳುತ್ತಾ, ಅಕ್ಕಸಾಲಿಗ ಹೇಳಿದ ಮಾತನ್ನು ಪುನುರುಚ್ಚರಿಸಿದರು. "He

told me it was brass" (ಅವರು ಇದೊಂದು ತಾಮ್ರದ ಸರವೆಂದಾಗಿ ನನ್ನ ಬಳಿ ಹೇಳಿದರು)

ಪರಲೋಕದಲ್ಲೂ ಇದೇ ತೆರನಾದ ಪರಿಸ್ಥಿತಿ ಎದುರಾಗಲಿದೆ. ಪ್ರಸ್ತುತ ಜಗತ್ತಿನಲ್ಲಿ ಪ್ರತಿಯೋರ್ವ ವ್ಯಕ್ತಿಯೂ ತನ್ನದೇ ಆದ ಕೆಲಸಗಳಲ್ಲಿ ಮಗ್ನನಾಗಿದ್ದಾನೆ. ಪ್ರತಿಯೋರ್ವನು ತಾನು ಸಂಗ್ರಹಿಸುತ್ತಿರುವುದು ಚಿನ್ನವನ್ನು ಎಂದೇ ಭಾವಿಸುತ್ತಿದ್ದಾನೆ. ಯಾವುದೇ ಚಿನ್ನವು ಅಕ್ಕಸಾಲಿಗನ ಶೋಧನನುಸಾರ ಚಿನ್ನವೆಂದು ಸಾಬೀತಾದಾಗ ಮಾತ್ರ ಅದಕ್ಕೆ ನಿಜವಾದ ಮೌಲ್ಯ ದೊರೆಯುವುದು. ದೇವನೂ ಪ್ರತಿಯೋರ್ವ ವ್ಯಕ್ತಿಗಳ ಕಾರ್ಯಗಳನ್ನು ತನ್ನ ನಿಯಮದನುಸಾರವಾಗಿ ಶೋಧಿಸುವನು. ಯಾರ ಕಾರ್ಯಗಳು ದೇವನ ಬಳಿ ಪರಿಶುದ್ಧ ಚಿನ್ನವೆಂದು ಸಾಬೀತಾಗುವವೋ ಅವುಗಳಿಗೆ ಮಾತ್ರ ಪರಲೋಕದಲ್ಲಿ ನಿಜವಾದ ಮೌಲ್ಯ ದೊರೆಯವುದು. ಇನ್ನು ಯಾರ ಚಿನ್ನವು ದೇವನ ಬಳಿ ಅಸಲಿಯಲ್ಲ, ನಕಲಿ ಎಂದು ಸಾಬೀತಾಗುವುದೋ, ಅವನಿಗಲ್ಲಿ ನಿಂದೆ ಮತ್ತು ವಿನಾಶದ ಹೊರತು ಬೇರೇನೂ ದೊರಕದು. ಇವತ್ತು ಮನುಷ್ಯನಿಲ್ಲಿಯ ಜೀವನವನ್ನು ಬಹಳ ಅಮೂಲ್ಯವೆಂದು ಭಾವಿಸುತ್ತಿರುವನು. ಯಾವುದೇ ಕಾರಣಕ್ಕೂ ಅವನಿಲ್ಲಿ ತನ್ನ ಹಿತಾಸಕ್ತಿಯನ್ನು ಬಿಟ್ಟುಕೊಡಲು ಸಿದ್ಧನಾಗನು. ಆದರೆ, ಪರಲೋಕದ ತೀರ್ಪಿನ ದಿನ ಅವನು ತನ್ನ ಮತ್ತು ತನ್ನ ಇಹಲೋಕದ ಕರ್ಮಗಳು ಯಾವುದಾದರೂ ರೀತಿಯಲ್ಲಿ ಬೇರ್ಪಡಲಿ ಎಂದೇ ಬಯಸುವನು. ಆದರೆ ಅಂದು ಎಲ್ಲರಿಗೂ ನ್ಯಾಯ ದೊರಕುವ ದಿನ. ಮನುಷ್ಯನ ಕರ್ಮವು ಅವನಿಂದ ಬೇರ್ಪಡದು.

ಯಾವುದನ್ನು ಅವನಿಲ್ಲಿ ತನ್ನ ಪಾಲಿನ ಗರ್ವ ಮತ್ತು ಅಭಿಮಾನದ ವಿಷಯ ಎಂದು ಭಾವಿಸುವನೋ ಅದೇ ಅವನ ಪಾಲಿಗೆ ಪರಲೋಕದ ಉರುಳಾಗಿ ಪರಿಣಮಿಸುವುದು. ಪ್ರತಿ ವ್ಯಕ್ತಿಯ ದುಷ್ಕರ್ಮಕ್ಕನುಗುಣವಾಗಿ ಅವನಿಗಲ್ಲಿ ನಿಂದೆ ಮತ್ತು ವಿನಾಶವು ಕಾಯುತ್ತಿರುವುದು. ಇನ್ನು ವ್ಯಕ್ತಿಯ ಸತ್ಕರ್ಮವು ಅಪ್ಪಟ ಚಿನ್ನದ ಮೌಲ್ಯವನ್ನವನಿಗಲ್ಲಿ ದೊರಕಿಸಿಕೊಡುವುದು.

# ಆ ದಿನ ಏನು ಸಂಭವಿಸಲಿರುವುದು?

ದೇವನು ಸಕಲ ವಸ್ತುಗಳ ಏಕೈಕ ಮಾಲಕನಾಗಿದ್ದಾನೆ. ಈ ಜಗತ್ತಿನಲ್ಲಿ ಯಾರಿಗೆಲ್ಲಾ ಏನೆಲ್ಲಾ ದೊರೆತಿದೆಯೋ ಅದು ದೇವನದೇ ಕೊಡುಗೆಯಾಗಿದೆ. ದೇವನ ಹೊರತಾಗಿ ಅನ್ಯರಿಗೆ ನೀಡಲು ಯಾರ ಬಳಿಯೂ ಏನೂ ಇಲ್ಲ. ಏಕೆಂದರೆ ದೇವನ ಹೊರತಾಗಿ ಬೇರಾರೂ ಈ ಜಗತ್ತಿನ ಒಂದು ಅಣುವಿನದೂ ಮಾಲೀಕರಲ್ಲ. ವಾಸ್ತವ ಹೀಗಿರುವಾಗ, ಅನ್ಯರಿಗೆ ದೇವನ ವತಿಯಿಂದ ದೊರೆತ ಕೊಡುಗೆಯನ್ನು ಯಾರಾದರೂ ಕಸಿಯಲೆತ್ನಿಸಿದರೆ ಆತನು ದೇವನನ್ನೇ ದೋಚಲು, ದೇವನ ಯೋಜನೆಯನ್ನೇ ಅಪಹಾಸ್ಯಗೊಳಿಸಲು ಪ್ರಯತ್ನಿಸಿದಂತೆ.

ಈ ಜಗತ್ತಿನಲ್ಲಿ ಅನ್ಯರಿಗೆ ದೊರೆತ ಜೀವನಸಾಧನದ ಕುರಿತು ಅಸೂಯೆಗೊಳಗಾಗಿ ಅವರನ್ನು ನಾಶ ಮಾಡಲು ಯತ್ನಿಸುವವರ ಉದಾಹರಣೆ ಹೇಗೆಂದರೆ, ವ್ಯಕ್ತಿಯೋರ್ವನಿಗೆ ಆಶ್ರಯ ದೊರೆತಿದ್ದು, ಅವನನ್ನು ನಿರಾಶ್ರಿತನನ್ನಾಗಿ ಪಿತೂರಿ ಮಾಡಿದಂತೆ, ಒಬ್ಬನಿಗೆ ದೇವನ ವತಿಯಿಂದ ಧರ್ಮಸಮ್ಮತ ಜೀವನೋಪಾಯ ದೊರೆತಿದ್ದು, ಅದನ್ನವರು ನಾಶ ಮಾಡಲು ಕುತಂತ್ರ ಹೂಡಿದಂತೆ. ಓರ್ವನಿಗೆ ಗೌರಾವಾನ್ವಿತ ಬದುಕು ದೊರೆತಿದ್ದು, ಅವನಿಂದ ಅದನ್ನು ಕಸಿದು ಜನರನವನನ್ನು ಅವಮಾನಕ್ಕೀಡುಮಾಡಲು ಯತ್ನಿಸಿದಂತೆ. ವ್ಯಕ್ತಿಯೋರ್ವನಿಗೆ ಶಾಂತಿ–ಸಮಾಧಾನದ ಬದುಕು ದೊರೆತಿದ್ದು ಜನರವನ ಮೇಲೆ ಸುಳ್ಳು ಆಪಾದನೆಗಳನ್ನು ಹೊರಿಸಿ, ಅವನ ಬದುಕಿನಲ್ಲಿ ಅಶಾಂತಿ ಮೂಡಲು ಯತ್ನಿಸಿದಂತೆ. ಈ ರೀತಿ ಪರಸ್ಪರರ ಮೇಲೆ ದ್ವೇಷ–ಅಸೂಯೆ ಸಾಧಿಸುವುದರ ಅರ್ಥವೇ ದೇವನ ಯೋಜನಗೆ ಅಡ್ಡಗಾಲು ಹಾಕಿದಂತೆ. ಇನ್ನೋರ್ವ ಬದುಕನ್ನು ನಾಶ ಮಾಡಲು ಹೊರಡುವವರ ಉದಾಹರಣೆ ಹೇಗೆಂದರೆ ಸಾರ್ವಭೌಮತ್ವ ಹೊಂದಿದ ಸಕಲ

ಜಗತ್ತಿನ ಏಕೈಕ ಸೃಷ್ಟಿಕರ್ತನ ವಿರುದ್ಧ ಬಲಹೀನನೂ ಅಸಹಾಯಕನೂ ಆದ ಸೃಷ್ಟಿಯೋರ್ವ ಹೋರಾಡಲು ಹೊರಟಂತೆ.

ಇಂತಹ ಘಟನೆಗಳ ತಾತ್ಪರ್ಯವೇನೆಂದರೆ, ದೇವನು ಬಯಸಿದರೂ ಅವನ ದಾಸರು ಬಯಸಲಿಲ್ಲ. ದೇವನು ತನ್ನ ಯೋಜನೆಗನುಗುಣವಾಗಿ, ಪರೀಕ್ಷಾರ್ಥವಾಗಿ ಎಲ್ಲರ ನಡುವೆ ಜೀವನಾಂಶವನ್ನು ವಿತರಿಸುವ ಸುವ್ಯವಸ್ಥೆ ಮಾಡಿದನು. ಆದರೆ ದೇವನ ಈ ವಿತರಣೆಯನ್ನು ಒಪ್ಪಲು ಅವನ ದಾಸರು ತಯ್ಯಾರಿಲ್ಲ. ದೇವನ ವಿರುದ್ಧವೇ ದಂಗೆ ಏಳುವ ಜನರ ಈ ಕ್ರಮ ಪ್ರಸ್ತುತ ಜಗತ್ತಿನಲ್ಲಿ ಬಹಳ ಯಶಸ್ವಿಯಾದಂತೆ ಅನಿಸಬಹುದು. ಏಕೆಂದರೆ, ಈ ಜಗತ್ತಿನಲ್ಲಿ ಜನರಿಗೆ ಪರೀಕ್ಷಾರ್ಥವಾಗಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿದೆ. ಈ ಪರೀಕ್ಷಾ ಹಂತ, ಇದರ ಅವಧಿ ಕೊನೆಗೊಂಡ ಮರುಕ್ಷಣ, ವ್ಯಕ್ತಿಯು ತನ್ನನ್ನು ತಾನು ಎಷ್ಟೊಂದು ಬಲಹೀನನಾಗಿ ಕಂಡುಕೊಳ್ಳುವನೆಂದರೆ, ಯಾರಾದಾದರೂ ವಿರುದ್ಧ ಮಾತನಾಡುವ, ಯಾರಿಗಾದರೂ ಹಾನಿ ಮಾಡುವ ಎಳ್ಳಷ್ಟೂ ಸಾಮರ್ಥ್ಯ ಆತನಿಗಿರದು.

ಪ್ರಸ್ತುತ ಜಗತ್ತಿನಲ್ಲಿ ಮನುಷ್ಯನಿಗೆ ನೀಡಿರುವ ಸ್ವಾತಂತ್ರ್ಯದ ಹಿಂದೆ ಅವನ ಪರೀಕ್ಷಿಸುವ ದೇವೋದ್ದೇಶ ಅಡಗಿದೆ. ಈ ಜಗತ್ತಿನಲ್ಲಿ ವ್ಯಕ್ತಿಯೋರ್ವ ಇನ್ನೋರ್ವನಿಗೆ ದೇವನಿಂದ ದೊರೆತ ಕೊಡುಗೆಯನ್ನು ಕಸಿಯುವಲ್ಲಿ, ಇನ್ನೊಬ್ಬರ ಶಾಂತಿಯುತ ಬದುಕಿನಲ್ಲಿ ಭಂಗ ತರುವಲ್ಲಿ ಯಶಸ್ವಿಯಾಗಲೂಬಹುದು. ಆದರೆ ದೇವನು ನೀಡಿದ ಪರೀಕ್ಷಾ ಅವಧಿ ಕೊನೆಗೊಂಡ ಮರುಕ್ಷಣ ಅಂತಹ ದುರ್ಜನರ ಸ್ಥಿತಿ ಏನಾಗಬಹುದು?. ಅಂದು ಪರಲೋಕದಲ್ಲಿ ಅಧಿಕಾರವೆಲ್ಲವೂ ಕೇವಲ ದೇವನ ಕೈಯಲ್ಲಿರುವುದು. ಅಲ್ಲಿ ಕೇವಲ ದೇವೆಚ್ಛೆಯಷ್ಟೇ ನಡೆಯುವುದು. ಅಂದು ದೇವನು, "ಇಂದು ನಾನಿಚ್ಛಿಸಿದವರಿಗೆ ಧಾರಾಳ ನೀಡುವೆ?. ನಾನು ಕೊಡುಗೆಯನ್ನು ತಡೆಯುವ ಶಕ್ತಿ ಯಾರಿಗಿಹುದು? ಎಂದು ಕೇಳುವನು.

# ಸಂಪತ್ತಿನ ಭ್ರಮೆ

ನ್ಯೂಯಾರ್ಕ್ನ ಹೊರವಲಯದಲ್ಲಿ ವಾಸಿಸುತ್ತಿದ್ದ ಸುಮಾರು 63 ವರ್ಷದ ಇಟಾಲಿಯನ್ ಮೂಲದ ಅಮೆರಿಕನ್ ವೆನೆರೋ ಪೆಗ್ಯಾನೋ (Venero Pagano) ಓರ್ವ ನುರಿತ ಬಡಗಿಯಾಗಿದ್ದ (ಕಾರ್ಪೆಂಟರ್) ಹೊರತಾಗಿಯೂ ಎಂಟು ವರ್ಷಗಳ ಕಾಲ ನಿರುದ್ಯೋಗಿಯಾಗಿದ್ದರು. ಅವರ ಜೀವನ ಯೂನಿಯನ್ ನ ಪಿಂಚಣಿಯ ಸಾಧಾರಣ ಮೊತ್ತದಲ್ಲಿ ನಡೆಯುತ್ತಿತ್ತು. ಅವರ ಪಿಂಚಣಿ ಎಷ್ಟು ಕಮ್ಮಿ ಮೊತ್ತದ್ದಾಗಿತ್ತೆಂದರೆ, ಅವರ ಮನೆ ಎದುರಿನ ಜಮೀನಿನಲ್ಲಿ ಟೊಮ್ಯಾಟೋ ಬೆಳೆಯುವಷ್ಟು ಹಣವೂ ಅವರ ಬಳಿ ಇರಲಿಲ್ಲ.

ನ್ಯೂ ಸ್ಟ್ರೈಟ್ ಟೈಮ್ಸ್ (New Straight Times), ಕೌಲಾಲಂಪುರ್, (ಜುಲೈ 28, 1984) ಇದರಲ್ಲಿ ಬಿತ್ತರವಾದ ಸುದ್ದಿಯ ಪ್ರಕಾರ, ಒಂದು ದಿನ ಈ ವ್ಯಕ್ತಿಯು ಲಾಟರಿ ಟಿಕೇಟೊಂದನ್ನು ಖರೀದಿಸಿದರು. 27, ಜುಲೈ 1984ಕ್ಕೆ ತನಗೇ ಲಾಟರಿ ಟಿಕೇಟಿನ ಮೊತ್ತ ಮೊದಲ ಬಹುಮಾನ ಪಡೆದಿರುವವನು ಎಂಬುದು ಅವರಿಗೆ ತಿಳಿಯಿತು. ಅದು 20 ಮಿಲಿಯನ್ ಡಾಲರ್ ನಷ್ಟು ದೊಡ್ಡ ಮೊತ್ತವಾಗಿತ್ತು. ಇದು ಜಗತ್ತಿನಲ್ಲೇ ಅತಿದೊಡ್ಡ ಲಾಟರಿ ಬಹುಮಾನದ ಮೊತ್ತವಾಗಿತ್ತು.

ಲಾಟರಿಯ ಫಲಿತಾಂಶದ ಸುದ್ದಿಯನ್ನು ಮೊತ್ತಮೊದಲು ದೂರದರ್ಶನದ ಮೂಲಕ ಪ್ರಕಟಿಸಲಾಯಿತು. ಆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಫಲಿತಾಂಶದ ವಿವರವನ್ನು ನೀಡಲಾಯಿತು. ಕಾರ್ಪೆಂಟರ್ ಸುದ್ಧಿ ತಿಳಿದ ಬಳಿಕ ತನ್ನ ಅನುಭವವನ್ನು ಹಂಚಿಕೊಳ್ಳುತ್ತಾ ಹೇಳಿದರು: "ಸುದ್ದಿ ತಿಳಿದ ನನಗೆ ಒಂದರೆಕ್ಷಣ ದಂಗುಬಡಿದಂತಾಯಿತು. ನಾನು ಫಲಿತಾಂಶದಲ್ಲಿ ಬಂದ ಸಂಖ್ಯೆಯನ್ನೂ, ನಾನು ಪಡೆದ ಟಿಕೇಟಿನ ಸಂಖ್ಯೆಯನ್ನು ಪದೇ ಪದೇ ಹೋಲಿಸಿ ನೋಡತೊಡಗಿದೆ. ಇಲ್ಲಿಯ ತನಕವೂ ಬಹುಮಾನದ ಮೊತ್ತ ನನಗೇ ಬಂದಿದೆ ಎಂಬುದು ನಂಬಲಾಗುತ್ತಿಲ್ಲ."

ಸುದ್ದಿ ತಿಳಿದ ನಂತರ ಆ ಕಾರ್ಪೆಂಟರ್ ಮೊತ್ತಮೊದಲು ಮಲಗಿದ್ದ ತನ್ನ ಪತ್ನಿಯ ಬಳಿ ಧಾವಿಸಿ, "ನಾವು ಕೋಟ್ಯಧಿಪತಿಯಾಗಿದ್ದೇವೆ ಎಂದು ನಾನು ಭಾವಿಸುತ್ತೇನೆ". ಎಂದರು. ವರದಿಗಾರನನೊಂದಿಗೆ ತನ್ನ ಭಾವನೆ ಹಂಚಿಕೊಳ್ಳುತ್ತಾ ಆ ಕಾರ್ಪೆಂಟರ್ ಹೇಳಿದ ಪದಗಳಿವು, "ನನಗೇನು ಬೇಕಿತ್ತೋ ನಾನದನ್ನು ಪಡೆದೆ. ನಾನು ಟೊಮ್ಯೋಟೋವನ್ನು ಪಡೆದೆ. ನಾನು ನನ್ನ ಮನೆಯನ್ನು ಮರಳಿ ಪಡೆದೆ." "I got whatever I need  I got my house, I got my tomatoes"

ಈ ಜಗತ್ತಿನಲ್ಲಿ ಮನುಷ್ಯನ ಬಳಿ ಹಣವಿದ್ದರೆ, ಅವನು ತನಗೆ ಆವಶ್ಯಕತೆ ಇರುವ ಎಲ್ಲವನ್ನೂ ಕೊಂಡುಕೊಳ್ಳಬಹುದು. ಹಾಗಾಗಿ, ಮನುಷ್ಯನಿಲ್ಲಿ ಸಂಪತ್ತನ್ನೇ ಸರ್ವಸ್ವವೆಂದೂ, ಸಂಪತ್ತು ಹೊಂದಿರುವವನು ಅತಿಹೆಚ್ಚು ಯಶಸ್ವಿ ವ್ಯಕ್ತಿ ಎಂದೂ ಭಾವಿಸತೊಡಗುತ್ತಾನೆ. ಆದರೆ, ದೇವನ ಅನುಗ್ರಹಕ್ಕೆ ಪಾತ್ರರಾಗಿ ಪರಲೋಕದ ಯಶಸ್ಸನ್ನು ತನ್ನದಾಗಿಸಿಕೊಳ್ಳುವವನೇ ಅತ್ಯಂತ ಯಶಸ್ವಿ ವ್ಯಕ್ತಿಯಾಗಿರುವನು ಎಂಬುದೇ ನಿಜವಾದ ವಾಸ್ತವ.

ಪ್ರಸ್ತುತ ಜಗತ್ತಿನಲ್ಲಿ ಮನುಷ್ಯನೆದುರಿಸುತ್ತಿರುವ ಸಮಸ್ಯೆಗಳೂ, ಮರಣದ ಬಳಿಕ ಅವನಿಗೆದುರಾಗುವ ಸಮಸ್ಯೆಗಳು ಪರಸ್ಪರ ಭಿನ್ನವಾಗಿವೆ. ಈ ಜಗತ್ತಿನಲ್ಲಿ ಸಂಪತ್ತಿಗೆ ಪ್ರಾಮುಖ್ಯತೆ ಇದ್ದರೆ, ಪರಲೋಕದ ತೀರ್ಪಿನ ದಿನ ಸತ್ಯವಿಶ್ವಾಸ (ಈಮಾನ್) ಮತ್ತು ಸತ್ಕರ್ಮಗಳಿಗಷ್ಟೇ ಪ್ರಾಮುಖ್ಯತೆ ಇರುವುದು. ಇಂದು ಹಣವೊಂದಿದ್ದರೆ ಮನುಷ್ಯನಿಗೆ ಬೇಕಿರುವ ವಸ್ತುಗಳೆಲ್ಲವೂ ಮಾರುಕಟ್ಟೆಯಿಂದ ಬಹಳ ಸುಲಭವಾಗಿ ಪಡೆಯಲು ಸಾಧ್ಯ. ಆದರೆ, ಅಂದು ಪ್ರತಿಯೊಂದು ವಸ್ತುವೂ ದೇವನ ಅಪಾರ ಅನುಗ್ರಹ ಇರುವವರ ಪಾಲಿಗಷ್ಟೇ ದೊರಕುವುದು. ಇಂದು ಭೌತಿಕ ಕಾನೂನುಗಳಡಿಯಲ್ಲಿ ವ್ಯಕ್ತಿಗೆ ಸ್ಥಾನ–ಮಾನ ಪ್ರಾಪ್ತಿಯಾದರೆ, ದೇವನ ನ್ಯಾಯಾಲಯದಲ್ಲಿ ನೈತಿಕತೆ, ಚಾರಿತ್ರ್ಯದಡಿಯಲ್ಲಿ ವ್ಯಕ್ತಿಯೋರ್ವ ಯಾವುದಕ್ಕೆ ಅರ್ಹ, ಯಾವುದಕ್ಕೆ ಅನರ್ಹ ಎಂದು ತೀರ್ಮಾನಿಸಲಾಗುವುದು.

# ವಿಫಲರು

"ಓ ಪೈಗಂಬರರೇ, ಇವರೊಡನೆ ಹೇಳಿರಿ: ತಮ್ಮ ಕರ್ಮಗಳಲ್ಲಿ ಅತ್ಯಧಿಕ ವಿಫಲರು ಯಾರೆಂದು ನಿಮಗೆ ತಿಳಿಸಲೇ?. ಲೌಕಿಕ ಜೀವನದಲ್ಲಿ ಯಾರ ಶ್ರಮಗಳೆಲ್ಲವೂ ಕೇವಲ ಇಹಲೋಕಕ್ಕೆ ಮೀಸಲಾಗಿದ್ದು, ತಾವು ಮಾಡುತ್ತಿರುವುದೆಲ್ಲವೂ 100 ಪ್ರತಿಶತ ಸರಿ ಎಂದು ಭಾವಿಸಿರುವರೋ ಅವರು. ಇವರು ತಮ್ಮ ಪ್ರಭುವಿನ ವಚನಗಳನ್ನೂ, ಅವನ ಮುಂದೆ ಹಾಜರಾಗಲಿಕ್ಕಿದೆ ಎಂಬುದನ್ನೂ ನಿರಾಕರಿಸಿದವರು. ಹೀಗಾಗಿಯೇ ಅವರ ಎಲ್ಲ ಕರ್ಮಗಳೂ ವ್ಯರ್ಥವಾಗಿ ಬಿಟ್ಟವು. ಪುನರುತ್ಥಾನದ ದಿನ ಅಂತಹವರಿಗೆ ಏನೂ ಮಹತ್ವವನ್ನೂ ನೀಡೆವು." (ಅಲ್ ಕಹ್ಫ್–104,105)

ತಿಂಗಳು ಪೂರ್ತಿ ದುಡಿದೂ ಸಂಬಳ ದೊರಕದವನು, ತನ್ನ ಬಳಿಯಿರುವ ಎಲ್ಲವನ್ನೂ ವ್ಯಾಪಾರಕ್ಕೆ ಬಂಡವಾಳದ ರೂಪದಲ್ಲಿ ಹೂಡಿಯೂ, ಅದರ ಪ್ರತಿಫಲ ಪಡೆಯದಾತನು, ಬಹು ಆಕಾಂಕ್ಷೆಯೊಂದಿಗೆ ಮನೆಯೊಂದನ್ನು ಮಾಡಿಯೂ ಅದರಲ್ಲಿ ನೆಮ್ಮದಿಯಿಂದ ಬದುಕಲಾರದ ಅದೃಷ್ಟಹೀನನು, ಇಂತಹವರೆಲ್ಲರೂ ಈ ಜಗತ್ತಿನಲ್ಲಿ ಇತರೆಲ್ಲರಿಗಿಂತ ಹೆಚ್ಚು ವಂಚಿತ ವ್ಯಕ್ತಿಗಳು. ಇಂತಹ ಅವಘಡಗಳು ಯಾರ ಬದುಕಿನಲ್ಲಿ ಸಂಭವಿಸುವವೋ ಅಂತಹವರು ಸಂಪೂರ್ಣವಾಗಿ ನಶಿಸಿಹೋಗುವರು. ಅವನ ಅಂಗಾಂಗಗಳು ಸ್ವಾಧೀನ ಕಳೆದುಕೊಳ್ಳುವವು. ತನ್ನ ಜೀವನದ ಸಂಪೂರ್ಣ ಪರಿಶ್ರಮವು ನಾಶವಾಗಿ ಹೋಗುವುದನ್ನು ಯಾರಾದರೂ ತನ್ನ ಕಣ್ಣಮುಂದೆ ಕಂಡಾಗ, ಅವನಿಗಾಗುವ ಮಹಾಘಾತ ಬರೀ ಪದಗಳಲ್ಲಿ ವಿವರಿಸಲಸಾಧ್ಯ.

ಇದು, ಈ ಜಗತ್ತಿನಲ್ಲಿ ಜನರ ಪರಿಶ್ರಮಗಳು ವ್ಯರ್ಥವಾಗುವಾಗ, ಅವರ ವ್ಯಾಪಾರ ವಹಿವಾಟುಗಳು ನಷ್ಟಕ್ಕೀಡಾಗುವಾಗ ಕಂಡುಬರುವ ತೀವ್ರ ದುಃಖದಾಯಕ ಸ್ಥಿತಿಯಾಗಿದೆ. ಇನ್ನು, ತನ್ನ ಜೀವಮಾನದ ಸಂಪಾದನೆ, ಪರಿಶ್ರಮವೆಲ್ಲವೂ

ಶಾಶ್ವತವಾಗಿ ನಷ್ಟಕ್ಕೀಡಾಗುವಾಗ, ತನ್ನ ಸರ್ವನಾಶವಾಯಿತೆಂಬ ವಾಸ್ತವವನ್ನು ವ್ಯಕ್ತಿಯೊಬ್ಬ ಅರಿತಾಗ ಅವನ ಸ್ಥಿತಿ ಏನಾಗಬಹುದು?.

ಇಹಲೋಕದಲ್ಲಿ ತನ್ನ ಪರಿಶ್ರಮದ ಹಣ ಇಲ್ಲಿ ಒಂದಿನಿತೂ ಕೆಲಸಕ್ಕೆ ಬರುವುದಿಲ್ಲ, ವಾಸ್ತವದಲ್ಲಿ ಅದಕ್ಕೆ ಅಸ್ತಿತ್ವವೇ ಇಲ್ಲ ಎಂದು ಆತನು ತಿಳಿದಾಗ, ಇಹದಲ್ಲಿ ತಾನು ಪೋಷಿಸಿಕೊಂಡಿದ್ದ ತನ್ನ ಸ್ಥಾನ–ಮಾನ, ಆಸ್ತಿ–ಅಂತಸ್ತು ಇವೆಲ್ಲವೂ ಪರಲೋಕದಲ್ಲಿ ಬೋರಲಾಗಿ ಬಿದ್ದಿವೆ. ಹಿಂದಿನ ಜಗತ್ತಿನಲ್ಲಿ ತಾನು ಪಡೆದಕೊಂಡಿದ್ದ ಹೆಸರು–ಕೀರ್ತಿ ಅವುಗಳಿಗಿಲ್ಲಿ ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂಬುದನ್ನು ಆತನು ಅರಿತಾಗ ಅವನ ಆಂತರಿಕ ಸ್ಥಿತಿ ಏನಾಗಬಹುದು?.

ಯಾವ ವ್ಯಕ್ತಿಯು ಕೇವಲ ತನ್ನ ಲೌಕಿಕ ಏಳ್ಗೆಯನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡು, ಲೌಕಿಕ ಜೀವನಕ್ಕಾಗಿಯೇ ಹಗುಲಿರುಳು ದುಡಿದನೋ, ಅಂತಹವನು ಪರಲೋಕದಲ್ಲಿ, ಗತಿಗೆಟ್ಟ ವ್ಯಕ್ತಿಯಂತೆ ದಟ್ಟ ದಾರಿದ್ರ್ಯದ ದುಸ್ಥಿತಿಯಲ್ಲಿ ನಿಂತಿರುವನು. ಇದು ಮನುಷ್ಯನ ಪಾಲಿಗೆ ಸಹಿಸಲಸಾಧ್ಯವಾದ ಅಸಹನೀಯ ದೃಶ್ಯವಾಗಿರುವುದು. ಲೌಕಿಕ ಯಶಸ್ಸಿನ ಅಮಲಿನಲ್ಲಿ ತೇಲಾಡುತ್ತಿದ್ದ ವ್ಯಕ್ತಿಗಳಿಗೆ, ಪರಲೋಕದಲ್ಲಿ ಅವಮಾನದ ಬೇಗೆಯಲ್ಲಿ ಬೇಯಬೇಕಾದ ಶೋಚನೀಯ ಸ್ಥಿತಿ ಎದುರಾಗುವುದು. ತಮ್ಮ ಯಶಸ್ಸು, ಪ್ರಗತಿಯ ಕುರಿತು ಗರ್ವಪಡುತ್ತಿದ್ದ ಜನರ ಸ್ಥಿತಿ ಅಂದು, ಯಶ್ಸಸೆಂದರೆ ಏನೆಂದು ಗೊತ್ತೇ ಇಲ್ಲದ ವ್ಯಕ್ತಿಗಳಂತೆ ಆಗುವುದು.

# ಮನುಷ್ಯನ ಪಾಲಿನ ದುರಂತ

ಡಾ. ಉತ್ತಮ್ ಪ್ರಕಾಶ್ (1928–1982) ಭಾರತದ ಪ್ರಖ್ಯಾತ ಶಸ್ತ್ರಚಿಕಿತ್ಸಕ (ಸರ್ಜನ್)–ರಾಗಿದ್ದರು. ನವದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರಾಗಿದ್ದ ಅವರು, ತಮ್ಮ ಕ್ಷೇತ್ರದಲ್ಲಿ ಮಾಡಿದ ಉತ್ತಮ ಸಾಧನೆಗಾಗಿ ಪದ್ಮವಿಭೂಷಣ ಪ್ರಶಸ್ತಿಯನ್ನೂ ಪಡೆದಿದ್ದರು. ಫೆಬ್ರವರಿ 17, 1982 ರಂದು ನಡೆಯಲಿದ್ದ, ಶಸ್ತ್ರಚಿಕಿತ್ಸೆಯ ಕುರಿತಾದ ಅಂತರ್ ರಾಷ್ಟ್ರೀಯ ಸಮಾವೇಶದ ಅಧ್ಯಕ್ಷತೆಯನ್ನು ಅವರು ವಹಿಸಬೇಕಿತ್ತು. ಆದರೆ ಸಮಾರಂಭಕ್ಕೆ ಸರಿಯಾಗಿ ಮೂರು ದಿನಗಳ ಮೊದಲು 14 ಫೆಬ್ರವರಿಯಂದು ಅವರಿಗೆ ಹೃದಯಾಘಾತ ಸಂಭವಿಸಿತು. ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಅವರು ತಮ್ಮ ಕೊನೆಯುಸಿರೆಳೆದರು.

ಒಂದು ವೇಳೆ ಎಲ್ಲವೂ ಸರಿಯಾಗಿದ್ದಿದ್ದರೆ ಅಂತರ್ ರಾಷ್ಟ್ರೀಯ ಶಸ್ತ್ರಾಚಿಕಿತ್ಸಾ ಸಮಾವೇಶದ ಅಧ್ಯಕ್ಷತೆಯು ಡಾ. ಉತ್ತಮ್ ಪ್ರಕಾಶ್ ಅವರ ವೃತ್ತಿಜೀವನವನ್ನು ಇನ್ನಷ್ಟು ಉನ್ನತಿಗೆ ಕೊಂಡೊಯ್ಯುತ್ತಿತ್ತು. ಹೀಗಾಗಿಯೇ ಅವರು ಈ ಸಮಾವೇಶದ ಆಯೋಜನೆಯಲ್ಲಿ ಅತಿಹೆಚ್ಚು ಕಾಳಜಿಯೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸಮಾವೇಶದ ಉದ್ಘಾಟಿಸಲಿಕ್ಕಾಗಿ ಅವರು, ರಾಷ್ಟ್ರಪತಿ ಸಂಜೀವ ರೆಡ್ಡಿಯವರ ಮನವೊಲಿಸುವದರಲ್ಲೂ ಯಶಸ್ವಿಯಾಗಿದ್ದರು. ಇನ್ನೇನು ಸಮಾವೇಶದ ಪೂರ್ವ ತಯ್ಯಾರಿಗಳೆಲ್ಲವೂ ಪೂರ್ಣಗೊಂಡಿವೆ ಎಂದು ಡಾಕ್ಟರ್ ಸಮಾಧಾನಪಟ್ಟುಕೊಳ್ಳುವ ಸಂದರ್ಭದಲ್ಲೇ ರಾಷ್ಟ್ರಪತಿ ಭವನದಿಂದ ಸಂದೇಶವೊಂದು ಬಂತು. ಅದರಲ್ಲಿ, "ಈ ಸಮಾವೇಶದಲ್ಲಿ ರಾಷ್ಟ್ರಪತಿಗಳು ಭಾಗವಹಿಸಬೇಕಾದರೆ ಕಾರ್ಯಕ್ರಮದಲ್ಲಿ ಕೇಂದ್ರ ಆರೋಗ್ಯ ಸಚಿವರ ಉಪಸ್ಥಿತಿಯೂ ಅತ್ಯಗತ್ಯ" ಎಂದಿತ್ತು.

ಇದೊಂದು ಕಟ್ಟುನಿಟ್ಟಿನ ಸರಕಾರಿ ಶಿಷ್ಟಚಾರವಾದ್ದರಿಂದ ಇದನ್ನು ಪಾಲಿಸುವುದು ಅತ್ಯಂತ ಕಡ್ಡಾಯವಾಗಿತ್ತು.

ಕಾರ್ಯಕ್ರಮದ ಆಹ್ವಾನಿತರ ಪಟ್ಟಿಯಲ್ಲಿ ಕೇಂದ್ರ ಆರೋಗ್ಯ ಸಚಿವರ ಹೆಸರಿರಲಿಲ್ಲ. ಆದರೆ ಈಗಂತೂ ಆರೋಗ್ಯ ಸಚಿವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸದ ಹೊರತು ಬೇರೆ ದಾರಿ ಇರಲಿಲ್ಲ. ಈಗ ಡಾ. ಪ್ರಕಾಶ್ ರವರು ಆರೋಗ್ಯ ಸಚಿವರ ಕಚೇರಿಗೆ ಅಲೆದಾಡಲು ಪ್ರಾರಂಭಿಸಿದರು. ಆದರೆ, ಆರೋಗ್ಯ ಸಚಿವರು ಆಹ್ವಾನಿತರ ಪಟ್ಟಿಯಲ್ಲಿ ತನ್ನ ಹೆಸರನ್ನು ಕೊನೆಗೆ ಸೇರಿಸಿರುವುದರಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದು ತನ್ನ ಘನತೆಗೆ ತಕ್ಕುದಲ್ಲ ಎಂದು ಭಾವಿಸಿ, ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಸ್ಪಷ್ಟವಾಗಿ ನಿರಾಕರಿಸಿಬಿಟ್ಟರು. ಈ ನಿರಾಕರಣೆಯಿಂದ ಡಾ. ಉತ್ತಮ್ ಪ್ರಕಾಶ್ ರವರಿಗೆ ಎಷ್ಟು ದೊಡ್ಡ ಆಘಾತವುಂಟಾಯಿತೆಂದರೆ ಸಮಾವೇಶದ ಮೂರು ದಿನ ಮೊದಲು ತೀವ್ರ ಹೃದಯಾಘಾತಕ್ಕೊಳಗಾಗಿ ಅವರು ಮೃತಪಟ್ಟರು. ಯಾವುದೇ ವ್ಯಕ್ತಿಯು ತನ್ನ ಮರಣದ ಸಮಯ ಬರುವುದಕ್ಕಿಂತ ಮೊದಲು ಮರಣ ಹೊಂದಲಾರ. ಹಿಂದೂಸ್ತಾನ್ ಟೈಮ್ಸ್ ನ ವರದಿಗಾರನೊಬ್ಬ ಡಾಕ್ಟರ್ ಸಾಹೇಬರ ಮರಣದ ಕುರಿತು ಹೇಳಿದ ವಾಕ್ಯ ಅತ್ಯಂತ ಸಂದರ್ಭೋಚಿತವಾಗಿತ್ತು.

"ಮರಣದ ದೀರ್ಘ ಪಯಣಕ್ಕೆ ಹೊರಡುವ ಮೊದಲು ಅವರು ದೆಹಲಿಯ ಅತ್ಯಂತ ಚಿಂತಿತ ವ್ಯಕ್ತಿಯಾಗಿದ್ದರು". He was the most worried man in the town before he took the long road (ಹಿಂದೂಸ್ತಾನ್ ಟೈಮ್ಸ್, 16 ಫೆಬ್ರವರಿ, 1982)

ಇಂದು ಮನುಷ್ಯನು ತನ್ನ ಘನತೆಯಲ್ಲಿ ಕಿಂಚಿತ್ತೂ ಕುಂದುಂಟಾದರೂ ತುಂಬಾ ಕಸಿವಿಸಿಗೊಳ್ಳುತ್ತಾನೆ. ತೀರಾ ಗಾಬರಿಗೊಂಡಂತೆ ವರ್ತಿಸುತ್ತಾನೆ. ಪರಲೋಕದಲ್ಲಿ ನಿಜವಾದ ಸಂಕಷ್ಟ ಎದುರಾದಾಗುವಾಗ ಅವನ ಸ್ಥಿತಿ

ಏನಾಗಬಹುದು?. ತೀವ್ರ ಹಸಿವು, ಬಾಯಾರಿಕೆಯಿಂದ ಪ್ರಾಣ ಹೋಗುತ್ತದೇನೋ ಎಂಬಂತಹ ತೀವ್ರ ಸಂದಿಗ್ಧತೆಯ ನಡುವೆಯೂ ತಿನ್ನಲು, ಕುಡಿಯಲು ಏನೂ ದೊರಕದಿದ್ದರೆ ಅವನ ಸ್ಥಿತಿ ಹೇಗಾಗಬಹುದು?. ಅಲ್ಲಿನ ಸುಡುಬಿಸಿಲಿನ ಬೇಗೆಯಲ್ಲಿ ಬೇಯುವಾಗ, ಅದರಿಂದ ರಕ್ಷಿಸಿಕೊಳ್ಳಲು ಯಾವುದೇ ತೆರನಾದ ನೆರಳು ಆತನಿಗಲ್ಲಿ ದೊರಕದಾದಾಗ ಅವನ ಸ್ಥಿತಿ ಏನಾಗಬಹುದು?. ಒಂದು ಸಣ್ಣ ಮುಳ್ಳು ಚುಚ್ಚಿಸಿಕೊಂಡರೂ ನೋವಿನಿಂದ ಮುಲುಗುವ ಈ ಹುಲುಮಾನವನಿಗಲ್ಲಿ ಎಲ್ಲ ಕಡೆಗಳಿಂದಲೂ ಶಿಕ್ಷೆಯು ಆವರಿಸುವಾಗ ಹಾಗೂ ಆ ಶಿಕ್ಷೆಯಿಂದ ರಕ್ಷಿಸುವಂತಹ ಯಾವುದೇ ಸಹಾಯಕ ಆತನಿಗಲ್ಲಿ ದೊರಕದಾದಾಗ ಆತನ ಸ್ಥಿತಿ ಏನಾಗಬಹುದು?.

- ಸೆಂಟರ್ ಫಾರ್ ಪೀಸ್ ಅಂಡ್ ಸ್ಪಿರಿಚುವಾಲಿಟಿ ಇಂಟರ್ ನ್ಯಾಶನಲ್, (CPS ಇಂಟರ್ ನ್ಯಾಶನಲ್) ಯಾವುದೇ ರಾಜಕೀಯ ಮತ್ತು ಲಾಭೋದ್ದೇಶವಿಲ್ಲದ ಸರ್ಕಾರೇತರ ಸಂಸ್ಥೆಯಾಗಿದೆ (NGO). ನಮ್ಮ ಸಂಸ್ಥೆಯ ಕೇಂದ್ರ ಕಾರ್ಯಾಲಯವು ದೆಹಲಿಯಲ್ಲಿದ್ದು, ನಮ್ಮದು ಅದರ ಬೆಂಗಳೂರು ಶಾಖೆಯಾಗಿದೆ. ಈ ಸಂಸ್ಥೆಯು ಆಧ್ಯಾತ್ಮಿಕತೆಯ ಸಂದೇಶಗಳನ್ನು ಸಾರುವ ಮೂಲಕ ಶಾಂತಿಯ ಮೌಲ್ಯಗಳನ್ನು ಪ್ರೋತ್ಸಾಹಿಸುವ ಮತ್ತು ಅದನ್ನು ಬಲಪಡಿಸುವ ಬೃಹತ್ ಗುರಿಯನ್ನು ಹೊಂದಿದೆ. ಈ ಸಂಸ್ಥೆಯು ಶಾಂತಿ ಮತ್ತು ಸದ್ವಿಚಾರಗಳನ್ನು ಸಾರುವ ಮೂಲಕ ದೇಶಾದ್ಯಂತ ಉತ್ತಮ ಸಮಾಜವನ್ನು ನಿರ್ಮಿಸಲು ನಿರಂತರವಾಗಿ ಶ್ರಮಿಸುತ್ತಿದೆ.

- ಈ ಸಂಸ್ಥೆಯನ್ನು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಮೌಲಾನಾ ವಹೀದುದ್ದೀನ್ ಖಾನ್ ರವರು 2001ರಲ್ಲಿ ಸಂಸ್ಥಾಪಿಸಿದರು. ಮೌಲಾನಾ ವಹೀದುದ್ದೀನ್ ಖಾನ್ ಇವರು ಅಗಾಧ ಜ್ಞಾನವುಳ್ಳ ಇಸ್ಲಾಮೀ ವಿದ್ವಾಂಸರಾಗಿದ್ದರು. ಮೌಲಾನರು ಶಾಂತಿಯುತ ಸಮಾಜದ ಸಂಸ್ಥಾಪನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಈ ನಿಟ್ಟನಿಲ್ಲಿ ಅವರು ಪಟ್ಟ ಪರಿಶ್ರಮವನ್ನು ಭಾರತ ಸರಕಾರ ಸೇರಿದಂತೆ ಅನೇಕ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಂಸ್ಥೆಗಳು ಗುರುತಿಸಿ ಮೌಲಾನರಿಗೆ ಪ್ರಶಸ್ತಿ ನೀಡಿ ಅವರನ್ನು ಸನ್ಮಾನಿಸಿ ಗೌರವಿಸಿವೆ.


- ಭಾರತದ ಎರಡನೆ ಅತಿದೊಡ್ಡ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ ರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಡಿಮಿಯುರ್ಗಸ್ ಅಂತರ್ ರಾಷ್ಟ್ರೀಯ ಶಾಂತಿ ಪ್ರಶಸ್ತಿ, ಶಾಂತಿಸ್ಥಾಪನೆಗಾಗಿ ಅವಿರತ ಪರಿಶ್ರಮವನ್ನು ಗುರುತಿಸಿ ಮುಸ್ಲಿಂ


ಸಮುದಾಯದಲ್ಲಿ ನೀಡಲಾಗುವ ಸಯ್ಯಿದಿನಾ ಇಮಾಮ್ ಹಸನ್ ಇಬ್ನೆ ಅಲಿ ಪ್ರಶಸ್ತಿಗಳು ಮೌಲಾನಾರ ಮುಡಿಗೇರಿವೆ. ಮೌಲಾನಾರು ಇಸ್ಲಾಂನ ಆಧ್ಯಾತ್ಮಿಕ ರಾಯಭಾರಿ ಎಂದೇ ವಿಶ್ವದಾದ್ಯಂತ ಗುರುತಿಸಲ್ಪಟ್ಟಿದ್ದಾರೆ. ಮೌಲಾನಾರ ಕೃತಿಗಳು ವಿಶ್ವದಾದ್ಯಂತ 16 ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿದೆ. ಮೌಲಾನರ ಪುಸ್ತಕಗಳು ಆರು ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಗಳ ಭಾಗವಾಗಿವೆ.


❖ ಮೌಲಾನರ ಆಧ್ಯಾತ್ಮಿಕ ಲೇಖನಗಳು ಟೈಮ್ಸ್ ಆಫ್ ಇಂಡಿಯಾದ "ಸ್ಪೀಕಿಂಗ್ ಟ್ರೀ" (Speaking Tree) ಯ ವಿಭಾಗದಲ್ಲಿ ಸತತವಾಗಿ ಪ್ರಕಟವಾಗುತ್ತಿತ್ತು. ಈಗ ಅವರ ಸುಪುತ್ರಿಯಾದ ಪ್ರೊ. ಫರೀದಾ ಖಾನಮ್ ಇವರುಈ ವಿಭಾಗದಲ್ಲಿ ಮೌಲಾನಾರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವರು.


❖ ಸಕಲ ಮಾನವರ ಒಳಿತಿಗಾಗಿ ಸಮಾಜದಲ್ಲಿ ಶಾಂತಿ ನೆಲೆಸಬೇಕು. ಜಾತಿ, ಧರ್ಮ ಮತಗಳ ಬೇಧವಿಲ್ಲದೆ ಪ್ರತಿಯೋರ್ವರೂ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಲು ತಮ್ಮ ಕೊಡುಗೆಗಳನ್ನು ನೀಡಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ. ಈ ನಿಟ್ಟಿನಲ್ಲಿ ಕೋಮು ಸಂಘರ್ಷ ಅಳಿಸಿ, ಸಮಾಜದಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ನಮ್ಮ ಸಂಸ್ಥೆಯು ಹಗುಲಿರುಳೂ ಕಾರ್ಯನಿರ್ವಹಿಸುತ್ತಿದೆ.


# Books by Maulana Wahiduddin Khan













































www.goodwordbooks.com www.cpsglobal.org


Quran Study
Resources
Goodword Quran
www.goodwordquran.com